# ಚಕೋರಿ

## ಮೊದಲ ಮಾತು - ಕನಸುಗಳು ಕತೆ ಹೇಳುವಾಗ….

ಕಂಬಾರರ ಹೊಸಕೃತಿಯಾದ 'ಚಕೋರಿ'ಯ ಬಗ್ಗೆ ಮೊದಲ ಮಾತುಗಳನ್ನು ಬರೆಯುವ ಹೆಮ್ಮೆ ನನ್ನದಾಗಿದೆ. ಕನ್ನಡ ಜನಮಾನಸದಲ್ಲಿ ಸದಾ ಹಸಿರಾಗಿ ಉಳಿಯಬಲ್ಲ ಅಪರೂಪದ ಪ್ರತಿಭಾಶಕ್ತಿಯನ್ನು ತನ್ನಲ್ಲಿ ಹುದುಗಿಸಿಕೊಂಡಿರುವ ಈ ಕೃತಿಯ ಬಗ್ಗೆ ಬರೆಯುವುದು ಬಹಳ ದೊಡ್ಡ ಹೊಣೆಗಾರಿಕೆ ಎಂಬುದನ್ನು ಬಲ್ಲೆ.

'ಚಕೋರಿ' ಕೇವಲ ಮಹಾತ್ವಾಕಾಂಕ್ಷೆಯ ಕೃತಿಯಾಗಿಲ್ಲ. ಇಡೀ ಕನ್ನಡ ಕಾವ್ಯ ಪರಂಪರೆಯನ್ನು ಹಿನ್ನೆಲೆಯಲ್ಲಿಟ್ಟು ನೋಡಿದಾಗಲೂ ಇದು ಮಹತ್ವದ ಪ್ರಯೋಗವಾಗಿದೆ. ಈ ಕೃತಿಯ ಚೌಕಟ್ಟಿಗೆ ಎಲ್ಲೋ ಒಂದಿಷ್ಟು ಮಾದರಿಗಳು 'ಮಲೆ ಮಾದೇಶ್ವರ ಕಾವ್ಯ', 'ಜಾನಪದ ಬಸವ ಪುರಾಣ', 'ಮಂಟೇಸ್ವಾಮಿ ಕಾವ್ಯ' ಮುಂತಾದ ಕೃತಿಗಳಲ್ಲಿ ಸ್ಥೂಲ ರೂಪದಲ್ಲಿ ಸಿಗುತ್ತವೆಯಾದರೂ 'ಚಕೋರಿ'ಯ ಭಾಷೆ ಮತ್ತು ಭಾಷಾಸಂಪತ್ತು ಬೇರೆಯದೇ ರೀತಿಯದು. ಇದು ಅಕ್ಕಮಹಾದೇವಿಯ ಭಾವೋತ್ಕಟತೆ, ಅಲ್ಲಮನ ನಿಗೂಢತೆಯ ರುಚಿ, ಜನಪದ ಗೀತೆಗಳ ಸೊಗಸು ಮತ್ತು ಸರ್ವಜ್ಞನ ಶ್ರೇಷ್ಠತಮ ತ್ರಿಪದಿಗಳ ಅರ್ಥಗರ್ಭಿತ ಸರಳತೆ - ಇವೆಲ್ಲವನ್ನೂ ದ್ರವ್ಯಗಳನ್ನಾಗಿ ಬಳಸಿಕೊಂಡಿರುವ ಹೊಸಪಾಕವಾಗಿದೆ. ಆದರೆ, 'ಚಕೋರಿ'ಯ ಬಹುಕುಳವಾದ ಭಾಷೆ ತೆರೆದಿಡುವ ಅನುಭವಲೋಕ ನನ್ನ ಪ್ರಕಾರ ಇಲ್ಲಿಯವರೆಗೆ ಕನ್ನಡ ನುಡಿ ಕಂಡಿರುವ ಎಲ್ಲ ವಿಸ್ಮಯಗಳಿಗಿಂತ ಭಿನ್ನವಾದ ಇನ್ನೊಂದು ವಿಸ್ಮಯ. ಎಲ್ಲಕ್ಕಿಂತ ದೊಡ್ಡ ವಿಸ್ಮಯವೆಂದರೆ ಕಾವ್ಯವನ್ನು ಕಂಬಾರರು ಇಷ್ಟೊಂದು ಲೀಲಾಜಾಲವಾಗಿ ಮಾಡಿದ್ದಾರೆ ಎನ್ನುವುದು. ತನ್ಮೂಲಕ ಕಠಿಣವಾದದ್ದನ್ನು ಕಠಿಣವಾಗಿರುವಂತೆ ಬರೆಯುವುದು ಅನಿವಾರ್ಯವಲ್ಲ ಎಂಬ ಪಾಠವನ್ನು ಇಂದಿನ ಕವಿಗಳಿಗೆ ತಿಳಿಸಿದ್ದಾರೆ. ಕಂಬಾರರ ಚಕೋರಿಯ ಸರಳವಾದರೂ ನಿಗೂಢವಾದ ಭಾಷಾ ಸೌಂದರ್ಯ ಕಂಬಾರರಂಥ ಹುಟ್ಟುಕವಿಗೂ ಸುಲಭವಾಗಿ ಸಿಕ್ಕಿದ್ದಲ್ಲ ಎಂದು ನಾನು ಬಲ್ಲೆ. ತಮ್ಮನ್ನು ಬಾಲ್ಯದ ದಿನಗಳಿಂದಲೇ ಕಾಡತೊಡಗಿದ ಈ ಮೋಹಕ ಕಾವ್ಯವಸ್ತುವನ್ನು ಮಹಾಕಾವ್ಯವನ್ನಾಗಿಸಲು ದಶಕಗಳಿಂದ ನಿರಂತರವಾಗಿ ಮೆಹನತ್ತು ಮಾಡಿದ್ದಾರೆ. ಆದರೆ ತಮ್ಮ ಪ್ರಯಾಸದ ಕಾರ್ಪಣ್ಯಗಳನ್ನು ಕೃತಿಯ ಭಾಷೆಯ ಮೂಲಕ ಓದುಗರ ಮೇಲೆ ಹೇರಲು ಹೋಗಿಲ್ಲ. ತನ್ನ ಹಾಡಿನ ಮೂಲಕ ಲೋಕಕ್ಕೆ ಹಿಗ್ಗಿನ ಮಳೆ ಕರೆಸಿದ ಇಲ್ಲಿನ ಕಥಾನಾಯಕ ಚಂದಮುತ್ತನ ನಾದಲಯಗಳ ಮುಗ್ಧ ಮಾಧುರ್ಯ ಈ ಕೃತಿಯ ಭಾಷೆಯಲ್ಲೂ ಹಾಸು ಹೊಕ್ಕಾಗಿದೆ.

'ಚಕೋರಿ'ಯನ್ನು ಮಹಾಕಾವ್ಯವೆನ್ನಬೇಕೋ ಅಥವಾ ಕಾದಂಬರಿಕಾವ್ಯವೆನ್ನಬೇಕೋ ನನಗೆ ಗೊತ್ತಿಲ್ಲ. ಮಹಾಕಾವ್ಯವೆಂದು ಕರೆಯಲು ನನಗೇಕೋ ಮುಜುಗರ. ಯಾಕೆಂದರೆ ಕುವೆಂಪು ಅವರ 'ರಾಮಾಯಣ ದರ್ಶನಂ' ಅನ್ನು ಹೊರತುಪಡಿಸಿದರೆ ನಮ್ಮ ಶತಮಾನದ ಇನ್ನಿತರ ಕನ್ನಡ ಮಹಾಕಾವ್ಯಗಳೆಲ್ಲ ('ಚಕೋರಿ'ಗೆ ಪೂರ್ವದಲ್ಲಿ ರಚಿತವಾದವು) ಗಾತ್ರದಲ್ಲಿ ಮಾತ್ರ 'ಮಹಾ' ಆಗಿವೆ. ಅಲ್ಲದೆ 'ಚಕೋರಿ'ಗೆ ಚೆಲುವು ಸಹಜವಾಗಿರುವುದರಿಂದ 'ರಾಮಾಯಣ ದರ್ಶನಂ'ನ ಅತಿಗಾಂಭೀರ್ಯದ ಸೋಗು ಈ ಕೃತಿಗಿಲ್ಲ. 'ಚಕೋರಿ'ಯನ್ನು ವರ್ಗೀಕರಿಸಿಯೇ ನೋಡಬೇಕೆಂಬ ವಿದ್ವತ್ಪೂರ್ಣ ಹಟವಾಗಲಿ, ಚಟವಾಗಲಿ ನನಗಿಲ್ಲದಿರುವುದರಿಂದ ಈ ಚಕೋರಿಯನ್ನು 'ಚಕೋರಿ' ಎಂದೇ ಕರೆಯುತ್ತೇನೆ. 'ಚಕೋರಿ'ಯಲ್ಲಿ ಅಕ್ಕಮಹಾದೇವಿಯ ವಚನಗಳಲ್ಲಿ ಅಪ್ರಯತ್ನ ಪೂರ್ವಕವಾಗಿ ತುಂಬಿರುವ ಸೌಂದರ್ಯ ಪ್ರಜ್ಞೆಯೊಂದು ಜನಪದ ಮಹಾಕಾವ್ಯಗಳ ಬಿಡುಬೀಸಾದ ಆದರೂ ಸಲೀಸಾದ ಹರಹಿನಲ್ಲಿ ಮೈ ಹರಡಿಕೊಂಡಂತೆ ತೋರುತ್ತದೆ.

ಇಷ್ಟಾದರೂ ಕನ್ನಡದ ವಿವಿಧ ಕಾವ್ಯಪರಂಪರೆಗಳ, ಅದರಲ್ಲೂ ಮುಖ್ಯವಾಗಿ ಜನಪದ ಮತ್ತು ವಚನ ಪರಂಪರೆಗಳ ಪಾಠವನ್ನು ಹೀರಿಕೊಂಡ ಇಲ್ಲಿನ ಭಾಷೆ ಹಿಡಿದಿರುವ ಹಾದಿ ಮಾತ್ರ ಪೂರ್ತಿ ಬೇರೆಯಾದದ್ದು. ಅಷ್ಟೇ ಅಲ್ಲದೆ ಕಂಬಾರರೇ ಹಿಂದೆ ಬರೆದಿದ್ದ 'ಹೇಳತೇನ ಕೇಳ' ಮೊದಲಾಗಿ 'ಸಿರಿಸಂಪಿಗೆ' ಕೊನೆಯಾದ ಎಲ್ಲ ಕೃತಿಗಳ ಜಾಡನ್ನು 'ಚಕೋರಿ' ಬಿಟ್ಟುಕೊಟ್ಟಿದೆ. 'ಚಕೋರಿ'ಯ

ಪೂರ್ವಸೂಚನೆಯನ್ನು ಏನಿದ್ದರೂ ಅವರ ಇನ್ನೊಂದು ಅನುಪಮ ಕೃತಿಯಾದ 'ಬೆಳ್ಳಿಮೀನು'ನ 'ಅಂಬಿಗರಣ್ಣನ ಲಾವಣಿ', 'ನವಿಲೆ ನವಿಲೇ' ಮುಂತಾದ ಕವಿತೆಗಳಲ್ಲಿ ತುಸುಮಟ್ಟಿಗೆ ಕಾಣಬಹುದು. 'ಹೇಳತೇನ ಕೇಳ'ದಂಥ ಕೃತಿಯಲ್ಲಿ ಕಂಬಾರರ ಅಪ್ರತಿಮ ಶಕ್ತಿಯನ್ನು ಒಪ್ಪಿಕೊಂಡ ಮೇಲೂ ಆ ಕೃತಿಯಲ್ಲಿ ಪ್ರತಿಭಾಬಾಹುಳ್ಯ ದೋಷ ಅದರ ವ್ಯಂಜಕಶಕ್ತಿಗೆ ಹೊರೆಯಾಯಿತೇನೋ ಎನಿಸುತ್ತದೆ. ಇಷ್ಟಕ್ಕೋಸ್ಕರ ಅಷ್ಟೊಂದು ಬೇಕಾಗಿತ್ತೆ ಎಂಬ ಅನುಮಾನ ಮೂಡುತ್ತದೆ. ಆದರೆ ಕ್ರಮೇಣ ಕಂಬಾರರು ಪ್ರತಿಭೆಯ ಪ್ರವಾಹವನ್ನು ನಿಯಂತ್ರಿಸುವ ಕಲೆಯನ್ನು ತಮ್ಮದಾಗಿಸಿಕೊಂಡರು. ಅದು ಪೂರ್ಣ ಫಲಿಸಿರುವುದು 'ಚಕೋರಿ'ಯಲ್ಲಿ ಹತ್ತೋಟಿಯ ಪ್ರಯತ್ನವೂ ಇಲ್ಲಿ ಕಾಣುವುದಿಲ್ಲ. ಭಾಷೆ ಎಲ್ಲಿ ಹೇಗೆ ಬೇಕೋ ಹಾಗೆ ಹರಿಯುವ, ಹೆಪ್ಪುಗಟ್ಟುವ, ತಿರುಗುವ, ಏರುವ, ಇಳಿಯುವ, ಹುದುಗುವ, ಚಿಮ್ಮುವ ಶಕ್ತಿಯನ್ನು ಪಡೆದುಕೊಂಡಿದೆ. ಭಾಷೆಯ ಸಹಜತೆಯನ್ನು ದೀರ್ಘ ಕಾವ್ಯದಲ್ಲಿ ಒಂದು ಕಡೆಯೂ ಎಡವಲು ಬಿಟ್ಟಿಲ್ಲವೆನ್ನುವುದು 'ಚಕೋರಿ'ಯ ಸಾಧನೆಗಳಲ್ಲೊಂದು. ಇದಕ್ಕೆ ನಾನು ಪ್ರಾಯೋಗಿಕವಾಗಿ ವಿಮರ್ಶಕರ ರೀತಿಯಲ್ಲಿ ಉದಾಹರಣೆಗಳನ್ನು ಕೊಡಲು ಹೋಗುವುದಿಲ್ಲ. ಬೆಲ್ಲದ ಪುತ್ಥಳಿ ಎಲ್ಲಿ ಚುಂಬಿಸಿದರೂ ಇನಿದಾಗಿರುವಂತೆ 'ಚಕೋರಿ'ಯ ಪ್ರತಿಯೊಂದು ಪುಟದಲ್ಲೂ ಬಹುಮುಖಿಯಾದ ಕನ್ನಡ ನುಡಿಗಣದ ಸೊಬಗುಗಳು ಹರಡಿಕೊಂಡಿವೆ. ಯಾವ ಓದುಗ ಬೇಕಾದರೂ ಅಂಥ ಮಾತಿನ ಮಾಣಿಕ್ಯಹಾರಗಳನ್ನು ತನ್ನ ಯೋಗ್ಯತಾನುಸಾರ ಹೆಕ್ಕಿಕೊಳ್ಳಬಹುದು.

'ತಕರಾರು....'ಗಳ ಕವಿಯಾದ ಕಂಬಾರರ ಕೃತಿಗಳ ಬಗ್ಗೆ ನನ್ನ ಕೆಲವು ತಕರಾರುಗಳು ಮೊದಲಿನಿಂದ ಇದ್ದವು. ಕಳೆದುಹೋದ ಪ್ರಪಂಚದ ಬಗೆಗೆ ಕರುಳಾಳದ ಕಾವಳವನ್ನು ತೋಡಿಕೊಳ್ಳುವ ಈ ಕವಿ ನಾವು ಹಾದುಹೋಗುತ್ತಿರುವ ಲೋಕದ ಬಗ್ಗೆ ಯಾಕೆ ಕಳಕಳಿ ತೋರುತ್ತಿಲ್ಲ ಎಂಬ ಪ್ರಶ್ನೆ ಮತ್ತೆ ಮತ್ತೆ ಬರುತ್ತಿತ್ತು. ತಮ್ಮ ತಲೆಮಾರಿನ ಯಾವ ಕವಿ ಅಥವಾ ನಾಟಕಕಾರ ಸಾಧಿಸಲಾಗದ್ದನ್ನು ತಮ್ಮ ಕೃತಿಗಳಲ್ಲಿ ಸಾಧಿಸಿರುವ ಕಂಬಾರರು ಕೆಲವು ತಾತ್ವಿಕ ದ್ವಂದ್ವಗಳನ್ನು ತಮ್ಮ ಕೃತಿಗಳೊಳಗೆ ಪ್ರಯತ್ನಪೂರ್ವಕವಾಗಿ ಇರುಕಿಸುತ್ತಿದ್ದಾರೆ ಎಂದು ಅನಿಸುತ್ತಿತ್ತು. ಬಿಂಬ ಪ್ರತಿಬಿಂಬಗಳ ದ್ವಂದ್ವ, ಫಲವಂತಿಕೆ, ಬರಡುತನಗಳ ದ್ವಂದ್ವ ಉದ್ದೇಶಪೂರ್ವಕವಾಗಿ ಅವರ ಕೃತಿಗಳೊಳಗೆ ಸೇರಿಸಲ್ಪಡುತ್ತಿವೆ ಎಂಬ ಶಂಕೆಯೂ ನನಗಿತ್ತು. ನನಗೆ ಮತ್ತು ನನ್ನಂಥ ಹಲವು ಓದುಗರಿಗೆ ಇದ್ದ ಎಲ್ಲ ತಕರಾರುಗಳಿಗೆ 'ಚಕೋರಿ' ಸಮರ್ಥ ರೀತಿಯಲ್ಲಿ ಉತ್ತರ ಕೊಟ್ಟಿದೆ. 'ಚಕೋರಿ' ಕೀರ್ತಿಸುವುದು ಕಳೆದುಹೋದ ಜಗತ್ತಿನ ಹಳಸು ಮೌಲ್ಯಗಳನ್ನಲ್ಲ; ನಮ್ಮ ಸಾಮೂಹಿಕ ಪುರ್ಯಾಷ್ಟಕ (ಮನೋವಿಜ್ಞಾನದ ಸಾಮೂಹಿಕ ಸುಪ್ತಚೇತನಕ್ಕೆ ಸಂವಾದಿಯಾದ ಆಗಮ ಪರಂಪರೆಯ ಪರಿಕಲ್ಪನೆ)ದಲ್ಲಿ ಅಡಗಿರುವ, ಇಂದು ನಮ್ಮ ಉಳಿವಿಗಾಗಿ ನಾವು ಮರುಸಾಕ್ಷಾತ್ಕರಿಸಿಕೊಳ್ಳಲೇಬೇಕಾಗಿರುವ ಇಹಲೋಕಪರವಾದ ಶುದ್ಧ ಹಾಗೂ ಮುಗ್ಧ ಆರಾಧನಾಭಾವವನ್ನು. ಇಂಥ ಆರಾಧನಾ ಭಾವದ ತೀವ್ರತೆ ಕಂಬಾರರ ಹಿಂದಿನ ಕೃತಿಗಳಲ್ಲಿ ಅವರ ಭಾಷಿಕ ಅನ್ವೇಷಕತೆಯ ಸಂಗಾತಿಯಾಗಿದ್ದುದು ನಿಜವಾದರೂ ಅಡಿಗೋತ್ತರ ನವ್ಯದ ನಿರುದ್ದಿಶ್ಯ ಲೈಂಗಿಕ ಕೇಂದ್ರಿಕತೆ ಮತ್ತು ಕೊಂಕು ಆ ತೀವ್ರತೆಯ ಪ್ರಭಾವಕ್ಕೆ ಕೊರೆಯುಂಟು ಮಾಡುತ್ತಿತ್ತು. ತಮ್ಮ ಕಾವ್ಯದ ಲೈಂಗಿಕ ಪ್ರೇರಣೆಯನ್ನು ಮತ್ತು ಆಧುನಿಕ ಕವಿಗಳಿಗೆ ಸ್ವಲ್ಪಮಟ್ಟಿಗೆ ಅನಿವಾರ್ಯವಾದ ಕೊಂಕನ್ನು 'ಚಕೋರಿ'ಯೂ ಬಿಟ್ಟುಕೊಟ್ಟಿಲ್ಲ. ಆದರೆ ಈ ಪ್ರವೃತ್ತಿಗಳು 'ಚಕೋರಿ'ಯ ಜೀವನಾಡಿಯಾದ ಆರಾಧನಾ ಭಾವವನ್ನು ಭಿನ್ನಗೊಳಿಸದ ರೀತಿಯಲ್ಲಿ ಇದ್ದೂ ಇಲ್ಲದಂತೆ ಇವೆ.

'ಚಕೋರಿ'ಯ ಕಥಾನಾಯಕನಾದ ಚಂದಮುತ್ತ ಸೃಷ್ಟಿಯ ನೋವೆಲ್ಲವನ್ನೂ ಉಂಡೆಮಾಡಿಕೊಂಡು ಒಂದೇ ತುತ್ತಿಗೆ ನುಂಗಿ ಜೀವಜಡಗಳ ಲೋಕಕ್ಕೆ ಬೆಳದಿಂಗಳನ್ನು ಹರಿಸುವಾತ. ಜಗತ್ತಿಗೆ ಜೀವ ತುಂಬಬಲ್ಲ ಅದಿಮ ಸಂಗೀತದ ನಾದಲಯಗಳನ್ನು ಸಾಕ್ಷಾತ್ಕರಿಸಿಕೊಂಡು ಇತರರಿಗಾಗಿ ಅದನ್ನು ಆತ ಸಾಕಾರಗೊಳಿಸುವುದು ತಂದೆಯಿಲ್ಲದ ಪ್ರಪಂಚದಲ್ಲಿ. ತಂದೆಯಿಲ್ಲದ ಪ್ರಪಂಚವೆಂದರೆ ಚಂದ್ರನ ಲೋಕ. ಸೂರ್ಯನ ಸಾಮ್ರಾಜ್ಯವಲ್ಲ. ಕಂಬಾರರ ಕಾವ್ಯ ಮೊದಲಿನಿಂದ ಮಿತಪಾರದರ್ಶಕವಾದ, ನಿಗೂಢಗಳನ್ನು ಪೂರ್ತಿ ತೆರೆದಿಡದ, ಮೊಗ್ಗುಗಳ ಮುಗುದತೆಯನ್ನು ಭೇದಿಸುವ, ಅಂತಃಶಕ್ತಿ ಪ್ರಧಾನವಾದ ಚಂದ್ರಸಂಸ್ಕೃತಿಯ ಮೌಲ್ಯಪ್ರಪಂಚದ ನಿವಾಸಿಯಾಗಿದೆ. ಎಲ್ಲವನ್ನೂ ಬಿಚ್ಚಿಡುವ ಪ್ರಖರತೆಯ 'ಬಲ' ಪ್ರಧಾನವಾದ ಸೂರ್ಯಸಂಸ್ಕೃತಿಯನ್ನು ನಿರಾಕರಿಸುತ್ತ ಬಂದಿದೆ. ಆದ್ದರಿಂದಲೇ ಕಂಬಾರರ ಭಾವಪ್ರಪಂಚದ ಅಧಿಪತಿ ಚಂದ್ರಶೇಖರನಾದ ಶಿವನೇ ಹೊರತು ಕತ್ತಲಿನ ಕುಳಗಳನ್ನೆಲ್ಲ ಸದೆ ಬಡಿಯುವ ಸೂರ್ಯನಲ್ಲ.

ಕಥಾನಾಯಕ ಚಂದಮುತ್ತನ ನಾದಪ್ರಿಯತೆಗೆ ಲೋಕೋತ್ತರ ಶಕ್ತಿಯನ್ನು ತಂದು ಕೊಡುವವಳು ಇಹಪರಗಳ ನಡುವೆ ಇಬ್ಬಂದಿಯಾದ ಯಕ್ಷಿ. ಈ ಯಕ್ಷಿಯ ಮೋಹಕ್ಕೆ ಬಲಿಯಾದ ಚಂದಮುತ್ತ ತನ್ನ ಹೆತ್ತತಾಯಿಯ ಕರುಳುಬಳ್ಳಿಯನ್ನು ಕತ್ತರಿಸಿಕೊಳ್ಳುವುದು ಅನಿವಾರ್ಯವಾಗುತ್ತದೆ. ಚಂದಮುತ್ತನ ಜೀವದ ಹಿಗ್ಗು ಅವನ ಜೀವನವನ್ನೇ ಕೊನೆಗೆ ಬಲಿಯಾಗಿಸುತ್ತದೆ. ತನ್ನನಿಕ್ಕಿ ಪರವ ನುಡಿಸುವ ಚಂದಮುತ್ತನಂತಹ ನಾಯಕನ ಎರಡಿಲ್ಲದ ಭಕ್ತಿ ಕಂಬಾರರಲ್ಲದೆ ಬೇರೊಬ್ಬ ಕವಿಗೆ ಸಿಕ್ಕಿದ್ದರೆ ನಗೆಪಾಟಲಾಗುವ ಸಂಭವವಿತ್ತು. ಮುಗ್ಧತೆಯನ್ನು ಮೆಚ್ಚುವಂತೆ ಸಮರ್ಥಿಸುವುದು ಇಂದಿನ ಕಾವ್ಯದ ಅತ್ಯಂತ ಕಠಿಣ ಸವಾಲುಗಳಲ್ಲಿ ಒಂದು. ಇಹಪರಗಳ ಕಟ್ಟುಕಟ್ಟಳೆಗಳನ್ನು ಮೀರಿದ ಮತ್ತು ಯಾರಿಗೂ ಕುತ್ತಾಗದ ಚಂದಮುತ್ತ ಮತ್ತು ಯಕ್ಷಿಯ ಸಹಜ ಪ್ರೇಮಕಾಮನೆಗಳಿಗೆ ವೈರಿಯಾಗುವ ಎರಡು ಪಾತ್ರಗಳು ಚಕೋರಿಯಲ್ಲಿವೆ. ಇವರೇ ಇಲ್ಲಿನ ಖಳನಾಯಕರು. ಇದರಲ್ಲಿ ಒಬ್ಬ ಸೂರ್ಯನಂತೆ ಎಂದಿಗೂ ಬದಲಾಗದ ಊರಗೌಡ ಸೂರ್ಯಮುತ್ತ. ಆದರೆ ಈ ಸೂರ್ಯಮುತ್ತ ಮತ್ತು ಚಂದ್ರಮುತ್ತನ ವೈರುಧ್ಯವನ್ನು ಅತಿಯಾಗಿ ಲಂಬಿಸದೆ ಇರುವುದು 'ಚಕೋರಿ'ಯಲ್ಲಿನ ಸಂಘರ್ಷ ಚಿತ್ರಣದ ಪ್ರಬುದ್ಧತೆಗೆ ಕಾರಣವಾಗಿದೆ. ಕಂಬಾರರೇನೋ ಸೌರ ಮತ್ತು ಚಾಂದ್ರಮಾನ ಮೌಲ್ಯಗಳ ವೈರುಧ್ಯವನ್ನು ಕೃತಿಯ ಪೀಠಿಕಾರೂಪದ ಭಾಗದಲ್ಲಿನ ಕಲೆ ಮತ್ತು ವಿದ್ಯೆಗಳ ವಿರೋಧ ಸಂಬಂಧದ ಮೂಲಕ ಸ್ಪಷ್ಟವಾಗಿಯೇ ಹೇಳುತ್ತಾರೆ. ಆದರೆ ಸೌರ ಮೌಲ್ಯಗಳಾದ ಪ್ರತಿಷ್ಠೆ ಮತ್ತು ಅಸೂಯೆಗಳ ಪ್ರತಿನಿಧಿಯಾದ ಸೂರ್ಯಮುತ್ತ ಇಲ್ಲಿನ ಕಥೆಯಲ್ಲಿ ನಿರ್ಣಾಯಕ ಪಾತ್ರವಹಿಸುವುದಿಲ್ಲ. ಚಂದಮುತ್ತ ಮತ್ತು ಯಕ್ಷಿಯರ ಪವಿತ್ರ ಪ್ರೇಮಕ್ಕೆ ಅತಿದೊಡ್ಡ ಕಂಟಕ ತಂದೊಡ್ಡುವವನು ಚಂದಮುತ್ತನ ಗುರುವಾದ 'ಮಹಾನುಭಾವ'. ಆತನೂ ಯಕ್ಷಿಗಾಗಿ, ಅವಳು ಮಾತ್ರ ತನಗೆ ನೀಡಬಲ್ಲ ಸಂಗೀತ ಜ್ಞಾನಕ್ಕಾಗಿ ತಪಸ್ಸು ಹಿಡಿದವನು. ಆದರೆ ಅವನು ಸ್ವಾರ್ಥ ಮತ್ತು ಅಸೂಯೆಗಳಿಂದ ಮುಕ್ತಿ ಹೊಂದಿದವನಲ್ಲ. ಆದ್ದರಿಂದಲೇ ಅವನಿಗೆ ಯಕ್ಷಿ ಪೂರ್ತಿಯಾಗಿ ಒಲಿದಿಲ್ಲ. ನಿರ್ಮಲಭಾವದಿಂದ ತನಗಾಗಿ ಹಪಹಪಿಸುತ್ತಿರುವ ಚಂದಮುತ್ತನಿಗೆ ಮಾತ್ರ ಯಕ್ಷಿ ಒಲಿಯುವುದು. ಇದನ್ನು ಕಂಡು ಕರುಬಿದ ಮಹಾನುಭಾವ ಮಾಟಮಂತ್ರಾದಿಗಳಿಂದ ಯಕ್ಷಿಯನ್ನು ಬಂಧಿಸಿದ್ದು ಚಂದಮುತ್ತನ ಆತ್ಮಾರ್ಪಣೆಗೆ ಮತ್ತು ಕಥೆಯ ದರುಂತಕ್ಕೆ ದಾರಿ ಮಾಡುತ್ತದೆ.

ಅಂದರೆ ಗಂಡಾಳಿಕೆಯ ಸಂಸ್ಕೃತಿಯ ಸೌರಮೌಲ್ಯಗಳನ್ನು ಹೆಣ್ಣಾಳಿಕೆಯ ಸಂಸ್ಕೃತಿಯ ಚಾಂದ್ರಮಾನ ಮೌಲ್ಯಗಳ ಜೊತೆ ಈ ಕೃತಿ ಏರ್ಪಡಿಸುವ ಮುಖಾಮುಖಿ ಯಾಂತ್ರಿಕವಾಗಲಿ, ಸರಳೀಕೃತವಾಗಲಿ ಆಗಿಲ್ಲ. ಇದಕ್ಕೆ ಇನ್ನೊಂದು ಉದಾಹರಣೆ ಇಲ್ಲಿನ ಎರಡು ಮುಖ್ಯ ಸ್ತ್ರೀ ಪಾತ್ರಗಳಾದ ಅಬ್ಬೆ ಮತ್ತು ಯಕ್ಷಿಯ ನಡುವಿನ ಸಂಘರ್ಷ. ಚಂದಮುತ್ತನ ಗಾನ ಹೊಮ್ಮುವುದು ಅಬ್ಬೆಯ ಇನ್ನೊಂದು ರೂಪವಾದ ಪುಣ್ಯಕೋಟಿಯ ಮುರಿದ ಕೊಂಬಿನಲ್ಲಿ ಮಾಡಿದ ಕೊಳಲಿನ ಮುಖಾಂತರ. ಇದೇ ರೀತಿ ಚಂದಮುತ್ತ ಮತ್ತು ಮಹಾನುಭಾವ ಇಬ್ಬರೂ ಚಾಂದ್ರಮಾನ ಲೋಕದ ಆದರ್ಶ ಮೌಲ್ಯವಾದ ಸಂಗೀತ ಸಾಧಕರಾಗಿದ್ದರೂ ಅವರಿಬ್ಬರ ನಡುವಿನ ವೈರುಧ್ಯ 'ಚಕೋರಿ'ಯ ಕಥಾಹಂದರದಲ್ಲಿ ನಿರ್ಣಾಯಕ ಪಾತ್ರವಹಿಸುತ್ತದೆ.

'ಚಕೋರಿ'ಯಲ್ಲಿ ಚಿತ್ರಿಸಲಾಗಿರುವ ವೈರುಧ್ಯ ಮತ್ತು ಸಂಘರ್ಷಗಳು ಸೌರ - ಚಂದ್ರ, ಪುರುಷ - ಸ್ತ್ರೀ, ವಿದ್ಯೆ - ಕಲೆ ಮುಂತಾದ ಸರಳ ಧ್ರುವೀಕರಣಗಳಿಗೆ ಇಳಿಸಲಾಗದಷ್ಟು ಜಟಿಲವಾಗಿವೆ. ಹಾಗಿದ್ದರೆ ಇಲ್ಲಿನ ಸಂಘರ್ಷ ನಡೆಯುವುದು ಯಾತಯಾತರ ನಡುವೆ?

ವೊಲೆ ಷೋಯಿಂಕಾ ತನ್ನ ವಿಮರ್ಶಾ ಪ್ರಬಂಧವೊಂದರಲ್ಲಿ ಚರಿತ್ರೆಯಲ್ಲಿ ನಿರಂತರವಾಗಿ ಪ್ರಕಟವಾಗುತ್ತಿರುವ ಎರಡು ತದ್ವಿರುದ್ಧವಾದ ಅದಮ್ಯ ಪ್ರವೃತ್ತಿಗಳನ್ನು ಸೂಚಿಸುತ್ತಾನೆ. ಅದರಲ್ಲಿ ಒಂದು: ಸರ್ವಾಧಿಕಾರ ಮತ್ತು ಸಾಮ್ರಾಜ್ಯಷಾಹಿ ದಾಹಗಳಾಗಿ ವ್ಯಕ್ತವಾಗುವಂಥದು. ಬಲದ ಪ್ರಯೋಗದ ಮೂಲಕ ಇತರರನ್ನು ವಶಪಡಿಸಿಕೊಳ್ಳುವಂಥದು. ಇದನ್ನು 'ಬಲ' ಎಂದು ಕರೆಯೋಣ. ಇನ್ನೊಂದು: ಸಂಗೀತದ ಮೂಲಕ ವ್ಯಕ್ತವಾಗುವಂಥದು, ತನ್ನ ತನ್ಮಯ ಶಕ್ತಿಯ ಮೂಲಕ ಇತರರನ್ನು ಆಕರ್ಷಿಸುವಂಥದ್ದು. ಇದನ್ನು 'ಅಂತಃಶಕ್ತಿ' ಅನ್ನೋಣ. ಈ ಎರಡೂ ಸರ್ವಗ್ರಾಹಿ ಪ್ರವೃತ್ತಿಗಳೇ. ಸಂಗೀತ ಪ್ರೇಮಸಾಧಕನಾದ ಚಂದಮುತ್ತ ಮೈವೆತ್ತ ಮೌಲ್ಯಗಳಿಗೆ ಕುತ್ತು ತರುವುದು ತನ್ಮಯತೆಯಿಂದ ಪರಾಙ್ಮುಖನಾದ ಮಹಾನುಭಾವನ ಪ್ರತಿಷ್ಠೆ ಯಕ್ಷಿಯೊಂದಿಗೆ ಮೈಮನಗಳ ಸಾಮರಸ್ಯದಲ್ಲಿ ಮುಳುಗಿರುವ ಆತನನ್ನು ನೆಲದ ಸೀಮೆಗೆ ಮತ್ತೆ ಕರೆತರುವುದು ಅಬ್ಬೆಯ ಅಧಿಕಾರಯುಕ್ತ ಮಾತೃಪ್ರೇಮ. ಈ ಎರಡೂ ಅಂಶಗಳಲ್ಲಿ ಸೂಚಿತವಾಗಿರುವುದು ಬಲ ಮತ್ತು ಶಕ್ತಿಗಳ ಸೆಣೆಸಾಟ. ಬಲ ತನ್ನನ್ನು ಹೆಚ್ಚಿಸಿಕೊಳ್ಳುವುದರ ಮೂಲಕ ಇತರರನ್ನೂ

ವಶಪಡಿಸಿಕೊಳ್ಳಲೆಳೆಸಿದರೆ, ಶಕ್ತಿ ತನ್ನಲ್ಲಿ ತಾನು ತನ್ಮಯವಾಗುವುದರ ಮೂಲಕ ಜಗತ್ತನ್ನೇ ವ್ಯಾಪಿಸುತ್ತದೆ - ಬೆಳದಿಂಗಳಿನ ಹಾಗೆ. ಚಂದಮುತ್ತನ ಹಲವು ರೀತಿಯ ವಶೀಕರಣಗಳ ಮೂಲಕ ಜೀವಜಡಗಳನ್ನು ಸ್ವಾರ್ಥಪರವಾಗಿ ನಿಯಂತ್ರಿಸುವ ಇಂದಿನ ಪ್ರಪಂಚದಲ್ಲಿ ಚಂದಮುತ್ತನಂಥ ತಲ್ಲೀನತೆಯಲ್ಲಿ ತದುಗತವಾದ ವ್ಯಕ್ತಿ ಇಲ್ಲವೆನ್ನುವಷ್ಟು ಅಪರೂಪ. ಇದ್ದರೂ ನಗೆಸಾರಕ್ಕೆ ವಸ್ತುವಾಗುವಂಥವು. ಇಂಥ ಪಾತ್ರವನ್ನು ಆ ಪಾತ್ರದ ತನ್ಮಯತೆಯನ್ನು ಕಂಬಾರರು 'ಚಕೋರಿ'ಯ ಮೂಲಸೆಲೆಯಾಗಿಸಿಕೊಂಡಿದ್ದಾರೆ. ಇದಕ್ಕಾಗಿ ಸೌರಮೌಲ್ಯಗಳ ಇಂದಿನ ಪ್ರಪಂಚದ ನಿದ್ದೆಯಲ್ಲಿ ಅವಿತು ಕೂತಿರುವ ಕನಸುಗಳನ್ನೇ ಈ ಕಥೆಯ ನಿರೂಪಕರನ್ನಾಗಿಸಿದ್ದಾರೆ. ಕನಸುಗಳ ಮೂಲಕ ಕತೆ ಹೇಳಿಸುವ ಈ ಬಗೆ ತಾಂತ್ರಿಕ ನಾವೀನ್ಯತೆಯನ್ನು ಹೊಂದಿದ್ದರೂ ಇದು ಕೇವಲ ತಂತ್ರವಲ್ಲ. ಕನಸುಗಳು ತಾವು ಮುಗ್ಧತೆಯನ್ನು ಸಂಧಿಸುವ ಏಕಮಾತ್ರ ಭಿತ್ತಿಯಾಗಿ ಇಂದು ನಮಗುಳಿದಿವೆ.

ಚಂದಮುತ್ತನ ತನ್ಮಯತೆ ಇಂದಿನ ಜಾಣ ಬುದ್ಧಿಗೆ ಭಕ್ತಿಯಾಗಿ ಕಾಣಿಸಬಹುದು. ಆದರೆ ಚಂದಮುತ್ತನ ಭಕ್ತಿ ಟೊಳ್ಳುಭಕ್ತಿಯಲ್ಲ ಎಂಬುದನ್ನು ಮಾತ್ರ ಸೂಚಿಸಬಯಸುತ್ತೇನೆ.

'ಹೋಯಿತಲ್ಲಾ ಭಕ್ತಿ ಜಲವ ಕೂಡಿ' ಎಂದು ಅನುಭಾವ ಕಾವ್ಯದ ಶಿಖರವಾದ ಅಲ್ಲಮ ಭಕ್ತಿಯನ್ನು ವಿಡಂಬಿಸಿದ್ದಾನೆ. ಇಂಥ ಅಲ್ಲಮನನ್ನು ಅಪಾರವಾಗಿ ಗೌರವಿಸುವ ಕಂಬಾರರು ಮೃತ್ಯುವಿಗೆ ಅಂಜಿ ಭಕ್ತರಾಗುವವರ ಭಕ್ತಿಯನ್ನು ತಮ್ಮ ಕೃತಿಯ ಮೇಲೆ ಹೇರಿಲ್ಲ. ನಿರೂಪಕರಾದ ಆದಿಮ ಕನಸುಗಳು ಮತ್ತೆ ಮತ್ತೆ ದೇವತಾ ಸ್ಮರಣೆ ಮಾಡುವುದರ ಮೂಲಕ ತೋರುವ ಭಕ್ತಿ ನಮ್ಮ ಜನಪದ ಧಾರ್ಮಿಕತೆಯ ಭಕ್ತಿಯ ರೀತಿಯದು. ಆ ಸಂಸ್ಕೃತಿಯ ದೇವತೆಗಳು ನಮ್ಮ ಸುಖದುಃಖಗಳಿಗೆ ಹೊರತಾದವರಲ್ಲ. ಅವುಗಳ ಅತ್ಯಂತಿಕ ರೂಪಗಳು ಅಷ್ಟೆ. ಇನ್ನು ಚಂದ್ರಮುತ್ತನ ಭಕ್ತಿಯಾದರೋ ಕಲೆಗಾಗಿ ತನ್ನನ್ನೇ ಬಲಿಕೊಡುವ ಕಲಾವಿದನೊಬ್ಬನ ಭಕ್ತಿ. ಪ್ರೇಯಸಿಗೆ ರೆಕ್ಕೆ ತೊಡಿಸಲಿಕ್ಕಾಗಿ ತಾನು ಕಲ್ಲಾಗಲೂ ಹಿಂಜರಿಯದ ಪ್ರೇಮಿಯ ಭಕ್ತಿ, ಭಕ್ತಿಯನ್ನು ಪ್ರೇಮಸ್ವರೂಪವೆಂದಲ್ಲವೇನಾರದರು ವ್ಯಾಖ್ಯಾನಿಸಿರುವುದು?

ಸಮಕಾಲೀನ ಪ್ರಸ್ತುತತೆಯ ಸೋಗು ಅಥವಾ ಸ್ಲೋಗನ್ನುಗಳನ್ನು ಹಾಕದೆ ಕಂಬಾರರ 'ಚಕೋರಿ' ಒಂದು ದೊಡ್ಡ ಸಮಕಾಲೀನ ಅಗತ್ಯವನ್ನು ಪೂರೈಸುತ್ತದೆ. 'ಬಲ'ದ ಬಲಾತ್ಕಾರದ ಸಂಸ್ಕೃತಿಯ ವಿರುದ್ಧ ಶಕ್ತಿ ಸಂಸ್ಕೃತಿಯ ಸಾರ್ಥಕತೆಯನ್ನು ಸರ್ವರ ಮನಸ್ಸು ಮುಟ್ಟುವ ಹಾಗೆ ಸ್ವಾರಸ್ಯವಾಗಿ ಅಭಿವ್ಯಕ್ತಿಸಿದೆ. ಈ ಅಭಿವ್ಯಕ್ತಿಯನ್ನು ಸಾಧಿಸಿರುವುದು ಸಮಕಾಲೀನ ಜಗತ್ತಿನಲ್ಲಾಗಲೀ ಅಥವಾ ಸಮಕಾಲೀನ ಜಗತ್ತಿನ ನಿರ್ಮಾತೃ ಪ್ರತಿನಿರ್ಮಾತೃಗಳು ತಯಾರಿಸಿರುವ ಭವಿಷ್ಯದ ನೀಲನಕಾಶೆಗಳಲ್ಲಿ ಇಲ್ಲದ 'ಅಂದಿಂಗೆ ಹಳೆಯ'ವಾದರೂ 'ಇಂದಿಂಗೆ ಎಳೆಯ'ವಾಗಿರುವ ಕನಸಿನ ಮೂಲಕ ಇದನ್ನು 'ಚಕೋರಿ' ಹಸಿಹಸಿಯಾಗಿ ಮಾಡಿಲ್ಲ. ಈ ಕೃತಿಯ ಅನುಭವಲೋಕದಲ್ಲಿ ಆದರ್ಶ ಪ್ರಪಂಚವೆಂಬುದು ಹಿಂದೂ ಇಲ್ಲ, ಮುಂದು ಇಲ್ಲ. ವ್ಯಕ್ತಿಗಳ ಮತ್ತು ಸಮಾಜಗಳ ಕಾರ್ಪಣ್ಯಗಳು ವ್ಯವಸ್ಥೆಯಿಂದ ಮಾತ್ರ ಹೇರಲ್ಪಟ್ಟವಲ್ಲ. ಜೀವಗಳ ಜಾತಕದಲ್ಲೇ ಅವು ಅಂತರ್ಗತ. ಅವು ಆದಿಮೂಲ ಜೀವಿಯಾದ ಶಿವನಿಂದಲೇ ಶುರುವಾಗುವಂಥವು. ಚಕೋರಿ ಈ ಕಾರ್ಪಣ್ಯಗಳ ನಿರಂತರ ಅನಿವಾರ್ಯತೆಯಷ್ಟನ್ನೇ ಹೇಳಿಬಿಟ್ಟಿದ್ದರೆ ಇದು ಸರಾಸರಿ ಮಟ್ಟದ ಒಂದು 'ನವ್ಯ' ಕೃತಿಯ ಮಟ್ಟವನ್ನು ಮೀರುತ್ತಿರಲಿಲ್ಲ. ಈ ಎಲ್ಲ ಕಾರ್ಪಣ್ಯಗಳ ಮಧ್ಯೆ ದ್ವಂದ್ವಗಳನ್ನು ಬಾಳುತ್ತಲೇ ಅಖಂಡತ್ವವನ್ನು ಕಲೆಯ ಮೂಲಕ ಅನುಭವಿಸಬಹುದೆನ್ನುವುದನ್ನು 'ಚಕೋರಿ'ಯ ಕಥಾನಾಯಕ ತನ್ನ ಬದುಕು ಮತ್ತು ಸಾವುಗಳಲ್ಲಿ ತೋರುತ್ತಾನೆ.

'ಚಕೋರಿ'ಯ ಬಗ್ಗೆ ಹೇಳಬೇಕಾದ್ದು ಬೇಕಾದಷ್ಟಿದೆ. ಇಲ್ಲಿನ ನಿರೂಪಣಾ ಕೌಶಲದ ಬಗ್ಗೆ; ಸುವ್ಯವಸ್ಥಿತವಾಗಿದ್ದರೂ ಕೃತಕವಾಗಿ ಕಾಣದ ಸಾಂಕೇತಿಕತೆಯ ಬಗ್ಗೆ; ಆದಿಮ ಪ್ರವೃತ್ತಿಗಳ ರೂಪಕಗಳಾಗಿ ಬಂದರೂ ಕಾರ್ಡ್‌ಬೋರ್ಡ್‌ನ ಕಟೌಟ್‌ಗಳಾಗದ ಪಾತ್ರಗಳ ಬಗ್ಗೆ; ಅಂಚಿಗೆ ದೂಡಲ್ಪಟ್ಟ ಸಾಂಸ್ಕೃತಿಕ ಸತ್ವಗಳು ಕಲಾತ್ಮಕವಾಗಿ ಮೈತಳೆಯುವ ಬಗ್ಗೆ; ಈ ಕೃತಿ ಕಾವ್ಯದ ಮೂಲಕ ಸಂಗೀತವನ್ನು ಸಾಕ್ಷಾತ್ಕರಿಸಿಕೊಳ್ಳುವ ದ್ವಿಕಲಾತ್ಮಕತೆಯ ಬಗ್ಗೆ; ಭಾಷೆಯ ಮಂದರ, ಮಧ್ಯ, ತಾರ ಸ್ಥಾಯಿಗಳ ನಾದ ನವಿರುಗಳಲ್ಲಿ ಕಲಬೆರಕೆಯಿಲ್ಲದೆ ಸಮರಸವಾಗಿ ಮಿಳಿತವಾಗಿರುವ ಹಲವು ಸಾಹಿತ್ಯಿಕ ಮತ್ತು ಭಾಷಿಕ ಉಪಭಾಷೆಗಳ, ಶೈಲಿಗಳ, ನುಡಿಗಟ್ಟುಗಳ ಬಗ್ಗೆ....

ಕಂಬಾರರ ಎಲ್ಲ ಕೃತಿಗಳ ಹಿಂದೆ ಸಾಮಾನ್ಯವಾಗಿ ಮತ್ತು ಈ ಕೃತಿಯ ಹಿಂದೆ ವಿಶೇಷವಾಗಿ ಕೆಲಸ ಮಾಡಿರುವ ಮಿಥಿಕ ಆಕರದ ಬಗ್ಗೆ ಒಂದು ಮಾತು. ತಮ್ಮ ಇನ್ನೊಬ್ಬ ಮೆಚ್ಚಿನ ಕವಿ ಯೇಟ್ಸ್‌ನ ರೀತಿಯಲ್ಲಿ ಕಂಬಾರರೂ ಒಂದು ಸುವ್ಯವಸ್ಥಿತವಾದ ಮಿಥಿಕ ಭಿತ್ತಿಯನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ಇಂಗ್ಲಿಷಿನಲ್ಲಿ ಯೇಟ್ಸ್‌ನ ಹಿರೀಕನಾದ ಬ್ಲೇಕ್ ಕೂಡ ಇದೇ ರೀತಿಯ ಮಿಥಿಕ ನಿರ್ಮಾಣ ಮಾಡಿಕೊಂಡಿದ್ದ. ಮಿಥಿಕ ನೆಲೆಗಟ್ಟು. ನಶಿಸಿಹೋಗುತ್ತಿರುವ ಹೊತ್ತು - ಗೊತ್ತುಗಳಲ್ಲಿದ್ದ ಆ ಇಂಗ್ಲಿಷ್ ಕವಿಗಳ ಮಿಥಿಕ ಭಿತ್ತಿಗಳು ಹಲವಾರು ಸಂಸ್ಕೃತಿಗಳಿಂದ ಎರವಲು ಪಡೆದುಕೊಂಡವು. ಆದ್ದರಿಂದ ಅವು ಕಲಸು ಕಲಸಾಗುವುದು ಅನಿವಾರ್ಯವಾಯಿತು. ಕಂಬಾರರ ಮಿಥಿಕ ಭಿತ್ತಿ ಹೀಗಲ್ಲ. ಅವರ ಹುಟ್ಟೂರಿನ ಗಾಳಿಯಲ್ಲಿ ಇನ್ನು ಉಸಿರುಹಿಡಿದುಕೊಂಡಿರುವ ಒಂದು ಸಜೀವ ಸಂಸ್ಕೃತಿಯ ಬುನಾದಿಯ ಮೇಲೆ ನಿಂತಿರುವ ಭಿತ್ತಿ ಅದು. ಈ ದೃಷ್ಟಿಯಿಂದ ಕಂಬಾರರ ಮಿಥಿಕ ದೃಷ್ಟಿ ನೈಜೀರಿಯಾದ ವೊಲೆ ಷೋಯಿಂಕಾನ ಮಿಥಿಕ ದೃಷ್ಟಿಯನ್ನು ಹಲವು ರೀತಿಯಲ್ಲಿ ಹೋಲುವಂಥದು. ಷೋಯಿಂಕಾ ತನ್ನ ಯಾರೂಬಾ ಬಣದ ಸ್ಮೃತಿಗಳನ್ನು ಆಧರಿಸಿ ಇವತ್ತಿನ ಜಾಗತಿಕ ಅನುಭವದ ಸ್ಥಿರಬಿಂದುಗಳನ್ನು ತನ್ನ ಕೃತಿಯ ಮುಖೇನ ಯುರೋಪಿನ ಮೇಲು ಸಂಸ್ಕೃತಿಗಳ ಕಥನಕ್ಕೆ ಪ್ರತಿಯಾಗಿ ಕಟ್ಟಿದ್ದಾನೆ. ಕಂಬಾರರ ಮಿಥಿಕ ದೃಷ್ಟಿ ಯುರೋಪಿನ ಮೇಲುಸಂಸ್ಕೃತಿಗಳಿಗಿಂತ ಭಿನ್ನವಾಗಿರುವುದಲ್ಲದೆ ಭಾರತದ ಅಫಿಷಿಯಲ್ ಸಂಸ್ಕೃತಿ (ರಾಮಾಯಣ, ಮಹಾಭಾರತ ಇತ್ಯಾದಿ)ಗಳ ಅಂಚಿನ ದ್ರವ್ಯಗಳಿಂದ ನಿರ್ಮಾಣವಾದುದು. ಹೀಗೆ ಮೇಲು ಪರಂಪರೆಯ ಹಿಡಿತದಿಂದ ಪೂರ್ತಿ ಬಿಡಿಸಿಕೊಂಡ ಕವಿಗಳು ಈ ಶತಮಾನದಲ್ಲಿ ಇನ್ನ್ಯಾರೊ ನೆನಪಾಗುತ್ತಿಲ್ಲ. ಒಂದು ವಿಚಿತ್ರ ರೀತಿಯಲ್ಲಿ ಕಂಬಾರರು ಹರಿಹರ, ಚಾಮರಸ ಮತ್ತು ಜನಪದ ಕಾವ್ಯಗಳ ಪರಂಪರೆಯನ್ನು ಇನ್ನೊಂದು ಕಲಾತ್ಮಕ ಎತ್ತರಕ್ಕೆ ಒಯ್ದಿದ್ದಾರೆ. ಆದ್ದರಿಂದಲೇ 'ಚಕೋರಿ'ಯ ಸಾಂಸ್ಕೃತಿಕ ಮೌಲ್ಯ ಅದರ ಕಾವ್ಯಾತ್ಮಕ ಮೌಲ್ಯದಷ್ಟೇ ಅಗ್ಗಳವಾದುದು.

'ಚಕೋರಿ'ಯಲ್ಲಿ ನನಗೆ ಮುಖ್ಯವೆನಿಸಿದ ಕೆಲವು ಗುಣಗಳ ಬಗ್ಗೆ ಮಾತ್ರ ಬರೆಯಲು ಈ ಕೃತಿ ಕುರಿತ ಮೊದಲ ಬರಹದಲ್ಲಿ ಯಥಾಶಕ್ತಿ ಪ್ರಯತ್ನಿಸಿದ್ದೇನೆ. 'ಚಕೋರಿ'ಯ ಬಹುಸ್ತರತೆ ಮತ್ತು ವ್ಯಾಪ್ತಿ ಮುಂದೆ ಹಲವು ನಿಟ್ಟಿನಿಂದ ಅಧ್ಯಯನ ಯೋಗ್ಯವಾಗುತ್ತವೆಂಬುದರಲ್ಲಿ, ಮುಂದಿನ ಕವಿಗಳಿಗೆ ಅನುಕರಣೀಯವಾಗುತ್ತವೆಂಬುದರಲ್ಲಿ ನನಗೆ ಅನುಮಾನಗಳಿಲ್ಲ. ಕನ್ನಡ ಕಾವ್ಯ ಪರಂಪರೆಗಳ ಅಪೂರ್ವ ಸಿದ್ಧಿಯಾಗಿ ನಮ್ಮ ಮುಂದಿರುವ ಈ ಕೃತಿಗೆ ಸ್ವಲ್ಪಮಟ್ಟಿಗಾದರೂ ನ್ಯಾಯ ದೊರಕಿಸಿಕೊಟ್ಟಿದ್ದರೆ ನನ್ನ ಪ್ರಯತ್ನ ಅಷ್ಟರಮಟ್ಟಿಗೆ ಸಾರ್ಥಕ.

**ಎಚ್.ಎಸ್. ಶಿವಪ್ರಕಾಶ್**
(ಮೊದಲ ಮುದ್ರಣಕ್ಕೆ ಬರೆದುದು)

## ೧. ಪ್ರಾರ್ಥನೆ

ಓಂ ಪ್ರಥಮದಲ್ಲಿ
ಆದಿಗಾಧಾರವಾದ ಸಾವಳಗಿ ಶಿವಲಿಂಗನ ನೆನೆದು
ನಾದದಲಿ ಹುರಿಗೊಂಡ ತನ್ನ ನಿಜವ ತೋರಲಿ ಸ್ವಾಮಿ
ಬೇಡಿಕೊಂಡು ಕಥಾರಂಭ ಮಾಡುತ್ತೇವೆ.

ನಾವು ಕನಸುಗಳು,
ಎಲ್ಲ ಕಾಲ ಎಲ್ಲ ಸೀಮೆಗೆ ಸಲ್ಲುವ
ಎಲ್ಲಾ ವಯಸ್ಸಿನ, ಎಲ್ಲಾ ಮನಸ್ಸಿನ,
ಆದಿಮ ಕಾಲದಿಂದ ಹಾಂಗೇ ಉಳಿದು ಬಂದಿರುವ ಕನಸುಗಳು -
ಮಹಾಶಿವರಾತ್ರಿಯಂದು, ಸಂಜೆ ಸಾಯಂಕಾಲವಾದೇಟ್ಗೆ

ಯಕ್ಷಿಗುಡಿಯಲ್ಲಿ ಸೇರಿ,
ಸಾವಳಗಿ ಶಿವನ ಜಡೆಯಂಥ ಅಮವಾಸ್ಯೆ ಅಂಧಂತಮಸ್ಸಿನಲ್ಲಿ
ಚಂದಮುತ್ತನೆಂಬ ಹೆಸರಾಂತ ಕಲಾವಿದನ ಕಥೆಯ
ನಾವು ಹೇಳಿ ಶಿವನು ಕೇಳಿ
ಜಾಗರಣೆ ಮಾಡುತ್ತೇವೆ; ಭಕ್ತಿಯಿದ್ದವರು ಬನ್ನಿರಯ್ಯಾ.

ಮೇಲುಕಾಡಿಸುವ ಎದುರು ಬಸವನ ಮ್ಯಾಲೆ
ಕುಂತಾಲಿಸುವ ಹಂಪಿಯ ವಿರೂಪಾಕ್ಷನ ಪಾದ
ಮತ್ತು ಪಂಪಮ್ಮನ ಶ್ರೀಪಾದಂಗಳ ಹೊತ್ತ
ಚಂದಮುತ್ತಾ ನಿನ್ನ ಪಾದಕ್ಕೂ ಶರಣು.
ಸಾವಳಗಿ ಮಠದ ಸಿದ್ಧರಾಮೇಶ್ವರ ಸ್ವಾಮಿಗಳ ಶ್ರೀಪಾದಂಗಳ ಹೊತ್ತು
ವಿಶ್ವಕರ್ಮ ಕುಲದ
ತಂದೆ ಕಂಬಾರ ಬಸವಣ್ಣೆಪ್ಪ ಮತ್ತು
ತಾಯಿ ಚನ್ನಮ್ಮ ಅವರ ಪಾದಂಗಳಿಗೆ ನಮಿಸಿ
ಕವನ ಮಾಡಿ ಹಾಡುತ್ತೇವೆ.

ಶಿವನ ಕಾಣದಿದ್ದವರೆಲ್ಲ
ಕಂಡವನ ಕತೆಯ ಕೇಳಬನ್ನಿರಯ್ಯಾ
ಹೇಳುವವರು ಸಾವಿರ ಬಾರಿ
ಕೇಳುವವರು ಸಾವಿರ ಬಾರಿ
ಶಿವಶಿವಾ ಎಂದು ಹೇಳಿ ಕೇಳಿದರೆ
ಕರ್ಮ ಪರಿಹಾರ ಸಂಕಲ್ಪಸಿದ್ಧಿ ಎಂದು
ಸ್ವಯಂ ಶಿವಲಿಂಗನ ಭಾಷೆಯಿದೆ ಬನ್ನಿರಯ್ಯಾ.

ಸಾವಿರ ಬಾರಿ ಚಂದಮುತ್ತನ ಕಥೆಯ
ಹೇಳಿದ್ದೇವೆ ಕೇಳಿದ್ದೇವೆ ಶಿವಾ,
ಸಾವಿರ ಬಾರಿ ಚಂದಮುತ್ತನ ಹಾಡ
ಬಾಳಿದ್ದೇವೆ ಬದುಕಿದ್ದೇವೆ ಶಿವಾ,
ಬರುವ ಜನ ಬಾಳಲೆಂದು ಬದುಕಲೆಂದು
ಇನ್ನೊಮ್ಮೆ ರಾಗರಚನೆ ಕಟ್ಟಿ
ಕವಿಮಾಡಿ ಪದ ಹಾಡುತ್ತೇವೆ, -
ಸಾವಳಗಿ ಶಿವಲಿಂಗ ಮೆಚ್ಚಿ ಹೌಂದು ಹೌಂದೆನುವಂತೆ,
ಭಕ್ತಾದಿಗಳ ಹೃದಯಗಳಲ್ಲಿ ಆಳವಾಗಿಳಿವಂತೆ
ಇಳಿದದ್ದು ಹೊಳೆವಂತೆ.

ನಮ್ಮ ಹಾಡು ಹೂಪತ್ರಿಯಾಗಿ ಸುರಿಯಲಿ ಸ್ವಾಮಿ
ನಿಮ್ಮ ಶ್ರೀಪಾದಂಗಳ ಮ್ಯಾಲೆ,
ಭಕ್ತರ ಹೃದಯಂಗಳ ಮ್ಯಾಲೆ

## ೧. ಇಂತಿದು ಪ್ರಸ್ತಾವನೆ

ಶಿವಲೋಕವೆಂಬ ಬೆಳಕಿನ ಮಿರಿಲೋಕ, ಅಖಂಡವಾಗಿದ್ದ ಆದಿಮಕಾಲದಲ್ಲಿ ಜಪತಪ ಮಾಡಿಕೊಂಡು ಶಿವದೇವರು ಏಕಾಂಗಿ ಸುಖವಿದ್ದರು. ಆರೂ ಅನಂತಕಾಲ ಜಪತಪ ಮಾಡಿ ಮಾಡಿ ಬೇಸರವಾಗಿ ವಿನೋದಕ್ಕೆಂದು ತಮ್ಮ ನಡಿನಲಿ ಕಟ್ಟಿಕೊಂಡಿದ್ದ ಅಮೃತಗಿಂಡಿಯಲ್ಲಿ ಮುಖ ನೋಡಿಕೊಂಡಾಗ, ಆಹಾ! ನಾನೆಂಥ ಚೆಲುವನೆಂದು ಘನಾನಂದವಾಗಿ ಅದೇ ಮಾದರಿಯಲ್ಲಿ ತಮ್ಮ ವಾಮಾಂಗವ ಕಿತ್ತು ಇನ್ನೊಂದು ಮೂರ್ತಿಯ ಮಾಡಿ ಆದಿಮಾಯಿಯೆಂದು ನಾಮಕರಣವ ಕೂಗಿ ಅವಳೊಂದಿಗೆ ಕ್ರೀಡಿಸಿದರು. ಸೀಳಿಕೊಂಡ ಗಾಯದ ಮ್ಯಾಲೆ ಅಮೃತವ ಸುರಿದುಕೊಂಡು ಮಾಯಿಗೆ ನೀಡಿ ನೀನೂ ಸುರಿದುಕೊ ಎಂದರೆ ಅವಳ ಕೈ ಜಾರಿ ಕೆಳಗೆ ಚೆಲ್ಲಿಕೊಂಡುದುದರಿಂದ ಶಿವದೇವರು ಕೋಪಗೊಂಡು ಅಮೃತವ ವಿನಿಯೋಗಿಸುವ ವಿವೇಕ ಮತ್ತು ವಯಸ್ಸು ಬೆಳೆಯುವ ತನಕ ಸುಮ್ಮನಿರೆಂದು ಹೇಳಿ ಒಳಮನೆಯಲ್ಲಿ ಅಮೃತದ ಗಿಂಡಿಯ ಭದ್ರವಾಗಿಟ್ಟು, - “ಎಲೌ ಆದಿಮಾಯಿಯೇ, ನೀನು ಬೇಕೆನಿಸಿದಂತೆ ಆಡಿಕೊಂಡಿರು. ಆದರೆ ಅಂಧಂತಮಸ್ಸಿನ ಒಳಮನೆಯ ಬಾಗಿಲನ್ನು ಮಾತ್ರ ತೆರೆಯಬ್ಯಾಡೆಂ”ದು ತಾಕೀತು ಮಾಡಿ ಜಪತಪಕ್ಕೆ ಕುಂತರು.

ಇಂತೀರೀತಿ ಶಿವದೇವರು ಕಣ್ಣುಮುಚ್ಚಿರುವಲ್ಲಿ ಆತುರ ತಾಳದ ಆದಿಮಾಯಿಯು ಒಳಮನೆಯ ಬಾಗಿಲು ತೆಗೆದಳು ನೋಡು -

ಒಳಗೆ ಹಿಡಿದಿಟ್ಟ ಅಂಧಂತಮಸ್ಸು ಭುಸ್ಸೆಂದು ಹೊರನುಗ್ಗಿ ಬೆಳಕಿನ ಲೋಕ ಲೋಕಾಂತರವ ವ್ಯಾಪಿಸತೊಡಗಿತು. ಶಿವದೇವರಿಗಿದು ಗೊತ್ತಾಗಿ ಉಳಿದಿರುವಷ್ಟು ಲೋಕವನ್ನಾದರೂ ಕಾಪಾಡಿಕೊಳ್ಳೋಣವೆಂದು ಕತ್ತಲಾವರಿಸಿದಷ್ಟು ಶಿವಲೋಕವ ಸೀಳಿ ಕೆಳಕ್ಕೆ ತಳ್ಳಿದರು. ಕಾಪಾಡು ಶಿವನೇ ಎಂದು ಕಿರುಚುತ್ತ ಇನ್ನೂ ಒಳಮನೆಯಲ್ಲೇ ಇದ್ದ ಆದಿಮಾಯಿಯೂ ಅಂಧಂತಮಸ್ಸಿಗಂಟಿದ ಲೋಕದೊಡನೆ ಕೆಳಕ್ಕೆ ಬಿದ್ದಳು.

ಕತ್ತರಿಸಿ ಬಿದ್ದ ಕೀಳರ್ಧ ಲೋಕವೇನಾಯಿತೆಂಬುದು ಎಲ್ಲಿಯೂ ಕಾಣ ಬರಲಿಲ್ಲವಾಗಿ ಶಿವದೇವರು ತಮ್ಮ ಹಣೆಗಣ್ಣಿನ ಒಂದು ಕಿಡಿಗೆ ಸೂರ್ಯನೆಂದು ನಾಮಕರಣವ ಕೂಗಿ ಆದಿಮಾಯಿಯ ಶೋಧಿಸಿಕೊಂಡು ಬಾ ಎಂದು ಹೇಳಿ ಕಳಿಸಿದರು. ಅವನು ಶೋಧನೆ ಮಾಡಿ ಮಾಡಿ ದಣಿದು ವಿಶ್ರಾಂತಿ ತಗೊಂಡು ಮತ್ತೆ ಶೋಧನೆ ಮಾಡುತ್ತಿದ್ದ. ಇಂತಿರುವಲ್ಲಿ ಅವನು ಹುಡುಕಿದ್ದು ಹಗಲಾಗಿ ದಣಿವಾರಿಸಿಕೊಂಡದ್ದು ರಾತ್ರಿಯಾಯಿತು. ಇಂತೀರೀತಿ ದಿನವಾರ ಋತುಮಾನ ಮಾಸ ವರುಷಂಗಳಾಗಿ, ಯುಗ ಜುಗಂಗಳಾಗಿ ಕಾಲನ ವ್ಯವಹಾರ ನಿರಂತರ ನಡೆಯಿತು.

ಇತ್ತ ಅಂಧಂತಮಸ್ಸಿನ ಕೀಳರ್ಧ ಶಿವಲೋಕದಲ್ಲಿದ್ದ ಆದಿಮಾಯಿ ನೋಡಿ ಕೊಂಡರೇನಿದೆ? ಮ್ಯಾಲೆ ನೋಡಿದರೆ ಬಾನಾಯಿತು. ಕೆಳಗೆ ನೋಡಿದರೆ ತಾನಾಯಿತು. ಶಿವನಿಂದ ಸೀಳಿಕೊಂಡ ಗಾಯವಿನ್ನೂ ಹಾಂಗೇ ಉರಿಯುತ್ತಿದೆ. ಶಿವನೇ ಇನ್ನೆಂದಿಗೆ ನಿನ್ನೊಂದಿಗೆ ಒಂದಾದೇನೆಂದು ಮ್ಯಾಲೆ ನೋಡಿ ತನ್ನಲ್ಲಿ ತಾ ಮಿಡುಕಿ ಬಡವಿಯಾದಳು. ಬಗೆಬಗೆಯ ಶೋಕಂಗಳ ಶೋಕಿಸುತ್ತ ಯುಗಯುಗಾಂತರ ಕಳೆದು ಅಮೃತ ಕುಡಿಯದ ಅವಳ ದೇಹ ಕುಸಿದು ಅಸುನೀಗಿ ಬಿದ್ದಲ್ಲಿ ನೋಡು ಶಿವಾ,

ಮಾಯಿಯ ಉಬ್ಬಿದವಯವಂಗಳು
ಗಿರಿಬೆಟ್ಟ ಪರ್ವತಂಗಳಾಗಿ,

ಬೆವರುಜಲ ಕಣ್ಣೀರು
ಹೊಳೆಹಳ್ಳ ಮಳೆಗಳಾಗಿ,
ಅವಳುಸಿರು ಗಾಳಿಯಾಗಿ,
ಮರ್ತ್ಯಲೋಕ ಮೊದಲಾಯಿತೆಂಬಲ್ಲ ಗತಿಸಿಹೋದವು
ಆರುಮೂರು ಒಂಬತ್ತು ಅನಂತಕಾಲಂಗಳು.

ಆಮೇಲೆ ಆದಿಮಾಯಿ ಧರಣಿಮಂಡಳ ಮಧ್ಯದಲ್ಲಿ ಪುಣ್ಯಕೋಟಿ ಎಂಬ ಹಸುವಿನ ಅವತಾರ ತಾಳಿ ಇರುವೆ ಮೊದಲು ಆನೆ ಕಡೆಯಾಗಿ ಒಟ್ಟು ಚೌರ್ಯಾಂಸಿ ಲಕ್ಷ ತಿರ್ಯಕ್ ಜಂತುಜಾಲಕ್ಕೆ ಜನನ ನೀಡಿದಳು. ಅದು ಹೆಂಗೆಂದರೆ:

ಆದಿಯಲ್ಲೊಂದು ಕಾಡು
ಕಾಡಿನಲ್ಲೊಂದು ಗವಿ
ಗವಿಯಲ್ಲೊಂದು ಪಡ್ಡೆ ಕರು ಪುಣ್ಯಕೋಟಿ
ಅಂದರೆ ನಮ್ಮ ಕಥಾನಾಯಕಿ.
ಸಂತಾನವಿಲ್ಲದ ಸಂತಾಪದಿಂದ
ಮೌನದಿಂದ ತುಂಬಿದ ಹಗಲುಗಳಿಂದ
ನಿದ್ರೆಯಿಂದ ತುಂಬಿದ ರಾತ್ರಿಗಳಿಂದ
ಬೋರಾಗಿ ಬೇಸರಗೊಂಡು ಮಲಗಿರಲಾಗಿ
ಸದರಿ ಕರುವಿಗೊಂದು ಕನಸಾಯ್ತು.

ಆಕಾಶ ನೀಲಿಮದಲ್ಲಿ
ಮಾಯದ ಬೆಳ್ಳಿಯ ಗಿಂಡಿ. ಫಳ್ಳನೆ ಹೊಳೆದು
ಬೆಳ್ದಿಂಗಳ ಹಾಲು ಸುರಿದು ಮರೆಯಾಯ್ತು.
ಆದಿಮದ ಬೆದೆ ಕೆರಳಿ
ಚಿತ್ತವೈಕಲ್ಯವುಂಟಾಗಿ ಚಡಪಡಿಸಿ
ಎಚ್ಚತ್ತಳು ಹೆಣ್ಣು ಪುಣ್ಯಕೋಟಿ.

ಆಮೇಲಾಮೇಲೆ ಕಾಡಿನ ಕಥೆಗೆ
ಮಬ್ಬು ಕವಿಯಿತು ನೋಡು:
ಕೆಂಗಣ್ಣಿನಿಂದ ತುಂತುರು ಹನಿ ಉದುರಿಸುತ್ತ
ಮೈಮರೆತು ಮ್ಯಾಲೆ ನೋಡುತ್ತ
ಬೆಳ್ಳಿಗಿಂಡಿಯ ಪಡೆವ ಯೋಗಾ ಹ್ಯಾಗೆ ಒದಗೀತೆಂದು
ಅಂತರಂಗದ ಒಳಗೊಳಗೇ ಚಿಂತಿಸುತ್ತಾ

ಏಕಾಂತ ಕುಂತಳು ಕಾಂತೆ
ಕೊಂಬಿಂದ ಗವಿಯ ಗೋಡೆಯ ಮ್ಯಾಲೆ ಗೀರುತ್ತ.

ಏನೇನೋ ಗೀಚಿದಳು:
ಹೂಹಣ್ಣು ಹೆರುವ ತರುಮರ ಬರೆದಳು.
ಚಿಲಿಪಿಲಿ ಹಕ್ಕಿಯ ಬರೆದಳು.
ಮ್ಯಾಲಿನ ಮಿರಿಲೋಕದ ಆಕಾಶವೆಂಬ ಗೋಮಾಳದಲ್ಲಿ
ಬೆಟ್ಟದೆತ್ತರ ಹೋರಿಯ ಚಿತ್ರಚಿತ್ತಾರ ಬರೆದು
ಶಿವಭಕ್ತಿ ಶಿವಾಚಾರ ಮಾಡಿದಳು.

ಶಿವಾಚಾರ ಮಾಡಿದ್ದೇ ಆಯ್ತು ನೋಡು:
ಹೋರಿಯ ಚಿತ್ರ ಚಿತ್ತಾರದಲ್ಲಿ
ಆಕಾಶ ನಂದೀಶನ ಆವೇಶ ಅವತಾರವಾಗಿ
ಹಣೆಯಲ್ಲಿ ಕಿಡಿಗಣ್ಣಿನ ಜೋಗಿಜಂಗಮ ಹೋರಿ
ಗಲಿರು ಗಲಿರು ಅಂತ ಜಂಗವ ನುಡಿಸುತ
ಕಣ್ಣಿಂದ ಕೆಂಗಿಡಗಳ ಕಾರುತ, ಅರಳಿದಳ್ಳೆಗಳಿಂದ ಹೊಗೆಯ ಉಗುಳುತ
ಕಾಲು ಕೆದೆರಿ ಬೆಟ್ಟದೆತ್ತರ ಧೂಳೆಬ್ಬಿಸಿ
ಢುರಕಿ ಹೊಡೆಯುತ ಹೊಂಚುತ ಹೊಂಚುತ ಏಕಾಏಕಿ
ಮಿಂಡೆದ್ದ ಮಣಕಿನ ಮೈಮ್ಯಾಲೇರಿ ಹೋ ಹಾರಿ
ಮೈಯಂತ ಮೈ ಮುರಿದು
ನಡಿನಲ್ಲಿದ್ದ ಬೆಳ್ಳಿಗಿಂಡಿಯ ಹಾಲು ಮೈತುಂಬ ಸುರಿದು
ಆಕಾಶವನಡರಿ ಮಟಾಮಾಯವಾಯಿತು !
ಮೈ ಅದುರಿ ಗುಮ್ಮಂತ ಬೆವರಿ
ಸಳಸಳ ಮೈಜಲವಿಳಿದು ಸ್ಮೃತಿಗೆ ಬಂದಳು ಮಹಾತಾಯಿ
ಚೆಲ್ಲಿದ ಹಾಲು ಮಡಕೆಯಲಿ ಕೂಡಿಟ್ಟು
ಹೆಪ್ಪುಹಾಕಿ ನೆಲವಿನ ಮ್ಯಾಲಿಟ್ಟು
ಕಾದು ಕುಂತಳು.

ಈ ಮಧ್ಯೆ ತರುಮರ ಬೆಳೆಗಳಿಗೆ ತಾಯಾಗಿ
ಪುಣ್ಯಕೋಟಿ ಹಸುವಾಗಿ ಹಸಿರುಧರ್ಮ ಹಬ್ಬಿಸಿದಳು.
ಒಂದಕಿನ್ನೊಂದು ಹೀಗೇ ನೂರೊಂದು ಜೀವರಾಶಿಯ ಪಡೆದು
ಚಿಲಿಪಿಲಿ ಪ್ರಪಂಚವ ಕಟ್ಟಿ ಹೆಸರಿಟ್ಟಳು.

ಆಮೇಲಾಮೇಲೆ ಚೌರ್ಯಾಂಸಿ ಲಕ್ಷ ತಿರ್ಯಕ್ ಜಂತುಜಾಲ ಜನನವಾಗಿ ಎಲ್ಲಾ ಜೀವರಾಶಿಗೆ ಹಸಿವೆ ಹಾಹಾಕಾರವಾಗಿ ನಮ್ಮೀ ಧರಣಿ ಗೋಳು ಬೀಸುವ ಗಿರಣಿಯಾದ ಪ್ರಸ್ತಾವದಲ್ಲಿ ಆದಿಮಾಯಿ ತಾನೇನು ಮಾಡಿದಳೆಂದರೆ -

ಮಕ್ಕಳ ಕಾಪಾಡಲು ಹಾಲು ನೆತ್ತರು ಸುರಿದು ಸುಸ್ತಾಗಿ, ಮೈ ಬರಿದಾಗಿ ಹನ್ನೆರಡಾಳುದ್ದದ ಪಾತಾಳ ಜಲಬಾವಿಯಲ್ಲಿ ಜಲಸಮಾಧಿಗೊಂಡಳೆಂಬಲ್ಲಿ ಹತ್ತು ಅನಂತಕಾಲಂಗಳು ಸಂದವು.

ಇತ್ತ ಶಿವದೇವರು ಜಪತಪವೆಂದು ಮಿರಿಲೋಕದಲ್ಲಿ ಕುಂತಿರಲಾಗಿ ಹಣೆಯ ಬೆವರು ಹನಿ ಭೂಲೋಕದ ಮ್ಯಾಲೆ ಬಿದ್ದು ಅದರಿಂದೋರ್ವ ನರಮಾನವನ ಸೃಷ್ಟಿ ಮಾಡಿ ತಿಂದುಂಡು ಸುಖವಾಗಿರೆಂದು ಹೇಳಿ ಕಣ್ಣು ಮುಚ್ಚಿದರು. ಆದರೆ ನರಮಾನವನಿಗೆ ಒಂಟಿ ಜೀವನದಿಂದ ಬೋರಾಗಿ ದೊಡ್ಡದೇವರ ನೆನೆಯಲು ಶಿವದೇವರು ಪ್ರಸನ್ನ ಪ್ರತ್ಯಕ್ಷರಾದರು. ನರಮಾನವನು ಕೈಮುಗಿದು -

"ಎಲಾ ತಂದೆಯೇ, ಹಟ್ಟಿಯಲ್ಲಿ ಹೆಣ್ಣಿಲ್ಲ,
ಕೊಟ್ಟಿಗೆಯಲ್ಲಿ ದನಕರುಗಳಿಲ್ಲ.
ಇರು ಎಂದರೆ ಒಬ್ಬನೇ ಹೆಂಗಿರಲಿ?
ಇದಕ್ಕೇನಾದರೂ ಆಧಾರ ಮಾಡಿಕೊಡಬ್ಯಾಡವೆ?"

- ಎಂದ. ಇದಕ್ಕೆ ನಮ್ಮ ಶಿವಲಿಂಗದೇವರು ಏನೆಂದರೆಂದರೆ -

"ತನುಜನೇ, ಅತಳ ವಿತಳ ಪಾತಾಳವೆಂಬ
ಅಧೋಲೋಕದಲ್ಲಿ ಬೆಟ್ಟದ ಮಾಯಕಾರ್ತಿ ಅವತಾರಗೊಂಡು
ಕಟ್ಟಿರುವೆ ಹುತ್ತದಲ್ಲಿ ಸ್ಥಾಪನೆಗೊಂಡಿದ್ದಾಳೆ.
ಪುರುಷಾಮೃಗವೆಂಬ ಸೈತಾನ ಸರ್ಪ ಅವಳ ಕಾವಲಿಗಿದೆ.
ಅದನ್ನ ಜಯಿಸಿ, ಅವಳನ್ನು ವರಿಸಿ,
ಸಂಸಾರ ದಂದುಗವ ಸುರುಮಾಡಯ್ಯ"

- ಎಂದು ಆಶೀರ್ವದಿಸಿ "ತೊಂದರೆ ಬಂದರೆ ತಗೊ" ಎಂದು ತಮ್ಮ ಮೈಮ್ಯಾಲಿನ ಹಿಡಿ ರೋಮಂಗಳ ಕಿತ್ತು ಕೊಟ್ಟು ಮಾಯವಾದರು.

ಇಂತು ನರಮಾನವನು ಪಾತಾಳಕಿಳಿವ ಬಿಲಕ್ಕೆ ಬಂದು ಶಿವನೇ ಎಂದು ಕೆಳಗಿಳಿದು ಮಾಯಕಾರ್ತಿಯ ಪರಿಶೋಧನೆ ಮಾಡುತ್ತಿರುವಲ್ಲಿ ಎತ್ತರವಾದ ಬೆಟ್ಟದ ಹಾಗೆ ಎದುರಿಗೇ ಕುಂತಿದೆ ಪುರುಷಾಮೃಗವೆಂಬ ಸೈತಾನಸರ್ಪ! ನೆತ್ತಿಯಲ್ಲಿ ಜೋಡಿ ಸೂರ್ಯರಂಥ ಕಣ್ಣಿವೆ! ಮುಳ್ಳಿನಂತೆ ಒರಟಾದ ಉದ್ದುದ್ದ ರೋಮಂಗಳಿವೆ! ನೂರುಗಾವುದ ಹುತ್ತದರ ಮನೆಗೆ ಶಿಂಬಿಸುತ್ತಿ ಶಿಖರದಲ್ಲಿ ಹೆಡೆಯೆತ್ತಿ ಹೊಸನಾತ ಹೊಸನಾತವೆಂದು ಹೊಂಚುತ ನರಮಾನವನಿಗೆ ಬಾಯಿ ಹಾಕೇಬಿಟ್ಟಿತು. "ಇದೇನು ಬಿಕ್ಕಟ್ಟು ಬಂತು ಶಿವನೇ" ಎಂದುಕೊಳ್ಳುವಷ್ಟರಲ್ಲಿ ನರಮಾನವನು ಪುರುಷಾಮೃಗದ ನಾಲಗೆಯಲ್ಲಿ ಲಾಗಹಾಕುತ್ತಿದ್ದ. ಅಂಗೈಯಲ್ಲಿ ಅಡಿಕೆಮಾಡುವಂತೆ ನಾಲಗೆಯ ಮ್ಯಾಲೆ ಇವನನಾಡಿಸುತ ಸೈತಾನ ಸರ್ಪ ಇನ್ನೇನು ಇವನನ್ನ ದವಡೆಗೆ ತಳ್ಳಬೇಕು ಅಷ್ಟರಲ್ಲಿ ದೊಡ್ಡ ದೇವರು ಕೊಟ್ಟ ರೋಮಂಗಳ ನೆನಪಾಗಿ ಅವನ್ನು ಎಸೆದು ಬಿಟ್ಟ. ಶಿವಶಿವಾ. ಅವು ಬಿದ್ದಲ್ಲೆಲ್ಲಾ ರೋಮಕ್ಕೊಂದರಂತೆ ಸಾವಿರ ಶಿವಲಿಂಗಗಳು ಉದ್ಭವವಾಗಿ ಕಾಣದ ಆಕಾಶಗಂಟೆ ಢಣಲೆಂದು ಹೊಡೆದಾಡಿದವು! ತಕ್ಷಣ ಪುರುಷಾಮೃಗವು ನರಮಾನವನ ಹೊರಕ್ಕೆ ಉಗುಳಿ ಒಂದೊಂದು ಶಿವಲಿಂಗಕ್ಕೂ ಆರುಮೂರೊಂಬತ್ತು ಪ್ರದಕ್ಷಿಣೆ ಸುತ್ತಿ ಶಿವಭಕ್ತಿ ಶಿವಾಚಾರ ಮಾಡತೊಡಗಿತು. ಇದೇ ಸಮಯವೆಂದು ನೆರನು ಅವಸರದಲ್ಲಿ ಓಡಿ ಹೋಗಿ ಹುತ್ತದರಮನೆಯ ಏಳೇಳು ಗೇಟುಗಳನೊದ್ದು ಮುರಿದು ಒಳಗೆ ಹೋಗಿ ನೋಡಿದರೆ ಬೆಟ್ಟದಾ ಮಾಯಕಾರ್ತಿ ಬಟ್ಟೆಯ ನೇಯುತ್ತ ಕುಂತಿದ್ದಾಳೆ! ಹುಟ್ಟು ನಿರ್ವಾಣದಲ್ಲಿದ್ದ ನರನು ಬಟ್ಟೆ ನೇಯುವ ಮಾಯಕಾರ್ತಿ ಕಂಡು ಮರುಳಾಗಿ ಶಿವನ ನಿರೂಪವ ತಿಳಿಸಿದ. ಮಾಯಕಾರ್ತಿ ನಾಂಚಿ ಕಾದ ಲೋಹದೋಪಾದಿಯಲ್ಲಿ ಕೆಂಪಾಗಿ ದಯಮಾಡಿ ಅವನಿಗೂ ಒಂದು ಬಟ್ಟೆಯ ಕೊಟ್ಟಳು. ಆಮ್ಯಾಲೆ ಅವಸರ ಮಾಡಿ ಅಲ್ಲೇ ಬಿದ್ದಿದ್ದ ತನ್ನ ಹಿಂದಿನವತಾರ ಪುಣ್ಯಕೋಟಿಯ ಕೊಂಬುಗಳ ತಗೊಂಡು ನರನೊಂದಿಗೆ ಓಡೋಡಿ ಪಾತಾಳದ ಬಿಲ ತಲುಪಿದಳು.

ಮೊದಲು ಮಾಯಕಾರ್ತಿಯ ಮ್ಯಾಲೆ ಹತ್ತಿಸಿ ತಾನೂ ಹತ್ತಬೇಕೆಂದು ಆಧಾರಕ್ಕೆ ಬಲಗೈ ನೀಡಿ ಬಲಗಾಲನ್ನು ಬಿಲದ ಮ್ಯಾಲೂರಿ ಹುಕಿಯಿಂದ ಹತ್ತಬೇಕೆಂಬಷ್ಟರಲ್ಲಿ ಶಿವ ಶಿವಾ, ಸೈತಾನ ಸರ್ಪ ಬಂದು ಇನ್ನೂ ಪಾತಾಳ ಸೀಮೆಯಲ್ಲಿದ್ದ ನರನ ಎಡಗೈ ಎಡಗಾಲು

ಹಿಡಿದು ಕೆಳಕ್ಕೆಳೆಯತೊಡಗಿತು! ನರನ ಎಡಗೈ ಎಡಗಾಲು ಪುರುಷಾಮೃಗದ ಕೈಯಲ್ಲಿ, ಬಲಗೈ, ಬಲಗಾಲು ಮಾಯಕಾರ್ತಿಯ ಕೈಯಲ್ಲಿ! ಕೊನೆಗೆ ಮಾಯಕಾರ್ತಿ ಶಿವನ ಹೆಸರುಗೊಂಡು ಡೊಗ್ಗಾಲು ಮಂಡಿಯೂರಿ ನರಮಾನವನ. ಬಲಗೈ ಬಲಗಾಲನ್ನು ಮ್ಯಾಲೆಳೆದಳು. ಹಸಿ ಮರ ಸೀಳಿದಂತೆ ಕರ ಕರ ಭಯಂಕರ ಸದ್ದಾಯಿತು. ಹಲ್ಲು ಕಚ್ಚಿ ಮೀಸಲು ಶಕ್ತಿಯಿಂದ ಮ್ಯಾಲೆಳೆದಳು. ಜಗ್ಗಿದ್ದ ಹಗ್ಗ ಹರಿದು ಕೈಗೆ ಬಂದಂತಾಗಿ ಹಿಂದೆ ಬಿದ್ದಳು. ಹಿಂಗ್ಯಾಕೆಂದು ನೋಡಿದರೆ ಹಿರಿಯನ ಬಲ ಅರ್ಧ ದೇಹ ಅವಳ ಕೈಯಲ್ಲಿತ್ತು. ಬಲಗೈ ಬಲಗಾಲಿತ್ತು! ಬಲಗಡೆಯ ಅರ್ಧಮುಖವಿತ್ತು, ಸರಿಯಾಗಿ ಬೆನ್ನುಹುರಿಯಲ್ಲೇ ಸೀಳಿ ಸೊಂಟದಿಂದ ನೆತ್ತಿಯ ತನಕ ಹಸಿಯ ನೆತ್ತರು ಸೋರುತ್ತಿತ್ತು! ಇದನ್ನು ನೋಡಿ ಮಾಯಕಾರ್ತಿ ಕಿಟಾರನೆ ಕಿರಿಚಿದಳು.

ಇದನ್ನೆಲ್ಲ ಮ್ಯಾಲಿಂದ ನೋಡುತ್ತಿದ್ದ ಲೋಕನಾಯಕ ಸ್ವಾಮಿಗೆ ವ್ಯಾಕುಲವಾಗಿ ಒಂದು ಮಾಡಹೋದರೆ ಇನ್ನೊಂದಾಯಿತಲ್ಲ ಎಂದು ಖೇದವಾಗಿ, ನೀಲಿ ಆಕಾಶದಲ್ಲಿ ನಿಂತು ಲೋಕವ ಬೆಳಗುತ್ತಿದ್ದ ಸೂರ್ಯನಿಗೆ "ಹೋಗಿ ನರಮಾನವನ ಉದ್ಧರಿಸೆಂದು" ಅಪ್ಪಣೆಯಿತ್ತರು. ಸೂರ್ಯನಾರಾಯಣಸ್ವಾಮಿ ಕೆಳಗಡೆ ಬಂದು ತಮ್ಮ ಕೆಂಡಗಣ್ಣಿನ ಜಗಜಗ ಬೆಳಕನ್ನ ನರನ ಹರಿದ ಭಾಗದ ಮ್ಯಾಲೆ ಚೆಲ್ಲಿದಾಗ ಅರೆಕೊರೆಯಾಗಿದ್ದ ದೇಹ ಇಡಿಯಾಗಿ ಜೀವ ತುಂಬಿತು. ನಿದ್ದೆಯಿಂದೆಂಬಂತೆ ಎದ್ದು ಸಾಷ್ಟಾಂಗವೆರಗಿದ ನರನಿಗೆ ಮಾಯಕಾರ್ತಿಯೊಂದಿಗೆ ಸುಖಬಾಳೆಂದು ಆಶೀರ್ವದಿಸಿ ಸೂರ್ಯದೇವರು ಅಸ್ತಂಗತರಾದರು.

ರಾತ್ರಿಗೆಂದರೆ ಇನ್ನೊಂದು ಹೊಯ್ಕಾಯಿತು ಶಿವನೆ. ನರನ ಇನ್ನರ್ಧ ಎಡಭಾಗವನ್ನ ಸೈತಾನಸರ್ಪ ಕಸಿದಿತ್ತಲ್ಲ. ದೇಹ ಊನವಾದುದರಿಂದ ತಿನ್ನಲಾರದೆ, ಪಾತಾಳಬಿಲದೊಳಗಿಂದ ಅದನ್ನು ಭೂಮಿಗೆ ಉಗುಳಿಬಿಟ್ಟಿತು. ಶಿವದೇವರೀಗೆ ತಮ್ಮ ಜಡೆಮರೆಯ ಚಂದ್ರಸ್ವಾಮಿಗೆ "ನರನ ಉದ್ಧರಿಸಿ ಬಾ" ಎಂದು ಆಜ್ಞಾಪಿಸಿದರು. ಚಂದ್ರಾಮಸ್ವಾಮಿ ತಮ್ಮ ಬೆಳ್ದಿಂಗಳನು ನರನ ಎಡದೇಹದ ಮ್ಯಾಲೆ ಕರುಣೆಯಿಂದ ಸುರುವಿ ಪೂರ್ಣದೇಹನ ಮಾಡಿ ಜೀವಬರಿಸಿ ಸುಖಬಾಳೆಂದು ಹರಸಿ ಶಿವನ ಜಡೆಯಡರಿದರು.

ಇಂತೀಪರಿ ಒಬ್ಬನಿದ್ದ ನರಮಾನವ ಈಗ ಇಬ್ಬರಾದರು. ಸೂರ್ಯನಿಂದ ಜೀವ ಪಡೆದವನು ಅಣ್ಣನೆಂದಾಯಿತು. ಚಂದ್ರನಿಂದ ಪಡೆದವನು ತಮ್ಮನೆಂದಾಯಿತು. ಆದರೆ ಮಾಯಕಾರ್ತಿ ಯಾರೊಂದಿಗಿರಬೇಕೆಂದು ಜಿಜ್ಞಾಸೆಯಾಗಿ ಇಬ್ಬರೂ ಎಳೆದಾಡ ತೊಡಗಿದರು. ಆವಾಗ ಶಿವದೇವರು ಮಧ್ಯೆ ಬಾಯಿ ಹಾಕಿ ಮಾಯಕಾರ್ತಿ ಇಬ್ಬರ ಸೊತ್ತೆಂದು ಪಂಚಾತಿಕೆ ಮಾಡಿ ಅಣ್ಣತಮ್ಮಂದಿರ ಸಮಾಧಾನ ಮಾಡಿದರು. ಪಾತಾಳದ ಬಿಲ ಮುಚ್ಚಿ ಅದರ ಮ್ಯಾಲೆ ಕರಿಕಂಬಳಿಯ ಗದ್ದಿಗೆ ಮಾಡಿ ತೆಂಕುಮುಖವಾಗಿ ಅಣ್ಣನನ್ನು, ಬಡಗುಮುಖವಾಗಿ ತಮ್ಮನನ್ನು ಬೆನ್ನಿಗೆ ಬೆನ್ನಾತು ಕೂರಿಸಿ, ಮಧ್ಯೆ ಮಾಯಕಾರ್ತಿಯ ಸ್ಥಾಪನೆ ಮಾಡಿ ಬೆಳ್ಳಿಬೆತ್ತದ ಅಧಿಕಾರ ಕೊಟ್ಟು ಒಡ್ಡೋಲಗ ಮಾಡಿಸಿ –

ಮಾನವರಿಗೆ ದೊಡ್ಡವರಾಗಿ
ದೇವರಿಗೆ ಸಣ್ಣವರಾಗಿ ಬಾಳಿರಯ್ಯಾ –

ಎಂದು ಹರಸಿ ಶಿವಲೋಕಕ್ಕೆ ಸಂಚರಣೆ ಮಾಡಿದರು. ಇಲ್ಲಿಂದ ಸಂಸಾರ ದಂದುಗ ಸುರುವಾಯ್ತು ನೋಡು; ಗಾಳ ಗುದ್ಲಿ ತಗಂಡು ದುಡಿಯುವಷ್ಟು, ಕೆಲಸ, ಉಣ್ಣುವಷ್ಟು ಅನ್ನವಿರುವ ಶಿವಾಪುರವೆಂಬ ಘನವಾದ ಹಟ್ಟಿಯ ಕಟ್ಟಿ, ಪುಣ್ಯಕೋಟಿಯ ಹೆಸರಿನಲ್ಲಿ ಕೊಟ್ಟಿಗೆಯಲ್ಲಿ ದನಕುರಿಗಳ ಸಾಕಿ ಹಾಲು ಹಿಂಡಿ ಹೈನು ಬೆಣ್ಣೆ ಮಾಡುವ ಗೊಲ್ಲ ಗೋಕುಲ ಕುಲವ ಮೊದಲು ಮಾಡಿದರು.

ಆದರೆ ಅಣ್ಣತಮ್ಮಂದಿರಲ್ಲಿ ವಿರಸ ಕಮ್ಮಿಯಾಗಲಿಲ್ಲ. ಶಿವನು ಮಾಡಿದ ಕಟ್ಟಳೆ ಕಡೆಗಣಿಸಿ ಮಾಯಕಾರ್ತಿ ತನಗೆ ಮಾತ್ರ ಸೇರಿದವಳೆಂದು ಇಬ್ಬರೂ ತಾರುಮಾರು ಗೌಜುಗದ್ದಲಮಾಡುತ್ತ ಜಗಳಾಡತೊಡಗಿದರು. ಅವನಿವನೆನ್ನದೆ ಮಾಯಕಾರ್ತಿ ಎಳೆದವನೊಂದಿಗೆ ಇರಬೇಕಾಗಿ ಬಂದು "ಎರಡು ದಾರಿಗಳಲ್ಲಿ ಹೆಂಗಂತ ವ್ಯವಹರಿಸಲೋ ಶಿವನೆ" ಎಂದು ಮೊರೆಯಿಟ್ಟಳು. ಶಿವದೇವರಿನ್ನೊಮ್ಮೆ ಭೂಲೋಕಕ್ಕೆ ಬಂದು ಪುಣ್ಯ ಕೋಟಿಯ ಕೊಂಬುಗಳ ಪಾಲುಮಾಡಿ ಬಲಗೊಂಬನ್ನು ಅಣ್ಣನಿಗೂ ಎಡಗೊಂಬನ್ನು ತಮ್ಮನಿಗೂ ಪಂಚಾತಿಕೆ ಮಾಡಿ ಕೊಟ್ಟು ಹಗಲು ಅಣ್ಣನದೆಂದೂ ರಾತ್ರಿ ತಮ್ಮನದೆಂದೂ, ಹಗಲಿನವರು ಸೂರ್ಯನ ಒಕ್ಕಲೆಂದೂ,

ರಾತ್ರಿಯವರು ಚಂದ್ರನ ಒಕ್ಕಲೆಂದೂ ಹಗಲಿಗೆ ಒಂದು ಸತ್ಯವೆಂದು ರಾತ್ರಿಗೆ ಹಲವು ಸತ್ಯಗಳೆಂದೂ ಸಾರಿ ಪತ್ರಕರಾರು ಬರೆದುಕೊಟ್ಟರು. ಅವರವರ ಸಮಯದಲ್ಲಿ ಮಾಯಕಾರ್ತಿ ಅವರವರೊಂದಿಗೆ ಇರಬೇಕೆಂದು ಕಟ್ಟಳೆ ಮಾಡಿ ಸೂರ್ಯಚಂದ್ರರನ್ನ ಕಾವಲಿಗಿರಿಸಿದರು. ಆದರೂ ಇವರ ಜಗಳ ತೀರಲಿಲ್ಲ. ಒಬ್ಬರ ಸಮಯದಲ್ಲಿ ಇನ್ನೊಬ್ಬರ ಆಕ್ರಮಣ ಅತಿಕ್ರಮಣಗಳಾಗಿ ಮೂವರ ಕೂಗಾಟ ಕೇಳಲಾರದೆ ಶಿವದೇವರು ಭೂಲೋಕದ ಮ್ಯಾಲೆ ಆಕಾಶವ ಡಬ್ಬುಹಾಕಿ ಮುಚ್ಚಿ ಮ್ಯಾಲಿನ ತಮ್ಮ ನಿವಾಸಕ್ಕೆ ಹೋದರು.

ಈಗಿವರು ಎಷ್ಟು ಕಿರಿಚಿದರೂ ಒದರಿದರೂ ಹೇಳಕೇಳುವುದಕ್ಕೆ ಶಿವದೇವರೂ ಇರಲಿಲ್ಲ. ಮೊದಲಾದರೆ ಮಾಯಕಾರ್ತಿ ನೆಪವಾಗಿ ಕುಸ್ತಿ ಜಗಳಗಳಾದರೆ ಈಗ ತಂತಮ್ಮ ಬೆಡಗಿನ ದೇವತೆಗಳಾದ ಸೂರ್ಯ ಚಂದ್ರರ ಹೆಸರಿನಲ್ಲೂ ವಿದ್ದಗಳು ಸುರುವಾದವು.

ಅಣ್ಣನೊಮ್ಮೆ ತಮ್ಮನನ್ನು ಹೀಂಕಾರವಾಗಿ ಜರಿದು ಹೆದರಿಸಲು ತನ್ನ ಪಾಲಿನ ಕೊಂಬನ್ನೂದಿದ ನೋಡು: ಊದಿ ಕೆಳಗಿಡೋದರೊಳಗೆ ಅದರೊಳಗಿಂದ ಬೆಂಕಿ ಮಾಡಿ ಮಾಂಸ ಬೇಯಿಸಿ ತಿನ್ನುವ, ಬೇರಿಂದ ವೈದ್ಯ ಮಾಡುವ, ಲೋಹದಿಂದ ಆಯುಧ ಮಾಡುವ, ಆಯುಧಗಳಿಂದ ವಿದ್ದ ಮಾಡಿ ಗೆಲ್ಲುವ.... ಇತ್ಯಾದಿ ಚೌಸಷ್ಟಿ ವಿದ್ಯೆಗಳು ಸಳ ಸಳ ಹುಟ್ಟಿಕೊಂಡವು. ಅಣ್ಣ ಕೇಕೆ ಹಾಕಿ ಕುಣಿದಾಡಿದ.

ಇದನ್ನು ನೋಡಿದ ತಮ್ಮನೂ ತನ್ನ ಪಾಲಿನ ಕೊಂಬನೂದಿದಾಗ ನಾದ ಮೊದಲು ಶಬ್ದ ಕಡೆಯಾಗಿ ಸಂಗೀತ ಸಾಹಿತ್ಯ ಮುಂತಾದ ಇಪ್ಪತ್ತೇಳು ತನ್ಮಯ ಕಲೆಗಳು, ನೂರೆಂಟು ಕನಸುಗಳಾದ ನಮ್ಮೊಂದಿಗೆ ಹುಟ್ಟಿದವು. ಆದರೆ ನಾವು ಮತ್ತು ಕಲೆಗಳು ಹುಟ್ಟಿದ್ದು ಸೂರ್ಯನಿಗೂ ಅವನೊಕ್ಕಲು ಅಣ್ಣನಿಗೂ ಸರಿಬರಲಿಲ್ಲ. ರಾತ್ರಿಯಲ್ಲಿ ಚಂದ್ರಾಮಸ್ವಾಮಿ ಬೆಳ್ದಿಂಗಳಲ್ಲಿ ನಾವು ಸುಖವಿದ್ದಾಗ ಸೂರ್ಯನಾರಾಯಣಸ್ವಾಮಿ ಗುಡುಗು ಮಿಂಚು ಸಿಡಿಲುಗಳಿಂದ ನಿರ್ದಯವಾಗಿ ಕಲೆಗಳ ಹೆದರಿಸಿ, ಕಲೆಗಳ ಮ್ಯಾಲೆ ವಿದ್ಯೆಗಳ ಬಿಟ್ಟು ಹಿಂಸಿಸಿದರು. ಕಲೆಗಳು ಗಾಬರಿಯಾಗಿ ಎಲ್ಲೆಂದರಲ್ಲಿ ಬಚ್ಚಿಟ್ಟುಕೊಂಡವು. ಮಾಯಕಾರ್ತಿಗೆ ಕಾಳಜಿಯಾಗಿ ಎಲ್ಲಿದ್ದರಲ್ಲಿಂದ ಕಲೆಗಳನ್ನು ಕರೆತರಲು ಗಾಳಿದೇವರ ಕಳಿಸಿದಳು. ಮೂಲೆ ಮೂಲೆಯಲ್ಲಿ ಅಡಗಿದ್ದ ಕಲೆಗಳನ್ನು ವಾಯುದೇವರು ಹುಡುಕಿ ಕರೆತಂದು ಚಂದ್ರಾಮಸ್ವಾಮಿಯ ರಕ್ಷಣೆಗೆ ಬಿಟ್ಟರು. ಸೂರ್ಯದೇವರ ಸೇಡಿನಿಂದ ಕಲೆಗಳು ನಾಶವಾಗಬಾರದೆಂದು ಚಂದ್ರಾಮಸ್ವಾಮಿ ತಾವೇನು ಮಾಡಿದರೆಂದರೆ ತಿಂಗಳ ಹದಿನಾಕು ದಿವಸ ಶಿವನಿಂದ ಅಮೃತವ ತುಂಬಿಕೊಂಡು ಉಳಿದ ಹದಿನಾಲ್ಕು ದಿವಸ ಕಲೆಗಳಿಗೆ ನೀಡಿ ಅಮರತ್ವ ನೀಡುತ್ತಿರಲು - ಸಂಪೂರ್ಣ ಅಮೃತವ ತುಂಬಿಕೊಂಡ ದಿನ ಹುಣ್ಣಿಮೆಯಾಗಿ, ಸಂಪೂರ್ಣ ಖಾಲಿಯಾದ ದಿವಸ ಅಮಾವಾಸ್ಯೆಯೆಂದು ಗೊತ್ತಾದುವೆಂಬಲ್ಲಿ ಆರುಮೂರೊಂಬತ್ತು ಅನಂತಕಾಲಂಗಳು ಗತಿಸಿದವು. ಆದರೂ ಅಣ್ಣ ತಮ್ಮಂದಿರ ಸೇಡು ಮುಗಿಯಲಿಲ್ಲ. ಸೇಡಿನ ಜೊತೆ ಕೇಡುಗಳೂ ಸೇರಿ ಪರಸ್ಪರ ಹಿಂಸಿಸುತ್ತ ಶಪಿಸುತ್ತ ಬೆಳ್ಳಿ ಬೆತ್ತದ ಅಧಿಕಾರವನ್ನು ಒಬ್ಬರಿಂದೊಬ್ಬರು ಕಸಿಯುತ್ತ, ಅದಕ್ಕಾಗಿ ಕೊಲೆಗೈಯುತ್ತ ಪುಂಡಾಟಿಕೆಯಲ್ಲಿ ಬದುಕುತ್ತಿದ್ದಾರೆಂಬಲ್ಲಿ ಪ್ರಸ್ತಾವನೆಯ ಮುಗಿಸಿ, ಕಥಾಬೀಜ ಬಿತ್ತರಿಸುತ್ತೇವೆ.

ಬೆಟ್ಟದಡಿಯ ಶಿವಾಪುರವೆಂಬುದು ಘನವಾದ ಹಟ್ಟಿ, ಗೊಲ್ಲ ಗೋಕುಲರ ತಿಂಗಳ ಬೆಡಗಿನ ಮಾಚ ಮತ್ತು ಸಿರಿಲಕ್ಕಿ ಏಳು ಹಿಂಡು ದನಕರು ಏಳೇಳು ಹಿಂಡು ಕುರಿಮೇಕೆ ಇತ್ಯಾದಿ ಬದುಕಿನ ಭಾಗ್ಯವುಳ್ಳ ಪುಣ್ಯವಂತರು. ಆದರೆ ಮಕ್ಕಳ ಫಲಪುತ್ರ ಸೌಭಾಗ್ಯವಿಲ್ಲದಿರಲು ಸಂತಾನೋತ್ಪತ್ತಿಯಾದಲ್ಲಿ ಶಿವದೇವರಿಗೆ ಹಿಡಿ ಹಣ ಹಾಕಿಸುವುದಾಗಿ ಹರಕೆಹೊತ್ತರು. ದೇವರಿಗೆ ದೇವಾಲಯ ಭೂತಂಗಳಿಗೆ ಸ್ಥಾನಂಗಳ ಕಟ್ಟಿ ದಾನಧರ್ಮ ನೇಮವ ಮಾಡಿದರೂ ಮಕ್ಕಳಾಗದಿರಲು ಕುಲಗುರುವಿನ ಕವಡೆ ಶಾಸ್ತ್ರ ಕೇಳಿದಾಗ ಯಕ್ಷಿಯ ಕಾಟವೆಂದು ತೋರಿಬಂತು. ಒಂದು ಹುಣ್ಣಿವೆ ದಿನ ಅಂಗಳದಲ್ಲಿ ಮಂಡಳ ಬರೆದು ಮಂಡಳದ ಮಧ್ಯೆ ತಾಮ್ರದ ತಂಬಿಗೆಯಿಟ್ಟು ಅದರಲ್ಲಿ ಯಕ್ಷಿಯ ಅವಾಹಿಸಿ, ಒಂದು ಕಡೆ ಎಮ್ಮೆ ಕರು. ಇನ್ನೊಂದು ಕಡೆ ಮೊಟ್ಟೆಯಿಡುವ ಕೋಳಿಯ ಬಲಿಕೊಟ್ಟು, ಕೊಪ್ಪರಿಗೆಯಲ್ಲಿ ಕೋಲು ದೀಪ ಇಟ್ಟು ಗಂಡು ಮಗುವಾದರೆ ಐದು ಹಬ್ಬ ನಿನಗೆಂದರು. ಯಕ್ಷಿಗೆ ಹರಕೆ ಒಪ್ಪಿಗೆಯಾಗಿ ಸಿರಿಲಕ್ಕಿ ಬಸಿರಾದಳು.

ಬೆಟ್ಟದ ಮಾಯಿಯ ಧೂಪದೀಪಂಗಳಲ್ಲಿ ಪೂಜೆಯ ಮಾಡಿ ಸುಖ ಹೆರಿಗೆಯಾಗಲೆಂದು ಬೇಡಿಕೊಂಡರು. ತುಂಬಿದ ಸೋಮವಾರ ತುಂಬಿದ ಹುಣ್ಣಿವೆ ದಿನ ಉಚಿತವಾದ ಶಿವಯೋಗ ಲಕ್ಷಣದಲ್ಲಿ ಗಂಡು ಮಗುವಾಯಿತು. ಹುಟ್ಟಿದ ಗಳಿಗೆಗೆ ಉಳ್ಳಾಗಡ್ಡಿಯಿಂದ ಗಂಟೆಯ ಬಡಿದರು. ಮಗುವಿನ ಹೆದರಿಕೆ ತೆಗೆದು ಹೊಕ್ಕಳ ಕುಯ್ದರು. ಮೂರು ದಿವಸಕೆ ಮನೆಯ ಸೂತಕ, ಹತ್ತು ರಾತ್ರಿಗೆ ಹದಿನಾರು ಸೂತಕ

ತೆಗೆದು ಚಂದಮುತ್ತನೆಂದು ನಾಮಕರಣವ ಕೂಗಿ ಶೆಟಿವಿ ತಾಯಿಗೆ ಹಣೆಬರಹ ಬರೆಯಲೊಪ್ಪಿಸಿದರು. ಹರಿದು ಹಾಲುಂಡು ಕೂತು ಕೂಳುಂಡು ಎಳೆಯ ಮಗ ಹೋಗಿ ಬೆಳೆದ ಮಗನಾಗುವಷ್ಟರಲ್ಲಿ ಮಾಚ ಸೇಡಿನ ಚೂರಿಗೆ ತುತ್ತಾದ. ಅಂದಿಗೆ ಸಿರಿಲಕ್ಕಿಯ ಅಂಚಿನ ಸೀರೆ, ಅರಿಶಿನ ಕುಂಕುಮ, ಮುತ್ತೈದೆ ಬಳೆ ಮುಗಿಯಿತು. ಅರಿವಿಲ್ಲದೆ ಬರೀ ಲಕ್ಕಬ್ಬೆಯಾಗಿ ಚಂದಮುತ್ತನಿಗೆ ತಂದೆತಾಯಿ ಎರಡೂ ಆಗಿ ಬೆಳೆಸಿ ಕುಲಕಸುಬು ಕಲಿಸಿ ಸೊಂಟಕ್ಕೆ ನೂಲು, ಕಾಲಿಗೆ ಕಡಗ, ಕಿವಿಗೆ ಕುಂಡಲ ಹಾಕಿಸಿದಳು. ಸಂಗೀತದಲ್ಲಿ ಚಂದಮುತ್ತನಿಗೆ ಗತಿಯಿರುವುದ ಗುರುತಿಸಿ ಕುಲಗುರುವಿನ ಕೊಳಲುವಿದ್ಯೆಯ ಬೋಧೆ ಮಾಡಿಸಿದಳು. ಈಗ ಮದುವೆಯ ಹರೆಯವಾದರೂ ಕೊಂಡಾಟದಿಂದ ಬೆಳೆದ ಚಂದಮುತ್ತ ವಾರಗೆಯವರೊಂದಿಗೆ ದನಕಾಯಲು ಹೋಗುತ್ತಿದ್ದ.

ಶಿವಾಪುರವೆಂಬ ಘನವಾದ ಹಟ್ಟಿಗೆ ಬಿಸಿಲ ಬೆಡಗಿನ ಸೂರ್ಯಮುತ್ತ ಹೆಗಡೆಯೆಂಬಾತನ ಒಡೆತನ. ಅವನ ಮಗ ಚೆನ್ನಮುತ್ತ, ಚಂದಮುತ್ತನ ಓರಗೆಯಾತ. ಎರಡೂ ಮನೆತನಗಳು ಚಕಮಕಿಯ ಕಲ್ಲಿನಂತೆ ತಾಗುವುದಿದೆ, ಕಿಡಿಯ ಹಾರಿಸೋದಿದೆಯೆಂಬಲ್ಲಿ ಪ್ರಸ್ತಾವನೆ ಮುಗಿದು, ಆಕಾಶ ತೂಕದ ಶಿವಲಿಂಗ, ಭೂಮಿ ತೂಕದ ಲಕ್ಕಬ್ಬೆ, ಚಂದಮುತ್ತನ ಕಾಪಾಡಲೆಂದು ಹಾರೈಸಿ ಕಥಾರಂಭ ಮಾಡುತ್ತೇವೆ. ಶಿವಶಿವ ಎನ್ನಿರಯ್ಯಾ, ಶಿವಲಿಂಗಾ ಎನ್ನಿರಿ.

## ೩. ಯಕ್ಷಿಯ ಮದುವೆ

ಇಳಿಹೊತ್ತಿನಲ್ಲಿ ಅಬ್ಬೆ
ಸುವ್ವಾಲೆ ಸುಪ್ಪಾಲೆಯೆಂದು ರಾಗ ಎಳೆಯುತ್ತಾ ರಾಗಿ ಕುಟ್ಟುತ್ತಾ ಇರಬೇಕಾದರೆ
ಮೋಜಿನ ಗಾಳಿ ಬೀಸಿ ಸೋಜಿಗದ ಮಳೆ ಬಂತು.
ಎಳೆಬಿಸಿಲಲ್ಲಿ ಬಿದ್ದ ಮಳೆ ಯಕ್ಷಿಯ ಮದುವೆಯ ಮಾಡಿ
ಸಣ್ಣಗೆ ಉರಿಯುತ್ತಿದ್ದ ಪಡುಸೂರ್ಯನ ನಂದಿಸಿತು.

ಮಗರಾಯ ಇನ್ನೂ ಬರಲಿಲ್ಲವೆಂದು ಅಬ್ಬೆ
ಬಾಗಿಲಲ್ಲಿ ನಿಂತು ಕಾಡದಾರಿ ಕಣ್ಣಾಗಿ ಕಾಯುತ್ತಿರಲು
ದನಕರು ಬಂದು ದೊಡ್ಡಿ ಸೇರಿದವು.
ಮಗರಾಯ ಬಂದು, ತಾಯ ನುಡಿದಾಡಿಸದೆ
ದೊಡ್ಡಿಗೆ ದನಗಳ ಕೂಡಿ ಬಿಡದೆ
ಜೋಡು ಕಳಚಿ, ಹೆಗಲ ಕಂಬಳಿ, ಬಗಲ ಚೀಲ
ಸೊಂಟದ ಕೊಳಲು, ಕಕ್ಕೆ ದೊಣ್ಣೆಗಳ
ಮೂಲೆಗೆಸೆದು ನೇರ ಜಗಲಿಗೆ ಹೋಗಿ ಬಿದ್ದುಕೊಂಡ.

ಗರ್ಭಕ್ಕೆ ಬೆಂಕಿ ಸುರಿದಂತಾಗಿ
ಅಬ್ಬೆ ಉರಿವುಸಿರ ಸೂಸಿದಳು.
"ಚಂದಿರಾಮ ಚಂದಮುತ್ತಾ" ಎಂದಳು.
"ಒದ್ದೆ ಕಳಚಿ ಮಡಿ ಉಡು ಮಗಾ" ಎಂದಳು.

ಒಮ್ಮೆ ಕರೆದರೆ ಮೂರು ಬಾರಿ ಓ ಎನ್ನುವ ಮಗ
ಇಂದು ಓಗೊಡಲಿಲ್ಲ.

ತಂದೆಯಿಲ್ಲ, ಒಂದಿಗೆ ಹುಟ್ಟಿದವರಿಲ್ಲ
ಹೇಳಕೇಳುವುದಕ್ಕೆ ಯಾರು ಇಲ್ಲವಾಯಿತೇ,
ಬೆನ್ನಿಗಿರು ಬೆಟ್ಟದ ಮಾಯೀ ಎಂಬಲ್ಲಿ
ದೊಡ್ಡಿಗೆ ದನಗಳ ಕೂಡಿಬಿಟ್ಟ ವಾರಗೆಯವರು
ಬಂದರು. ಅಬ್ಬೆ ಕೇಳಿದಳು:
"ಏ ದೇಚ, ಏ ಕೆಂಚ
ತಿಳಿದವರು ನೀವು ತಿಳಿಸಿ ಹೇಳಿರಯ್ಯಾ
ಅಬ್ಬೆಯ ನುಡಿಸದೆ, ಒದ್ದೆಕೂಡ ಕಳಚದೆ
ಮಾರಿ ಸಣ್ಣದು ಮಾಡಿ ಮಲಗಿಬಿಟ್ಟಿದ್ದಾನೆ ಚಂದ್ರಾಮ
ಯಾರೇನಂದರು ಕಂದನಿಗೆ?"

ಹುಡುಗರು, "ಅಬ್ಬೇ ನಮಗೂ ಅದೇ ಬೆರಗೆಂದರು.
ಕಾರ್ಯಕಾರಣ ಅರಿಯೆವೆಂದು
ನಡೆದದ್ದನ್ನು ನಡೆದಂತೆ" ವಿವರಿಸಿದರು:
"ನಮ್ಮ ಚಂದಮುತ್ತ ಗೊತ್ತಲ್ಲ, ದಿನದಂತೆ
ಈ ದಿನವೂ ಇಳಿಹೊತ್ತಲ್ಲಿ ಕೊಳಲೂದಿ ಮೋಡಿಯ ಮಾಡಿ,
ದನಕರು ಕಿವಿ ನಿಗರಿ ಮೇಲುಗಣ್ಣು ತೇಲುಗಣ್ಣಿನಲಿ
ಪರವಶವಾಗಿ ನೆರಳಲ್ಲಿ ಮಲಗಿದ್ದವು.
ನಾವುಗಳಿರಲಿ, ಈ ದಿನ
ಗಿಡಮರ ಕೂಡ ಅವನ ಹಾಡಿಗೆ
ತೂಗಿ ತೊನೆದವು ತಾಯಿ.
ದನಕರು ಮಲಗಿದರೆ ನಾವು ಹುಡುಗರಿಗೇನು ಕೆಲಸ?
ಓಡಾಡುತ್ತ ಮೋಜಿನ ಮತ್ತೇರಿ
ಈ ದಿನ ಮದುವೆಯಾಟ ಆಡೋಣವೆಂದೆವು.
ಚಂದಮುತ್ತ ಒಪ್ಪದಿರಲು ಅವನಿಗೇ ಮದುವೆಯೆಂದೆವು.
ನಮ್ಮ ಒತ್ತಾಯದಿಂದ ತಪ್ಪಿಸಿಕೊಂಡು
ಓಡಿ ಹೋಗಿ ಕಾಡಲ್ಲಿ ಅಡಗಿದ.

ನಾವು ಹುಡುಕುತ್ತಾ ಹೋದೆವು.
ಮೂರು ದಾರಿಗಳು ಸೇರುವಲ್ಲಿ
ಎಳೆ ಆಲದ ಮರದಡಿಯಲ್ಲಿ ಚಂದಮುತ್ತ ಅಡಗಿ ನಿಂತಿದ್ದ.
ಅಲ್ಲಿಯೇ ಬಿದ್ದಿದ್ದ, ಯಾವುದೋ ಕಾಲದ
ಶಿಲಾಮೂರ್ತಿಯ ಕದಲದೆ ನೋಡುತ್ತಿದ್ದ.

ಯಾವಳೋ ಆಗಸದ ರಂಭೆ
ಚಂದಮುತ್ತನ ಕೊಳಲುಲಿಯ ಮಾಯೆಗೆ ಒಳಗಾಗಿ
ಭೂಮಿಗಿಳಿದು ಪರವಶವಾಗಿ ಮೈಮರೆತಂತೆ,
ನರಮಾನವರು ನಮ್ಮ ದನಿ ಕೇಳಿ ಈಗಷ್ಟೇ ಕಲ್ಲಾದಂತೆ
ಅದರ ಭಂಗಿ.
ಕನ್ಯೆ ಸಣ್ಣವಳು, ಶುದ್ಧ ಸುಳಿ ಮುದ್ದುಮುಖದವಳು.
ಪಳಗಿದ ಬೇಟೆಗಾರನ ಹಾಗೆ ನೋಟ, -
ಹ್ಯಾಂಗೆ ನಿಂತಿದ್ದಳು ಅಬ್ಬೆ ಬಿಲ್ಲಿನಂತೆ!
ಶಿಲೆಯನ್ನುವುದೊಂದು ಬಿಟ್ಟರೆ ಉಳಿದೆಲ್ಲ ಜೀವಂತ

ನಮಗಿಷ್ಟೆ ಸಾಕಾಗಿ ಕಲ್ಲಿನ ಮೂರ್ತಿಯೊಂದಿಗೇ
ಚಂದಮುತ್ತನ ಮದುವೆಯೆಂದೆವು. ಬೀಗರಾಗಿ ಬಂದು
ಅಮೃತವಲ್ಲಿಯ ತಾಳಿಸರ ಮಾಡಿ,
ಶಿಲಾಮೂರ್ತಿಯ ಕತ್ತಿಗೆ ಕಟ್ಟು ಎಂದೆವು.
ಕಟ್ಟಿದಾಗಿನ ಅಘಟಿತ ಘಟಿತವ
ನಾವೇನು ಹೇಳೇವು ತಾಯಿ!
ಎಲ್ಲಿಂದಲೋ ಮಂಗಳವಾದ್ಯ ಕೇಳಿಸಿ
ಮಾಯದ ಗಾಳಿ ಜೋರಾಗಿ ಬೀಸಿದವು.
ಕ್ಷಿತಿಜದ ಕಣ್ಣಲ್ಲಿ ಥಳ್ಳನೆ ಬೆಳಕಾಡಿದ್ದ ಕಂಡೆವು.
ತರುಮರ ಬಳ್ಳಿಗಳ ಕಣ್ಣು ಬಿರಿದು
ಯಾರೋ ಕಾಡಿನಂಗಳದಲ್ಲಿ
ಥರಾವರಿ ಹೂವಿನ ರಂಗೋಲಿ ಬರೆದದ್ದನ್ನ ಕಂಡೆವು.
ನೆಲಕ್ಕೆ ಹುಲ್ಲಿನ ನವಿರೆದ್ದು
ನಮ್ಮಡಿಗಳಿಗೆ ಮುತ್ತಿಟ್ಟಿದ್ದ ಅನುಭವಿಸಿದೆವು.
ಹಿಡಿದಿಡಲಾರದ ಉತ್ಸಾಹವುಕ್ಕಿ
ಕೂಗಿ ಹಾಡಿದವು ಹಲವರ್ಣದ ಹಕ್ಕಿ.
ಕೇಕೆ ಹಾಕಿ ನವಿಲಾಡಿದವು ತಾಳಮೇಳದೊಳಗೆ.

ಎಳೆ ಆಲದ ಮರ.
ತಿಳಿಹಸಿರು ಬೆಳಕಿನ ವಲಯ ಸುತ್ತ ನಿರ್ಮಿಸಿಕೊಂಡು
ಬೆಳಗುವ ಪ್ರಾಯದ ಮರ
ಪರಿಪರಿ ಆವೇಶಗಳಿಂದ ನಲಗುತ್ತ
ಸುಖಮಯ ಲೋಲುಪ್ತಿಯಲ್ಲಿ ಹಕ್ಕಿಗಳ ಮುಳುಗಿಸುತ್ತ
ಕಣ್ಣು ಹಬ್ಬಾದ ಎಳೆಯ ಮರ ಇಂದ್ಯಾಕೆ ಹೀಗೆಂದವು.
ಯಾರೋ ಉನ್ನತ ದೇವತೆ ಉಲ್ಲಾಸದಲಿ ಬಂದು

ತಂಗಾಳಿಯಾಗಿ ಮರ ತುಂಬಿ
ಹುಡದಿ ಹಾಕುತ್ತಿರಬಹುದೇ? ಎಂದೆವು.

ಸುತ್ತಮುತ್ತ ಇಷ್ಟೆಲ್ಲ ನಡೆಯುತ್ತಿದ್ದರೆ
ನಮ್ಮ ಮಿತ್ರ ಚಂದಮುತ್ತ
ಲೋಕವ ಇತರೇತರ ಮಾಡಿ ಮೈಮರೆತಿದ್ದ ಅಬ್ಬೆ!"

"ಏನಂದಿರಿ ಮಕ್ಕಳೇ?"
"ಹೌದು ಅಬ್ಬೆ ಅವನು ಮೈ ಮರೆತಿದ್ದ.
ಕನಸುಗಳಿಂದ ಭರಿತವಾಗಿದ್ದವು ಕಣ್ಣು.
ಕೆನ್ನೆ ಕೆಂಪಾಗಿ ಎದ್ದ ಪುಳಕ ಹಾಗೇ ಇತ್ತು.
ಸುಖದಲ್ಲಿ ಮತ್ತೇರಿದ ಪ್ರಮತ್ತನ
ಭುಜತಟ್ಟಿ ಅಲುಗಿ ಚಂದಮುತ್ತಾ ಎಂದೆವು.

ಸ್ಮೃತಿಯಾಗಿ ನಮ್ಮ ಕಡೆ ನೋಡಿದ.
ಕಣ್ಣುಗಳಲ್ಲಿ ಇನ್ಯಾವುದೋ ಸೀಮೆಯ ಬೆಳಕಿತ್ತು
ಒಲ್ಲದ ಮನಸ್ಸಿನಿಂದ ಭೂಮಿಗಿಳಿದು ಬಂಧಂಗಿದ್ದ.
ನಮ್ಮ ಗುರುತಾಗಿ ಕ್ಷಣ ಹೊತ್ತು ತಬ್ಬಿಬ್ಬಾಗಿ
ತಕ್ಷಣ ಕಣ್ಣಲ್ಲಿ ಧಾರಾವತಿ ಜಲವ ಸುರಿಸಿದ.
ಗಾಬರಿಯಾಗಿ ಯಾಕೋ ಏನಾಯಿತೆಂದೆವು
ನಮ್ಮನ್ನೆಲ್ಲ ಇತರೇತರ ಮಾಡಿರುವಿಯಲ್ಲ,
ಹಿಂಗ್ಯಾಕೆಂದೆವು."

**ಚಂದಮುತ್ತ :** ಯಾರೋ ಕರೆದರಲ್ಲ
ಎದೆಯಲಿ ದಾಖಲಾದರಲ್ಲ।
ಮುಖ ತೋರದೆ ಸುಖದ ಮರವೆಯಲಿ
ಸುಳಿದು ಹೋದರಲ್ಲ॥

**ಗೆಳೆಯರು :** ನೀ ಕೇಳಿದ ಸೊಲ್ಲಾ
ನಮಗೂ ಯಾಕ ಕೇಳಿಸಲಿಲ್ಲಾ?।
ಬಾರೊ ಹುಚ್ಚು ಪೋರ
ಸುರಿಸಲಿ ಬ್ಯಾಡ ಕಣ್ಣ ನೀರಾ॥

**ಚಂದಮುತ್ತ :** ಗೆಜ್ಜೆ ಕೇಳಿತಲ್ಲ
ಗೆಜ್ಜೆಯ ಹೆಜ್ಜೆ ಕಾಣದಲ್ಲ।
ಶ್ರೋತೃಸುಖದ ರಂಭೆ
ಕುಣಧಾಂಗ ಗುಂಭದಾಗ ಗೊಂಬಿ॥

**ಗೆಳೆಯರು :** ಸೂತ್ರವಿರದ ಮಾತಾ
ಛೀ ತಗಿ ಯಾವ ಎಳೆತ ಸೆಳೆತ।
ಸೊಲ್ಲು ಸೊಲ್ಲಿಗೊಮ್ಮಿ
ವ್ಯಾಕುಲವ್ಯಾಕ ಪಡುತ ನಿಂತಿ॥

"ಎಷ್ಟೊಂದು ಯತ್ನವ ಮಾಡಿದರು
ಅವನ ವೇದನೆಯನ್ನ ಭೇದಿಸಲಾಗಲಿಲ್ಲ ನಮಗೆ.
ಇನ್ನೊಮ್ಮೆ ಮಾಯದ ಗಾಳಿ ಬೀಸಿ
ಮಳೆ ಬಂದು
ಕಂಗಾಲಾಗಿ ಅಗಲಿದೆವು. ಅವನು ಕ್ಷೇಮದಿಂದ
ಗೂಡಿಗೆ ಬಂದುದ ಕೇಳಿ ಆನಂದವಾದೆವು ಅಬ್ಬೆ" ಎಂದರು.

ವಾರಿಗೆಯವರ ನುಡಿಕೇಳಿ
ಹಡೆದೊಡಲು ಉರಿದವು
ಸತ್ಯವುಳ್ಳ ಶಿವಲಿಂಗದೇವರ ನೆನೆದು
ಮಗನ ನೋಡಲು ಒಳಕ್ಕೆ ಹೋದಳು.

## ೪. ಸುರಿದು ಬಂದಳು ಕ್ಷಿತಿಜದಂತೆ

ಮಗ ಮಲಗಿದ್ದ ಜಗಲಿಗೆ ಹೋಗಿ ಅಬ್ಬೆ ಬೆಳಕಿನಲ್ಲಿ ಕಣ್ಣಾಡಿಸಿ ಹುಡುಕಿದಳು. ಕತ್ತಲಲ್ಲಿ ಕಾಲಾಡಿಸಿ ಹುಡುಕಿದಳು. 'ಮಗಾ ಚಂದಮುತ್ತ, ಚಂದ್ರಮಾ' - ಎಂದು ದನಿಮಾಡಿ ಹುಡುಕಿದಳು. ಹುಡುಕುತ್ತಿದ್ದಾಗ ತಡಕುವ ಕಾಲಿಗೆ ಮಗನ ಮುಡಿ ತಾಗಿತು. ಅಲ್ಲೇ ಕುಳಿತು ಮಗನ ತಲೆ ನೇವರಿಸಿದಳು. ಜ್ವರದಿಂದ ತಲೆ ಸಿಡಿಯುತ್ತಿತ್ತು. "ಅಯ್ಯೋ ಕಂದಾ" ಎಂದು ಒಂದೇ ಉಸುರಿಗೆ ಬಂದು ಕಷಾಯ ಕುದಿಸಿ ಕೊಂಡೊಯ್ದಳು. ಒತ್ತಾಯದಿಂದೆಬ್ಬಿಸಿ ಮಗನಿಗೆ ಕುಡಿಸಿ ಭದ್ರ ಮಂಚದ ಮ್ಯಾಲೆ ಮಲಗಿಸಿದಳು. ಮಗನಿಗೆ ಭೂತ ಪಿಶಾಚಿ ಬಾಧೆಯೋ ಎಂದು ಹೆದರಿ ಕುಲದೈವ ಚಂದಪ್ಪ ಬೆಳಗಾಗುವುದರೊಳಗೆ ಮಗನ ಪೀಡೆ ತೊಲಗಲಿ, ನಿನಗೆ ಮಲ್ಲಿಗೆ ಹೂ ದಂಡೆ, ಬಾಡಿನ ರುಚಿ ಕೊಡುವುದಾಗಿ ಹರಕೆ ಹೊತ್ತು ಹಾಲು ಹಿಂಡಲು ಹೋದಳು.

ಚಂದಮುತ್ತ ಅಂಗಾತ ಮಲಗಿದ್ದಾಗ ಎಲೆಮರೆಯಲ್ಲಿದ್ದ ನಾವು ಕನಸುಗಳು, ಹೂಹೂಗಳಲ್ಲಿ ಹುದುಗಿದ್ದ ಕನಸುಗಳು ಚಂದ್ರ, ತಾರೆಯರೊಂದಿಗೆ ಆಕಾಶದಂಗಳದಲ್ಲಿ ತೇಲಾಡುವ ಮಾಯದ ಕನಸುಗಳು - ಹೀಗೆ ಸುತ್ತೂ ಸೀಮೆಯ ಕನಸುಗಳು ಗುಂಪಾಗಿ ಬಂದು ಚಂದಮುತ್ತನ ಕಣ್ಣು ಮುತ್ತಿ ನಮ್ಮ ನಮ್ಮಲ್ಲಿ ಕೆಲಸ ಹಂಚಿಕೊಂಡೆವು.

ನೀನು ಆಕಾಶದಲ್ಲಿ
ನಕ್ಷತ್ರ ತಾರೆ ಚಿಕ್ಕೆಯ ಹರಹಿ
ದೀಪಾವಳಿ ಬೆಳಗುವಂತೆ ಮಾಡು.
ನೀನು ಶಿವನ ನೆತ್ತಿಯ ಜಡೆ ಕೆಡದ ಹಾಗೆ
ಚಂದ್ರನ ಕಿತ್ತು ತಂದು
ಆಕಾಶ ನೀಲಿಮದಲ್ಲಿಡು.

ನೀನು ಚಂದ್ರಲೋಕದ ಗಾಳಿಯ
ಚಂದಾಗಿ ಬೀಸು, ನೆಪ್ಪಿರಲಿ
ಅದರೊಳಗಿಂದ ಅಸಮಸುಖಗಳು ಬೀಸಿ ಬೀಸಿ ಬರುತ್ತಿರಲಿ.
ಬಳ್ಳಿಯ ಕಣ್ಣು ಬಿರಿದು
ಹುಲ್ಲುಗಾವಲಿನಲ್ಲಿ ಹೂಗಾಳಿ ಪರಿಮಳಿಸಲಿ, ಆಯಿತೇ?
ಭದ್ರಮಂಚದ ಮ್ಯಾಲೆ ಮಲಗಿರುವ ಚಂದ್ರಾಮನ್ನ
ಮೆಲ್ಲಗೆ ಕರೆತನ್ನಿ ಕಾಡಿಗೆ.
ಹಿತಕರದ ದೃಶ್ಯಗಳಿಂದ
ಸೊಗಸಿನ ಚದುರನಿಗೆ ಸೋಜಿಗವಾಗುವ ಹಾಗೆ
ನೋಡಿಕೊಳ್ಳಿ.

ಎಲ್ಲಿದ್ದಾಳೆ ಯಕ್ಷಿ?
ಎರಡು ಲೋಕಂಗಳ ಮಧ್ಯೆ
ಕರುಳಬಳ್ಳಿಯ ಬೆಳೆಸಿ
ಎರಡನ್ನು ಬೆಸೆಯುವಾಕೆ.
ಬೇರೆ ಸೀಮೆಯ ಆನಂದಗಳಿಂದ
ಯೌವನದ ಸಿಂಗರಿಸಿಕೊಂಡಿರಲಿ ಆಕೆ.
ಆಯಿತೆ? ಗಿಲಿ ಗಿಲಿ ಗೆಜ್ಜೆಯ ನುಡಿಸುತ
ಸೀದಾ ಬೆಳಸಲಿ ಪದುಮದ ಪಾದ ಕಾಡಿಗೆ.

ಚಂದಮುತ್ತನ ಕಡೆಗೆ ಬಂದಳೆ?
ಭೇಟಿಯಾದವೆ ಕಣ್ಣು? ಹಣೆದುಕೊಂಡವೆ ದೃಷ್ಟಿ?
ಸಂತೋಷ ಚಿಗಿತವೆ?
ಪುಳಕದಲಿ ಮೈತೊಳೆದರೆ?
ಹಾಗಿದ್ದರೆ ಚಂದಮುತ್ತನ ಹಾಡು ಕೇಳಿ:

ಹೇಳಕೇಳದೆ ಸುಳಿದರ್ಯಾರ? ನಮ ಸೀಮೆಯಲಿ
ತಿಳಸದೆ ಬಂದವರ್ಯಾರ ||ಪ||
ಆಡುತಾಡುತ ಬಂದು
ಬಂದ ದಾರಿಯ ಮರೆತು
ಚಿತ್ತದಲಿ ಚಕಿತರಾದವರಾ ||ಅ. ಪ||

ತೆಳ್ಳಾನ ಹೊಟ್ಟೆವಳು ತಾವರೆಯ ಮುಖದವಳು
ಬ್ಯಾರೇ ಸೀಮೆಯ ನಿಲುವು ಶೈಲಿ |
ಹ್ಯಾಗೆ ಸಂಪಿಗೆ ಮೊಗ್ಗು ಹಾಗೆ ಆಕೆಯ ಮೂಗು
ಕಂಗಳೆಂದರೆ ಕಮಲ ನೀಲಿ |

ಮೊಲೆಗಳ ಭಾರಕೆ ಬಾಗಿದ ಬಾಲೆಯ
ಮುಡಿಯಿಂದ ಜಗುಳ್ಯಾವು ಹೂವು॥

ಮಾರಿ ಸಣ್ಣದು ಮಾಡಿ ದೂರದಲಿ ನಿಂತಳು
ತಿಳಿಯ ಬೆವರಿತ್ತು ಹಣೆಯೊಳಗೆ।
ಅತಿಶಯದ ಕುಸುಮದ ವಾಸನೆ ಎಸೆದಾವು
ಸುರಿದು ಬಂದಳು ಕ್ಷಿತಿಜದಂತೆ।
ಬೆದರಿದ ಎರಳೆಯೊ ದೇವರ ತರಳೆಯೊ
ನಿಜವ ತಿಳಿದವರ್ಯಾರು ಮಾಯೇ । ನಿಮ್ಮ॥

ಯಾವುದೋ ಹೊಸಚಂದ್ರ ಭೂಮಿಗಿಳಿಧಾಂಗಿಹುದು
ಕಾಮಿತ ಫಲಿಸಿದ ಹಾಗೆ।
ಮೂರು ಲೋಕದ ಸುಖದ ಶಿಖರದ ಮ್ಯಾಗಿಂದ
ಕನಸು ಕೆಳಜಾರಿದ ಹಾಗೆ।
ಸಣ್ಣ ಮಿಂಚಿನ ಹಾಗೆ ಕಣ್ಣು ಹೊಡೆವಳು ಕನ್ಯೆ
ಚಿಮ್ಮುವ ಚಿಲುಮೆಯ ಹಾಗೆ ॥ ಹ್ಯಾಗೆ ॥

ಅಷ್ಟರಲ್ಲಿ ಉಣ್ಣದೆ ಮಲಗಿದ್ದ ಮಗನ ನೋಡಲೆಂದು ಅಬ್ಬೆ ಬಂದಳು. ಹಣೆ ಮುಟ್ಟಿ ಮುಂಗುರುಗಳು ನ್ಯಾವರಿಸಿದಳು. ನಾವು ಕನಸುಗಳು ಗಡಬಡಿಸಿ ರಚಿಸಿದ ನಿರ್ಮಿತಂಗಳೆಲ್ಲವ ಕರಗಿಸಿ ಓಡುತ್ತ, ಚಂದಮುತ್ತನ ಕಣ್ಣಲ್ಲಿ ನೆಟ್ಟಿದ್ದ ಯಕ್ಷಿಯ ಬಲವಂತ ಕಿತ್ತೆಳೆದುಕೊಂಡು ಮಾಯವಾದೆವು. ಚಂದಮುತ್ತ ಗಾಬರಿಯಿಂದ ಗಕ್ಕನೆ ಎದ್ದು, ಸುತ್ತೂ ಕಡೆ ನೋಡಿ.

ಯಾಕೆನ್ನ ಎಬ್ಬಿಸಿದಿರಿ।
ಕಣ್ಣಾಗಿನ । ಚಂದ್ರನ್ನ ಅಗಲಿಸಿದಿರಿ ॥

- ಎಂದು ಅಳತೊಡಿಗಿದ. ಮಗನ ಇಂಪಿರದ ಮಾತಿಗೆ ಅಬ್ಬೆಯ ಹೃದಯ ಕಂಪಿಸಿತು. 'ಅರಿವಿಗೆ ಬಾ ಮಗನೇ ಕನಸು ಕಂಡೆಯಾ?' ಎಂದು ಭುಜ ಹಿಡಿದಲುಗಿದಳು.

"ಹೌದು ಅಬ್ಬೆ" - ಅಂದ
"ಏನು ಕನಸು ಕಂಡೆ ಕಂದ?"

"ಬೆಳ್ದಿಂಗಳಲ್ಲಿ ಈಜಾಡುತ್ತಿದ್ದ ಚಂದ್ರನ್ನ ಕಣ್ಣಲ್ಲಿ ಹಿಡಿದುಕೊಂಡಿದ್ದೆ. ನೀ ಬಂದೆ. ಕಣ್ಣಿಂದ ಜಗುಳಿ ಎದೆಗಿಳಿದ ಅಬ್ಬೆ" - ಎಂದು ಎದೆ ಹಿಡಿದುಕೊಂಡ.

ಅಬ್ಬೆಯ ಹರುಷಗಳು ಇದ್ದಿಲಾದವು. ನಾಳೆ ಕುಲಗುರುವ ಕಾಣಬೇಕೆಂದು. ಅಲ್ಲಿಯತನಕ ಇನ್ನಷ್ಟು ಹರಕೆಗಳು ಹೊರಬೇಕೆಂದು ಗೂಡಿನ ಮಾಡದಲ್ಲಿರುವ ಮನೆದೇವರು ಚಂದಪ್ಪನ ಕಡೆಗೆ ನಡೆದಳು.

# ೫. ಬ್ಯಾರೆ ಸೀಮೆಯವಳು

ಬೆಳ್ಳಿಮೂಡಿ ಬೆಳಗಾಯಿತು. ಅಬ್ಬೆ ಕೋಳಿಯ ಕೂಗಿಗಿಂತ ಮುಂಚೆ ಎದ್ದು ಹಿಡಿಸೂಡಿ ಹಿಡಿದು ಅಂಗಳ ಗುಡಿಸಿದಳು. ಎಮ್ಮೆ ಹಸುಗಳ ಗಂಜಳ ಬಳಿದು ತಿಪ್ಪೆಗೆಸೆದು ಬಂದಳು. ಹಲ್ಲುಪುಡಿಯಿಂದ ಹಲ್ಲುಜ್ಜಿ ಮಡುವಿನಲ್ಲಿ ಮಿಂದು ಮಡಿಯುಟ್ಟಳು. ಕುಲದೈವಕ್ಕೆ ತುಪ್ಪದ ದೀವಟಿಗೆ ಹಚ್ಚಿದಳು. ಕರುಗಳ ಬಿಡದೆ, ಹಸು ಎಮ್ಮೆ ಹಿಂಡದೆ ಅವಸರದಲ್ಲಿ ಭದ್ರಮಂಚದ ಮ್ಯಾಲೆ ಮಲಗಿದ್ದ ಮಗನ ಕಡೆಗೊಮ್ಮೆ ನೋಡಿ ಕಂದನ ಕಾಪಾಡೆಂದು ಸತ್ಯದೇವರ ಚಿತ್ತದಲ್ಲಿ ಸ್ಮರಿಸಿ, ಧರೆಗೆ ದೊಡ್ಡವನಾದ ಕುಲಗುರುವಿನಲ್ಲಿಗೆ ದೌಡಾಯಿಸಿದಳು.

ಕುಲಗುರುವಾಗಲೇ ಬೆಳಗಿನ ಕುಲಾಚಾರಂಗಳ ತಪ್ಪದೆ ಪಾಲಿಸಿ ಮೂರು ಕಾಲಿನ ಆಸನದ ಮ್ಯಾಲೆ ಕುರಿ ಕಂಬಳಿಯಲ್ಲಿ ಗದ್ದಿಗೆ ಮಾಡಿ ದೊಡ್ಡ ಚಿಂತೆಯ ಮಾಡುತ್ತ ಕುಂತಿದ್ದ. ರಾತ್ರಿ ಕನಸಾಗಿತ್ತು. ಆತಂಕವಿತ್ತು ಕಣ್ಣಲ್ಲಿ. ಅಷ್ಟರಲ್ಲಿ ಅಬ್ಬೆ ಬಂದು 'ಕಾಪಾಡು ಶಿವನೇ' ಎಂದು ಅಡ್ಡಬಿದ್ದಳು.

**ಅಬ್ಬೆ :** ಕಾಡಿನಿಂದ ಬಂದ ಮಗ ಮಲಗಿ ಬಿಟ್ಟಿದ್ದಾನೆ
ಬಂದವನು ನುಡಿದಾಡಿಸಲಿಲ್ಲ. ಉಣಲಿಲ್ಲ
ಒದ್ದೆ ಬಟ್ಟೆ ತೆಗೆದುಡಲಿಲ್ಲ.

**ಕುಲಗುರುಗಳು :** ಸುಧಾರಿಸಿಕೊ ಮಗಳೆ, ಕುಂತು ಸಾದ್ಯಂತ ಹೇಳು - ಎಂದನು. ಅಬ್ಬೆ ಹುತ್ತೂ ಬೆರಳು ಜೋಡಿಸಿ ನಮಸ್ಕರಿಸುವ ಭಂಗಿಯಲ್ಲೇ ನಿಂತು ಹೇಳಿದಳು:

ನಿನ್ನೆ ಹಟ್ಟಿಯ ಹೈಕಳು ಕಾಡಲ್ಲಿ ಸೇರಿ
ಆಡಾಡುತ್ತ ಕಂದನಿಗೆ ಕಲ್ಲುಗೊಂಬೆಯ ಜೊತೆ
ಮದುವೆಯ ಮಾಡಿದರೆ,

ಮಾಯದ ಗಾಳಿ ಬೀಸಿ ಬೀಸಿ ಬಂದೋ
ಯಕ್ಷಿಯ ಮಳೆ ಸುರಿದೋ
ಆಗಬಾರದ್ದು ಆಯಿತಂತೆ ಮಗಂಗೆ.
ನನಗೆ ಮಗನಾದರೆ ನಿನಗೆ ಶಿಶುಮಗನಲ್ಲವೆ?
ನೀನೇ ಕೈ ಹಿಡಿದು ವಿದ್ಯಾ ಬುದ್ಧಿ ಹಾಡು ಕಲಿಸಿ, ಕಲಿತವಿದ್ಯನ ಮಾಡಲಿಲ್ಲವೇ?
ಈಗವನು ಹೆಂಗೆಂಗೋ ಆದರೆ ಹೆಂಗೆ?
ದೇವ ದೈವದ ಸಮ ನಿನ್ನ ಬಿಟ್ಟು ನಮಗಿನ್ಯಾರಿದ್ದಾರೆ?
ಕಾಪಾಡು ನನ್ನಪ್ಪಾ....

ಒಮ್ಮೆ ಕರೆದರೆ ಮೂರು ಬಾರಿ ಓ ಅನ್ನುತ್ತಿದ್ದ
ಚಂದಮುತ್ತ ನನ್ನೊಂದಿಗೆ ಮಾತಾಡಲೊಲ್ಲ. ಗುರುತು
ಹಿಡಿಯಲೊಲ್ಲ. ಬಂದವ ನೆಟ್ಟಗಿ ಹೋಗಿ ಮಲಗಿಬಿಟ್ಟ.
ಎಬ್ಬಿಸಿದರೆ ಹ್ಯಾಗೆ ಹ್ಯಾಗೋ ಕೈಕಾಲು ಆಡಿಸುತ್ತಾನೆ.

ಏನೇನೋ ಮುರಿದು ಮಾತುಗಳ ಕನವರಿಸುತ್ತಾನೆ.
ಮದ್ದು ಮಾಟವೋ ಅರಿಯೆ.

ಬೆಟ್ಟದ ಸಿರಿಮಾಯೀ
ಪ್ರತಿ ಮಂಗಳವಾರ ಹಾಲೋಗರ ನಿನಗೆ.
ಕುರಿ, ಕೋಳಿಯ ಬಾಡಿನ ರುಚಿ ನಿನಗೆ.
ನನ್ನ ಕಂದನ ನನಗೆ ಕೊಡು.

- ಎಂದು ಹರಕೆ ಹೊತ್ತಳು. ಇಷ್ಟಾದರೂ ಸುಮ್ಮನೆ ಕೂತ ಕುಲಗುರುವಿನ ನೋಡಿ, -

ಇನ್ನು ಸುಮ್ಮನೆ ಕುಂತಿದ್ದೀಯಲ್ಲಪ್ಪಾ.

- ಎಂದು ದನಿ ಮಾಡಿ ಬಿಕ್ಕಿ ಬಿಕ್ಕಿ ದುಃಖ ಮಾಡಿದಳು.

ಅಬ್ಬೆಯ ನುಡಿ ಸಾದ್ಯಂತ ಕೇಳಿ ಕಳವಳ ವೇದ್ಯವಾಗಿ ಕುಲಗುರು ಶಿಷ್ಯನ ಬಗ್ಗೆ ಚಿಂತಿಸಿದ. ಬೆಟ್ಟದ ಕಡೆ ಮುಖ ಮಾಡಿ ಸಿರಿಮಾಯಿಯ ಧ್ಯಾನಿಸುವಷ್ಟರಲ್ಲಿ ಕೋಲಕಾರ ಬಂದು ಚಾವಡಿ ಕಟ್ಟೆಯ ಹಿಂದೆ ಕಾಲುಮೆಟ್ಟಿ ಕೋಲುಕುಟ್ಟಿ ನಿಂತು “ಗುರುವೇ” ಎಂದ. “ಯಾರಪ್ಪ ನೀನು?”

“ಗುರುವೇ ಹೆಗಡೆ ಕರೀತಾನೆ. ಎಲ್ಲಿದ್ದರಲ್ಲಿಂದ, ಹೆಂಗಿದ್ದರೆ ಹಂಗೇ ಬರಬೇಕಪೋ” ಅಂದ. ನಿಂತಿದ್ದ ಸಿರಿಲಕ್ಕಿಗೆ, -

“ಬೆಟ್ಟದ ಮಾಯಿ ಎಲ್ಲ ನೋಡಿಕೊಳ್ಳುತ್ತಾಳೆ. ನಿಶ್ಚಿಂತಳಾಗಿರು ಮಗಳೇ. ನೀನಾಗಿ ಮಗನಿಗೆ ಕಠಿಣೋಕ್ತಿ ಆಡಬೇಡ. ನಾನೇ ಚಂದಮುತ್ತನ್ನ ಮಾತಾಡಿಸುತ್ತೇನೆ.”

- ಎಂದು ಹೇಳಿ ಮೂರು ಕಾಲಿನ ಆಸನದಲ್ಲಿ ಕುಂತುಕೊಂಡೇ ಅಬ್ಬೆಗೆ ಪಾದ ಕೊಟ್ಟ. ಮಂಡೆಯ ಮ್ಯಾಲೆ ಕೈಯಿಟ್ಟು ಹರಸಿ, ಬಗಲ ಚೀಲದ ಬಂಡಾರವ ಲಕ್ಕಿಯ ಹಣೆಗೆ ಹಚ್ಚಿ ಉಳಿದುದನ್ನು ಗಾಳಿಗೆ ತೂರಿ “ಬೆಟ್ಟದ ಮಾಯೀ” ಎಂದು ಎದ್ದು ಹೊರಟ.

## ೬. ಶಿವದುಃಖ

ಕುಲಗುರುವಿನ ಪಾದ ಪಡೆದುಕೊಂಡು ಅಬ್ಬೆ ಬಂದದ್ದೇ - ಮಗನಲ್ಲಿಗೆ ಹೋದಳು. ಹಾಸಿಗೆಯಲ್ಲಿ ಮಗನಿರಲಿಲ್ಲ. ಹೊರಗೆ ಬಾವಿಯ ಬಳಿ, ಪಕ್ಕದ ಮೆಳೆಯಲ್ಲಿ ಹುಡುಕಿದಳು. ‘ಮಗಾ ಚಂದ್ರಾಮ, ಚಂದಮುತ್ತಾ’ ಎಂದು ಕರೆದಳು. ಮಗನ ದನಿ ಕೇಳಿಸಲಿಲ್ಲ. ಹೃದಯ ಪರಚಿಕೊಂಡಳು. ಹೆಸರಿಡದ ಭಯಗಳಾವರಿಸಿ ಗರ್ಭದಲ್ಲಿ ಚೂರಿ ಆಡಿಸಿದಂತಾಯ್ತು. ಗಡಬಡಿಸಿ ಹೋಗಿ ಗೋಡೆಯ ಬಿಲದಲ್ಲಿ ಸೀಮೆಸುಣ್ಣದಲ್ಲಿ ಬರೆದ ಕುಲದ ಸ್ವಾಮಿ ಚಂದ್ರಾಮನ ಮುಟ್ಟಿ ಹಣೆಗೊತ್ತಿಕೊಂಡಳು. ಅದಾಗಿ ಬೆಟ್ಟದ ಕಡೆ ಮುಖಮಾಡಿ ‘ಬೆನ್ನಿಗಿರು ಬೆಟ್ಟದ ಮಾಯೀ’ ಎಂದು ಬೆಟ್ಟದ ಮಾಯಿಗೆ ಹೇಳುತ್ತಿರುವಂತೆ ಕಣ್ಣೀರ ಜಲ ಸುರಿಯಿತು. ‘ಇಲ್ಲಿಯತನಕ ಕಾಡುವ ದೈವಂಗಳಿಂದ ಮಗನ ಕಾಪಾಡಿ ಒಂದು ಭವ ಪಾರಾದೆನೆಂದರೆ ಈಗ ಇನ್ನೊಂದು ಸುರುವಾಯ್ತಲ್ಲೇ ತಾಯಿ’ - ಎಂದು ಏಳೇಳು ಲೋಕಂಗಳ ಭಾರಿ ದುಃಖ ಮಾಡಿ ಕರುಳು ತಾಳದೆ ಕಾಡಿಗೆ ಹೊರಟಳು.

ದನಗಳ ಮೇಯಿಸುತ್ತಿದ್ದ ಬಾಲಕರಿದ್ದಲ್ಲಿಗೆ ಹೋದಳು. ಚಂದಮುತ್ತ ಇರಲಿಲ್ಲ. ಎಲ್ಲೆಂದು ಕೇಳಿದಳು. ಎಳೆ ಆಲದ ಮರ ತೋರಿಸಿದರು. ಅವನೊಬ್ಬನನ್ನೇ ಹೊರತು ಪಡಿಸಿದ್ದೀರಲ್ಲಾ? ಜಗಳಾಡಿದಿರಾ? ಎಂದಳು. ಹುಡುಗರು ಹೇಳಿದರು:

ಇಂದು ಚಂದಮುತ್ತ ನಿನ್ನಿನಂತಿಲ್ಲ ಅಬ್ಬೇ.
ಆಡಿದರೆ ಮಾತಾಡಿದ, ಇಲ್ಲದಿದ್ದರಿಲ್ಲ.
ಹತ್ತು ಮಾತಿಗೆ ಒಂದುತ್ತರ ಕೊಡುವ.
ಬೆಳಿಗ್ಗೆ ಬಂದಾಗಿನಿಂದ.
ಕ್ಷಿತಿಜವನ್ನು ಅದು ಕನ್ನಡಿಯೆಂಬಂತೆ
ನೋಡುತ್ತಾ ಕುಂತಿದ್ದಾನೆ.

ಕನ್ನಡಿಯಲ್ಲಿ ಯಾರು ಮೂಡಿರುವರೋ -
ಮೂಡಿದವರೊಂದಿಗೆ ಕೈಸನ್ನೆ ಬಾಯಿಸನ್ನೆಯಲ್ಲಿ
ಮಾತಾಡುವ.
ಮೂಡಿದವರ್ಯಾರೆಂದು ನಮಗೆ ಕಾಣಿಸದಾಗಿ
ಅವನ ಮಾತು ನಮಗೆ ತಿಳಿಯುತ್ತಿಲ್ಲ.
ನಮಗವನ ಕಣ್ಣಷ್ಟೇ ಕಾಣುತ್ತವೆ.
ಕಣ್ಣಲ್ಲಿ ನಾವಂತು ಮೂಡಲಿಲ್ಲ. ಮೂಡಿದ್ದು
ಬರೀ ಕ್ಷಿತಿಜ
ಕ್ಷಿತಿಜದಲ್ಲಿ ಒಮ್ಮೊಮ್ಮೆ ಕಾಮನಬಿಲ್ಲು ಕಂಡಂತೆ
ಅವನ ಕಣ್ಣು ಗಾಜು ಗಾಜಾಗಿ ಫಳಫಳ ಹೊಳೆಯುತ್ತಾವೆ.
ನಿಧಿಯ ಕಂಡವರಂತೆ, ಆದರೆ ಜಿಪುಣ
ಇನ್ನೊಬ್ಬರಿಗೆ ಗುಟ್ಟು ಬಿಡದಂತೆ
ಅಭಿನಯಿಸುವ.
ಒತ್ತಾಯ ಮಾಡಿದರೆ ಕಣ್ಣೀರು ಸುರಿಸುವನೆಂದು
ನಾವ್ಯಾರು ಕೇಳಲಿಲ್ಲ,
ಅವನು ಹೇಳಲಿಲ್ಲ.
ಅಕಾ, ಕೊಳಲುಲಿ ಕೇಳಿಬಂತು.
ನಿನ್ನ ದನಕರು ನಾವು ನೋಡಿಕೊಳ್ಳುತ್ತೇವೆ. ಚಿಂತೆ ಬೇಡವ್ವ"

ಎಂದರು. ಅವಸರ ಮಾಡಿ ಮಗನ ಕಡೆಗೆ ಧಾವಿಸಿದಳು.

## ೭. ಶಿವದೇವರು ನನ್ನ ಮಗರಾಯ

ಚಂದಮುತ್ತ ಬಂಡೆ ಮ್ಯಾಲೆ ಕುಂತು ಕೊಳಲು ನುಡಿಸುತ್ತಿದ್ದ. ಹುಲ್ಲುಗಾವಲಿನಲ್ಲಿ ಹೂಗಾಳಿ ಬೀಸಿ ನುಡಿಸುತ್ತಿದ್ದ ಹಾಡು ಕಿವಿಗೆ ಹಿತಕರವಾಗಿತ್ತು. ಕಣ್ಣು ಮುಚ್ಚಿದ್ದ. ಹಾರ್ಯಾಡೋ ಕೂದಲಿನ ಹಣೆಯಂಚಿನ ಮ್ಯಾಲೆ ಎಳೆಬಿಸಿಲು ಆಟವಾಡುತ್ತಿತ್ತು. ಹೆಗಲ ಮ್ಯಾಲೆ ಕರಿ ಕಂಬಳಿಯಿತ್ತು. ಯಾವುದೋ ಕನಸನ್ನ ಕೊಳಲುಲಿಯ ಬಲೆ ಹಾಕಿ ಜಗ್ಗಿ ಜಗ್ಗಿ ತರುತ್ತಿದ್ದ ಹಾಗೆ ಕೊಳಲನ್ನು ಅಲುಗುತ್ತಿದ್ದ. ಅದು

ಸಿಗದಾಗಿತ್ತು. ಬಲೆಯಿಂದ ಜಗುಳುತ್ತಿರಬೇಕು. ಕಣ್ಣುಗಳನ್ನ ಇನ್ನಷ್ಟು ಜೋರಾಗಿ ಮುಚ್ಚಿ ಇನ್ನೊಮ್ಮೆ ಬಲೆ ಎಸೆದು ಹೊಂಚುತ್ತಿದ್ದ. ಸಿಕ್ಕಿತೆಂಬಾಗ ನುಸುಳಿ ಕೈಜಾರಿದಂತೆ, ಕಣ್ಣೆದುರಲ್ಲೇ ಕರಗಿದಂತೆ ಆಟವಾಡಿಸುವ ಕನಸು.

ಅಬ್ಬೆ ಬಂದು ನಿಂತದ್ದು ಮಗಂಗೆ ಅರಿವಾಗಲಿಲ್ಲ. ಅಗಲೇ ಅಬ್ಬೆಗೆ ಗೊತ್ತಾದದ್ದು 'ಎಲಾ ಶಿವನೆ! ಮಗ ಎಷ್ಟು ದೊಡ್ಡವನಾಗಿ ಬೆಳೆದಿದ್ದಾನಲ್ಲಾ!' ಎಂದು.

ಭುಜಗಳ ವಿಸ್ತಾರ ಕಂಡು ಆನೆಮರಿ ನನ್ನಮಗ ಎಂದಳು.
ನೆತ್ತಿಯಲ್ಲಿ ಲೋಲಾಡುವ ನವಿಲುಗರಿ ನೋಡಿ
ಕೃಷ್ಣದೇವರಾಯ ನನ್ನ ಮಗ ಎಂದಳು.
ಜಗ್ಗಿ ಜಡೆ ಕಟ್ಟಿದ್ದರೂ ಬಿಡುಗಡೆಗೊಂಡು
ಕೆನ್ನೆ ಕತ್ತಿನ ಮ್ಯಾಲೆ ಆಟವಾಡುವ
ಮಿಡಿನಾಗರ ಜಡೆ ಕಂಡು
ಶಿವದೇವರು ನನ್ನ ಮಗರಾಯನೆಂದಳು.
ಹದಿನೆಂಟು ಗೊಂಡೆಗಳ ಲಂಗೋಟಿಯ
ಗಟ್ಟಿಮುಟ್ಟಾದ ತೊಡೆಸೊಂಟಗಳ ನೋಡಿ
ಕಾಮದೇವರು ನನ್ನ ಮಗರಾಯನೆಂದಳು.
ದೃಷ್ಟಿ ತಾಗೀತೆಂದು ಮನಸ್ಸಿನಲ್ಲೇ ನಿವಾಳಿ ಚೆಲ್ಲಿದಳು.

ಕೊಳಲೂದುವ ಮಗ ಈಗ ಸೋತ ಹಾಗಿತ್ತು. ಬೆನ್ನು ತಟ್ಟಿದಳು. ಸಮಾಧಿ ಭಂಗವಾಗಿ ಕಣ್ತೆರೆದ. ಎದುರಿಗೆ ಹಡೆದವ್ವ! 'ಅಬ್ಬೇ' ಎಂದ.

ಮಗನ ಚೆಲುವಿಕೆಯ ಚೋದ್ಯವ ನೋಡಿ ಆದ ಆನಂದ ಒಂದು ಕಡೆ, ಕುಲ ಗುರುವಿನ ನುಡಿಕೇಳಿ ಆದ ಆತಂಕ ಇನ್ನೊಂದು ಕಡೆ. ಆನಂದ ಆತಂಕಗಳಲ್ಲಿ ಅಬ್ಬೆಯ ಹೃದಯ ಹಸಿರೇರಿ ಹೆಚ್ಚು ನುಡಿದಾಡಿಸದೆ ಮಗನ ಗೂಡಿಗೆ ಕರೆತಂದಳು.

ಬಾವಿಯ ಕಿರುಯಾತದಿಂದ ನೀರು ಸೆಳೆಸೆಳೆದು ಹಂಡೆ, ಹರವಿ ತುಂಬಿ ಒಲೆಗೆ ಬೆಂಕಿಯಿಟ್ಟಳು. ಮಗನ ಮುಂದೆ ಕೂರಿಸಿಕೊಂಡು ಬೆಳ್ಳಿಯೆಣ್ಣೆ ಕುಡಿಕೆಯಿಂದ ಎಣ್ಣೆ ತಗೊಂಡು ಮಗನ ಕೈ ಕಾಲು ತಲೆ ತಂಪಾಗುವಂತೆ ಎಣ್ಣೆ ಹಚ್ಚಿದಳು. ತುಂಡು ಸಾಬಾನು ಸೀಗೆಪುಡಿ ತಗೊಂಡು ಬಾ ಜಳಕಕ್ಕೆಂದು ಕೈಹಿಡಿದು ಬಚ್ಚಲಿಗೆ ಕರೆದೊಯ್ದಳು.

ನೂರು ತಂಬಿಗೆ ಬಿಸಿನೀರೆರೆದು ಸಾಬೂನಿನಿಂದೊಮ್ಮೆ ಮೈಹಸನು ಮಾಡಿದಳು. ಸೀಗೆಯಿಂದೊಮ್ಮೆ ಶುದ್ಧಮಾಡಿದಳು. ನೂರು ತಂಬಿಗೆ ಬಿಸಿನೀರೆರೆದು ಬಿಸಿ ಮಾಡಿ, ತಣ್ಣೀರಲ್ಲಿ ತಂಪು ಮಾಡಿದಳು. ಮಡಿ ಪಾವಡದಿಂದ ತಾನೇ ಮುಂದಾಗಿ ತಲೆ ಒರೆಸಿ ಗೊಂಡೇದ ಲಂಗೋಟಿ ಕೊಟ್ಟಳು. ಮಗ ಮರೆಗೆ ಹೋಗುತ್ತಲೂ ಹೆಮ್ಮೆಯಿಂದ ಹಿಡಿದಿಟ್ಟ ನಗೆಯ ಮೆಲ್ಲಗೆ ಚೆಲ್ಲಾಡಿದಳು. ಚಂದಮುತ್ತ ದೇವರ ಬಿಲಕ್ಕೆ ಹೋಗಿ ಸಾವಿರದೆಂಟು ನಾಮಂಗಳಿಂದ ಕುಲದೇವರ ಹೊಗಳಿ ಹೊರಬಂದ.

ಅಬ್ಬೆ ಬಾಳೆಯೆಲೆ ಹಾಕಿ ನೀರು ಚಿಮುಕಿಸಿದಳು. ಮುದ್ದೆ ಬಡಿಸಿದಳು. ಎರಡು ಬಗೆ ಅನ್ನ ಬಡಿಸಿದಳು. ಮೂರುಬಗೆ ಬಾಡು ಬಡಿಸಿದಳು. ಆರು ಬಗೆ ಪಲ್ಯ ಪದಾರ್ಥ ಚಟ್ನಿಯ ಬಡಿಸಿ ತುತ್ತು ಮಾಡಿ ಮಾಡಿ ಮಗನ ಬಾಯಿಗಿಟ್ಟು ಉಣಿಸಿದಳು.

ಕಾವಲಿಗೆ ಹೋಗುತ್ತೇನೆಂದ ಮಗನ ತಡೆದು, ಮುಂದೆ ಕೂರಿಸಿಕೊಂಡು ಸೊಂಪಾಗಿ ಬೆಳೆದ ತಲೆಗೂದಲನ್ನು ಬಿಡಿಸಿ ಬೆನ್ನಿಗಿರಿಸಿ ಹಿತಕರ ಬಿಸಿಲಲ್ಲಿ ಹಾಯಾಗಿ ಕುಂತಳು. ಬಣ್ಣದ ಬಾಚಣಿಕೆಯಿಂದ ಮಗನ ತಲೆ ಬಾಚಿ ಹೇನು ಹೆಕ್ಕುತ್ತ ಕೇಳಿದಳು:

“ನಿನ್ನೆ ಮನೆಗೆ ಬಂದವನು ನನ್ನ ನುಡಿದಾಡಿಸದೆ ಇಂದು ಬೆಳಿಗ್ಗೆ ಕಾಡಿಗೆ ಓಡಿದೆಯಲ್ಲ, ಏನು ಕಾರಣ ಮಗನೆ?”

“ಏನಿಲ್ಲಬ್ಬೆ”

“ಮತ್ಯಾಕೆ ಹಾಗೆ ಹೇಳದೆ ಕೇಳದೆ ಕಾಡಿಗೆ ಓಡಿ ಹೋದೆ?”

“ರಾತ್ರಿ ಒಂದು ಕನಸು ಕಂಡೆ ಅಬ್ಬೆ”

“ಕನಸಿನಲ್ಲೇನು ಕಣ್ಣು ತುಂಬುವ ದನ ಕಂಡೆಯಾ? ಕಂಡಿದ್ದರೆ ಹೇಳು ಬೆಲೆ ಕೊಟ್ಟು ಕೊಳ್ಳುವಾ.”

“ಇಲ್ಲ ಅಬ್ಬೆ”

“ಇನ್ನೇನು ಪರಿಮಳದ ಹೂಬಳ್ಳಿ ಕಂಡೆಯಾ? ಕಂಡಿದ್ದರೆ ಹೇಳು, ಅಂಗಳದಲ್ಲೇ ಸಸಿ ನೆಟ್ಟು ಬೆಳೆಸುವಾ.”

“ಇಲ್ಲ ಅಬ್ಬೆ”

“ಸೊಬಗುಳ್ಳ ಬೆಡಗಿಯಾ ಕಂಡೆಯಾ?”

ಈಗ ಚಂದಮುತ್ತ ತಲೆ ತಿರುಗಿಸಿ ಅಬ್ಬೆಯ ಮುಖ ನೋಡಿದ.

“ಕನಸಿನಲ್ಲಿ ಚಂದ್ರನ ಕಂಡೆ ಅಬ್ಬೆ” - ಅಂದ.

“ಚಂದ್ರನ ಕಂಡೆಯೋ ಚಂದ್ರನಂಥ ಹೆಣ್ಣ ಕಂಡೆಯೋ!

ಇಂದಿನ ನಿನ್ನ ಕೊಳಲ ಹಾಡು ಪಸಂದಾಗಿತ್ತಪ್ಪ. ಹಾಡು

ನಮಗಿರಲಿ, ಹಾಡಿನ ಹುಡುಗಿ ನಿನಗಿರಲೇಳು”

- ಎನ್ನುತ್ತ ಅಕ್ಕರೆ ಮತ್ತು ಆತಂಕದಿಂದ ಲಟಿಕೆ ಮುರಿದಳು. ಮಗ ನಗುತ್ತ ನವಿಲುಗರಿ ತುರಾಯಿ ನೆತ್ತಿಯ ಮುಡಿಗಿಟ್ಟು, ಕರಿ ಕಂಬಳಿಯ ಹೆಗಲಿಗೆ ಹೊತ್ತು, ಬೆಳ್ಳಿ ಹಿಡಿಯ ಕಿರುಗತ್ತಿಯ ಎಡಸೊಂಟಕ್ಕೆ ಜೋತು, ಬಣ್ಣದ ಕೊಳಲು ಬಲಸೊಂಟಕ್ಕೆ ಜೋತು ಕಕ್ಕೆದೊಣ್ಣೆ ಕೈಲಿ ಹಿಡಕೊಂಡು, ಹಿಮ್ಮಣ್ಣೆ ಚೀಲದಲ್ಲಿ ಎಲಡಿಕೆ ಸುಣ್ಣ ಕಡ್ಡೀಪುಡಿ ಹಾಕ್ಕೊಂಡು ಹೊರಟ. ಅಬ್ಬೆಯ ಕಣ್ಣು ಹಾದಿಯಾದವು.

## ೮. ಹೊಸ ದೈವದ ಅವತಾರ

ಕುಲಗುರು ಬರುತ್ತಿರುವುದ ಕಂಡು ಚಾವಡಿಯಲ್ಲಿ ಹೂಗೆಲಸದ ಕರಿಕಂಬಳಿ ಹಾಸಿ ಅಕ್ಷತೆಯಲ್ಲಿ ಚಿತ್ರ ಬರೆದು, ತಾಂಬೂಲ ತಟ್ಟೆ ಅಣಿಮಾಡಿಟ್ಟು ಹಟ್ಟಿಯಾಳ್ತನ ಮಾಡುವ ಹೆಗಡೆ ಕಾದು ನಿಂತ. ಅಷ್ಟರಲ್ಲಿ ಬಗಲ ಚೀಲದ, ಬಿಳಿತಲೆಯ ಕುಲಗುರು ಕೋಲೂರಿಕೊಂಡು

ಹಳಬನ ಹಿಂದಿನಿಂದ ಬಂದ. 'ಬಾ ಶಿವನೇ' ಎಂದು ಕರವೆತ್ತಿ ನಮಸ್ಕಾರ ಮಾಡಿದ ಹೆಗಡೆಗೆ ಬಲಗೈಎತ್ತಿ ಹರಸಿ ಬಗಲ ಚೀಲದ ಬಂಡಾರ ತೆಗೆದು ಹಣೆಗಂಟಿಸಿ "ಬೆಟ್ಟದ ಮಾಯೀ" ಎನ್ನುತ್ತ ಉಳಿದ ಬಂಡಾರವನ್ನು ಗಾಳಿಯಲ್ಲಿ ತೂರಿದ. ಕರಿಕಂಬಳಿ ಗದ್ದಿಗೆಯಲ್ಲಿ ಕುಂತು ಬಾಯಾರಿಕೆಗೆ ಬೆಲ್ಲ ನೀರು ಕುಡಿದ. 'ಬೆಟ್ಟದ ಮಾಯೀ' ಎನ್ನುತ್ತ ಕುಡಿದುದನ್ನ ತಾಯಿಗರ್ಪಿಸಿ ಹೆಗಡೆ ಕಡೆ ನೋಡಿ.

"ಏನು ಕರೆಸಿದ್ದು ನನ್ನಪ್ಪ?" ಎಂದ.

"ಈಗ ಮೂರು ದಿನದಿಂದ ಒಂದೇ ಸ್ವಪ್ನ ಕಾಣಿಸುತ್ತ ಇದೆ. ಸ್ವಪ್ನದಲ್ಲಿ ಏನೋ ದರ್ಶನವಾಗಿ ಆತಂಕದಿಂದ ಹೇಳಿಕಳಿಸಬೇಕಾಯ್ತು."

"ಸ್ವಪ್ನದಲ್ಲಿ ಕಂಡದ್ದು ದೈವವೋ, ಸೇಡು ಮಾರಿಯೋ?"

"ಹೊಸ ದೈವ ಕಾಣಿಸಿಕೊಂಡು ಮೂರು ದಾರಿ ಕೂಡುವಲ್ಲಿ ಅವತಾರವಾಗಿದ್ದೇನೆ. ಮನ್ನಣೆ ಮಾಡಿ ಗುಡಿ ಗುಂಡಾರ ಕಟ್ಟಿಸಿಕೊಟ್ಟರೆ ಹಿಡಿದ ಮಣ್ಣು ಚಿನ್ನ ಮಾಡೇನು. ತಪ್ಪಿದರೆ ಬೂದಿ ಮಾಡೇನೆಂದು ಹೇಳಿತಪ್ಪಾ! ಏನು ಮಾಡಬೇಕು? ನೀನು ತೋರುವ ಬೆಳಕ ಅನುಸರಿಸಿ ನಡೆವವರು ನಾವು"

"ಇದ್ಯಾವ ಹೊಸ ದೈವವೋ ಕಾಣೆನಲ್ಲ!"

ಎನ್ನುತ್ತಿರುವಂತೆ ತನ್ನ ಕನಸಿನ ನೆನಪಾಯ್ತು

"ನಿನ್ನೆ ಭೂತಸಂಚಾರದ ವ್ಯಾಳ್ಯಾದಲ್ಲಿ
ನನಗೂ ಒಂದು ಕನಸಾಯ್ತಲ್ಲ ನನ್ನಪ್ಪ!
ಆಕಾಶದ ಗಂಟೆ ಢಣಲೆಂದು ಹೊಡೆದವು.
ಬೆಟ್ಟದ ಮೈತುಂಬಿ ಕಾಡು ಗಿಡಮರ ಒಡಮುರಿದು
ಹೂ ಹೂ ಚೆಲ್ಲಿ ಹುಡದಿಯಾಡಿದವು.
ಝಗ್ಗಂತ ಬೆಳಕಲ್ಲಿ ಫಳ್ಳಂತ ಹೊಳೆವಾಕಾಶದಿಂದ
ಯಾರೋ ಉನ್ನತ ದೇವತೆ
ಏಣಿಯಿಲ್ಲದೆ ಕೆಳಗಿಳಿದು ಬಂದುದು ಕಂಡೆ
ಮೂರು ದಾರಿ ಸೇರುವಲ್ಲಿ ದೀವಿಗೆಯ
ಬೆಳಕಾಡಿದ್ದ ಕಂಡೆ
ಫಕ್ಕನೆಚ್ಚರವಾಗಿ ಸಳಸಳ ಮೈಬೆವರಿಳಿದವು !
ನನ್ನ ಕನಸಿಗೂ ನಿನ್ನ ಕನಸಿಗೂ ಸಂಬಂಧವಿರಬಹುದ?" - ಎಂದ

**ಹೆಗಡೆ :** ನಿನ್ನ ಕನಸಿನಲ್ಲೂ
ಮೂರು ದಾರಿ ಸೇರುವಲ್ಲಿ ದೀವಟಿಗೆ ಬೆಳಕಾಡಿದ್ದು
ವಿಶೇಷವೇ. ಹೋಗಿ ನೋಡಿಕೊಂಡು ಬರಬಹುದಲ್ಲ?

ಹಂಗೇ ಆಗಲೇಳು -

ಎಂದು ಕುಲಗುರು ಹೊರಡುವ ಉತ್ಸಾಹ ತೋರಿದ.

# ೯. ಒಕ್ಕಲಾದರು

ಕುಲಗುರು, ಹೆಗಡೆ ಮತ್ತು ಹಟ್ಟಿಯ ಹಿರೀಕರು ಕೂಡಿಕೊಂಡು ಕಾಡಿನ ಮಧ್ಯೆ ಮೂರು ದಾರಿ ಸೇರುವಲ್ಲಿಗೆ ಹೋಗಿ ಹುಡುಕತೊಡಗಿದರು. ದನಗಾಹಿ ಬಾಲಕರಾಗಲೇ ಅಲ್ಲಿದ್ದರು. ಮತ್ತು ಹಿರೀಕರು ಏನು ಹುಡುಕುತ್ತಿದ್ದಾರೆಂದು ತಿಳಿಯದೆ ಸೋಜಿಗಗೊಂಡು ಅವರೂ ಅವರೊಂದಿಗೆ ಹೆಜ್ಜೆ ಹಾಕಿದರು. ಕೊನೆಗೆ ಎಲ್ಲೂ ಸುಳಿವು ಸಿಕ್ಕದಿದ್ದಾಗ ಕುಲಗುರುವಿಗೆ ಸಿರಿಲಕ್ಕಿ ಹೇಳಿದ್ದು ನೆನಪಾಗಿ "ಏನ್ರೆಪ್ಪ, ಇಲ್ಲೆಲ್ಲಾದರೂ ಶಿಲಾಮೂರ್ತಿ ಕಂಡಿತ?" ಎಂದರು. ಹುಡುಗರು ಉತ್ಸಾಹದಿಂದ ಆಲದಮರದ ಬಳಿಯ ಶಿಲಾಮೂರ್ತಿಯ ತೋರಿಸಿದರು. ಆದರೆ ನಿನ್ನೆ ತಾವು ಅದರೊಂದಿಗೆ ಆಡಿದಾಟ ಹೇಳಲಿಲ್ಲ. ಹೇಳಲೆಂದು ಬಾಯಿ ತೆಗೆದ ಸಣ್ಣ ಹೆಗಡೆ ಚೆನ್ನಮುತ್ತನ ಬಾಯನ್ನ ಯಾರೋ ಮುಚ್ಚಿದಂತಾಗಿ ಅವನೂ ಬಾಯಿ ಬಿಡಲಿಲ್ಲ.

ಮೆಳೆಯಲ್ಲಿದ್ದ ಶಿಲಾಮೂರ್ತಿ ತುಂಬ ಸುಂದರವಾದ ಯಕ್ಷಿಯ ಮೂರ್ತಿ, ಲೋಕ ಲೌಕಿಕ ಕಂಡು ಬೆರಗಿನಲ್ಲಿ ಬಟ್ಟಲಗಣ್ಣು ತೆರೆದ ಹಾಗಿತ್ತು. ಬಲಗೈ ಆಶೀರ್ವದಿಸುವ ಭಂಗಿಯಲ್ಲಿತ್ತು. ಬಲಭುಜದ ಮ್ಯಾಲೆ ಗಿಣಿ ಕುಂತಿತ್ತು. ಎಡಗೈ ತೊಡೆ ಮಧ್ಯದ ಮರ್ಯಾದೆ ಮುಚ್ಚಿಕೊಂಡಿತ್ತು. ಮದುವೆಯಾಟದಲ್ಲಿ ಚಂದಮುತ್ತ ಕತ್ತಿಗೆ ಹಾಕಿದ್ದ ಅಮೃತವಲ್ಲಿ ಹಾಗೆ ಇತ್ತು. ಕುಲಗುರುವಿಗೆಲ್ಲ ಗೊತ್ತಾಗಿ ಹೋಯ್ತು. ಆ ವಿಷಯ ಅವನು ಚರ್ಚಿಸಲಿಲ್ಲ. ಯಕ್ಷಿಯ ಗುಡಿ ಕಟ್ಟುವುದಕ್ಕೆ ಮನೆಗೊಂದಾಳು ಬರಬೇಕೆಂದು ಕುಳವಾಡಿ ಡಂಗುರ ಸಾರಿದ. ಮಾರನೆಯ ದಿನ ಹೆಗಡೆಯ ಹಿರಿತನದಲ್ಲಿ ಕಲ್ಲೊಡ್ಡರು ಮಣ್ಣೊಡ್ಡರು ಸೇರಿ ಮನೆಗೊಂದಾಳಿನಂತೆ ಮೆಳೆಗೆ ಬಂದರು. ಸುತ್ತ ಹಸನು ಮಾಡಿ ಒಲಿದು ಬಂದ ಯಕ್ಷಿ ಕುಂತ್ಕೋಳ್ಳೋದಕ್ಕೊಂದು ತಳ ನಿಂತ್ಕಳ್ಳೋದಕ್ಕೊಂದು ನೆಲೆಯಾಗುವಂಥ ಗುಡಿಯ ಕಟ್ಟಿ ಗುಡಿಗೆ ಸುಣ್ಣ ಬಣ್ಣ ಬಳೆದರು. ಬಲಗೋಡೆಯ ಮೇಲೆ ಸೂರ್ಯನಾರಾಯಣಸ್ವಾಮಿ, ಎಡಗೋಡೆಯ ಮ್ಯಾಲೆ ಚಂದ್ರಾಮಸ್ವಾಮಿಯ ಚಿತ್ರ ಬರೆದರು. ಶಿಖರದ ಮ್ಯಾಲೆ ಕಮಳದ ಕಸೂತಿಯಿರುವ ಜೆಂಡಾ ಹಾರಿಸಿದರು. ಹುಣ್ಣಿವೆ ದಿನ ಪೂಜೆಯೆಂದು ಸುತ್ತೂ ಸೀಮೆಯ ದೇವದೈವಂಗಳನ್ನು ಪಾಲ್ಕೀ ಸಮೇತ ಕರೆಸಿದರು. ಗುರ್ನಾಲು ಸಿಡಿದು ಕೊಂಬು ಊದಿ ವಾದ್ಯ ಮೊಳಗಿ ಎತ್ತಿದ ಸತ್ತಿಗೆ ಮರೆದು ಸರ್ವ ಬಿರುದಿಂದ ಮೆರವಣಿಗೆ ಹೊರಟು ಚಾಂಗುಭಲೆಯೆಂಬ ನುಡಿಯ ನುಡಿಯಾಯಿತೆಲ್ಲೆಡೆಗೆ.

ಹುಣ್ಣಿಮೆಯಂದು ಕುಲಗುರು ಸುಮೂಹೂರ್ತದಲ್ಲಿ ಪೂಜೆ ಸುರುಮಾಡಿ ಏಳು ಗಂಗೆಯ ಕುಂಕುಮ ನೀರಿನಿಂದ ಯಕ್ಷಿಗೆ ಸ್ನಾನ ಮಾಡಿಸಿದ. ಏಳು ಗಂಗೆಯ ಅರಿಷಿಣ ನೀರಿನಿಂದ ಸ್ನಾನ ಮಾಡಿಸಿದ. ನೂರು ಕುರಿ, ನೂರು ಕೋಳಿ, ನೂರು ಮಡಕೆ ಈಚಲ ರಸವ ಅರ್ಪಿಸಿ ಇಪ್ಪತ್ತು ಮೊಳದ ಬಣ್ಣದ ದಟ್ಟಿ, ನೂರು ಮೊಳದ ಹೂವಿನ ದಂಡೆ, ಅಕ್ಷತೆ ಅರಿಷಿಣ ಕುಂಕುಮವ ಬೆಳ್ಳಿಯ ತಟ್ಟೆಯಲ್ಲಿಟ್ಟು ಮೂರ್ತಿಯ ಮುಂದೆ ಸರಿಸಿ.

"ಬಾಗಿನ ಭಕ್ತಿ ನಮ್ಮದು, ಸತ್ಯದ ಶಕ್ತಿ ನಿನ್ನದು
ಕೈಯಾರೆ ತಗೊಂಡು ಭಕ್ತರ ಹರಸವ್ವಾ"

- ಎಂದು ಬಾಗಿದ ನಮಸ್ಕಾರವ ಮಾಡಿದ್ದೇ ಬಾಗಿನ ತಟ್ಟೆಯನ್ನು ತಾನು ಮುಟ್ಟುವುದಿಲ್ಲವೆಂಬಂತೆ ತಟ್ಟೆ ದೂರ ಸರಿಯಿತು.

ಮನುಷ್ಯರೇ ಮುದ್ದಾಂ ಸರಿಸಿದಂತೆ ತಟ್ಟೆ ಸರಿದಾಗ ಕುಲಗುರುವಿಗೆ ಸಿರಿಲಕ್ಕಿಯ ಮಾತು ನೆನಪಾಗಿ ಚಂದಮುತ್ತನ್ನ ಮುಂದೆ ಕರೆದು "ನೀನು ಬಾಗಿನವಿಡು ಕಂದಾ" ಎನ್ನುವಷ್ಟರಲ್ಲಿ ಹೆಗಡೆ ಮುಂದೆ ಬಂದು ಚೆನ್ನಮುತ್ತನ್ನ ಕುಲಗುರುವಿನ ಪಾದದ ಮ್ಯಾಕೆ ಚೆಲ್ಲಿ "ಇವನಿಡಲಿ ಗುರುಪಾದವೇ" ಅಂದ. ಕುಲಗುರು ಅಪ್ಪಣೆ ಕೊಡುವ ಮೊದಲೆ ಚೆನ್ನಮುತ್ತ ಬಾಗಿನ ತಟ್ಟೆಯ ತಗೊಂಡು ಯಕ್ಷಿಯ ಮುಂದಿಟ್ಟು ಬಾಗಿದ ನಮಸ್ಕಾರವ ಮಾಡಿ ಕಣ್ಣು ಮುಚ್ಚಿ ನಿಂತುಕೊಂಡ. ಈ ಬಾರಿಯೂ ತಟ್ಟೆ ದೂರ ಸರಿದು ಬಂತು.

ಚೆನ್ನಮುತ್ತ ಮತ್ತು ಹೆಗಡೆಯ ಮುಖ ಕಪ್ಪಿಟ್ಟವು. ಈ ತನಕ ಸುಮ್ಮನಿದ್ದ ಕುಲಗುರು ಈಗ ಚಂದಮುತ್ತನಿಗೆ ಸನ್ನೆ ಮಾಡಿದ.

ಚಂದಮುತ್ತ ನಿನ್ನೆಯ ಘಟಿತವ ನೆನೆದು ಗಡಗಡ ನಡುಗಿದ. ಯಕ್ಷಿಯ ಗ್ಯಾನದಲ್ಲಿ ನೂರೊಂದು ನೆನೆದ. ತಂದೆ ತಾಯಿಯ ನೆನೆದ. ಸುತ್ತೇಳು ಬಳಗವ ನೆನೆದ. ಬೆಟ್ಟದ ಮಾಯಿಯ ನೆನೆದು ಕುಲದೇವರ ಸ್ಮರಿಸಿ ಬಾಗಿನ ತಟ್ಟೆಯ ದೇವಿಯ ಮುಂದಿಟ್ಟು ನಿಂತ. ಕೂಡಿದವರೆಲ್ಲ ನೆತ್ತಿಯ ಮ್ಯಾಲೆ ಕೈಹೊತ್ತು ಭಕ್ತಿಯ ಭಾವದಲ್ಲಿ ನಿಂತಿರುವಾಗ ದೇವಿ ಬಾಗಿನವ ಒಪ್ಪಿಕೊಂಡಳು. ಶಿಲಾಮೂರ್ತಿಗೆ ದಟ್ಟಿ ಉಡಿಸಿ ತಲೆಮ್ಯಾಲೆ ಹೂದಂಡೆಯಿಟ್ಟ. ಎಲ್ಲರಿಗೂ ಭಕ್ತಿಯ ಆವೇಶವಾಗಿ ಬಲಿನೀಡಿ ಕುಣಿದಾಡಿದರು. ಚಂದಮುತ್ತನ್ನ 'ದೈವದ ಪಾದಕ್ಕೆ ಒಪ್ಪಿದ ಶಿಶುಮಗ ನೀನೊಬ್ಬನೇ' ಎಂದು ಕೊಂಡಾಡಿದರು. ನಿತ್ಯದ ಬಾಗಿನಪೂಜೆ ಅವನದೆಂದು ಗೊತ್ತುಮಾಡಿ ಬಿಳಿಯ ಕಂಬಳಿ, ಇಪ್ಪತ್ತು ಮೊಳದ ದಟ್ಟಿ, ಏಳು ಸೇರಡಿಕೆ, ಏಳು ಕಟ್ಟು ವೀಳ್ಯೆದೆಲೆ, ಹಬ್ಬ ಹರಿದಿನಗಳಲ್ಲಿ ಭಕ್ತಾದಿಗಳು ಕೊಟ್ಟ ನೈವೇದ್ಯ ಅವನದೇ ಎಂದು ಹಕ್ಕುಗಳ ನಿರ್ಧರಿಸಿದರು. ಹುಣ್ಣಿವೆ ಅಮಾವಾಸ್ಯೆಗೊಮ್ಮೆ ವ್ರತ, ವರ್ಷಕ್ಕೊಮ್ಮೆ ಮೂರುದಿನದ ಪರಿಸೆ ಮೆರೆಸುವುದೆಂದು ತೀರ್ಮಾನಿಸಿ ಎಲ್ಲರೂ ಹೊಸದೈವದ ಒಕ್ಕಲಾದರು.

## ೧೦. ಕಾಡು ಹಕ್ಕಿಯ ಹಾಡು

ಚಂದಮುತ್ತನ ಬಗ್ಗೆ ಹಟ್ಟಿಯವರಲ್ಲಿ ಪ್ರೀತಿ ಮತ್ತು ಚೆನ್ನಮುತ್ತನಲ್ಲಿ ಅಸೂಯೆ ಹೆಚ್ಚಾದವು. ಇಬ್ಬರೂ ಕುಲಗುರುವಿನಲ್ಲಿ ವಿದ್ಯಾಬುದ್ಧಿ ಕೊಳಲು ಗೀತ ಸಂಗೀತ ಕಲಿತವರು. ಅಸೂಯೆಯಿಂದ ಚೆನ್ನಮುತ್ತನ ಏಕಾಗ್ರತೆ ಮುರಿದು ಮನಸ್ಸು ವಿಕಾರ ಯೋಚನೆಗಳಲ್ಲಿ ಮುಳುಗಿತು. ಗುರುವಿನ ಬಳಿ ಇಬ್ಬರೂ ಸೇರುತ್ತಿದ್ದರು. ಕುಲಗುರು ಒಂದು ತೋರಿಸಿದರೆ ಚಂದಮುತ್ತ ಹತ್ತಾಗಿ ಹುಟ್ಟಿಸಿ ವಿಸ್ತರಿಸಿ ಗುರುವಿಗೇ ಚೋದ್ಯ ಮಾಡುತ್ತಿದ್ದ. "ಇದನ್ನೆಲ್ಲಿ ಕಲಿತೆ?" ಎಂದು ಕುಲಗುರು ಕೇಳಿದರೆ "ನಿನ್ನಲ್ಲಿ" ಎನ್ನುತ್ತಿದ್ದ. "ನಾನು ನಿನಗಿದನ್ನು ಕಲಿಸಲೇ ಇಲ್ಲವಲ್ಲ" ಎಂದರೆ "ಹಾಂಗಿದ್ದರೆ ನೀನೇ ಬಲ್ಲೆ ಗುರುಪಾದವೇ" ಎಂದು ಪಾದ ಮುಟ್ಟುತ್ತಿದ್ದ. ಕುಲಗುರುವಿಗಿದರಿಂದ ಇನ್ನಷ್ಟು ಆನಂದ ಆಶ್ಚರ್ಯ ಆಗುತ್ತಿತ್ತು.

ಚಂದಮುತ್ತ ಕೊಳಲು ನುಡಿಸುತ್ತಿದ್ದರೆ ಕುಲಗುರು ಮೈಮರೆಯುತ್ತಿದ್ದ. ಅಕ್ಕಪಕ್ಕ ಇದ್ದವರು ನಿಂತವರು ನಿಂತುಕೊಂಡೇ ಕೂತವರು ಕೂತುಕೊಂಡೇ ಮೈಮರೆಯುತ್ತಿದ್ದರು. ಹಾಗೆ ಮೈಮರೆಯುತ್ತಿದ್ದಾಗ ತಮಗೆ ಯಾವುದೋ ಸುಖದ ಸೀಮೆಯಲ್ಲಿ ಸಂಚರಿಸಿದಂತಾಗುತ್ತಿತ್ತು. ತಮಗೆ ಅಪರಿಚಿತವಾದ ಅನೇಕ ಅಸ್ತಿತ್ವಗಳ ಸಖತನ ಸಿಕ್ಕಹಾಗೆ ಅನಿಸುತ್ತಿತ್ತು. ಆತನ ಸಂಗೀತ ಮುಗಿದ ಮ್ಯಾಲೆ ಈ ಲೋಕ ಬದುಕೋದಕ್ಕೆ ಮೊದಲಿಗಿಂತ ಚೆನ್ನಾಗಿದೆಯೆಂದು ಅನಿಸುತ್ತಿತ್ತು.

ಈಗ ಚಂದಮುತ್ತ ದನಕಾವಲಿಗೆ ಹೋದರೆ ಹೋದ; ಬಿಟ್ಟರೆ ಬಿಟ್ಟ. ಅಬ್ಬೆ ಒತ್ತಾಯ ಮಾಡುತ್ತಿರಲಿಲ್ಲ. ಯಾಕೆಂದರೆ ಬೇರೆ ಹಟ್ಟಿಯಲ್ಲಿದ್ದ ತನ್ನ ತಮ್ಮನನ್ನು ಕರೆದು ದನಕರುಗಳ ಉಸ್ತುವಾರಿಗಿಟ್ಟುಕೊಂಡಳು. ದೈವದ ಕೃಪೆ ತನ್ನ ಮಗನ ಮೇಲಾದದ್ದಕ್ಕೆ ಆನಂದವಾಗಿತ್ತು. ಆತಂಕವೂ ಆಗಿತ್ತು.

ಚಂದಮುತ್ತ ದಿನಾ ಬೆಳಿಗ್ಗೆ ಕೋಳಿಯ ಕೂಗಿಗೆದ್ದು, ತಣ್ಣೀರು ಮಿಂದು, ಮಡಿಯುಟ್ಟು ಬಾಗಿನ ತಗೊಂಡು ದೇವಾಲಯಕ್ಕೆ ಹೋಗುತ್ತಿದ್ದ. ಪಾತಾಳಗಂಗೆಯ ಕುಂಕುಮನೀರಿನಿಂದ ವಿಗ್ರಹಕ್ಕೆ ಸ್ನಾನ ಮಾಡಿಸಿ ದೈವದ ಎಡಬದಿಗೆ ಮೊಗ್ಗುಸಂಪಿಗೆ, ಬಲಬದಿಗೆ ಎಳೆ ಹಿಂಗಾರಿಟ್ಟು, ಮುಂದೆ ಮಡಿ ಬಾಗಿನವನಿಟ್ಟು ಹೊರಬಂದು ಬಾಗಿಲು ಮುಂದೆ ಮಾಡಿ, ದೈವದ ಕಡೆ ಬೆನ್ನು ತಿರುಗಿಸಿ ನಿಂತುಕೊಳ್ಳುತ್ತಿದ್ದ. ಸ್ವಲ್ಪ ಸಮಯವಾಗುತ್ತಲೂ ಬಾಗಿಲು ತಂತಾನೆ ತೆರೆದು ನಿನ್ನೆಯ ಮೈಲಿಗೆಬಟ್ಟೆ ಹೊರಕ್ಕೆ ಬೀಳುತ್ತಿತ್ತು. ಇಂದು ಕೊಟ್ಟ ಮಡಿಬಟ್ಟೆ ವಿಗ್ರಹದ ಮೈಮ್ಯಾಲಿರುತ್ತಿತ್ತು. ಚಂದಮುತ್ತ ದೈವಕ್ಕೆ ಕಳ್ಳಿನ ನೊರೆ, ಈಚಲರುಚಿಯರ್ಪಿಸಿ, ಬಾಗಿದ ನಮಸ್ಕಾರವ ಮಾಡುತ್ತಿದ್ದ.

ಚಂದಮುತ್ತನಿಗೆ ದಿನಾ ಆಗಬಾರದ ಅನುಭವಗಳಾಗುತ್ತಿದ್ದವು. ಶಿಲಾಮೂರ್ತಿಯ ಸಮೀಪ ಇದ್ದಾಗ ಇಡೀ ದಿನ ದಿವ್ಯ ಉದ್ರೇಕದ ಚಿಲುಮೆಯಲ್ಲಿ ಇರುತ್ತಿದ್ದ.

ಒಂದು ದಿನ ದೈವದ ಪೂಜೆ ಮುಗಿಸಿ ಹೊರಬಂದಾಗ ಅಂಗಳದಲ್ಲಿ ಶೃಂಗಾರ ಹೂದೋಟ ಬೆಳೆಯಬೇಕೆಂದು ಮಲ್ಲಿಗೆ ಬಳ್ಳಿಯ ನೆಟ್ಟ; ನೆಟ್ಟ ಮರುದಿನವೇ ಬಳ್ಳಿ ಚಿಗುರಿ ನಳನಳಿಸಿ ಬೆಳೆಯಿತು. ಮಾರನೇ ದಿನ ಮೊಗ್ಗು ಮೂಡಿ ಸುತ್ತ ಸೀಮೆಯ ತುಂಬ ಪರಿಮಳದ ಗಾಳಿ ಘಮಘಮಿಸಿ ಚಂದಮುತ್ತನಿಗೆ ಆನಂದದ ದಿಗಿಲಾಯಿತು. ತಕ್ಷಣ ಕಂಬಳಿಯ ಸೆರಗಿನಲ್ಲಿ ಕಣ್ಣು ಕೋರೈಸುವ ತಾರೆಯಂಥ ಮಲ್ಲಿಗೆ ಮೊಗ್ಗು ಹರಿದು ಅವಸರದಲ್ಲಿ ಪೋಣಿಸಿ ಸರ ಮಾಡಿದ. ಒಡನೆ ಗುಡಿಯೊಳಕ್ಕೋಡಿ ವಿಗ್ರಹದ ಎದುರಿಗೆ ನಿಂತು ನೋಡಿ ತಗುಬಗೆಗೊಂಡ -

ಮಾಟಗಾರ್ತಿ ಯಕ್ಷಿ, ಮಾಯಕಾರ್ತಿ ಯಕ್ಷಿ
ತಂತ್ರಗಾರ್ತಿ ಯಕ್ಷಿ, ಮಂತ್ರಗಾರ್ತಿ ಯಕ್ಷಿ
ಚಿಕ್ಕವಳು ಯಕ್ಷಿ, ಎಳೆಬೈತಲೆಯ
ಸುದ್ದ ಸುಳಿಯೋಳು ಯಕ್ಷಿ!
ಇರುಳಿನ ಹಾಗೆ ಸುರಳಿಗೂದಲ
ಕರಚೆಲುವೆ ಯಕ್ಷಿ!
ಅವಳೊಂದು ಕಣ್ಣಿನ ಭಾವ ನೋಡಿದರೆ
ತುಪ್ಪದ ಜೋಡಿ ದೀವಿಗೆಯಂತೆ.
ಅವಳೊಂದು ನೀಳ ಮೂಗಿನ ಭಾವ ನೋಡಿದರೆ
ಸಂಪಿಗೆ ಎಸಳಂತೆ.
ಅವಳೊಂದು ಬಾಯ ಭಾವ ನೋಡಿದರೆ
ಬೆಳ್ದಿಂಗಳ ನಗೆ ಸುರಿಸುತ್ತ
ಒಲುಮೆಯ ಚೆಲುಮೆ ಚಿಮ್ಮುತ್ತ
ಇನ್ನೇನು ಕುಣಿಯಲಿರುವ ನವಿಲಂತೆ
ನಿಂತ ಮೂರ್ತಿಯ ನೋಡಿ

ಚಂದಮುತ್ತನಿಗೆ ಮೆಚ್ಚಾಗಿ
ಕೈ ಮೈ ಮನಕ್ಕೆ ಮೋಹದ ಹುಚ್ಚಡರಿ
ಶಿಲಾಮೂರ್ತಿಯ ತುರುಬಿನಲ್ಲಿ ಮಲ್ಲಿಗೆ ಮೊಗ್ಗಿನಸರ ತುರುಬಿದ.
ದಳದಳ ಅರಳಿ ಹೂವಾದವು ಮುಡಿಗೇರಿದ ಮೊಗ್ಗು!
ಅಂದಕ್ಕೊಂದು ಮೊಗ್ಗು ಚಂದಕ್ಕೊಂದು ಮೊಗ್ಗು ಏರಿಸಿದ.
ಕಂಡಹಾಗೆ ಕಾಣಿಸದ ಹಾಗೆ ಮೂರ್ತಿಯ ಕೆನ್ನೆಯ ಸ್ಪರ್ಶಿಸಿದ.
ಶಿವ ಶಿವಾ! ಕೆನ್ನೆ ಕತ್ತಿನ ಮ್ಯಾಲೆ
ಯಾರದೋ ಉದ್ರೇಕದ ಉಸಿರಾಟ ತಾಗಿತು!
ಮೈಯಲ್ಲಿ ಮಿಂಚಿನ ಹೊಳೆ ಹರಿದು
ಸೊಂಟದ ಕೊಳಲು ಕಿತ್ತು ತುಟಿಗಿಟ್ಟುದೇ ತಡ,

ಯಾರೋ ಕಾಡಹಕ್ಕಿಯ ಹಾಡುಗಳ ಹೆಕ್ಕಿ
ಹುಡುಗನ ಮ್ಯಾಲೆ ಚೆಲ್ಲಿ ಕಿಲಕಿಲ ನಕ್ಕರು.
ಗಾಳಿಯಲ್ಲಿ ತೇಲಾಡುವ ಹಾಡುಗಳ
ಗಕ್ಕನೆ ಕೊಳಲುಲಿಯಲ್ಲಿ ಹಿಡಿದು ನುಡಿಸುತ್ತ
ಹಾಡು ತೋರಿದ ತಾಳ ಅನುಸರಿಸಿ
ಕುಣಿಯತೊಡಗಿದ.

ರಾಗಗಳಿಗೆ ಸರಾಗ ಒಲಿದ ಯಕ್ಷಿ
ಕಲ್ಲಿನ ಬಂಧನದಿಂದ ಛಟ್ಟನೆ ಬಿಡುಗಡೆ ಹೊಂದಿ
ಗಡಬಡಿಸಿ ಉಟ್ಟ ಮಡಿಬಟ್ಟೆಯ ತೀಡಿಕೊಂಡಳು.

ಅಂಗೈಯ ಕನ್ನಡಿ ಮಾಡಿ ನೋಡಿಕೊಂಡು
ಕರುಳು ತಿದ್ದಿಕೊಂಡಳು.
ಸೋರ್ಮುಡಿಯ ಹೂವಿನ ಸರವ
ಮತ್ತೆ ಮುಟ್ಟಿ ನೋಡುತ
ಕಣ್ಣನಲ್ಲಿ ದೀಪವುರಿದು ಬೆಳಕಿನಲ್ಲಿ ತೇಲುತ
ಸಡಗರಿಸಿದಳು.
ಚಂದದ ಹುಡುಗ ಚಂದಮುತ್ತ ಕಲ್ಲುಮುಳ್ಳೆನ್ನದೆ ಕುಣಿಯುತ್ತಿದ್ದ.
ರೂಪುರೇಖೆ ಸುದ್ದಳ್ಳ ಚಂದಮುತ್ತ ಮರಡಿ ಮಾಳ ಅನ್ನದೆ ಹೆಜ್ಜೆ ಹಾಕುತ್ತಿದ್ದ.

ಹಾಡಿ ಅಲೆ ಅಲೆಯಾಗಿ ನುಗ್ಗಿ ಯಕ್ಷಿಯ ತೇಲಿಸಿದಾಗ
ತೂಕ ತಪ್ಪಿದಂತಾಗಿ ಸಮತೂಕ ಸರಿಪಡಿಸಿಕೊಂಡಳು.
ಕ್ಷಣಕ್ಷಣಕೆ ಹುಟ್ಟುವ ಹೊಂದುವ ಬೆಳೆಯುವ
ಏನಿದೇನೇ ತಾಯಿ ಈ ಅನುಭವ!

- ಎನುತ ನವಿಲಿನ ಹೆಜ್ಜೆ ಹಾಕಿದಳು. ಚಿಗುರು ಪಾದದ ಯಕ್ಷೀ ಕಲ್ಲೊರಟು ಮಣ್ಣೊರಟು ಕುಂಕುಮ ಕಾಲಿಗೆ ತಾಕಿ ನೋವಾಗಿ ಹಾ ಎಂದು ನರಳಿ ಅಸಹಾಯಕಳಾಗಿ ಹೇಳಿದಳು ಎಳೆಯ ಪಾದದ ಯಕ್ಷಿ:

ಅಯ್ಯಾ ಆತುರದವನೆ, ಅಯ್ಯಾ ಕಾತರದವನೆ
ಹೂಬಿಟ್ಟ ಕಬ್ಬಿನ ಜಿಲ್ಲೆಯಂಥವನೆ
ಚೆಲುವನೆ, ಎಲ್ಲರೊಳಧಿಕನೆ
ನೆಲದಲ್ಲಿ ಕಾಲೂರಿ ಗೊತ್ತಿರದವಳು
ನಾ ಹ್ಯಾಗೆ ಕುಣಿಯಲಿ?
ಕುಣಿಯದೆ ಹ್ಯಾಗಿರಲಿ?
ನಿಲ್ಲಿಸೋ ನಿಲ್ಲಿಸಯ್ಯಾ

ಇದ್ಯಾವುದನ್ನೂ ಕೇಳಿಸಿಕೊಳ್ಳದೆ ಹಾಡಿನಲ್ಲಿ ತನ್ಮಯನಾಗಿದ್ದ, ಕುಣಿದು ಕುಣಿದು ಅಂಗಜಲದಲ್ಲಿ ಅದ್ದಿಹೋಗಿದ್ದ ಚಂದಮುತ್ತನ ಚೆಲ್ವಿಕೆಯ ಚೋದ್ಯವ ನೋಡಿ ಸೋಜಿಗಗೊಂಡಳು.

ಅವ್ ನೋಡ ಕೊಳಲೂದಿ ಕುಣಿಯುವ ಹುಡುಗ
ಹುಚ್ಚು ಕೆರಳಿಸತಾನ ಅಂಗಾಂಗದೊಳಗ
ಹೆಗಲಿನ ಗೊಂಗಡಿ ನೆತ್ತೀತುರಾಯಿ
ಗರಿಬಿಚ್ಚಿ ಕುಣಿಧಾಂಗ ಶ್ರಾವಣದ ಸೋಗಿ ||

ಕಲ್ಲೆಂದು ಮೆಲ್ಲಗೆ ಸೊಲ್ಲಿಲ್ಲದೆ ಬಂದಾ
ಎಡದ ಕೈಲಿ ಎನ್ನ ಸೋರ್ಮುಡಿಯ ಹಿಡಿದಾ
ಬಲಗೈಲಿ ಮುಡಿಗೆ ಮಲ್ಲಿಗೆ ಸುತ್ತಿ ನಲಿದಾ
ಮುಂಗುರುಳು ನ್ಯಾವರಿಸಿ ಕಣ್ಣು ಹಬ್ಬಾದ ||

ತಡೆಯಲಾಗಲೆ ಇಲ್ಲ ನಮ್ಮ ಮೈ ನವಿರಾ
ಮೈತುಂಬ ಸಳಸಳ ತುಳುಕ್ಯಾವ ಬೆವರಾ
ಮೈತುಂಬ ಸಳಸಳ ತುಳುಕ್ಯಾವ ಬೆವರಾ
ಹುಟ್ಟಿ ಸ್ವಾಮಿಯೆ ನಿನ್ನ ಕಟ್ಟಳೆಯ ಹೊರತಾ
ಅರೆಗಳಿಗೆ ಇರಲಾರೆ ನಾ ನಿನ್ನ ಮರೆತಾ ||

ನಿಲ್ಲೊ ಗೊಲ್ಲರ ಹುಡುಗ ಕೊಳಲೂದಬ್ಯಾಡ
ನಮ್ಮ ರಾಗದ ಹುಚ್ಚ ಕೆರಳಿಸಬ್ಯಾಡ
ಮಂದಿ ಏನಂದಾರು ನಾ ಹಿಂದೆ ಬರಲು
ವಾರೀಗಿ ದೇವರು ಕೋಪಗೊಂಡಾರು ||

ತಿಳಿಯಬಲ್ಲವರೆಲ್ಲ ತಿಳಿಹೇಳಿರವ್ವಾ
ಸುರರ ಜಾತಿಗೆ ನಾನು ಹೊರತಾದೆನವ್ವಾ
ನಾವು ಹಂಗಿಗರವ್ವ ಚೆಲುವನ ಕಲೆಗೆ
ಕಲೆಯೊಂದಿಗೇ ಇವನ ಮುಗ್ಧ ಒಲುಮೆಗೆ ||

ಅಷ್ಟರಲ್ಲಿ ಬೇರೆ ಯಾರದೋ ದನಿ ಕೇಳಿಸಿ ಯಕ್ಷಿ ಹಿಂಜರಿದು ಮತ್ತೆ ಶಿಲಾಮೂರ್ತಿಯಾಗಿ ಶಿಲೆಯಲ್ಲಿ ಅಡಕಗೊಂಡಳು.

# ೧೧. ಹಂಸ ಹಂಸಿಯರ ಜೋಡಿ

ಇಂತೀ ರೀತಿ ಮಾಯಕಾರ್ತಿ ಯಕ್ಷಿ ಚಂದಮುತ್ತನಿಗೊಲಿದು ಅವನ ಭಯಭಕ್ತಿಯಲಿ ಮುಳುಗೆದ್ದು ವಾಲಾಡುತ್ತ ಇರುವಲ್ಲಿ,

ಇತ್ತ ಚೆನ್ನಮುತ್ತನ ಹೃದಯದಲ್ಲಿ ಹಗೆಯ ಹೊಗೆಯಾಡತೊಡಗಿದವು. ಯಾವಳೋ ಮಾಯದ ಯಕ್ಷಿ ಅವನಿಗೆ ಒಲಿದಿರುವಳೆಂದು, ದಿನಾ ಮೈಲಿಗೆ ಕಳಚಿ ಇವ ಕೊಟ್ಟ ಮಡಿಯನುಡುವಳೆಂದು, ದಿನಕೊಂದು ವಿದ್ಯ ಸಿದ್ಧಿಗಳ ಕೊಡುವಳೆಂದು ಕತೆಗಳ ಕೇಳಿ ಅಸೂಯೆಯಿಂದ ಕಂಗಾಲಾಗಿ ಹೋದ.

ಚಂದಮುತ್ತನ ಬಗ್ಗೆ ನಿಂದಕದ ಮಾತಾಡಿ
ಆನಂದಪಟ್ಟ.
ಹುಸಿಕಳಂಕಗಳ ಹುಟ್ಟಿಸಿ
ಹಾದಿಬೀದಿಗಳಲ್ಲಿ ಅತಿರಂಜಿಸಿ ಹೇಳಿದ.
ಚೆನ್ನಮುತ್ತನ ದುರ್ಗಣಗಳ ಸಾವಿರ ಸಾರಿ
ಜಪಿಸಿ ಸೇಡಿನ ಕಿಡಿಯಾದಲ್ಲಿ
ಯಕ್ಷಿಯ ಮೊದಲ ಪರಿಸೆ ಬಂತು ….

ನಮಗೆ ಚೆನ್ನಮುತ್ತನ್ನ ಕಂಡರಾಗುವುದಿಲ್ಲ. ಯಾಕೆಂದರೆ ಚೆನ್ನಮುತ್ತನಿಗೆ ಕನಸು ಕಂಡರಾಗುವುದಿಲ್ಲ. ಕತೆಯಲ್ಲಿ ಕಾಲಿಟ್ಟವನಾದ್ದರಿಂದ ಬಿಡುವಂತಿಲ್ಲ. ಇಂತಾಗಿ ನಾವು ಕಂಡ ಸೋಜಿಗದ ಸಂಗತಿಯೊಂದನ್ನು ಹೇಳಿ ಅವನನ್ನು ಕತೆಯಲ್ಲಿ ಕರೆದುಕೊಳ್ಳುತ್ತೇವೆ.

ತಾಯಿಯಿಲ್ಲದ ಒಬ್ಬನೆ ಮಗನ್ನ ಹೆಗಡೆ ಕೊಂಡಾಟದಲ್ಲಿ ಬೆಳೆಸಿದನಾಗಿ ಸಿರಿಸಂಪತ್ತು ಅದ್ದೂರಿ ದೊರೆತನದ ಸುಖಸಾಗರದಲ್ಲಿ ಬಾಳಾಡ್ತ ಇದ್ದ ಚೆನ್ನಮುತ್ತ. ಎತ್ತರವಾದ ಆಳು. ವ್ಯಾಯಾಮ ಮಾಡಿ ಕುಸ್ತೀ ಹಿಡಿದು ಗಟ್ಟಿಮುಟ್ಟಾಗಿದ್ದ ಅವನ ದೇಹ ಮನಸ್ಸುಗಳಲ್ಲಿ ಮೃದುವಾದ ಭಾಗಗಳೇ ಇರಲಿಲ್ಲ. ಬಹಳ ಕಾಲ ದೇಹವನ್ನ ಸೂರ್ಯನ ಸನ್ನಿಧಿಯಲ್ಲಿಟ್ಟಿದ್ದರಿಂದ ಅದು ಸುಟ್ಟ ಇಟ್ಟಿಗೆಯಂತಾಗಿತ್ತು. ಸರಿಕರೊಂದಿಗೆ ಕೂಡ ಸರಸವಾಡುವವನಲ್ಲ. ಚಿನ್ನಿಕೋಲು ಗೋಲಿಗುಂಡು ಲಗ್ಗೆ ಚೆಂಡಿನಲ್ಲಿ ಕೂಡ ತಾನೇ ಗೆಲ್ಲಬೇಕೆಂಬಾತ. ಬರಿ ಒಂದು ಹುಬ್ಬಿನ ಗಂಟಿನಿಂದ ಎದುರು ನಿಂತವನ ಬಾಯಿ ಮುಚ್ಚಬಲ್ಲವನಾಗಿದ್ದ. ಇನ್ನೇನು, ರಾತ್ರಿ ಅವನ ಕಣ್ಣು ಕಾಣುತ್ತಿರಲಿಲ್ಲ. ಇರುಳ ಸತ್ಯಗಳ ಕಾಣುವ ವಿವೇಕ ಮತ್ತು ತಾಳ್ಮೆ ಬಿಸಿಲಬೆಡಗಿನವರಲ್ಲಿ ಇರಲಿಲ್ಲವಾಗಿ ಇದೊಂದು ಸೋಜಿಗದ ಮಾತಲ್ಲ.

ಇಂತಿರಲು ಒಂದು ದಿನ ಮಡುವಿನಾಚೆ ದಡದಲ್ಲಿ ನಸುಕಿನಲ್ಲಿ ಯಕ್ಷಿಯ ಪೂಜೆ ಮುಗಿಸಿ ಚಂದಮುತ್ತ ಅದೇನು ಮೂಡು ಬಂತೋ ಕೊಳಲು ನುಡಿಸುತ್ತಿದ್ದ. ನಸುಕಿನ ಮಂಜು ಮಡುವಿನ ಮ್ಯಾಲೆ ಉಗಿಯ ಹಾಗಾಡುತ್ತಿತ್ತು. ಸವಿಗೊರಳ ಹಕ್ಕಿಗಳು ಬೆಳಗಿನ ಚಿಲಿಪಿಲಿ ನಿಲ್ಲಿಸಿ ಕೊಳಲು ಆಲಿಸುತ್ತಿದ್ದವು. ಎಳೆಯ ಹಂಸಹಂಸಿಯರ ಜೋಡಿಯೊಂದು ಮಡುವಿನ ಕನಸಿನ ಹಾಗೆ ಅರೆಗಣ್ಣಾಗಿ ತೇಲುತ್ತ ಕೊಳಲಾಲಿಸುತ್ತ ಮೈಮರೆತಿದ್ದವು. ನಾವು ಇಬ್ಬನಿಯಿಂದ ಥಳಥಳ ಹೊಳೆವ ಹಸರಿನಲ್ಲಿ ಕಾಲೂರಿ ಸುತ್ತಲಿನ ಶೀತಲ ಶಿವಶಾಂತಿಯನ್ನು ತೀಡಿ ಬರುವ ಕೊಳಲಿಗೆ ಶಬ್ಧಮುಗ್ಧರಾಗಿ ನಿಂತಿದ್ದೆವು. ಅಷ್ಟರಲ್ಲಿ ಯಾರೋ ನೀರಲ್ಲಿ ಜಿಗಿದ ಸದ್ದಾಗಿ ಆತಂಕವಾಯಿತು. ಯಾಕೆಂದರೆ ಹಂಸದ ಜೋಡಿ ಮನಸ್ಸು ಕದಡುವುದು ನಮಗೆ ಬೇಕಿರಲಿಲ್ಲ. ಆದರೆ ನಮ್ಮ ಊಹೆ ಮೀರಿ ಹಂಸಹಂಸಿಯರು ಕೊಳಲ ಹಾಡಿನಲ್ಲಿ ಸುಖರಂಜಿತರಾಗಿ ತನ್ಮಯರಾಗಿದ್ದರು. ನೀರಿನ ಸದ್ದಿನಿಂದ ಅವರ ಸಮಾಧಿ ಭಂಗವಾಗಲೇ ಇಲ್ಲ.

ನೀರಿಗಿಳಿದವನು ಚೆನ್ನಮುತ್ತ, ಕೊಳಲುಲಿ ಚಂದಮುತ್ತನೆಂದು ಗೊತ್ತಾಗಿ ಅಸೂಯೆಯಿಂದ ಸುಖವಂಚಿತನಾದ. ನೀರಿನಲ್ಲಿದ್ದರೂ ಮಾರಾಯನ ಮುಖ ಕಪ್ಪಿಟ್ಟಿತು. ಜಳಕವ ಮಾಡಿ ಅವಸರದಲ್ಲೆದ್ದು ಮೈಲಿಗೆ ಕಳೆದು ಲಂಗೋಟಿ ಹಾಕಿದ. ಜಡೆಕಟ್ಟಿ ಅಂಚಿನ ಮಡಿಯುಟ್ಟ, ಕೊಳಲದನಿ ತಡೆಯಿಲ್ಲದೆ ಹರಿದು ಬರುತ್ತಿರುವಾಗ ಹಂಸ ಜೋಡಿಯ ತನ್ಮಯತೆ ನೋಡಿ ಕಣ್ಣಿಗೆ ಖಾರ ಉಗ್ಗಿದಂತಾಯ್ತು ಅವನಿಗೆ.

ಸುಡಗಾಡ ಬೆಂಕಿಯ ಥರ ಕಣ್ಣುರಿದವು,
ರವರುದ್ರಗೋಪದಲ್ಲಿ ಕೊತಕೊತ ಕುದ್ದು
ಬುದ್ಧಿತಪ್ಪಿ ಅನುಚಿತವ ನೆನೆದು
ಬೆಣಚುಗಲ್ಲು ತಗೊಂಡು
ಸದ್ದಿಲ್ಲದೆ ಹೊಂಚಿಹೊಂಚಿ ಹೆಜ್ಜೆಯ ಹಾಕಿ ಸಂಚರಿಸಿ
ಆಯಕಟ್ಟಿನ ಜಾಗದಲ್ಲಿ ನಿಂತು, ಗುರಿಹಿಡಿದು
ತೇಲುವ ಜೋಡಿಗೆ ಎಸೆದುಬಿಟ್ಟ ಶಿವನೆ!

ಶಿವ ಶಿವಾ
ಗಂಡು ಹಂಸದ ಕತ್ತಿನ ಕಳಸ ಮುರಿದು
ಒದರಲೂ ಆಗದೆ ಒದ್ದಾಡಿ ಪಟಪಟ ರೆಕ್ಕೆಯ ಬಡಿದು
ನೀರಲ್ಲಿ ಮುಳಿಗಿತು!
ಕಂಪಿತೆ ಹಂಸಿ ಏನೆಂದು ತಿಳಿಯದೆ
ಪ್ರಿಯಕರ ಮುಳುಗಿದುದ ನೋಡಿ
ಕಿಟಾರ್ನೆ ಕಿರಿಚಿದಳು.
ತರುಮರಗಳಲ್ಲಿದ್ದ ಹಕ್ಕಿಗಳು ಕಿತ್ತಾಡಿ
ಅಪರಿಚಿತ ವಿಕಾರ ಸದ್ದು ಮಾಡಿ
ಕಿರಿಚಿ ಚೀತ್ಕಾರ ಮಾಡಿದವು.
ಉಗುರಿನಿಂದ
ತಂತಾವೇ ಪರಚಿಕೊಂಡು
ರೆಕ್ಕೆಗಳಿಂದ ತಿವಿದಾಡಿದವು.
ಗಾಬರಿಯಲಿ ಹಂಸಿ
ಅಗಲವಾಗಿ ಕೆಂಗಣ್ಣು ತೆರೆದು ಚೆನ್ನಮುತ್ತನ
ನೋಡಿ, ನೋಟಗಳಿಂದ ಇರಿದು
ಅವನಿದ್ದ ಕಡೆಗೆ
ಬಿಟ್ಟ ಬಾಣದ ಹಾಗೆ
ಹಾರಿದಳು.
ಭಯದಲ್ಲಿ ಚೆನ್ನಮುತ್ತ ಸರಸರ್ನೆ ಮರೆಯಾದ.
ನಮ್ಮ ಕರುಳಿಗೆ ಗಾಯವಾಗಿ
ಹಂಸಿಯ ಅಲಾಪ ನೋಡಲಾರದೆ

ಚೆನ್ನಮುತ್ತನ, ಅವನ ಹುಚ್ಚಿನ ಸಮೇತ
ಅಲ್ಲೇ ಬಿಟ್ಟು ಬಂದೆವು ಶಿವಾ.

ಆಮೇಲೆ ಹಂಸಿ ಹಾರಲಿಲ್ಲ, ಕೂಗಲಿಲ್ಲ. ಬೇರೆ ಹಕ್ಕಿಗಳೊಂದಿಗೆ ಬೆರೆಯಲಿಲ್ಲ. ತಿನ್ನಲಿಲ್ಲ. ನೀರು ಮುಟ್ಟಲಿಲ್ಲ, ಪ್ರಿಯಕರನ ಕಗ್ಗೊಲೆಯಾದ ದಡದ ಬಳಿ ಹುಣ್ಣಿವೆ ನಂತರ ಚಂದ್ರನಂತೆ ದಿನಾ ಕ್ಷೀಣಿಸುತ ನಿಂತಳು. ದುಃಖ ತಡೆಯದೆ ಒಮ್ಮೆ ನಾವೇ ಸಮಾಧಾನ ಹೇಳಹೋದಾಗ ಅವಳು ಅಂಗಲಾಚಿದಳು:

“ದಯಮಾಡಿ ಒಮ್ಮೆ, ಒಂದೇ ಬಾರಿ ಅವನನ್ನ ಇಲ್ಲಿಗೆ ಕರೆದು ತರುತ್ತೀರಾ? ಅವನಿಗೆ ನಾನೇನೂ ಮಾಡುವುದಿಲ್ಲವೆಂದು ಭಾಷೆ ಕೊಡುತ್ತೇನೆ”.

– ಇಂತೆಂಬ ನುಡಿ ಕೇಳಿ ಒಪ್ಪಿಕೊಂಡು ಬಂದೆವು.

ರಾತ್ರಿ ಚೆನ್ನಮುತ್ತನ ಕನಸಿನಲ್ಲಿ ಹಂಸಿಯ ತೋರಿಸಿ “ಅವಳದ್ದಲ್ಲಿಗೆ ಒಮ್ಮೆ ಹೋಗಿ ಬಾ” ಎಂಬ ಸಂದೇಶ ಕೊಟ್ಟೆವು. ತಕ್ಷಣ ಎದ್ದು ಕೂತ. ಹೆದರಿದ್ದ. ಜಲಜಲ ಬೆವರೊರಿಸಿಕೊಂಡು ಮತ್ತೆ ಮಲಗಿದ. ಆದರೆ ಬೆಳಿಗ್ಗೆ ಬರಲಿಲ್ಲ.

ಮಾರನೇ ರಾತ್ರಿ ಮತ್ತೆ ಅದೇ ಕನಸು ತೋರಿದೆವು. ಈಗಲೂ ಹೆದರಿ ಎದ್ದು ಕೂತ. ಆದರೆ ಬರಲಿಲ್ಲ. ಹೀಗೆ ನಾಕೈದು ದಿನ ತೋರಿದರೂ ಬರಲಿಲ್ಲ. ಈಗ ಒಂದೆ ಕನಸನ್ನ. ಒಂದೇ ರಾತ್ರಿ ಅನೇಕ ಬಾರಿ ತೋರಿಸಿದೆವು. ಬರಬರುತ್ತ ಕಣ್ಣು ಮುಚ್ಚಿದಾಗೆಲ್ಲ ತೋರಿಸಿದೆವು. ಇನ್ನು ಈ ಕನಸಿಂದ ಮುಕ್ತಿಯಿಲ್ಲವೆಂದು ಗೊತ್ತಾಗಿ ತುಂಬಿದ ಸೋಮವಾರ ಬೆಳಿಗ್ಗೆ ನಡಿಯಲಿ ಚಿಕ್ಕ ಚೂರಿ ಸಿಕ್ಕಿಸಿಕೊಂಡು, ಕೈಯಲ್ಲಿ ಕಕ್ಕೆ ದೊಣ್ಣೆ ಹಿಡಕೊಂಡು ಬಂದ ನೋಡು –

ಶಿವ ಶಿವಾ –

ಅಷ್ಟು ದೂರದಿಂದಲೇ ಹಂಸಿ ಅವನ ಗುರುತಿಸಿ ಅವಳ ಕಣ್ಣು ಫಳಫಳ ಹೊಳೆದವು. ಚೆನ್ನಮುತ್ತ ಕೋಲು ಗಟ್ಟಿಯಾಗಿ ಹಿಡಿದುಕೊಂಡು ನಿಂತ. ಹಂಸಿ ಕಾಲೂರಿ ಎದುರೆದುರೇ ನಡೆಯುತ್ತ ಬಂದು ಅವನೆದುರು ಸಮೀಪದಲ್ಲಿ ನಿಂತಳು.

“ನನ್ನ ಪ್ರಿಯಕರನ ಪ್ರಾಣ ತಗೊಂಡೆಯಲ್ಲವೆ?
ನನ್ನ ಪ್ರಾಣವನ್ನೂ ತಗೋ ನನ್ನಪ್ಪಾ”

– ಎಂದು ಮನುಷ್ಯರಂತೆ ಮಾತಾಡಿ, ದೇಹ ಹಿಂಭಾಗದ ಮ್ಯಾಲೆ ಕುಂತು ಎರಡೂ ಕಾಲುಗುರುಗಳನ್ನು ಜೋರಿನಿಂದ ಎದೆಯಲ್ಲಿ ತುರುಕಿ ಎದೆಯನ್ನ ಹರಿದುಕೊಂಡುಬಿಟ್ಟಳು ಶಿವನೆ! ಶಿವ ಶಿವ ಅವಳ ಶುಭ್ರ ಎದೆ ಹರಿದು ನೆತ್ತರು ಚೆಲ್ಲನೆ ಚೆನ್ನಮುತ್ತನ ಮುಖಕ್ಕೆ ಸಿಡಿಯಿತು. ಹಾ ಎಂದು ನೋಡಿದರೆ ಅಷ್ಟರಲ್ಲೇ ಹಂಸಿಯ ಕತ್ತಿನ ಕಳಸ ಮುರಿದು ಗೋಣು ಚೆಲ್ಲಿ ಸತ್ತಾಗಿತ್ತು. ನಮ್ಮಲ್ಲಿಯ ಕೆಲವರು ದೃಶ್ಯವ ನೋಡಲಾರದೆ ಕಿಟಾರ್ನೆ ಕಿರಿಚಿಕೊಂಡರು. ಎದೆ ಪರಚಿಕೊಂಡರು. ಮುಖಮುಚ್ಚಿಕೊಂಡರು!

ಚೆನ್ನಮುತ್ತನ ಬಗ್ಗೆ ನಮಗೆ ಗೊತ್ತಿದ್ದ ಸಂಗತಿ ಇದು ಮಾತ್ರ. ನಾವಿಂದು ಈ ಕಥೆಯ ಹೇಳಿ ಮುಗಿಸುವುದರೊಳಗಾಗಿ ಯಕ್ಷಿಯ ಪರಿಸೆ ಬಂತು….

# ೧೨. ಬಂತಣ್ಣ ಪರಿಸೆ ಬಂತೊ

ಶಿವಪುರದ ಸಮಸ್ತ ಹಿರಿಕಿರಿಯರು ಮಂದಿಮಾರ್ಬಲ ಸಹಿತ ಮಿಂದು ಮುಡಿಯುಟ್ಟು, ಹಾಡಿಗೂಡುಗಳಲ್ಲಿ ಹಬ್ಬದ ಬೆಳಕಿಟ್ಟು ಕುಲದೇವರ ಪೂಜಿಸಿದರು; ತಂತಮ್ಮ ದನಕರು, ಕುರಿಮೇಕೆ ಮುಂತಾದ ಬದುಕಿನ ಭಾಗ್ಯಗಳನ್ನ ಹೂಹಿಂಗಾರುಗಳಿಂದ ಶೃಂಗರಿಸಿದರು. ಕುಲಗುರು ಮತ್ತು ಹೆಗಡೇನ ಹಿರಿತನದಲ್ಲಿ ಕೊಂಬು, ಕಹಳೆ, ನಗಾರಿ, ನೌಬತ್ತು ಮುಂತಾದ ಯಾವತ್ತು ವಾದ್ಯಂಗಳ ನಡುಸುತ್ತ ಯಕ್ಷಿಯ ಗುಡಿಗೆ ಹೋದರು. ಚಂದಮುತ್ತ ಈ ದಿನ ಅಬ್ಬೆಯ ಆದೇಶದಂತೆ ಮಿಂದು ಲಂಗೋಟಿಗಳಲ್ಲಿ ಮೇಲಾದ ಮುತ್ತಿನ ಗೊಂಡೆ ಜರತಾರಿ ಅಂಚಿನ ಲಂಗೋಟಿಯ ಧರಿಸಿ, ಮುಂಗೈಗೆ ಬೆಳ್ಳಿಯ ಕಡಗ ಇಟ್ಟು ಶೃಂಗಾರವಾಗಿ ಬೆಳ್ಳಿ ಕೊಳಲು ಸೊಂಟಕ್ಕೆ ಸಿಕ್ಕಿಸಿಕೊಂಡು ನಡೆದ. ಚಿನ್ನಮುತ್ತ ಅಂಚಿರುವ ಧೋತ್ರವುಟ್ಟು ಬಂಗಾರದಲ್ಲಿ ಶೃಂಗಾರವಾಗಿ ಮುತ್ತಿನ ಮುದ್ರೆಯಿರುವ ಉಂಗುರವಿಟ್ಟುಕೊಂಡ. ಕೈಗೆ ಚಿನ್ನದ ಕಡೆ ತೋಡೆಯಿಟ್ಟುಕೊಂಡು ಗೆಜ್ಜೆ ಕಟ್ಟಿದ ಪಿಳ್ಳಂಗೋವಿಯ ಹಿಡಿದುಕೊಂಡು ನಡೆದ.

ಯಕ್ಷಿಗುಡಿಯ ಅಂಗಳವ ಸೆಗಣಿ ಸಾರಿಸಿ ಕಬ್ಬಿನ ಕೋಲಿನ ಕಂಬ, ಪಂಚವಳ್ಳಿ ವೀಳ್ಯದೆಲೆಯ ಚಪ್ಪರ ಹಾಕಿ ನಂದಾದೀಪ ಹಚ್ಚಿದರು. ಹಟ್ಟಿಯ ದೇವರು ಬೆಟ್ಟದ ದೇವರು ಹಾಡಿ ಗೂಡಿನ ಸುತ್ತೂ ಸೀಮೆಯ ಸಮಸ್ತ ದೇವದೈವಂಗಳ ಕರೆಸಿ, ಧೂಪ ದೀಪ ಬೆಳಗಿ ಪಾದಕಾಣಿಕೆ ನೀಡಿ ಮರ್ಯಾದೆ ಮಾಡಿದರು.

ಚಂದಮುತ್ತ ಯಕ್ಷಿಯ ವಿಗ್ರಹವ ಮೀಯಿಸಿ ಮಡಿದಟ್ಟಿ ಉಡಿಸಿ, ಬೆಳ್ಳಿ ಬಂಗಾರದಲ್ಲಿ ಶೃಂಗಾರ ಮಾಡಿ, ಕುಂಕುಮವಿಟ್ಟ. ಬಲಬದಿಗೆ ಸಿರಿಸಂಪಿಗೆ, ಎಡಬದಿಗೆ ಎಳೆಹಿಂಗಾರಿಟ್ಟು ಸಾಷ್ಟಾಂಗವೆರಗಿದ. ಗುಡಿ ಬಾಗಿಲಲ್ಲಿ ಕಟ್ಟಿದ್ದ ಹಿಂಡುಕುರಿ ಬಲಿಕೊಟ್ಟು ಬಲಿ ಬಡಿಸಿ ಧೂಪ ದೀಪದಾರತಿಯ ಹೊಗೆ ಎಬ್ಬಿಸಿದರು. ಆಮೇಲೆ ಸರ್ವರೂ ಮುಂದೆ ಬಂದು ಶಕ್ತಿನಾಮಕಳಾದ ಯಕ್ಷಿಗೆ ಮೈಚೆಲ್ಲಿ ನಮಸ್ಕಾರವ ಮಾಡಿ-

ಹಿಂಡುವ ಹಸುಕುರಿ ಕೊಡು
ಮೇಯಿಸುವಷ್ಟು ಕಾಡು ಕೊಡು

ಎಂದು ಬೇಡಿಕೊಂಡರು. ಆಶೀರ್ವಾದ ಪ್ರಸಾದ ಪಡಕೊಂಬಾಗ ಗೋಧೂಳಿ ಲಗ್ನದ ಸಮಯವಾಯಿತು.

ಈಗ ಒಬ್ಬೊಬ್ಬರೇ ಮುಂದೆ ಬಂದು ತಂತಮ್ಮ ಕಲೆ ಕೈಚಳಕ ಚಮತ್ಕಾರಗಳ ತೋರತೊಡಗಿದರು. ಕೋಲಾಟದವರು ಹಾಡು ಹಾಡುತ್ತ ಕೋಲು ಕುಣಿಯುತ್ತ ತೆಂಗಿನ ಮರದಷ್ಟುದ್ದ ಧೂಳೆಬ್ಬಿಸಿದರು:

ಬಂತಣ್ಣ ಪರಿಸೆ ಬಂತೋ
ಮಾಯಕಾರ್ತಿ । ಯಕ್ಷಿಯ ಪರಿಸೆ ಬಂತೊ
ತಾವು ತಾವಿನ ಮಾವು ಚಿಗರ್ಯಾವು । ಗಿಣಿರಾಮ
ಪದಹಾಡಿ ಪರಿಸೆ ಬಂತೋ ॥

ಯಾರಿಗೂ ಶಿವಾಪುರಕ್ಕೆ ಹಿಂದಿರುಗುವ ನೆನಪೇ ಆಗಲೊಲ್ಲದು. ಹಿರಿಯನೊಬ್ಬ "ಈಗ ಕುಲಗುರುವಿನ ಶಿಶುಮಕ್ಕಳು ಕಲಿತವಿದ್ಯೆಯ ಒಂದೆರಡು ವರಸೆ ತೋರಿಸಲಿ ಎಂದ. ಇದಕ್ಕಾಗಿಯೇ ಕಾಯುತ್ತಿದ್ದನೆಂಬಂತೆ ಚಿನ್ನಮುತ್ತ ಸೊಂಟದಲ್ಲಿ ಸಿಕ್ಕಸಿದ್ದ ಚಿನ್ನದ ಗೆಜ್ಜೆಯ ಕೊಳಲು ತೆಗೆದು ನಿಧಾನವಾಗಿ ರಾಗ ಎತ್ತಿ ನುಡಿಸತೊಡಗಿದ. ಸಹಜ ಸಂಚಾರಗಳ ತಕ್ಕ ಸ್ಥಾಯಿಗಳನೆಬ್ಬಿಸಿ, ಕಾಳಜಿಯಿಂದ ನಿಯಂತ್ರಿಸಿ ಆಕಾರಗೊಂಬ ಹಾಗೆ ಮಾಡಿದ. ಜನ ಸಂತೋಷಗೊಂಡು ಹೊಳೆಯುವ ಮಾತುಗಳಿಂದ ಕುಲಗುರುವಿನ ಕೌಶಲ ಹೊಗಳಿ, ಈಗ ಚಂದಮುತ್ತನ ಸರದಿಯೆಂದರು.

ಚಂದಮುತ್ತ ಗುರುಪಾದದ ಕಡೆ ನೋಡಿದ. ಕುಲಗುರುವಿನ ಸನ್ನೆಯಿಂದ ಅಪ್ಪಣೆ ಸಿಕ್ಕುತ್ತಲೂ ನೆತ್ತಿ ಕೇಶಗಳ ಸುತ್ತಿಕಟ್ಟಿ, ಎದ್ದು ಬಂದು ಗುರುಪಾದಕ್ಕೆ ಬಾಗಿ ಸತ್ಯದ ಶಿವದೇವರು, ಹೆತ್ತಯ್ಯ, ಮುತ್ತಯ್ಯರ ನೆನೆದು ಸೊಂಟದ ಬೆಳ್ಳಿಕೊಳಲು ತೆಗೆದು ತುಟಿಗಿಟ್ಟುಕೊಂಡ -

ಮಧುರವಾದ ನಾದಗಳ
ಹದವಾಗಿ ತೆಗೆದು ರಾಗಕ್ಕೆ ಮೊದಲಾದಾಗ
ಮೂಡುಮಲೆಯಲ್ಲಿ ಚಂದ್ರಮೂಡಿ
ಆವರಿಸಿಬಿಟ್ಟಿತು ಎಳೆಬೆಳ್ದಿಂಗಳ ಮಾಯೆ
ಅನಾಯಾಸ.
ಹರುಷದ ಬಳ್ಳಿ ಹಬ್ಬಿತು
ಕೆಳಗೆ ಕ್ಷಿತಿಜದ ತನಕ
ಮ್ಯಾಲೆ ಚಂದ್ರನ ತನಕ.
ಹಾಡು ಅಲೆ ಅಲೆಯಾಗಿ
ಬೆಳ್ತಿಂಗಳಗುಂಟ ತೇಲಿ ತೇಲಿ ಬಂದಾಗ
ಭಾವಪರವಶ ಮಂದಿ ಹಾ ಎಂದರು.

ಚೆನ್ನಮುತ್ತ ಹೊಟ್ಟೆಯುರಿಯಿಂದ ಸುಟ್ಟು ಭಸ್ಮವಾದ. ಇದು ಚಂದಮುತ್ತನ ಗಮನಕ್ಕೆ ಬಂದುದೇ, ಸೇಡು ಆವರಿಸಿಬಿಟ್ಟಿತು. ಪಂತಪೌರುಷಕ್ಕೆ ಬಿದ್ದು ಚೆನ್ನಮುತ್ತ ನುಡಿಸಿದ್ದನ್ನೆಲ್ಲ ತಾನೂ ನುಡಿಸಿ ಅವನ ದೌರ್ಬಲ್ಯಗಳ ಬೆಳಕಿಗೆ ತಂದ.

ಛಲವೇರಿ ಚಾಪಲ್ಯ ಬಲವೇರಿ
ಒಂದಾದ ಮ್ಯಾಲೊಂದು
ರಾಗಂಗಳ ನುಡಿಸಿ
ಜನ ತಲೆಗೊಂದು ಹೊಗಳುವಂತೆ ಮಾಡಿದ.
ಚಂದ್ರನ ಕಿರಣ ಹೆಚ್ಚು ಹೆಚ್ಚು
ಪ್ರಖರವಾಗಿ ಸುಡುತ್ತಿರುವಂತೆ
ಚೆನ್ನಮುತ್ತ ಖಿನ್ನನಾದ.
ಅದು ಕಂಡು ಉತ್ತೇಜಿತವಾಯಿತು
ಚಂದಮುತ್ತನ ಹರ್ಷ

ಇನ್ನೊಂದು ಹೀಗೇ ಮತ್ತೊಂದು ರಾಗ ಎತ್ತುವಷ್ಟರಲ್ಲಿ ಹಾಡಿನೆಳೆ ಕಿತ್ತಂತೆ ಥಟ್ಟನೆ ಕಟ್ಟಾಯಿತು. ಗುಡ್ಡ ನಕ್ಕಂತೆ ಕೇಳಿಸಿ ಎಲ್ಲ ಮಂದಿ ಆಘಾತಗೊಂಡು ದಿಗ್ಭ್ರಾಂತರಾಗಿ ಹಿಂದಿರುಗಿ ನೋಡಿದರೆ,

ಎಲ್ಲರ ಹಿಂದೊಂದು ಮುದುಕಿ,
ಹಾಳು ಮುದುಕಿ, ಕೊಳಕು ಮುದುಕಿ
ಚಂದಮುತ್ತನ ಕಡೆ ತಿರಸ್ಕಾರದಿಂದ ನೋಡುತ್ತ,
ಬಾಯಿ ತುಂಬ ಹಲ್ಲಿನ ನಗೆಯ ಗಹಗಹಿಸಿ ನಗುತ್ತ,
ನಿಂತಿದ್ದಾಳೆ! ಭೂಮಿ ಆಕಾಶಕ್ಕೆ ಏಕಾಗಿ ಕೀಲಿಸಿದಂತೆ!
ಮುಸುರೆ ಮೂಗು ಕೆಂಡಗಣ್ಣು ಕೆಂಪಗೆ ಬಿಟ್ಕೊಂಡು

ಕೆಂಜೆಡೆ ಕೆದರ್ಕೊಂಡು
ಕೆಂಜೆಡೆ ತುಂಬ ನಕ್ಷತ್ರದಂಥ ಮಣಿಗಳ ಮಡಿಕ್ಕೊಂಡು
ಕತ್ತಿನ ತುಂಬ ರುದ್ರಾಕ್ಷಿ ಧರಿಸ್ಕೊಂಡು
ಛಿದ್ರಕುಬುಸ ತೊಟ್ಟು ಚಿಂದಿ ಸೀರೆ ಉಟ್ಟು,
ಲಂಬ ಕುಚ ಜೋತ ಕರ್ಣ, ಕೈಯಲ್ಲಿ ಬಿದಿರ ಕೋಲಿನ ಚೌಡಿಕೆ ಹಿಡಿದುಕೊಂಡು
ರುದ್ರಗೋಪವ ತಾಳಿ
ಮನಸ್ಸಿಗೆ ಬಂದ ಹಾಗೆ ಧ್ವನಿ ಮಾಡಿ ಕೈಬೀಸಿ ಕಣ್ಣು ತಿರುವುತ್ತ,
ಗೊತಗೊತ ನಾರುತ್ತ ಕಂಡವರು ಕಾರಿಕೊಳ್ಳುವ ಹಾಗೆ, ನಿಂತವರು ಹೇಸಿಕೊಳ್ಳುವ ಹಾಗೆ
ಅಕರಾಳ ವಿಕರಾಳ ನಿಂತಿದ್ದಾಳೆ!

ನೋಡಿ ಹಿರಿಯರಿಂದ ಕಿರಿಯರತನಕ ಗಾಬರಿಯಾದರು. ಕಾಡು, ಬೆಟ್ಟ, ಗುಡಿಗುಂಡಾರ ಮುಗುಚಿ ಬಿದ್ದಂಗಾಯ್ತು. ಸದ್ದು ಗದ್ದಲವಾಗಿ ಇದ್ಯಾವ ಲೋಕದ ರಾಕ್ಷಸಿಯೆಂದು, ಇನ್ನು ಜೀವಸಹಿತ ವಾಪಸಾಗುವುದು ಶಕ್ಯವಿಲ್ಲೆಂದು ಕೆಲವರು ಬೋಧೆ ತಪ್ಪಿ ಬಿದ್ದರು. ಕೆಲವರು ಜೀವ ಹೆಪ್ಪುಗಟ್ಟಿಸಿಕೊಂಡು ನಿಶ್ಚಲ ಕುಂತರು.

ಚಂದಮುತ್ತನನ್ನ ಕೋಲಿನಿಂದ ತೋರಿಸುತ್ತ ಗುಡ್ಡ ಗುಡುಗುವ ಹಾಗೆ ಗುಡುಗಿದಳು - ಯಾರು? ಆ ಕೊಳಕು ಮುದುಕಿ!

“ಆ ಹಾಹಾ.
ಈ ಕ್ರಿಮಿ ನುಡಿಸಿದ್ದೆ ಸಂಗೀತವೆಂದಾದರೆ
ಸತ್ಯ ಸಂಗೀತ ಅಂಬೋದು ಸತ್ತು ಹೋಗದ?
ನಿತ್ಯ ನ್ಯಾಯ ಅಂಬೋದು ನಿಂತು ಹೋಗದ?
ಮ್ಯಾಲಿನ ಮಳೆ ಮ್ಯಾಲೇ ಇಂಗಿ
ಕೆಳಗಿನ ಬೆಳೆ ಸುಟ್ಟು ಹೋಗದ?

- ಎಂದು ಒರಟು ಮಾತುಗಳ ಅಲೆಯೆಬ್ಬಿಸಿ ಹೃದಯಗಳಿಗಪ್ಪಳಿಸಿ ಹರಿದಾಡಿದಳು.

ಈಗ ಧೈರ್ಯ ತಗೋಬೇಕಾದವನು ಕುಲಗುರುವೊಬ್ಬನೇ. ಉಳಿದವರೆಲ್ಲ ಗಾಬರಿಯಲ್ಲಿ ಉಸಿರಾಟವನ್ನೇ ನಿಲ್ಲಿಸಿದ್ದರು. ಕುಲಗುರು ಬೆವರುಜಲವ ಒರೆಸಿಕೊಂಡು ಕರವೆತ್ತಿ ಕೈಮುಗಿದು ತೊದಲುತ್ತ ಬಾಯಿಬಿಟ್ಟ.

**ಕುಲಗುರು :** ತಾಯಿ ನಮ್ಮ ಸಾವಿರ ತಪ್ಪು ಒಪ್ಪಿಕೊಂಡು ನೀನು ಯಾರಂತ ಹೇಳಿದರೆ...

**ಮುದಿಜೋಗ್ತಿ :** ನಮಗೆ ನಾಮಕರಣ ಮಾಡಿದವರಿಲ್ಲ. ನಾನಿದ್ದೇನೆ.
ನನ್ನ ಸತ್ಯವೂ ಇದೆ. ಕಣ್ಣಿದ್ದರೆ ನೋಡಿಕೊ. ನೆತ್ತರಲ್ಲಿ
ಹುಟ್ಟಿದವಳಲ್ಲ. ನೀರಲ್ಲಿ ನೆನೆದವಳಲ್ಲ. ಆಕಾಶವೆಂಬ
ಬಯಲ ಕೆರೆಯಲ್ಲಿ ಬಿಳಿತಾವರೆಯೆಂಬ ಮೂರೆಸಳಿನ
ಹೂವಿನಲ್ಲಿ ಹುಟ್ಟಿದವಳು; ನಾನು ಕಾಲನ ಸೂಳೆ,
ನೀ ಯಾರು ಮುದಿಯ?

**ಕುಲಗುರು :** ನಾನು ನಿನ್ನ ಪಾದದ
ಧೂಳು; ಕುಲಗುರು, ಈ ಶಿಶುಮಕ್ಕಳಿಗೆ
ಸಂಗೀತ ಕಲಿಸಿದವನು.

ಆವಾಗ ಥೂ ಎಂದು ಕುಲಗುರುವಿನ ಮುಖದ ಕಡೆಗೆ ಉಗಿದು ಹೀಂಕಾರವಾಗಿ ಜರಿದು ನುಡಿದಳು ನೋಡು, ಯಾರು? ಹೊತ್ತಿಕೊಂಡುರಿವ ಕಣ್ಣಿನ ಆ ಕೊಳಕು ಮುದುಕಿ –

**ಮುದಿಜೋಗ್ತಿ :** ಥೂ ನಿನ್ನ ಮುದಿ ಯೋಗ್ಯತೆಗೆ ಬೆಂಕಿ ಹಾಕ
ಇಂಥ ಕಚಡ ಸಂಗೀತಕ್ಕೆ ಗುರುವಾ ನೀನು?
ನಾಳೆ ಪಶ್ಚಿಮದಿಂದ ಬರುವ ಕಲಿಯುಗಕ್ಕೆ
ತಕ್ಕಡಿಯಲ್ಲಿ ತೂಗಿ ಈ ಸಂಗೀತ
ಮಾರಿಕೊ!

ಅಗೋ ಅಗೋ ಅಲ್ಲೊಂದು ಕೋತಿ ಕುಂತಿದೆ
ನೋಡಿರಯ್ಯಾ,
ಆಹಾಹಾ ಗೊಲ್ಲ ಕುಲದ ಜ್ಯೋತಿಯ
ನೋಡಿರಯ್ಯಾ,
ಅರೇರೇ ನಿಮ್ಮ ಹಟ್ಟಿಯ ಕೀರ್ತಿ ಶಿಖರವ
ನೋಡಿರಯ್ಯಾ

– ಎಂದು ಚಂದಮುತ್ತನ್ನ ತೋರಿಸಿ ಅವನಿದ್ದಲ್ಲಿಗೆ ಗುಡುಗುಡುನೆ ಓಡಿಬಂದಳು. ಚಂದಮುತ್ತ ಎದ್ದು ನಿಂತು ಗಡಗಡ ನಡುಗುತ್ತಿದ್ದ. ಆ ಮುದಿ ಸೇಡುಮಾರಿ ನೊರನೊರನೆ ಹಲ್ಲು ಕಡಿದು ಕೈತಿರುವಿ ಕೇಳಿದಳು:

ಹೆಚ್ಚಳ ಪಡಬೇಡವೋ ಏ ಕಡಿಮೆಯವನೇ
ನಿನ್ನ ಸತ್ಯ ನನಗೆ ಚೆನ್ನಂಗೊತ್ತು.
ಸತ್ಯ ಇದ್ದರೆ ಹೀಗೆ ನುಡಿಸಬಲ್ಲೆಯಾ?

– ಎಂದು ಚೆಂದಿ ಸಿರೆ ತೆಗೆದು ಕಚ್ಚೆ ಹಾಕಿಕೊಂಡು ಬಗಲಲ್ಲಿದ್ದ ಚೌಡಿಕೆ ಮುರಿದು ಅದರ ಕೋಲು ಹಿರಿದು ಅದನ್ನೇ ಕೊಳಲಿನಂತೆ ತುಟಿಗಿಟ್ಟು ನುಡಿಸಿದರೆ – ಶಿವ ಶಿವಾ! ಸರ್ವಲೋಕ ಸಮಸ್ತ ಜನ ಇರಿವೆಂಬತ್ತು ಕೋಟಿ ಜೀವರಾಶಿಗಳೆಲ್ಲ ಭಾವಪರವಶರಾಗಿ, ಮೂಕವಿಸ್ಮಿತರಾಗಿ ಕೊಳಲ ಸಂಗೀತದ ಬೆಳ್ದಿಂಗಳಲ್ಲಿ ಅದ್ದಿ ಹೋದರು! ಏಸೊ ಜನ್ಮದ ಸುಖದ ನೋವು ನೆನಪಾದವು. ಗಾಳಿ ದೇಹದ ದೈವಂಗಳನು ನಾದದಲ್ಲಿ ಸುಳಿವುದೋರಿಸಿ ಹಾಡಿನ ರೂಪ ಕೊಟ್ಟು ಸಾಕ್ಷಾತ್ಕಾರ ಮಾಡಿ ತೋರಿಸಿದಳು. ಜನ ಧನ್ಯರಾಗಿ, ತನ್ಮಯರಾಗಿ ಮೈಮರೆತು ಮಾತು ಮರೆತಿರುವಾಗಲೇ ಗಕ್ಕನೆ ಕೊಳಲುಲಿ ನಿಲ್ಲಿಸಿ ದುಡುದುಡುನೆ ಓಡಿಬಂದು ಚಂದಮುತ್ತನ ಕೈಕೊಳಲನ್ನು ಕಸಿದು ಲಟ್ಟನೆ ಮುರಿದು ಅವನ ಮುಖದ ಮ್ಯಾಲೆಸೆದು ಏನೆಂದು ಯಾಕೆಂದು ಹ್ಯಾಗೆಂದು ಜನ ತಿಳಿಯುವ ಮುನ್ನವೇ ಕಾಡಿನಲ್ಲಿ ಕಣ್ಮರೆಯಾದಳು. ಯಾರು? ಆ ಮುದಿಜೋಗ್ತಿ!

# ೧೩. ಚಂದ್ರ ಅಲ್ಲಿಂದೆರಡು ಮಾರು

ನೊರೆ ನೊರೆ ಹಾಲಲ್ಲಿ ಹುಳಿಯ ಹಿಂಡಿದರ್ಯಾರು?
ಬೆಳ್ದಿಂಗಳು ಹೆಪ್ಪುಗಟ್ಟಿ
ಶಿವಾಪುರದ ಬಯಲಿನ ತುಂಬ ಭರಿತವಾಯ್ತು.
ಮುಕ್ತಾಯವಾಯಿತು ಅಸ್ತವ್ಯಸ್ತ ಪರಿಸೆ.
ಜೋಗ್ತಿಯ ಹಾಡಿನ ಅಮಲಿನಲ್ಲಿ
ಅದ್ದಿಹೋಯಿತು ನಾಡು ನರಲೋಕ.
ತೇಲುಗಣ್ಣಲ್ಲಿ ತೇಲಿ ಮಾಯದ ನಿದ್ದೆಯಲ್ಲಿ
ಮಲಗಿಬಿಟ್ಟಿತು ಹಟ್ಟಿ.

ತನ್ನ ಹಾಡುಗಳ ತನಗಿಂತ ಚಂದ ನುಡಿಸಿ ತನ್ನ ತಪ್ಪುಗಳ ಕಿವಿಗಪ್ಪಳಿಸುವಂತೆ ಮಾಡಿದ ಚಂದಮುತ್ತನ ಮ್ಯಾಲೆ ಚೆನ್ನಮುತ್ತನಿಗೆ ರವರವ ರುದ್ರಗೋಪ ಬಂದಿತ್ತು. ತನ್ನ ಪರವಹಿಸಿ ಜೋಗ್ತಿಯೇ ಆ ಸೇಡು ಚುಕ್ತ ಮಾಡಿದ್ದಕ್ಕಾಗಿ ಚೆನ್ನಮುತ್ತ ಆನಂದದ ಅಮಲೇರಿ ನಿದ್ರಿಸಲಿಲ್ಲ.

ಜೋಗ್ತಿಯ ಸಂಗೀತದ ಅನುಭವವನ್ನು ಮೆಲುಕು ಹಾಕುತ್ತ ಶಿವಸುಖದ ಅಮಲೇರಿ ಕುಲಗುರು ನಿದ್ರಿಸಲಿಲ್ಲ.

ಜೋಗ್ತಿಯ ಪಾದ ಹಿಡಕೊಂಡು ಸಂಗೀತ ವಿದ್ಯವ ಕಲಿಯಬೇಕೆಂಬ ದಿವ್ಯೋತ್ಸಾಹದಲ್ಲಿ ಚಂದಮುತ್ತ ನಿದ್ರಿಸಲಿಲ್ಲ. ಜೋಗ್ತಿಯ ದರ್ಶನಕ್ಕೆ ಈಗಲೇ ಹೋಗಬೇಕೆಂದು ನಿಶ್ಚಯವ ಮಾಡಿ ಹೆತ್ತಯ್ಯ ಮುತ್ತಯ್ಯರ ನೆನೆದು ಶಿವಧೋ ಎಂದು ಶಿವದೇವರ ಸ್ಮರಣೆಯ ಮಾಡಿ ಹೆಗಲಿಗೆ ಕಂಬಳಿ ಕೈಗೆ ಬೆತ್ತ ತಗೊಂಡು ಅಬ್ಬೆಯ ಪಾದ ಪಡಕೊಳ್ಳಲು ಹೊರಟ.

ಅಂಗಳದಲ್ಲಿ ಅಬ್ಬೆ ಕಲ್ಲು ಬಂಡೆಗೊರಗಿ ಕುಂತಿದ್ದಳು.
ಮುಂದೊಂದು ಹರಿವಾಣವಿತ್ತು.
ಹರಿವಾಣದಲ್ಲಿ ನೀರಿತ್ತು.
ನೀರಿನಲ್ಲಿ ಮೂಡಿ ಚೆಲ್ಲಾಟವಾಡುತ್ತಿದ್ದ ಚಂದ್ರ.
ಚಂದಮುತ್ತ ಸದ್ದಿಲ್ಲದೆ ಹೋಗಿ
ಅಬ್ಬೆಯ ಬಳಿ ಕುಂತ.
ಮೂಡಿದ್ದ ಚಂದ್ರ
ಅಬ್ಬೆಯ ಜೊತೆ ಮಾತಾಡಿದಂತಿತ್ತು.
ಅಬ್ಬೆಯ ಕದ್ದು ನುಡಿದಾಡಿ
ಚಂದ್ರನಿಗೆ ಚಾಡಿ ಹೇಳಿದಂತಿತ್ತು.
ಆ ಭಾಷೆ ತನಗೆ ತಿಳಿಯದಾಗಿತ್ತು.

ಅಬ್ಬೆ ಇಂತೆಂದಳು:

ನೆನಪಿದೆಯ ಕಂದ?
ಚಿಕ್ಕಂದು
ಮಡುವಿನಲ್ಲಿ ಮೂಡಿ ಮುರಿದಾಡುವ ಚಂದ್ರನ ನೋಡಿ
ಅದು ಬೇಕೆಂದು ಕಾಡಿ ಬೇಡಿ ನೀನತ್ತೆ.
ಹಟಮಾಡಿ
ಆಭರಣ ಕಿತ್ತೆಸೆದೆ, ಹಸ್ತ ಕಡಗವ ಎಸೆದೆ
ಅನ್ನೋದಕ ಬಿಟ್ಟು ಹಾಸಿಗೆಗೆ ಬೆನ್ನು ಹಚ್ಚದೆ
ಹಾಗೇ ಕೂತೆ.

ಭೀತ ಬೆರಗಿನ ಅಬ್ಬೆ ನಾನು -
ಚಂದ್ರ ತನ್ನ ಕಥೆಯ ಮರಿಮೀನುಗಳಿಗೆ
ಅಭಿನಯಿಸಿ ತೋರುತ್ತಾನೆ.
ನೋಡು ಕಂದಾ ಎಂದೆ.

ನೀನು ಮಾಡಿದ್ದೇನು?
ಹರಿವಾಣದಲ್ಲಿ ನೀರಿಟ್ಟು, ಮೂಡಿದ ಚಂದ್ರನಿಗೆ
ನನಗೂ ಕಥೆ ಹೇಳೆಂದು ಅಳುತ್ತ ಕೂತೆ.
ಅತ್ತು ಅತ್ತು ನನ್ನ ಮಡಿಲಲ್ಲಿ ಮಲಗಿ ನಿದ್ದೆಹೋದೆ.
ನಿನ್ನ ಮುಂಗುರುಳಲ್ಲಿ ಆಟವಾಡುತ್ತ
ಚಂದ್ರ ನಿದ್ದೆ ಹೋದ.

ಬೆಳಿಗ್ಗೆ
ಹಿತ್ತಲಲ್ಲಿ ಅರಳಿದ್ದ ಮಲ್ಲಿಗೆಯ ತೋರಿಸಿ
ನೋಡು ನೋಡಬ್ಬೇ
ಹಗಲ ಚಂದ್ರನಿಗೆ ಅಣಕಿಸುತ್ತಾವೆ
ನಮ್ಮ ಹಿತ್ತಲ ಮಲ್ಲಿಗೆ

- ಅಂತ ನೀನಂದೆ. ನೆನಪಿದೆಯಾ ಕಂದಾ?

ಚಂದಮುತ್ತ ಮಾತಿಲ್ಲದೆ ಪ್ರೀತಿಯಿಂದ ಅಬ್ಬೆಯ ಬೆನ್ನಿಗೆ ಮುಖ ಉಜ್ಜುತ್ತ ಒರಗಿದ.

“ಇಂದು ದೊಡ್ಡ ಹುಣ್ಣಿವೆಯಲ್ಲವೆ? ಚಂದ್ರನ್ನ ಕುಡಿ”

- ಎಂದು ಬಲ ಬರಲೆಂದು ಹರಿವಾಣದಲ್ಲಿ ಚಂದ್ರನನ್ನ ಮೂಡಿಸಿ ಮಕ್ಕಳಿಗೆ ಕುಡಿಸುವ ಕುಲಾಚಾರದಂತೆ ಹರಿವಾಣವನ್ನ ಎತ್ತಿ ಮಗನ ಮುಂದೆ ಹಿಡಿದಳು.

“ನಾನು ಮೊಲೆ ಕುಡಿಯೊ ಕೂಸೇನಬೇ?”

ಎಷ್ಟು ದೊಡ್ಡವನಾದರೂ ಅಬ್ಬೆಗೆ ಮಗನೇ"

- ಎಂದು ಹರಿವಾಣವ ಮಗನ ತುಟಿಗಿಟ್ಟಳು. ಅದರಲ್ಲಿ ಮೂಡಿದ್ದ ಚಂದ್ರನ ಸಮೇತ ಚಂದಮುತ್ತ ಗಟಗಟ ಕುಡಿದ. ಚಂದ್ರನ ಕುಡಿದೆಯೊ ಚಂದ್ರನ ಬೆಳಕು ಕುಡಿದೆಯೊ! ಮೈ ಮನಸ್ಸಿನ ಕುದಿ ಕಮ್ಮಿಯಾಗಿ ತಂಪಾದವು. ಚಿನ್ನಮುತ್ತನೊಂದಿಗಿನ ಪಂತ, ಕೊಳಕು ಜೋಗ್ತಿಯ ಅವತಾರ, ಅವಳ ಹಾಡು, ತನಗಾದ ಹಾಡಿನ ಹಸಿವು, ಕೊಳಲು ಕಳೆದು ಕೊಂಡಿದ್ದು, ಕುಡಿದ ಬೆಳ್ದಿಂಗಳು ಇವೆಲ್ಲವುಗಳಿಗೆ ಅಬ್ಬೆಯ ಪ್ರೀತಿಯ ಮಾಯೆ ಆವರಿಸಿ ಹಾಯೆನಿಸಿ ಹಾ ಎಂದು ಅಬ್ಬೆಯ ತೊಡೆಯ ಮ್ಯಾಲೊರಗಿದ.

"ಎವ್ವಾಬೇ ಚಿಕ್ಕಂದು ನೀ ಹೇಳುತ್ತಿದ್ದ ಜೋಗುಳ ಹಾಡಬೇ" ಎಂದ. ಮಗನ ನುಡಿ ಕೇಳಿ ಸಕ್ಕರೆ ಮುಕ್ಕಿಧಂಗಾಗಿ ಅಬ್ಬೆಯ ಹೃದಯ ಅಕ್ಕರೆಯಿಂದ ಅರಳಿ ವಿಸ್ತಾರವಾಯಿತು. ಹಾಡಿದಳು:

ಬೆಳ್ಳಿ ಬೆಟ್ಟದ ಮ್ಯಾಲೆ ಕಾಡು ಹೂಗಳ ತೇರು
ಹಾಲು ಹೊಳೆ ತುಂಬಿ ಹರಿದಾವು । ನೋಡಿದರ
ಚಂದ್ರ ಅಲ್ಲಿಂದೆರಡು ಮಾರು ॥
ಕದ ಮುಚ್ಚಿರೇ ಬ್ಯಾಗ ಕನ್ನ ಹಾಕುತ್ತಾಳೆ
ಚಂದ್ರಲೋಕದ ಯಕ್ಷಿ ಬಂದು । ಕಂದನ್ನ
ಕಿನ್ನರ ಲೋಕಕೊಯ್ದಾಳು॥

ತನ್ನ ಬಿಟ್ಟನ್ಯರನು ನೀನು ನೋಡದ ಹಾಂಗ
ಮಾಡುವಳು ಮಾಯಕಾರ್ತಿ ಯಕ್ಷಿ । ನನ ಕಂದ
ಕಣ್ಣ ತೆರಿಬ್ಯಾಡ ಮೈಮರತು ॥

ಅಬ್ಬೆಯ ಅಕ್ಕರೆಯ ಅಮಲಿನಲ್ಲಿ ಚಂದಮುತ್ತನಿಗೆ ಯಾವಾಗ ನಿದ್ದೆ ಹತ್ತಿತೊ, ಎಚ್ಚರವಾದಾಗ ಅಂಗಳದಲ್ಲಿ ಅಬ್ಬೆಯ ತೊಡೆಯ ಮ್ಯಾಲೆಯೇ ಮಲಗಿದ್ದ. ಚಂದ್ರ ಬೆಳ್ಳಿಯ ಬೆಳಕನ್ನ ಸುರಿಯುತ್ತಲೇ ಇದ್ದ. ಈ ದಿನ ಅಬ್ಬೆ ಕುಡಿಸಿದ ಚಂದ್ರ ಕಾರಣವಾಗಿಯೋ ಏನೋ ಬೆಳಕಿನ ಹಸಿವಾಗಿ ಥಟ್ಟನೆ ಎದ್ದು ಕೂತ. ಅಬ್ಬೆ ಬಂಡೆಗೊರಗಿ ನಿದ್ರಿಸುತ್ತಿದ್ದಳು. ಪಾದಮುಟ್ಟಿ ಧೂಳನ್ನು ತಲೆಗೊರೆಸಿಕೊಂಡು ಸಪ್ಪಳಾಗದ ಹಾಗೆ ಹೆಗಲ ಕಂಬಳಿ ಕೈಬೆತ್ತದ ಕೋಲು ತಗೊಂಡು ಜೋಗ್ತಿಯ ಹುಡುಕಿಕೊಂಡು ಹೊರಟ. ಅಬ್ಬೆ ಕನವರಿಸುತ್ತಿದ್ದಳು:

ಚಂದ್ರಲೋಕದ ಯಕ್ಷಿ ಬಂದು
ಬೊಗಸೆಯಲ್ಲಿ ಬೆಳ್ದಿಂಗಳ ತುಂಬಿಕೊಂಡು
ಚೆಲ್ಲಾಡಿದಳು
ಕೇರಿದಳು ಎಸೆದಳು
ಮುಖಕ್ಕೆ ಮೆತ್ತಿಕೊಂಡು
ತಿಂದಳು ಕುಡಿದಳು ತೇಗಿದಳು
ಈಜಿದಳು ಮ್ಯಾಲೆ ಹಾರಾಡಿದಳು
ಕಣ್ಣಲ್ಲಿ ಎದೆಯಲ್ಲಿ ತುಂಬಿಕೊಂಡಳು
ಒದ್ದೆ ಹಸಿರಿನ ಮ್ಯಾಲೆ ಹಾಡನ್ನ ಮಲಗಿಸಿ
ತಾನು ಮಲಗಿದಳು.

# ೧೪. ಪರಿಶೋಧ ಮಾಡಿದ

ತುಂಬಿದ ಸೋಮವಾರ, ಸಪ್ಪಟ ಸರಿರಾತ್ರಿ ಶಿವನೇ ಎಂದು ಚಂದಮುತ್ತ ಹೊರಟ. ಜೋಗ್ತಿ ಕಣ್ಮರೆಗೊಂಡ ದಿಕ್ಕನ್ನ ಅಂದಾಜು ಮಾಡಿ ಅದೇ ದಿಕ್ಕಿಗೆ ಅಕ್ಕಪಕ್ಕ ನೋಡುತ್ತಾ ಗುಡ್ಡಗ್ವಾರಣ್ಯ ಬೆಟ್ಟ ಕಾಡು ಅಲೆದಾಡಿ ಹುಡುಕುತ್ತ ನಡೆದ. ದಾರಿಯಲ್ಲಿ ಸಿಕ್ಕ ಖಗಮೃಗಾದಿಗಳ ನೋಡುತ್ತ ಬೆಳ್ದಿಂಗಳಲ್ಲಿ ದಟ್ಟ ನೆರಳು ಚೆಲ್ಲಿದ್ದ ಬಂಡೆಗಳ ಬುಡದಲ್ಲಿ ಮರಗಳಲ್ಲಿ ತುದಿಯಲ್ಲಿ ಅವಿತಿರುವಳೋ ಎಂದು ಕಣ್ಣಿಂದ ಕೆದಕಿ ಬೆದಕಿ ನೋಡುತ್ತ ನಡೆದ. ಬೆಳ್ಳಂಬೆಳಕಾಗಿ ಚಿಲಿಪಿಲಿ ಜಗತ್ತು ಎಚ್ಚರವಾಗಿ ಮೂಡುಮಲೆಯಲ್ಲಿ ಸೂರ್ಯನಾರಾಯಣ ದೇವರು ಉದಯವಾಗಿ "ಅಯ್ಯೋ ಯಕ್ಷಿಯ ನಿತ್ಯದ ಪೂಜೆ ತಪ್ಪಿತಲ್ಲೋ ಶಿವನೆ!" ಎಂದು ಅರಿವಾಗಿ ತಲೆಮ್ಯಾಲೆ ಕೈಹೊತ್ತು ಕುಂತ. ನಂಬಿಗೆಯಿಟ್ಟು ದೈವವ ತನಗೊಪ್ಪಿಸಿದ ಕುಲಗುರುವಿಂಗೆ, ಹಟ್ಟಿಯ ಸಮಸ್ತ ದೈವಕ್ಕೆ, ಬೂತಾಯಿಗೆ ಸಮ ಅಬ್ಬೆಗೆ, ಮ್ಯಾಲೆ ಯಕ್ಷಿಗೆ ದ್ರೋಹ ಮಾಡಿದನೆಂದು ಕೋಲಿನಿಂದ ತಲೆತಲೆ ಹೊಡೆದುಕೊಂಡು ಕುಂತ. ಈ ಹಿಂಗೆ ಪರಿಪರಿ ರೀತಿಯಲಿ ಪಶ್ಚಾತ್ತಾಪ ಪಡುವಲ್ಲಿ ಗಿಣಿಮರಿಯೊಂದು ತಲೆತಟ್ಟಿ ಹಾರಿಹೋಯಿತು. ತಕ್ಷಣವೆ ಜೋಗ್ತಿಯ ಹಾಡಿನ ನೆನಪು ಕೆರಳಿ ಹಾಡು ಕಲಿಯದಿದ್ದಲ್ಲಿ ಈ ಬದ್ದೀ ಜಲ್ಮ ಯಾಕಿರಬೇಕೆಂದು ದೃಢ ನಿಶ್ಚಯವ ಮಾಡಿಹೊರಟ.

'ಹಾಡಿನ ಮುದುಕೀ' ಎಂದು ಕೂಗು ಹೊಡೆದು ಹುಡುಕಿದ. 'ಹಾಡಿನ ಜೋಗ್ತೀ' ಎಂದು ಕಾಕು ಹೊಡೆದು ಹುಡುಕಿದ. ಬೆಟ್ಟ ಏರಿ ಬೆಟ್ಟ ಇಳಿದು ದಟ್ಟ ಕಾಡು ಬೆಟ್ಟ ಬಯಲುಗಳಲ್ಲಿ ಜೋಗ್ತಿಯ ಪರಿಶೋಧನೆ ಮಾಡಿದ. ಅಸರು ಬ್ಯಾಸರೆನ್ನದೆ, ಹಸಿವೆ ನಿದ್ದೆ ನೀರಡಿಕೆ ಎನ್ನದೆ ಮೂಡುಮಲೆ, ಪಡುಮಲೆ, ತೆಂಕುಬಡಗುಮಲೆ, ಹುಲಿಯಮಲೆ, ಆನೆಮಲೆಗಳಲ್ಲಿ ಅಲೆದಾಡಿ ಹುಡುಕಿದ. ಸುತ್ತೂ ಸೀಮೆಯ ಹಟ್ಟಿ ಹಾಡಿ ಗೂಡುಗಳಲ್ಲಿದ್ದವರ ನಿಲ್ಲಿಸಿ ಮುದಿ ಜೋಗ್ತಿಯ ಗುರುತು ಹೇಳಿ ಕಂಡಿರಾ? ಅಂದ. ಬೇಟೆಗಾರ ಗುಡ್ಡ ಗೊರವ ದಾಸಯ್ಯ ಜೋಗಯ್ಯಗಳ ಕೇಳಿದ. ನರಮಾನವರ ಅವರಂಥವರ ಅಂಗಲಾಚಿ ಕಂಡಿರಾ? ಅಂದ. ಎಲ್ಲರೂ -

ಕಾಡು ಹುಟ್ಟಿದಾಗಳಿಂದ
ಗೂಡು ಕಟ್ಟಿದಾಗಳಿಂದ

ಇಂತೆಂಬ ಜೋಗ್ತಿಯ ಕಂಡಿಲ್ಲವಲ್ಲೋ ಶಿವನೆ! ಎಂದರು.

ನಡೆದು ನಡೆದು ಎಡಗಾಲಿಗೆ ಎಗ್ಗಾಲಮುಳ್ಳು, ಬಲಗಾಲಿಗೆ ಬಗ್ಗಾಲಮುಳ್ಳು ಚುಚ್ಚಿ ಬಾಲಕನ ಎಳೆಪಾದ ನಲುಗಿದವು. ಕಾಲೆಲ್ಲ ಕಲ್ಲಪ್ಪಳಿಸಿ ಉಪ್ಪಳಿಕೆ ಆದವು. ಧರಣಿಯ ಮ್ಯಾಲೆ ಬಿದ್ದೂ ಕೆಡೆದೂ ಒದ್ದಾಡಿಕೊಂಡು ಮುಂದೆ ಸಾಗಲಾರದೆ ಶಿವಧೋ ಎಂದು ತೆವಳುತ್ತ ಬೆಟ್ಟದಡಿಯ ಬಂಡೆಯ ಕೆಳಗಿ ಸುಸ್ತಾಗಿ ಉಸ್ಸೆಂದು ಮೈ ಚೆಲ್ಲಿದ. ಹೊತ್ತು ಬಹಳ ಹೀಗೇ ಮಲಗಿ ಎಚ್ಚರಾದಾಗ ಹಾಯೆನಿಸಿ ಜೋಗ್ತಿಯ ಹಾಡು ಗುನುಗಿದ. ಹಾಡು ಬರಲಿಲ್ಲ. ದನಿ ಏಳಲಿಲ್ಲ. ಒಳಗಿನ ಶೃತಿಪೆಟ್ಟಿಗೆ ಒಡೆದ ಹಾಗಿತ್ತು. ಶಿವನೇ ತನ್ನ ಹಾಡೆಲ್ಲಿ ಹೋಯಿತೆಂದ. ಸೊಂಟದಲ್ಲಿ ಗಣೆಯಿರಲಿಲ್ಲವಾಗಿ ಇಟ್ಟು ಮರೆತವರಂತೆ ಕೈ ಮೈ ತಟ್ಟಿ ನೋಡಿಕೊಂಡ. ಹಿಂದೆ ಮುಂದೆ ಆಸುಪಾಸು ನೋಡಿಕೊಂಡ. ಆಮ್ಯಾಕೆ ನೆನಪಾಗಿ ಗಣೆ ಮುರಿದಳೋ ಗೋನು ಮುರಿದಳೋ! ತನ್ನ ಹಾಡು ಕಳವಾಗಿ ಹೋಯಿತೆಂದು ಉಮ್ಮಳಿಸಿ ತಳ್ಳಂಕಗೊಂಡ.

ಮಣ್ಣಲಾಡುವ ಸಣ್ಣ ಬಾಲಕನ ಹಿಗ್ಗಿ ಹಿಗ್ಗಲಿಸಿದ ಹಾಡೇ,
ಬಿಸಿಲ ಬಂಗಾರದಲಿ, ಬೆಳ್ಳಿ ಬೆಳ್ದಿಂಗಳಲಿ
ಕರುಕುರಿಗಳೊಂದಿಗೆ ಬಾಲಕನ ಮೀಯಿಸಿ ನಲಿದ ಹಾಡೇ,
ಕ್ಷಿತಿಜದಾಚೆಯ ಮಾಯದ ಜಹಜುಗಳ ತೇಲಿಸಿ ತರುತ್ತಿದ್ದ

ಮಾದಕದ ಹಾಡೇ
ಎಲ್ಲಿ ಹೋದೆ?

ಕಾಲರಾಯನ ಗಾಳಿ ಹಾರಿಸಿಕೊಂಡು ಹೋದ ಹಾಡು
ಮತ್ತೆ ಸಿಕ್ಕೋದಿಲ್ಲವೋ ಬಾಲಕಾ

ಒಮ್ಮೆ ಹೋದರೆ ಇನ್ನೊಮ್ಮೆ - ಹಾಗೆಂದು
ಮತ್ತೆ ಅದೇ ಹಾಡು ಕಲಿಯಲಾದೀತೆ?
ಕಲಿತುಕೋಬೇಕಪ್ಪ ಖಾಲಿಯಾಗುವುದನ್ನ.
ಹಾಗೆಯೇ ಬೇರೊಂದು ಬೆಳಕು ನುಗ್ಗಿದಾಗ
ತುಂಬಿಕೊಳ್ಳೋದನ್ನ.

ಆದರೂ
ಎಳೆಯ ಕತ್ತಿನ ಮ್ಯಾಲೆ ಎಂಥ ಭಾರದ
ಅರಿವನಿಟ್ಟೆ ಶಿವನೆ!

ಇದೇ ಚಿಂತೆಯಲ್ಲಿ ಚಂದಮುತ್ತ ಮತ್ತೆ ಕಣ್ಣು ಮುಚ್ಚಿದ. ಎಚ್ಚರಾಗಿ ಕಣ್ಣು ತೆರೆದಾಗ ಎದುರಿಗೆ ಎಂಥ ಹೋಯ್ಕಿದೆ ಶಿವನೆ! ಎಳೆಯ ಮಿಡಿ ನಾಗರ ಜಡೆಗಳ ಸುತ್ತಿಕೊಂಡು ಹೆಣ್ಣು ಶಿವನ ಹಾಗೆ ಕಣ್ಣು ಮುಚ್ಚಿಕೊಂಡು ಎದುರಿಗೇ ಕುಂತಿದ್ದಾಳೆ; ಯಾರು? ಆ ಮುದಿ ಜೋಗ್ತಿ! 'ಜೋಗ್ತೀ' ಎಂದು ಕಿರಿಚಿ ಚಂದಮುತ್ತ ಹಾರಿ ಅವಳಿದ್ದಲ್ಲಿಗೆ ಹೋಗುವಷ್ಟರಲ್ಲಿ ಇವನ ಗುರುತು ಹಿಡಿದು ಅಪಾಯವನರಿದು ಪಾರಾಗುವ ಉಪಾಯವ ನಿಶ್ಚಿಯಿಸಿಕೊಂಡೇ

ಗವಿಯ ಬಾಗಿಲ ಬಳಿ ನಿಂತು ಬಾಯಿಭಾಷೆ ತಾಳಮೇಳದಲ್ಲಿ |
ಕೈಸನ್ನೆ ಕಣ್ಣು ಸನ್ನೆಯ ಮಾಡಿ ಕರೆದಳು |
ಕರದದ್ದೇ ಚಂದಮುತ್ತ ಓಡೋಡಿ ಬಂದು -

"ನನಗೆ ನಿನ್ನ ಹಾಡು ಕಲಿಸಿಕೊಡು ಜೋಗ್ತೀ" - ಎಂದು ಕೈಮುಗಿದು ಮುಂದೆ ನಿಂತರೆ ತನ್ನ ಕೋಲಾಡಿಸಿ ಅವನ ದೂರ ನಿಲ್ಲಿಸಿ -

"ಎಲವೆಲವೋ ಗೊಲ್ಲ ಗೋಕುಲರ ಪಿಳ್ಳೆ ಯಾವ ಹಾಡು?

ಯಾರು ನೀನು? ನಡೆ ನಡೆ" ಎಂದು ಗದರಿದಳು.

ಕುಲದೋಷಣೆ ಮಾಡಿದಳಲ್ಲಾ ಹಾಳು ಮುದುಕಿ ಎಂದು ಉಕ್ಕುವ ಕೋಪವ ನಿಯಂತ್ರಿಸಿ,

"ನನ್ನ ಗೆಣೆ ಮುರಿಯಲಿಲ್ಲವೆ ನೀನು?" ಎಂದ.

"ಗಣೆ ಬೇಕಾಗಿ ಬಂದೆಯಾ? ಹಾಗಿದ್ದರಿಗೂ ಬಾ" - ಎಂದು ಆಡಾಡುತ್ತ ನಿರಾಶೆಗೊಂಡ ಚಂದಮುತ್ತನ ಆಳವಾದ ಕಂದಕದ ಬಳಿಗೊಯ್ದು ಕೆಳಗೆ ನೋಡೆಂದಳು. ನೋಡಿದ.

“ಏನು ಕಂಡೆ?”

“ಆಳವಾದ ಕೊಳ್ಳ ಕಂಡೆ”

ಅದು ನಿನ್ನ ಪೂರ್ವಜರ ಲೋಕ. ಅಲ್ಲಿದೆ ನಿನ್ನ ಗಣೆ ಹೋಗೆಂದು ಕೊಳ್ಳಕೆ ಅವನ ತಳ್ಳಿ ನಿರುಮ್ಮಳದಿಂದ ಮಾಯವಾದಳು ನೋಡು, ಯಾರು? ಆ ಮಾಯಕಾರ್ತಿ ಮುದಿಜೋಗ್ತಿ!

ಪುಣ್ಯ ಚೆನ್ನಾಗಿತ್ತು ಬಿದ್ದಮ್ಯಾಲೆ ಬೋಧೆತಪ್ಪಿ ಜೀವಂತವಿದ್ದ. ಎಚ್ಚರಾದ ಮ್ಯಾಲೆ ತಾನು ಕೆಸರ ನೀರಲ್ಲಿದ್ದುದು ಅರಿವಿಗೆ ಬಂತು. ಸುತ್ತ ಮಾಯದ ಕಗ್ಗತ್ತಲು. ಕೈತುಂಬ ನೋವು, ಸಂದು ಕೀಲುಗಳಲ್ಲಿ ನೋವು ಗಾಯಗಳಾಗಿ ‘ಎವ್ವಾಬೇ’ ಎಂದು ನರಳಿದ. ಆಸುಪಾಸು ಮಾನವರಿರಲಿ, ಒಂದು ಮೃಗಜಾತಿ ಒಂದು ಕೀಟ ಜಾತಿಯ ಸುಳಿವೂ ಕೇಳಿಸಲಿಲ್ಲ. ಎಲ್ಲ ಸಹಿಸ್ಕೊಂಡೇ ಕಷ್ಟಪಟ್ಟು ತೆವಳಿಕೊಂಡು ದಂಡೆಗೆ ಬಂದುಬಿದ್ದ. ಯಾರಾದರೂ ಬಂದು ಎತ್ತಿ ಉದ್ಧಾರ ಮಾಡ್ಯಾರೆಂದು ಜೋರಾಗಿ ನರಳಿದ. ಯಾರೂ ಬಾರದ್ದಕ್ಕೆ ಮಾಯದಲ್ಲಿ ಬೆಳೆಸಿದ ಅಬ್ಬೆಯ ನೆನೆದು ಗಳಗಳನೆ ಅತ್ತ.

ಕಣ್ಣಮುಂದೆ ನೆನಪಿನಲ್ಲಿ ಮುದಿಜೋಗ್ತಿ ಸುಳಿದಳಾಗಿ ಕಣ್ಣಿಗೆ ಕಾರ ಎರಚಿದಂತಾಯ್ತು. ಅದೇ ಘನವಾದ ಕಗ್ಗತ್ತಲು ಕರಗದೆ ಹಾಗೇ ಇದೆ. ಎಲಾ ಕೃತಕಿ ಮುದಿರಂಡೆ ನೆನಪಿಗೆ ಸುಳಿದಳಲ್ಲಾ ಎಂದು ರವರುದ್ರಗೋಪಗೊಂಡ.

ಜೋಗ್ತಿ ಘಾತಿಸಿದ ಕತಿ
ಹ್ಯಾಂಗ ಹೇಳಲೋ ಶಿವನೇ,
ಆ ಕಪಟಿಯ ಉಪಟಳದಲ್ಲಿ
ನನ್ನ ದುನಿಯಾ ಧೂಳಿಪಟವಾಯ್ತು,
ಗಣೆ ಮುರಿದು ಹಾಡು ಕಸಿದುಕೊಂಡಳಲ್ಲೋ ಬೋಳೇಶಂಕರಾ,
ಎಂದು ಹುಚ್ಚಗೋಪದಲ್ಲಿ ಕೊತಕೊತ ಕುದ್ದು
ನೊರನೊರನೆ ಹಲ್ಲು ಕಡಕೊಂಡ.
ಆದರೆ ಮಾರನೆ ಕ್ಷಣವೆ
ಮನವಿಡೀ ಮುತ್ತಿತು ಅವಳ ಹಾಡು ಮುದಿಜೋಗ್ತಿ.
ಕಚ್ಚೆದಲ್ಲಿಂದ ಮ್ಯಾಲೇರುತ್ತದೆ.
ತನುವಿನ ಮನದ ಉದ್ದಗಲಕ್ಕು ವ್ಯಾಪಿಸಿ
ನಿದ್ದೆ ಬರಿಸಿ ನನ್ನ ಕೊಲ್ಲುತ್ತದೆ.
ಕಳೆದುಕೊಂಡಿದೆ ನನ್ನಕನಸು,
ಈಗ ಉಳಿದಿರೋದು
ಅದು ತಪ್ಪಿಸಿಕೊಂಡ ದಾರಿ
ಹತಾಶೆಯ ಕಗ್ಗತ್ತಲು
ಹಾದಿ ನೋಡುವ ಎರಡು ಕಣ್ಣು,

– ಎಂದು ಆರುಮೂರೆಂಬತ್ತು ಚಿಂತಿಸಿ ಧಾರಾವತಿ ಕಣ್ಣೀರು ಸುರಿಸಿದ.

ಕಾಲವೆಷ್ಟೋ ಸಂದಾಯವಾದರೂ ಕಗ್ಗತ್ತಲು ಸರಿಯಲಿಲ್ಲ. ಇದ್ಯಾವುದೋ ನಾಯಿ ನರಕವಿರಬೇಕು. ತಮಂಧಘನ ಘನಾಂದಾರಿ ಕಗ್ಗತ್ತಲು. ಕೈಗೆ ತಾಗುವ ಕತ್ತಲು. ಮೈಗೆ ಮೆತ್ತುವ ಕತ್ತಲು, ಕತ್ತಲೆಗೆ ನಕ್ಷತ್ರಗಳು ನಂದಿಹೋಗಿವೆ. ಜಗತ್ತು ಸುಟ್ಟು ಕರಕಾಗಿ ಬಿದ್ದಿದೆ. ಮನೆ ಸ್ವಾಮಿ ಚಂದಪ್ಪನ ನೆನೆದ. ನೆನೆದೊಡನೆ ಮನಸ್ಸಿನಲ್ಲಿ ಬೆಳ್ಳಗೆ ಮೂಡಿದನಲ್ಲ. ಕ್ಷಣಮಾತ್ರದಲ್ಲಿ ಮನಸ್ಸಿಗೂ ಕತ್ತಲಾವರಿಸಿ ಚಂದಪ್ಪನೂ ಇದ್ದಿಲಾದ. ಹತಾಶನಾಗಿ ಚಂದಮುತ್ತ ಕಣ್ಣೆಂಬ ನಿರಿಂದ್ರಿಯ ಮುಚ್ಚಿಕೊಂಡು ಬಿದ್ದ. ಮುಚ್ಚಿಕೊಂಡರೆ ಒಳಗೂ ಕತ್ತಲು. ತಾನೆಂಬ ಸಣ್ಣಹಂಕಾರವಿನಾ ಬೇರೇನೂ ಉಳಿಯದೆ, ಇಷ್ಟಾದ ಮ್ಯಾಕೆ ಅದಿನ್ಯಾಕೆಂದು ಅದನ್ನೂ ಶಿವನಡಿಗೆ ಅರ್ಪಿತ ಮಾಡಬೇಕೆಂದು ಸುತ್ತ ಕೈಯಾಡಿಸಿದ. ಮಾರುದ್ದ ಕೋಲು ಸಿಕ್ಕಿತು. ಮಸೆದ ಹಾಗೆ ತುದಿ ಚೂಪಾಗಿತ್ತು. ಸಾಕೆಂದು ಚುಚ್ಚಿಕೊಳ್ಳಲು ಉದರಕ್ಕೆ ಗುರಿ ಹಿಡಿದು ತಂದೆತಾಯಿಯ ನೆನೆದ, ಬಂಧುಬಳಗವ ನೆನೆದ, ಜಾತಿ ಕುಲದವರ ನೆನೆದ, ವಾರಿಗೆಯವರ ನೆನೆದ, ಸತ್ತ ಮುದಿ ಹಸು ಪುಣ್ಯಕೋಟಿಯ ನೆನೆದ, ಕಪಿಲೆಯ ನೆನೆದ, ಕಾಳ್ನಾಯಿ ಬಿಳಿನಾಯಿಗಳ ನೆನೆದು ನಮ್ಮ ಋಣ ಇಂದಿಗೆ ಸಂದಾಯವಾಯಿತೆಂದು ಮನೆಸ್ವಾಮಿ ಚಂದಪ್ಪನ ನೆನೆದು ರಭಸದಿಂದ ಇರಿದುಕೊಳ್ಳುವಷ್ಟರಲ್ಲಿ, "ತಡಿ ತಡಿ ಯಾಕವಸರ?" ಎಂದು ಘನವಾದ ಮೌನವ ಸೀಳಿದ ದನಿ ಕೇಳಿಸಿತು. ಜೊತೆಗೇ ಗಲಿರು ಗಲಿರು ಅಂತ ಜಂಗಿನ ಸದ್ದು ಕೇಳಿಬಂತು. ನೋಡಿದರೆ ಕತ್ತಲೆಗೆ ಕಣ್ಣು ಮೂಡುವಂತೆ ಎದುರಿಗೆರಡು ಹಸಿರು ಜ್ಯೋತಿ ನಡೆದು ಬರುವಂತೆ ಕಂಡವು. ಅವು ಸಮೀಪ ಬಂದ ಬಂದ ಹಾಗೆ ತನಗೇ ಕಣ್ಣು ಬಂದಂತೆ ಬೆಳಗಾಯಿತು. ನೋಡಿದರೆ ಎದುರಿಗೆ ಮೂಜಗ ಸೋಜಿಗ ಮೂರು ಕಾಲಿನ ಪ್ರಾಣಿಯಿದೆ! ಮುಖದಲ್ಲೆರಡು ಕಣ್ಣುಬಿಟ್ಟರೆ ಉಳಿದೆಲ್ಲ ಮೂಳೆಮೂಳೆಯಾದ, ಮೂಳೆಯ ರೇಖೆಗಳಿಂದ ಅಸ್ಥಿಪಂಜರ ರೂಪಿಯಾದ ಈ ಪ್ರಾಣಿ ಅಥವಾ ಗೋರಿಯಿಂದೀಗಷ್ಟೇ ಎದ್ದುಬಂದಂಥ ಅಲೌಕಿಕ ಜೀವ ಎದುರು ನಿಂತಿದೆ! ಚಂದಮುತ್ತನ ಹೃದಯ ಎದೆಗೆ ಡಬ ಡಬ ಹೊಡೆಯಿತು. ತುಟಿಗಳಿಲ್ಲವಾಗಿ ಸದಾ ನಗುವಂತಿದ್ದ ಅದರ ಮಾತು ಕೇಳಿಯೇ ಜೀವ ಬಂತು.

"ನಿನ್ನ ಕೈಲಿರೋದು ಏನಂದುಕೊಂಡೆ?"

- ಎಂದಿತು ಪ್ರಾಣಿ. ತಕ್ಷಣ ನೋಡಿಕೊಂಡ. ಕೈಯಲ್ಲಿ ದೀರ್ಘವಾದ ನೀಳವಾದ ಕೊಂಬಿದೆ.

"ಅದು ಯಾರ ಕೊಂಬೆಂದು ಬಲ್ಲೆಯಾ?

"ಗೊತ್ತಿಲ್ಲ ಶಿವಪಾದವೆ"

"ಅದು ನಿನ್ನ ಸತ್ತ ಪುಣ್ಯಕೋಟಿಯ ಕೊಂಬು".

ತಿಂಗಳ ರಾಗ ನುಡಿಸಲು ಅದಕ್ಕಿಂತ ಉತ್ತಮ ಗಣೆ ಬೇಕೇನೋ ಬಾಲಕ?"

- ಎಂದು ಹೇಳಿ ಗಾಳಿಯಲ್ಲಿ ಆ ಪ್ರಾಣಿ ಕರಗಿ ಹೋಯಿತೆ!

ನೀಲಿ ವಜ್ರದಂಥ ಕಣ್ಣು, ರೇಖುಗಂಧಗಳ ಭಸಿತವ ಧರಿಸಿದ್ದ ರೇಖಾಕೃತಿಯಂಥ ಅದರ ಆಕಾರ ಮತ್ತು ಮಾತಿನಿಂದ ನಿಬ್ಬೆರಗಾದ ಹುಡುಗ ಮೆಲ್ಲಗೆ ನಮ್ಮ ಲೋಕಕ್ಕೆ ಬಂದ.

ಮಾರುದ್ದ ಕೊಂಬು ಓರೆಕೋರೆ ಗಂಟುಗದಡಿಲ್ಲದೆ ತೆಳ್ಳಗೆ ನೀಳವಾಗಿ ಮಾಟವಾಗಿ ಬೆಳೆದಿತ್ತು. ಅದು ತನ್ನ ಗೊಲ್ಲ ಗೋಕುಲ ಕುಲದ ಪುಣ್ಯಕೋಟಿಯ ಕೊಂಬೆಂದು ತಿಳಿದು ಅಭಿಮಾನವಾಯಿತು.

ಕೊಂಬು ನುಣ್ಣಿಸಿ ಉಸಿರಾಡುವ ರಂಧ್ರವ ಕೊರೆದು
ಗಣೆ ಮಾಡಿದ ಚಂದಮುತ್ತ,

ಗಣೆಯಲ್ಲಿ ಇನ್ನೆಂಟು ರಂಧ್ರಗಳ ಕೊರೆದು
ಒಟ್ಟು ನವನಾಳಗಳಿಂದ ಪ್ರಾಣ ಹರಿವಂತೆ ಮಾಡಿ
ಹೆಣ್ಣು ಕೊಳಲು ಮಾಡಿದ ಚಂದಮುತ್ತ,
ಹಚ್ಚೆಯ ಬರೆದು, ಹೂಮುಡಿಸಿ
ಕಳೆದ ಹಾಡನ್ನ ಅನುಗ್ರಹಿಸು ತಾಯೇ ಎಂದು
ಭಕ್ತಿಯ ಮಾಡಿ
ಕೊಳಲನ್ನ ತುಟಿಗಿಟ್ಟುಕೊಂಡ ಚಂದಮುತ್ತ,
ಹದಮೀರದ ಹಾಗೆ ಉರಿಸನ್ನ ನಾಭಿಯಲ್ಲಿ ನಿಯಂತ್ರಿಸಿ
ಕಟ್ಟಿ ಮೆಲ್ಲಗೆ ಉಸಿರು ತುಂಬಿ
ಓಂಕಾರವನೂದಿದ ಚಂದಮುತ್ತು,
ದುಃಖತಪ್ತ ತಾಯಿ ತಪ್ಪಿಸಿಕೊಂಡ ಮರಿಯ ಕರೆವಂತೆ
ಮೆಲ್ಲಗೆ ಕೊಳಲೂದಿದ ಚಂದಮುತ್ತ.

ಅನತಿದೂರ ಕಾಡಿನಲ್ಲಿ ತಪ್ಪಿಸಿಕೊಂಡ ಜಿಂಕೆಮರಿಯಂತೆ ನಿಂತುಕೊಂಡಿದ್ದ ಹಾಡು ಕಂಡಿತು. ಹೃದಯ ಭಗ್ಗನೆ ಹೊತ್ತಿಕೊಂಡಿತು. ಮತ್ತೆ ನುಡಿಸಿದ. ಕೊಳಲುಲಿ ಮೈಗೆ ತಾಗಿ ಜಿಂಕೆಮರಿ ಥರಥರ ನಡುಗಿತು. ಇನ್ನಷ್ಟು ಸಮೀಪಕ್ಕೆ ಸರಿದ. ಜಿಂಕೆಮರಿ ಅಪಾಯದ ಗಾಬರಿಯಲ್ಲಿ ಓಡಲಾರದೆ ಭಯ ಬೆರೆತ ಬೆರಗಿನಲ್ಲಿ ನಿಂತುಕೊಂಡಿತ್ತು. ಹಾಲುಂಡ ನೆನಪು ಮರುಕಳಿಸುವಂತೆ ಕೊಳಲು ನುಡಿಸಿ, ಕಳ್ಳ ಹೆಜ್ಜೆಯನಿಡುತ್ತ ಮೆಲ್ಲಗೆ ಹಿಂದಿನಿಂದ ಹೋಗಿ ಗಪ್ಪನೆ ಹಿಡಿದುಕೊಂಡ. ಬೆಚ್ಚಗಿತ್ತು ಜಿಂಕೆ, ಮೃದುವಾಗಿತ್ತು ಮರಿ; ಅಕ್ಕರೆಯಿಂದ ಆಕ್ರಮಿಸಿ ಎದೆಗಪ್ಪಿಕೊಂಡು ಮೂಸಿ ಮುದ್ದಿಸಿ ಸ್ಪರ್ಶ ಸುಖವುಂಡ. ಸಂತೋಷ ಮೀರಿ ವಿಸ್ತಾರವಾದವು ಹೃದಯ, ಬಿಗಿದಪ್ಪುಗೆಯಲ್ಲಿ ಉಸಿರಿನ ಲಯ ತಪ್ಪಿ ಗಕ್ಕನೆ ಹಾಡು ತಪ್ಪಿಸಿಕೊಂಡು ಕಾಡಿನಲ್ಲಿ ಮತ್ತೆ ಕಣ್ಮರೆಯಾಯಿತು.

ಇಂತೀಪರಿ ಅಡಗುವ ಹಾಡು, ಹುಡುಕುವ ಚಂದಮುತ್ತ - ಇಬ್ಬರ ಆಟ ದಿನಾ ನಡೆದು ಒಂದು ದಿನ ಅಡಗಿದ ಹಾಡನ್ನು ಕಾಡಲ್ಲಿ ಹುಡುಕುತ್ತಿರಬೇಕಾದರೆ ಬಳ್ಳಿಯ ಆಳ ತಿಳಿಯದೆ ಕಾಲಿಟ್ಟು ಪಾತಾಳದ ಕಮರಿಗೆ ಪತನವಾದ.

## ೧೫. ಎಂಥಾ ಲೋಕವಯ್ಯಾ!

ಪತನಗೊಂಡ ಚಂದ್ರಮುತ್ತನಿಗೆ
ಬೋಧೆ ಬಂದು ಸ್ಮೃತಿಯಾಗಿ ಕಣ್ಣು ತೆರೆದರೆ
ಶಿವ ಶಿವಾ ಎದುರಿಗೆ ಎಂಥಾ ಲೋಕವಯ್ಯಾ!

ಮ್ಯಾಲೆ ಸೂರ್ಯನಾರಾಯಣಸ್ವಾಮಿಯಿಲ್ಲ
ಮನೆದೇವರು ಚಂದಪ್ಪನಿಲ್ಲ
ಹೇಳ ಕೇಳುವುದಕ್ಕೆ ಯಾರೂ ಇಲ್ಲ.

ಬಯಲ ಬಸಿರಲ್ಲಿ ನೆಲೆಗೊಂಡ ಸಾವಿನಂಥ
ಘನಾಂದಾರಿ ಮೌನದ ಲೋಕವಯ್ಯಾ!
ಹಗಲೆಂದರೆ ಹಗಲಲ್ಲ ರಾತ್ರಿಯೆಂದರೆ ರಾತ್ರಿಯಲ್ಲ

ಹಸಿರು ಹಸಿರಂತಿಲ್ಲ, ಮರವು ಮರದಂತಿಲ್ಲ,
ಬೀಸದ ಗಾಳಿಯಿದೆ, ಹರಿಯದ ನೀರಿದೆ.
ಕದಡಿದ ಕನಸಿನ ಹಾಗೆ ಮ್ಯಾಲೆ ಆಕಾಶವಿದೆ
ಲೋಕದ ಶಾಪಂಗಳು ಆಕಾರಗೊಂಡು
ವಿಕಾರಗೊಂಡು ಕೆಳಗೆ ಬಂದೈದಾವೆ.
ಹರ್ಷಂಗಳು ಇದ್ದಿಲಾಗಿವೆ.
ಆನಂದಗಳು ಭಸ್ಮವಾಗಿವೆ.
ಮೂಲೆ ಮೂಲೆಗೆ ಕಾಮನಬಿಲ್ಲು ಮುರಿದು
ಒಟ್ಟಿದ ಗೊಬ್ಬರ ಹಾಂಗೇ ಇದೆ.

ಕಣ್ಣು ತೆರೆದರೆ ಕಣ್ಣಿಗೊತ್ತುವ ಲೋಕ
ಮುಚ್ಚಿದರೆ ಎದೆಗಡರಿ ನೋಯಿಸುವ ಲೋಕ
ಬಂದ ದಾರಿ ಯಾವುದು ಶಿವನೇ
ಹೋಗುವ ದಾರಿ ಯಾವುದೆಂದು
ಎಲ್ಲಿಂದೆಲ್ಲಿಗೆ ಬಂದೆನೆಂದು
ಇದ್ಯಾವ ದೇಶ ಯಾವ ಲೋಕ ಯಾವ ನರಕವೆಂದು
ಹಿಂಡನಗಲಿದ ಕರುವಿನಂತೆ ಚಂದಮುತ್ತ
ಗಾಬರಿಯಲ್ಲಿ ಅತ್ತಿತ್ತ ಓಡಾಡಿದ.
ಅಡರಿದ ಭಯದಲ್ಲಿ ನಿಂತಲಲಿ ನಿಲ್ಲಲಾರದೆ ಕೂತಲ್ಲಿ
ಕೂರಲಾರದೆ ಗೊತ್ತುಗುರಿ ಗೊತ್ತಾಗದೆ ನಡೆಯಲಾರದೆ
ಬದುಕಿರುವೆನೋ ಸತ್ತಿರುವೆನೋ ಎಂದು
ತನ್ನ ತಾನು ಗುದ್ದಿ ನೋಡಿಕೊಂಡ.
ತನ್ನ ತಾನು ಚಿವುಟಿ ನೋಡಿಕೊಂಡ.
ಸತ್ಯುಳ್ಳ ಸದಾ ಶಿವಲಿಂಗದೇವಾ ಎಂದು
ಕರುಳು ಕಿತ್ತು ಬಾಯಿಗೆ ಬರುವಂತೆ ಕಿರಿಚಿದ.
ಕಿರಿಚಿದ್ದು ತನಗೇ ಕೇಳಿಸದೆ, ತಾನು ಸತ್ತಿರುವೆನೆಂದು ಖಾತ್ರಿಯಾಗಿ
ಭೂಮಿ ಆಕಾಶ ಅದಲು ಬದಲಾದ
ಯಮಧರ್ಮರಾಯನ ಲೋಕವಿದೆಂದು
ಹತಾಶನಾಗಿ ಬಿದ್ದ.

ಶಿವನ ದಯೆ, ತಂಗಾಳಿ ಬೀಸಿ ನಿರ್ಜೀವ ಲೋಕದಲ್ಲಿ ಜೀವ ಸಂಚಾರವಾದಂತೆ ದೂರದಿಂದ ಯಾರೋ ಹಾಡುತ್ತಿದ್ದದ್ದು ಕೇಳಿಸಿತು. ಎಳೆಎಳೆಯಾಗಿ ಬರುತ್ತಿದ್ದ ದನಿಯ ಸುಳಿ ಹಿಡಿದು ಚಂದಮುತ್ತ ಹೊರಟ.

ಕ್ಷಿತಿಜದೀಚೆ ಎತ್ತರದ ಬೆಟ್ಟಕ್ಕಂಟಿ ಸಾವಿರದೆಂಟು ಕಂಬಗಳ ಶಿವದೇವಾಲಯ, ಕಂಬಗಳ ಮ್ಯಾಲೆ ಛಾವಣಿಯಾಗಿ ನೀಲಿಮ ಆಕಾಶವನ್ನೇ ಹೇರಿದ್ದಾರೆ. ಒಮ್ಮೆ ಒಳಹೊಕ್ಕರಾಯ್ತು ಎತ್ತ ನೋಡಿದತ್ತ ಎತ್ತರವಾದ, ಆಕಾಶವ ಹೊತ್ತ ಕಂಬಗಳೇ ಕಾಣಿಸುತ್ತಿದ್ದಾವೆ. ಗರ್ಭಗುಡಿಯ ಗಂಭದಲ್ಲಿ ಕತ್ತಲೆ ವಿನಾ ಮತ್ತೇನೂ ಕಾಣುತ್ತಿಲ್ಲ. ಅದರ ಮುಂದೆ ಶಾಂತಿಚಿತ್ತ ನಂದಿ ಮಾತ್ರ ಮೆಲುಕಾಡಿಸುತ್ತ

ಮಲಗಿದೆ. ಅದರೀಚೆ ಡೊಳ್ಳು ಹೊಟ್ಟೆಯ ದಡಿಯನೊಬ್ಬ ಹಾಡಿನೆಳೆಯ ಹಿಡಿದೆಳೆಯುತ್ತ ಶಾವಿಗೆಯೆಳೆದಂತೆ ಸಣ್ಣದಾಗಿ ಹೊಸೆಯುತ್ತ ಬಹಳ ಹೆಚ್ಚಳದಿಂದ ಕುಂತಿದ್ದಾನೆ. ಈಚಲಮರದಂತೆ ತಲೆಕೆದರಿ ಕಾದಕಬ್ಬಿಣದ ಉಂಡೆಗಾತ್ರದ ಕಣ್ಣು, ಮುಖವು ತುಸು ಅಲುಗಿದರೂ ಕಳಚಿ ಬೀಳುವಂತಿದ್ದಾವೆ. ಎಲಡಿಕೆಯ ಸೀರ್ಪನಿಯಲ್ಲಿ ದನಿ ಒದ್ದೆಯಾಗಿ ಒಡೆದು ಬರುತ್ತ ಇದೆ. ಮೈಮ್ಯಾಲೆ ಸೊಂಟ ವಿನಾ ಚಿಂದಿ ಬಟ್ಟೆಯಿಲ್ಲ. ಹಾಡಿನೆಳೆ ಅವನ ನಾಭಿಕುಹರದ ಆಳದಲ್ಲಿ ಅಡಗಿದ್ದದ್ದು ಸಿಕ್ಕರೆ ಚಿತ್ತವ ಏಕೀಭವಿಸಿ ಒಳಕ್ಕೆ ಹೆಕ್ಕಿಹೆಕ್ಕಿ ಹುಡುಕುತ್ತಿದ್ದಾನೆ. ಇಡೀ ಶಿವಾಲಯದ ಗುಂಭ ತಂಬೂರಿಯ ಮಿಡಿದಂತೆ ಆಧಾರಶೃತಿಯ ನುಡಿಯುತ್ತಾ ಇದೆ.

ಇಂತೀಪರಿ ಸಂಗೀತದ ತಯಾರಿ ನಡೆದಿರುವಲ್ಲಿ ಕಂಬಕಂಬಗಳ ಸಂದಿಯಲ್ಲಿ ಬಚ್ಚಿಡಲಾಗದ ತಪ್ಪುಗಳಂಥ ಬಗೆಬಗೆ ಜೀವಂಗಳು, ಅವಯವಳು ಅದಲು ಬದಲಾಗಿ ವಿಕಾರಗೊಂಡ ಜೀವಂಗಳು, ನೀರುಗುಳ್ಳೆಯಂಥ ಕಣ್ಣು ಪಿಳಿಪಿಳಿ ಬಿಡುತ್ತಿದ್ದ ಅಸಹಾಯ ಜೀವಂಗಳು ಮಹಾನುಭಾವನ ಸಂಗೀತಕ್ಕಾಗಿ ಕಾಯುತ್ತಾ ಇವೆ. ಯಾವುದೋ ದೇವತೆಗೆ ಶರಣಾಗಿ ಮಂತ್ರಭಾವಿತದಿಂದ ಕರೆದು, ಬಾರದ ಹಾಡಿಗೆ ಬಂದೊದಗೆಂದು ಅಂಗಲಾಚುವಂತೆ. ಒಲಿದು ಬಂದು ಅನುಗ್ರಹಿಸಬೇಕೆಂದು ವಿನಂತಿಸುವಂತೆ ಆಲಾಪವ ಸುರು ಮಾಡಿದ. ಚಂದಮುತ್ತ ಮೆಲ್ಲಗೆ ಶಿವಾಲಯವ ಪ್ರವೇಶಿಸುತ್ತಲೂ ಅಲ್ಲಿದ್ದ ವಿಕಾರ ಜೀವರಾಶಿ ಹುಬ್ಬೇರಿಸಿ ಏರಿದ ಹುಬ್ಬು ಏರಿದ ಹಾಗೆ ಕಿರುಗಣ್ಣಲ್ಲಿ ಅರೆಗಣ್ ಬಿಟ್ಟು ಇವನನ್ನೇ ಕಣ್ಣಿಂದಿರಿಯತೊಡಗಿದವು. ಕದ್ದವನಲ್ಲ. ಕನ್ನ ಹಾಕಿದವನಲ್ಲ ಶಿವ ಶಿವ ಇವ್ಯಾಕೆ ತನ್ನ ಹಿಂಗೆ ನೋಡುತ್ತಾವೆಂದು ಚಂದಮುತ್ತನ ಜೀವ ಜಲ್ಲೆಂದವು. ಕಂಪಿತನಾಗಿ ಮುದುಡಿ ಕಂಬವೊಂದರ ಮರೆಯಲ್ಲಿ ಹುದುಗಿದ.

ಮಹಾನುಭಾವನ ಧ್ವನಿ ಆಗಲೇ ಹದಕ್ಕೆ ಬಂದು ಪರಿಚಿತ ಸೀಮೆಗಳಲ್ಲಿ ಸಹಜವಾಗಿ ಸಂಚರಿಸುತ್ತ ಆನಂದಲೋಕಂಗಳ ಸೃಷ್ಟಿ ಮಾಡತೊಡಗಿತು. ಈ ಹೊಸ ಸೃಷ್ಟಿಗೆ ಕ್ಷಿತಿಜದಾಚೆಗೆ ಯಾವುದೋ ಶಕ್ತಿಕೇಂದ್ರವಿದೆಯೆಂದು ಹಾಡು ಕೇಳಿದವರಿಗೆ ತಿಳಿಯುವಂತಿತ್ತು. ಹಾಡುಗಾರಿಕೆ ತೀವ್ರವಾದಂತೆ ಶಿವ ಶಿವಾ, ಶಿವಾಲಯದ ಕಂಬಗಳು ಬಗೆ ಬಗೆ ವಾದ್ಯಗಳ ದನಿ ಮಾಡಿ ಹಾಡಿಗೆ ಸ್ವರಮೇಳ ಒದಗಿಸಿದವು.

ಇಂತೀಪರಿ ಹಾಳುಲೋಕ ಕೈಲಾಸವಾಗುತ್ತಿರುವಲ್ಲಿ ಚಂದಮುತ್ತ ಮೈಯೆಲ್ಲ ಕಿವಿಕಣ್ಣಾಗಿಸಲು ಮಹಾನುಭಾವ ಥಟ್ಟನೆ ಹಾಡು ನಿಲ್ಲಿಸಿ,

“ಆ ಕಂಬಕ್ಕೇನು ಧಾಡಿಯಾಗಿದೆ? ಅದ್ಯಾಕೆ ದನಿಗೂಡುತ್ತಿಲ್ಲ?” ಎಂದು ರವರುದ್ರಗೋಪದಲ್ಲಿ ಕಿರಿಚಿ ಚಂದಮುತ್ತ ಮರೆನಿಂತ ಕಂಬವ ಗುರಿ ಮಾಡಿ ಕಣ್ಣಿಂದಿರಿದ. ಹಾಡು ಹರಿಗಡಿದು ಇಡೀ ಶಿವಲೋಕ ನಿಶ್ಯಬ್ದವಾಗಿ ಕಟ್ಟಿದ್ದ ಕೈಲಾಸ ಕುಸಿದು ಮತ್ತೆ ಹಾಳು ಲೋಕವಾಯಿತು.

“ನರಮಾನವನೊಬ್ಬ ಮುಟ್ಟಿ ಆ ಕಂಬ ಮೈಲಿಗೆಯಾಗಿದೆಯಾಗಿ ಅದು ಮಹಾ ಸಂಗೀತದಲ್ಲಿ ಭಾಗಿಯಾಗುತ್ತಿಲ್ಲ ಶಿವಪಾದವೇ”

– ಎಂದು ಯಾರೊ ದನಿಯೆತ್ತಿದರು.

“ಯಾರು ಆ ಪಾಪಿ?”

ಅಲ್ಲಿದ್ದ ಜೀವರಾಶಿಗಳ ನೀರುಗುಳ್ಳೆ ಕಣ್ಣುಗಳೆಲ್ಲ ಈಗ ಚಂದಮುತ್ತನ್ನ ಇರಿಯತೊಡಗಿದವು. ಹುಡುಗ ಗಾಬರಿಯಲ್ಲಿ ಕರುವಿನಂತೆ ಥರಥರಗುಡುತ್ತ ಸದರಿ ಕಂಬದ ಮರೆಯಿಂದ ಹೊರಬಂದು ಕರುವಿಗಿರುವಂಥ ದೊಡ್ಡ ಕಣ್ಣು ತೆರೆದು ಶಿರಬಾಗಿ ಕರಮುಗಿದು ಹ್ಯಾಗೋ ಕಾಲೂರಿ ನಿಂತ. ಮಹಾನುಭಾವ ಉರಿದುರಿದು ಇನ್ನೇನು ಸಿಡಿಯಲಿದ್ದ ಕಣ್ಣುಗಳಿಂದ ಇವನ ನೋಡಿದ. ಹೊತ್ತಿಕೊಂಡ ಹುಬ್ಬು ಹೊಗೆಯಾಡುತ್ತಿದ್ದವು. ಗುಡುಗಿದ:

“ಯಾರು ನೀನು?”

“ದಯವಾಗು ಶಿವಪಾದವೇ. ಕುಲದಲ್ಲಿ ಗೊಲ್ಲ, ಜಾತಿಯಲ್ಲಿ ಹಾಲುಮತ, ಶಿವಾಪುರ ಅನ್ನತಕ್ಕ ಘನವಾದ ಹಟ್ಟಿಯ ಚಂದಮುತ್ತ ನಾನು” ಎಂದು ನಿಂತಲ್ಲೇ ಧರಣಿಗೆ ಬಿದ್ದು ಸಾಷ್ಟಾಂಗ ಬಿನ್ನಪ ಎರಗಿದ.

“ಥೂ ಚಂಡಾಲ ನನ್ನ ಒಂದು ವರ್ಷದ ತಪವ ಹಾಳು ಮಾಡಿದೆ” ಎಂದು ನಿಂದಕದ ನುಡಿಯಾಡುತ್ತ ತೊಪಕ್ಕೆಂದು ಚಂದಮುತ್ತನ ಮ್ಯಾಲೆ ಉಗಿದು ಅದೂ ಸಾಲದೆಂದು ತಿರಸ್ಕಾರದಿಂದ ನೋಡುತ್ತ ಗರ್ಭಗುಡಿಯ ಕರಿಘನಲಿಂಗದಂಥ ಕಗ್ಗತ್ತಲಲ್ಲಿ ಮಾಯವಾದ. ಶಿವಾಲಯ ವಿನಾ ಉಳಿದೆಲ್ಲ ವಿಕಾರ ಜೀವಲೋಕ ಅವನೊಂದಿಗೇ ನಿಂತ ನಿಂತಲ್ಲೇ ಮಾಯವಾಯಿತು.

## ೧೬. ವಿಕಾರ ರಾಗಂಗಳು

ಚಂದಮುತ್ತ ಒಳಗೆ ಹೋಗಲು ಧೈರ್ಯಸಾಲದೆ ಮಹಾನುಭಾವ ಹೊರಗೆ ಬಂದಾನೆಂದು, ಬಾರದಿರನೆಂದು, ಬಂದೇ ಬರುವನೆಂದು, ಯಾವಾಗ ಬರುವನೋ ಮಹಾರಾಯನೆಂದು, ಬಂದಾಗ ಬರಲೆಂದು ಗರ್ಭಗುಡಿಯ ದ್ವಾರಬಾಗಿಲು ಕಣ್ಣಾಗಿ ಕಾಯುತ್ತ ಕೂತ. ಬರುವಂತೆ ಮಾಡೆಂದು ಶಿವನಾಮವ ನಾಲಗೆಯ ಮ್ಯಾಲೆ ತೇಯುತ್ತ ಸಮಯದ ಪರಿವೇ ಮರೆತು ಕೂತ. ಹೆಗಲ ಕಂಬಳಿ ಕೈಯ ಕೋಲು ಹಿಡಿದ ಹಾಗೇ ಕುಳಿತು ಕಣ್ಣು ಮುಚ್ಚಿದ. ಕಂಬಳಿ ವಾಸನೆಗೆ ಕಣ್ಣಲ್ಲಿ ಸ್ವಪ್ನವಾಗಿ -

ಓಡೋಡಿ ಬಂದವು
ಕುರಿಮಂದೆ, ದನಕರು ಅಟ್ಟಿಸಿಕೊಂಡವರಂತೆ,
ಚಂದಮುತ್ತ ಗಕ್ಕನೆ ಎಳೆಹುಲ್ಲು ಬೆಳೆದ ಗೋಮಾಳವಾಗಿ
ಅಲುಗದೆ ಮಲಗಿದ.
ಓಡೋಡಿ ಬಂದವು ಏಳೇಳು ಹಿಂಡು ಕುರಿ
ಏಳೇಳು ಹಿಂಡು ದನ.
ಕೆಂದಾಕಳು ಕಪಿಲೆ
ಹಣಿಚಿಕ್ಕೆ ಹೋರಿ ನಂದಿ
ಕಾಳೆಮ್ಮೆ ಜಕ್ಕಿ
ಕಂದುನಾಯಿ ಕರಿಬಿಳಿ ನಾಯಿ
ತನ್ನ ಮ್ಯಾಲೆ ಬೆಳೆದಿದ್ದ ಗರಿಗರಿ ಗರುಕೆಯ ತುಳಿಯುತ್ತ
ಮಿರುಮಿರುಗುವ ಇಬ್ಬನಿಯ ನೆಕ್ಕುತ್ತ
ಬಂದವು.
ಹಿಂದಿನಿಂದ ತಾಯಿ ಜಗಳವಾಡುತ್ತಾ
ಶಿವನಿಗೆ ಶಾಪ ಹಾಕುತ್ತಾ ಕಳೆದ ಕರುವಿನ ಈದ ಹಸುವಿನಂತೆ ಬರುತ್ತಿದ್ದರೆ,
ಅವಳಿಗೂ ಹಿಂದೆ ಮುದಿಜೋಗ್ತಿ
ಬೆಂಕಿ ಹತ್ತಿದ ಕಾಡಿನಂತೆ
ಸುಡುತ್ತಾ, ಸುತ್ತ ಬೆಳಗುತ್ತಾ
ಬರುತ್ತಿರುವಲ್ಲಿ
ಅವಳ ಬೆಂಕಿಯಲ್ಲಿ ಮಹಾನುಭಾವ
ಕೀಡೆಯಂತೆ ಹುರುಪಳಿಸುತ್ತಾ ಕಿರುಚುತ್ತಾ

ಹೊರಳಾಡುತ್ತಿರುವುದ ಕಂಡು
ಸ್ಮೃತಿಗೆ ಬಂದ.

ಸ್ಮೃತಿಗೆ ಬಂದು ನೋಡಿದರೆ ಗರ್ಭಗುಡಿಯ ಒಳಗಡೆಯಿಂದ ಮಹಾನುಭಾವ ನಿಜವಾಗಿ ಕಿರುಚುತ್ತಿದ್ದಾನೆ! “ಕಾಪಾಡಿರೋ” ಎಂದು, “ಶಿವಧೋ” ಎಂದು ಗೋಳು ಗೋಳೆಂದು ದುಃಖವ ಮಾಡುತ್ತಿದ್ದಾನೆ! ಅವನ ಆರ್ತಧ್ವನಿಗೆ ಪ್ರತಿಧ್ವನಿಸಿ ಇಡೀ ಶಿವಾಲಯದ ಅಷ್ಟೂ ಕಂಬಗಳು ಸಾವಿರಪಟ್ಟು ಜೋರಾಗಿ ಕಿರಿಚಿ ಮ್ಯಾಲೆ ಕೆಳಗಿನ ಏಳೇಳು ಒಟ್ಟು ಹದಿನಾಕು ಲೋಕಂಗಳು ನಡುಗುತ್ತಾ ಇವೆ. ಒಳಗೆ ಈಗ ಕತ್ತಲೆ ಬದಲು ಬೆಂಕಿ ಹತ್ತಿ ಉರಿಯುತ್ತಾ ಇದೆ. ಅಯ್ಯೋ ಮಹಾನುಭಾವನಿಗೇನೋ ಬರಬಾರದ ಕಷ್ಟ ಒದಗಿ ಬಂದಿದೆಯೆಂದು ವೇದ್ಯವಾಗಿ ಹಿಂದೆಮುಂದೆ ನೋಡದೆ ಚಂದಮುತ್ತ ಒಳಗೆ ಹೊಕ್ಕ. ನೋಡಿದರೆ ಶಿವ ಶಿವಾ, -

ಜಗ ಜಗ ಬೆಂಕಿಯ ಜ್ವಾಲೆಯ ಚಿಲುಮೆ
ಎತ್ತರೆತ್ತರ ಚಿಮ್ಮುತ್ತಾ ಇವೆ.
ಸ್ಥಾಪನೆಗೊಂಡ ಶಿವಲಿಂಗದ ಪಕ್ಕದಲ್ಲಿ ಮಹಾನುಭಾವ
ಅಂಗಾತಾಗಿ ಅಸಹಾಯನಗಿ ಆಕಾಶದ ಕಡೆ ನೋಡುತ್ತಾ
ಶಿವದುಃಖ ಶೋಕವ ಮಾಡುತ್ತಾ ಒದ್ದಾಡುತ್ತಿದ್ದಾನೆ.
ಅವನ ಬೊಜ್ಜಿನ ಮ್ಯಾಲೆ
ಹಿಂದೆ ಕಂಡ ವಿಕಾರ ಜೀವಂಗಳು, ಪಿಶಾಚಿ ಗಣಂಗಳು
ನಿರ್ದಯವಾಗಿ ತುಳಿಯುತ್ತಾ,
ಕಾಡುಪ್ರಾಣಿಗಳಂತೆ ಕೇಕೆ ಹಾಕುತ್ತಾ, ಕುಣಿಯುತ್ತಾ ಇವೆ!
ಅವನು ನೋವಿನಿಂದ ನೊಂದು
ಬೆಂಕಿಯಲ್ಲಿ ಬೆದ ಬೆದ ಬೆಂದು
ಎಷ್ಟೆಷ್ಟು ಕಿರಿಚಿದರೆ ಅಷ್ಟಷ್ಟೂ ಉತ್ತೇಜನಗೊಂಡು
ಕುಣಿಯುತ್ತಾ ಇವೆ!
ತಕ್ಷಣ ಚಂದಮುತ್ತ ಮಹಾನುಭಾವನ ಮುಖದ ಬಳಿ ಹೋಗಿ ಮೊಳಕಾಲೂರಿ ಕುಂತು,

“ಶಿವಪಾದವೇ ನಾನೇನು ಮಾಡಲಿ?”
ಅಂದ. ಇವನ ಕಡೆ ನೋಡಲೂ ಸಾಧ್ಯವಾಗದೆ ಮಹಾನುಭಾವ
“ಹಾಡು ಹಾಡು, ಬರುತ್ತಿದ್ದರೆ ಬೇಗ ಹಾಡು”

- ಎಂದು ನೋವು ತಾಳದೆ ಒದ್ದಾಡಿದ. ಚಂದಮುತ್ತ ಇನ್ನೊಂದು ಚಿಂತಿಸದೆ ಸೊಂಟದ ಕೊಳಲು ತೆಗೆದು ತಾನು ಬಲ್ಲ ರಾಗಂಗಳ ಬಲ್ಲಂತೆ ನುಡಿಸತೊಡಗಿದ. ತುಳಿಯುತ್ತಿದ್ದ ಪಿಶಾಚಿಯ ಕಣ್ಣುಗಳಲ್ಲಿಯ ಕ್ರೌರ್ಯದ ರಭಸ ನಿಧಾನವಾಗಿ ಕಮ್ಮಿಯಾಯಿತು. ಉನ್ಮಾದವಿಳಿದು ಬಂತು. ಪರಸ್ಪರ ನೋಡಿಕೊಂಡು ನಮ್ಮ ಮದೋನ್ಮತ್ತ ಅವಸ್ಥೆಯ ಬಗ್ಗೆ ತಮಗೇ ನಾಚಿಕೆಯಾಗಿ ಮೆಲ್ಲಗೆ ಮಹಾನುಭಾವನ ಬೊಜ್ಜು ಬಿಟ್ಟು ಕೆಳಕ್ಕಿಳಿದು ಬೆಂಕಿಯಾಚೆಯ ಕಗ್ಗತ್ತಲಲ್ಲಿ ಮಾಯವಾದವು.

ಮಹಾನುಭಾವ ಇನ್ನೂ ನರಳುತ್ತಿದ್ದ. ಚಂದಮುತ್ತನ ಕೊಳಲುಲಿಯ ಮಾಯೆಯನ್ನು ಕೃತಜ್ಞತೆಯಿಂದ ಸ್ಮರಿಸಿ ಎದ್ದಾಗ ಪಾದದ ಕಡೆ ಚಂದಮುತ್ತ ಕೈಮುಗಿದು ಕುಂತಿದ್ದ. ಪ್ರೀತಿಯಿಂದ ಬಾಲಕನ ತಲೆ ನೇವರಿಸಿದ. “ನಿನಗೆ ಅಕ್ಷಯವಾಗ್ಲಿ ನನ್ನಪ್ಪ” ಎಂದು ಹೇಳುತ್ತ ಗದ್ದ ಕೆನ್ನೆ ತೀಡಿ, ಬೆವರ ಜಲ ಒರೆಸಿ “ವಯಸ್ಸೆಷ್ಟಾಯ್ತು?” ಅಂದ.

“ಹದಿನೆಂಟು”

“ಸಾಲದು ಸಾಲದು, ನೀನಿನ್ನೂ ಹಾಲು ಹೂವಿನಂಥ ಮಗ. ಇಷ್ಟು ಸಣ್ಣ ವಯಸ್ಸಿಗಾಗಲೇ ಮುದಿಜೋಗ್ತಿಯ ಗಾಳಿಗೆ ಒಳಗಾದೆಯಾ ಕಂದ?” ಎಂದು ಕಾವಿ ಬಣ್ಣದಲ್ಲಿ ಮಿಂಚುವ ಹಲ್ಲು ತೋರಿಸುತ್ತ ಜೊಲ್ಲು ಸುರಿಸುತ್ತ ಕೇಳಿದ. ಮುದಿಜೋಗ್ತಿಯ ವಿಷಯ ಕೇಳಿದ್ದೇ ಚಂದಮುತ್ತ ರೋಮಾಂಚನನಾಗಿ

“ಶಿವಪಾದವೇ ಅವಳಿರುವ ಠಿಕಾಣ ಹೇಳಿ ಕಾಪಾಡು” ಎಂದು ಮಹಾನುಭಾವನ ಪಾದ ಗಟ್ಟಿಯಾಗಿ ಹಿಡಿದುಕೊಂಡ. ಮಹಾನುಭಾವ ಬಾಲಕನನ್ನ ಒಂದು ಬಾರಿ ಇಡಿಯಾಗಿ ನೋಡಿ ಕರುಣೆಯಿಂದ ಹೇಳಿದ:

“ಎಳೆತನದಿಂದ ಈಗಷ್ಟೆ ಕದ್ದು ತಪ್ಪಿಸಿಕೊಂಡು ಬಂದಿದ್ದೀಯಾ, ತುಸು ನಿಧಾನವಾಗಿ ನಡಿಯೊ ಹುಡುಗಾ, ನೀನು ಕೇಳಿದ ಮಾತ್ರಕ್ಕೆ ಸಿಕ್ಕೋದಕ್ಕೆ ಅವಳು ಲೋಕ ಲೌಕಿಕದ ಪುಡಗೋಶಿ ವಸ್ತು ಅಂದುಕೊಂಡಿಯಾ? ತಪಸ್ಸು ಮಾಡಿದವರಿಗೇ ಸಿಕ್ಕದವಳು ನಿನ್ನಂಥ ಬಾಲಕನಿಗೆ ಸಿಗುತ್ತಾಳೇನೋ? ಆಯಿತಾಯಿತು. ಅಷ್ಟೋ ಇಷ್ಟೋ ಕಲಿತಿದ್ದೀಯಾ, ಬೆಳಿಸಿಕೊ. ನೀನು ಬೆಳಿ. ಆವಾಗ ಪ್ರಯತ್ನಮಾಡು. ಸಿಕ್ಕರೆ ಶಿಕಾರಿ! ಸಿಗದಿದ್ದರೆ ಭಿಕಾರಿಯಾಗು - ನನ್ನ ಹಾಗೆ”

“ನನಗೆ ಮುದಿಜೋಗ್ತಿಯ ದರ್ಶನವಾಗಿದೆಯೆಂತ ನಿನಗೆ ಹ್ಯಾಗೆ ತಿಳಿಯಿತು ಶಿವನೆ?”

“ನೀನು ನುಡಿಸಿದ ರಾಗದಲ್ಲಿ ಮುದಿಜೋಗ್ತಿಯ ಹಾಡಿನ ಛಾಯೆಯಿತ್ತು. ಅದನ್ನು ಅನುಕರಿಸೋದು ಅವರಿವರಿಂದ ಶಕ್ಯವಿಲ್ಲ. ಆದರೆ ನಿನ್ನ ಶಕ್ತಿಯೂ ಸಾಲದು. ಆಕೆಯ ಹಾಡು ಹಿಂಗಿತ್ತೆ?” ಎಂದು ಮುದಿಜೋಗ್ತಿಯ ಹಾಡನ್ನು ಹಾಡಿ ತೋರಿಸಿದ. ಚಂದಮುತ್ತನಿಗೆ ರೋಮಾಂಚನವಾಗಿ ಕರಮುಗಿದು “ಹೌದು ಶಿವನೆ!” ಅಂದ. “ಹಾಂಗಲ್ಲ ಹಿಂಗಿತ್ತೆ ನೋಡೊ” ಎಂದು ಅದೇ ರಾಗವನ್ನು ಬೇರೆ ರೀತಿ ಹಾಡಿ ತೋರಿಸಿದ. ಚಂದಮುತ್ತ “ಹೌಂದು ಶಿವನೇ” ಅಂದ. “ಹಾಂಗಲ್ಲ ಹಿಂಗಿತ್ತೆ ನೋಡು” ಎಂದು ಆ ರಾಗವನ್ನ ಇನ್ನೊಂದು ರೀತಿ ಹೇಳಿದ. ಚಂದಮುತ್ತ ಅದಕ್ಕೂ “ಹೌಂದು ಶಿವನೇ” ಅಂದ.

“ಮೂರೂ ಮುದಿಜೋಗ್ತಿಯ ಹಾಡುಗಳೇನೋ ಕಂದಾ?”

“ಅಲ್ಲ, ಮೊದಲನೇದ್ದು ಅವಳ ಹಾಡು, ನಂತರದ ಎರಡು ನಿನ್ನ ಅನುಕರಣೆ” ಅಂದ.

ಬಾಲಕನ ಮಾತು ಕೇಳಿ ಮಹಾನುಭಾವನಿಗೆ ಮೆಚ್ಚುಗೆ, ಅಸೂಯೆ ಎರಡೂ ಆದವು. ಚಂದಮುತ್ತನ್ನ ತಬ್ಬಿ, ಎದೆಗವಚಿಕೊಂಡು ನೆತ್ತಿಯ ಮೂಸಿ ತಲೆ ಬೆನ್ನು ತೀಡಿ ಹೃತ್ಪೂರ್ವಕ ಹರಸಿ “ಬರೋಬ್ಬರಿ ಹೇಳಿದೆ ಕಂದ” ಎಂದ.

“ಪಿಶಾಚಿಗಳ್ಯಾಕೆ ನಿನ್ನ ಬೊಜ್ಜಿನ ಮ್ಯಾಲೆ ಕುಣಿದವು ಶಿವನೆ?”

“ಅದೊಂದು ದೊಡ್ಡ ಕಥೆ ಕಂದಾ. ಚಿಕ್ಕಂದು ನಾನು ಅಷ್ಟೋ ಇಷ್ಟೋ ಹಾಡುತ್ತಿದ್ದೆ. ನಾನು ಹಾಡುತ್ತಿದ್ದ ಸಭೆಗೆ ನುಗ್ಗಿ ಮುದಿಜೋಗ್ತಿ ಅಗಳೆ ನೀನು ನುಡಿಸಿದೆಯಲ್ಲ ಆ ಹಾಡನ್ನ ಹಾಡಿ ನನಗೆ ಅಣಗಿಸಿ ಮಾಯವಾದಳು. ಅಂದಿನಿಂದ ಅವಳ ಕಂಡು ಅವಳಿಂದ ಹೆಚ್ಚಿನ ವಿದ್ಯವ ಕಲಿವ ಹುಚ್ಚು ಹತ್ತಿತು. ಬೇಕಾದಷ್ಟು ಅಲೆದಾಡಿದೆ. ಈ ಮಧ್ಯೆ ಅಭ್ಯಾಸವಾಗಿ ತುಸು ಹಾಡುತ್ತಿದ್ದೆ. ಅಷ್ಟಕ್ಕೆ ರಾಜಮನ್ನಣೆ, ವಿದ್ವನ್ಮನ್ನಣೆ ದೊರೆತು ಅದರ ಅಮಲಿನಲ್ಲಿ ಮುದಿಜೋಗ್ತಿಯ ಹುಚ್ಚನ್ನೇ ಮರೆತುಬಿಟ್ಟೆ.

ಮನ್ನಣೆಗಳ ಅಹಂಕಾರ ತಲೆಗೇರಿ ಕೀರ್ತಿಯ ಕಾಮನೆಗಳಿಂದ ಖಾಯಿಲೆ ಬಿದ್ದೆ. ನಾನು ಹಾಡಿದ್ದೇ ರಾಗ ಹೇಳಿದ್ದೇ ವಿದ್ಯೆಯಾಗಿ ಅನೇಕ ರಾಗಂಗಳ ಕೆಡಿಸಿ ಹಾಡಿದೆ. ಅವೆಲ್ಲ ವಿಕಾರಗೊಂಡು ಪಿಶಾಚಿ ಗಣಂಗಳಾಗಿ ಈಹಿಂಗೆ ಅಲೆದಾಡುತ್ತಿವೆ. ಪ್ರತಿ ಅಮವಾಸ್ಯೆಯೆಂದು ನನ್ನ ಬೊಜ್ಜಿನ ಮ್ಯಾಲೆ ಕುಣಿದು ಹಿಂಸೆ ಕೊಡುತ್ತವೆ."

"ಇವುಗಳಿಂದ ನಿನಗೆ ಮುಕ್ತಿ ಇಲ್ಲವೆ ಶಿವನೆ?"

"ಇದೆ. ಅವುಗಳನ್ನು ಶುದ್ಧ ರೂಪದಲ್ಲಿ ಹಾಡಿದರೆ ಅವುಗಳಿಗೆ ಮುನ್ನಿನ ರೂಪ ಬಂದು ನನ್ನನ್ನು ಬಿಡುಗಡೆಗೊಳಿಸುತ್ತವೆ"

"ಶುದ್ಧ ರೂಪ ಸಿದ್ಧಿಸಿದ್ದು ಹೆಂಗೆ ತಿಳಿಯುತ್ತದೆ?"

"ಭೃಂಗಿ ಬಂದು ಕುಣಿಯಬೇಕು"

"ಅವನ್ಯಾರು ಶಿವನೆ?"

"ಶಿವನ ಖಾಸಾ ಶಿಷ್ಯ, ಮೂಳೆ ರೂಪದ ಭಕ್ತ, ನೋಡಿದಾಗ ನಿನಗೇ ತಿಳಿಯುತ್ತದೆ. ಹಾಡು ಕೇಳಿ ಆನಂದವಾಗಿ ಅವನು ಬಂದು ಕುಣಿದ ಅಂದರೆ ವಿಕಾರ ರಾಗಂಗಳಿಗೆ ಅವುಗಳ ಮೂಲರೂಪ ಬರುತ್ತದೆ, ಆಗಲೇ ನಾನು ಮುಕ್ತ".

"ಅಯ್ಯೋ ನಾನೇ ನಿನ್ನ ಮುಕ್ತಿಗೆ ಅಡ್ಡಿಯಾದೆನಲ್ಲ ಶಿವನೆ!"

"ಇಲ್ಲ, ತಪ್ಪುಗಳ ಸರಿಪಡಿಸಲು ನನ್ನೊಬ್ಬನಿಂದಲೇ ಆಗದೆಂದು ನನಗೆ ಗೊತ್ತಾಯಿತು. ನನ್ನ ಮುಕ್ತಿ ಮುಖ್ಯವಲ್ಲ. ರಾಗಂಗಳಿಗೆ ಶುದ್ಧರೂಪ ಬರಬೇಕು. ಈಗ ನನ್ನೊಂದಿಗೆ ನೀನೂ ಇದ್ದೀಯಲ್ಲ. ಇಬ್ಬರೂ ಯತ್ನಿಸುವ ಬಾ".

## ೧೭. ಕಣ್ಣು ತೆರಿ ಶಿವನೇ

ಮೂರೂ ಕಣ್ಣು ಮುಕ್ಕಣ್ಣು ಮುಚ್ಚಿಕೊಂಡು
ಮುಖದ ಮ್ಯಾಲೆ ಜುಟ್ಟುಜಡೆ ಚೆಲ್ಲಿಕೊಂಡು
ಜಪತಪವ ಮಾಡುವ ಶಿವನೇ,
ಒಂದಾದರು ಕಣ್ಣು ತೆರೆದು
ಕೆಳಗೆ ದಿಟ್ಟಿಸಿ ನೋಡು,
ಶಿವಾಪುರದ ಕಾಡಿನಲ್ಲಿ ಏನೇನು ನಡೆಯುತ್ತಿದೆ?

ಈದ ಹಸು ಪುಣ್ಯಕೋಟಿ
ಕರು ಕಳೆದುಕೊಂಡು
ಅನ್ನಾಹಾರ ಬಿಟ್ಟು ನಿದ್ರೆ ನೀರು ಬಿಟ್ಟು
ಅಂಬಾ ಎಂದು ಹಂಬಲಿಸುತ್ತ
ಧಾರಾವತಿ ಕಣ್ಣೀರು ಜಲವ ಸುರಿಸುತ್ತ

ಕರುಳು ಬಾಯಿಗೆ ಬರುವಂತೆ
ಬಾಯಿ ಬಾಯಿ ಬಿಡುತ್ತೈದಾಳೆ ತಾಯಿ.

ರೂಪುರೇಖೆ ಸುದ್ದುಳ್ಳ ಸುಳಿಯ ನನ
ಹಾಲು ಹಸುಳೆ ಕರುವೇ
ನೇರ ಹಾರಿದೆಯ ಹುಲಿಯ ಬಾಯಿಗೇ
ಗಾಳಿ ತುಂಬಿ ಕಿವಿಗೆ ।
ಬೇಲಿ ಹಾರಿ ಹೌಹಾರಿ ಧುಮುಕಿದೆಯೊ
ನೀರಿನ ತಿರುಗಣಿಗೆ ॥
- ಎಂದು,
ಬರಿದಾದ ನನ್ನ ಭಾಗ್ಯವ ಹಿಂದಿರುಗಿ
ಕೊಡು ಶಿವನೇ ಎಂದು,
ಕೊಡದಿದ್ದ ಪಕ್ಷದಲ್ಲಿ
ನಾಲಗೆ ಹಿರಿದು ಪ್ರಾಣ ಬಿಡುವನೆಂದು,
ಪ್ರಾಣ ಬಿಟ್ಟ ಪಕ್ಷದಲ್ಲಿ
ನಿನಗ್ಯಾರೂ ಕಾಸಿನ ದೀಪ ಹಚ್ಚದಿರಲೆಂದು
ಕೈಯೆತ್ತಿ ಕರ ಮುಗಿಯದಿರಲೆಂದು
ಶಪಿಸುತ್ತ
ಗೋಳು ಗೋಳೆಂದು ಗೋಳಾಡುತಾಳೆ ತಾಯಿ
ಬಾನು ಕರಗುವಂತೆ
ಬನ ಮರಗುವಂತೆ.
ಕಣ್ಣು ತೆರೆದು ನೋಡು ಶಿವನೇ.

## ೧೮. ಕೈಲಾಸದ ಅವತಾರ

ಸತ್ಯದ ಶಿವಲಿಂಗಸ್ವಾಮಿ ಚಿತ್ತದಲ್ಲಿ ಸ್ಮರಿಸಿ
ಮುಂದೇನಾಯಿತೆಂದು ಹೇಳಬೇಕೆಂದರೆ -
ಮಹಾನುಭಾವನ ದರ್ಶನದಿಂದ
ಚಂದಮುತ್ತನ ಅಮಾವಾಸ್ಯೆಗೆ
ಚಂದ್ರನ ಕನಸಾಯಿತು.
ಕತ್ತಲ ಕಗ್ಗಂಟು ಸಡಿಲಿ,
ಬಿಡಿವಜ್ರ ಬೆಳ್ಳಿ ಮೂಡಿ
ಉದಯಗಿರಿ ಬಿರಿದು ಉದಯವಾದರು
ಸೂರ್ಯನಾರಾಯಣ ಸ್ವಾಮಿ,
ಹೊಸಬೆಳಕಿನ ಮಹಾಪೂರ ನುಗ್ಗಿ ಬಂತು ನೋಡು,
ಕೊಚ್ಚಿಹೋದವು ಇದ್ದಬಿದ್ದ ಅನುಮಾನಗಳು.

ಮೂಡುಬೆಟ್ಟ ಬಂಗಾರವಾಗಿ
ನಮ್ಮೀ ಧರೆಯ ಮ್ಯಾಗಿನ ಗಿಡಮರಗಳಲ್ಲಿ
ಚಿನ್ನದ ಚಿಗುರೆಲೆ ಹೊಳೆದವು.

ಮಹಾನುಭಾವ ಹಾಲುಹಸುಳೆ ಚಂದಮುತ್ತನ್ನ ತನ್ನ ನಿರ್ಜನ ಆಶ್ರಮಕ್ಕೆ ಕರೆದೊಯ್ದು, ಇಬ್ಬರೂ ಗುರುಶಿಷ್ಯರಾಗಿ, ಒಲೆಹೂಡಿ ಹೊಸಜೀವನ ಆರಂಭಿಸಿದರು. ಹೊಸಬೆಳಕಿನ ಮಳೆಯಾಗಿತ್ತಲ್ಲ, ಹೊಸನೀರು ನುಗ್ಗಿತ್ತು ಮಡುಗಳಲ್ಲಿ, ಮಹಾನುಭಾವ ತಂದೆಗಿಂತ ನೂರುಮಡಿ ಹೆಚ್ಚಿನ ಗುರುವಾಗಿ ತನ್ನಲ್ಲಿದ್ದ ವಿದ್ಯೆಗಳ ಚಂದಮುತ್ತನ ಸತ್ಪಾತ್ರಕ್ಕೆ ಧಾರೆಯೆರೆದನು. ಚಂದಮುತ್ತ ಶಿಷ್ಯನಾಗಿ ತನ್ನೆಲ್ಲವ ಗುರುವಿಗರ್ಪಿತ ಮಾಡಿ ಗುರುಕರುಣೆ ಪಡೆದನು. ಗುರುವು ಶಿಷ್ಯನಿಗೆ ದಿನಕ್ಕೊಂದರಂತೆ ನೂರೊಂದು ರಾಗಂಗಳ ಕಲಿಸಿದನು. ಎದ್ದಾಗೊಂದು ರಾಗ, ನಿಂತುಕುಂತಾಗೊಂದು ರಾಗ, ಬಿಸಿಲು ಆಶ್ರಮದ ಹೊಸಲಿಗೆ ಬಂದಾಗೊಂದು ರಾಗ, ಕತ್ತಲೆಗೆ ಕಾವೇರಿ ತಡಮಾಡಿ ಬಂದ ತಿಂಗಳಲ್ಲಿ ಬೆಟ್ಟ ತುದಿಗೆರೆ ಬೆಳಕಾಡಿದರೆ ಒಂದು ರಾಗ, ಬೆಳ್ಳಿ ಮೂಡಿದಾಗೊಂದು ರಾಗ, ಉದಯರಾಗ, ಬೆಳೆ ಬರಿಸುವ ರಾಗ, ಹಸಿರು ಚಿಗುರುವ ರಾಗ, ಹಾಳು ಸುರಿವ ರಾಗ, ಗೋಳು ಗೋಳಿನ ರಾಗ ಇಂತೆಂಬ ನೂರಾರು ರಾಗಂಗಳ ಕಲಿಸಿ, ತಿಂಗಳ ರಾಗವೊಂದನ್ನು ಕಲಿಸದೆ "ಅದು ನಾನರಿಯದ ರಾಗ"ವೆಂದು ಸೋತು ಮಾತಾಡಿದ.

"ತಿಂಗಳ ರಾಗ ನನಗೆಲ್ಲಿ ಸಿಕ್ಕೀತು ಗುರುಪಾದವೇ? ಎಂದು ಚಂದಮುತ್ತ ಕೇಳಿದಾಗ "ಅದನ್ನು ಹೇಳಬಲ್ಲವನು ಭೃಂಗೀಶ ಮಾತ್ರ" ಎಂದು ಸುಮ್ಮನಾದ. ಮಾಸಗಳುರುಳಿ ಮತ್ತೊಂದು ಮಹಾಶಿವರಾತ್ರಿ ಬಂತು. ಜೊತೆಯಲ್ಲಿ ಚಂದಮುತ್ತನಿರುವುದರಿಂದ ತನ್ನ ಬಿಡುಗಡೆ ಖಚಿತವೆಂದು ಮಹಾನುಭಾವನಿಗೆ ವಿಶ್ವಾಸವಾಗಿತ್ತು.

ಗುರುಶಿಷ್ಯರು ಮಹಾಶಿವರಾತ್ರಿಯ ಮುನ್ನಾದಿನದ ಬೆಳ್ಳಿಯ ಬೆಳಕಿನಲ್ಲೆದ್ದರು. ಪಡುಬದಿಗೆ ಮೋರೆ ಮಾಡಿ ನೆತ್ತಿಯಲ್ಲಿ ಚಂದ್ರಾಮಸ್ವಾಮಿಯಿರುವ ಸತ್ಯದ ಸಾವಳಗಿ ಶಿವಲಿಂಗದೇವರ ನೆನೆದರು. ಸುತ್ತಲಿನ ದೇವ ದೈವಂಗಳ ನೆನೆದರು. ಹಿಡಿಸೂಡಿ ಹಿಡಿದು ಶಿವಾಲಯದ ಅಂಗಳ ಗುಡಿಸಿ ಹಸಿರು ಸೆಗಣಿ ಸಾರಿಸಿ ರಂಗೋಲಿ ಬರೆದರು. ಮಡುವಿನಲ್ಲಿ ಮಿಂದು ಮೈಲಿಗೆ ಕಳೆದು, ಮಡಿಯುಟ್ಟು ಓರೆಯಾಗಿ ಜುಟ್ಟು ಕಟ್ಟಿಕೊಂಡರು. ಗಂಧದ ನೀರಲ್ಲಿ ಗುಡಿಯ ತೊಳೆದರು. ಹಿಡಿಗಂಧ ತೇದರು. ಪಂಚದರ್ಭೆಯ ಕಡ್ಡಿ ತಂದರು. ಬುಟ್ಟಿ ತುಂಬ ತುಂಬೆಯ ಹೂ, ಬಿಲ್ವಪತ್ರೆ ತಂದರು. ಪರಿಮಳದ ಹೂ ಹಿಂಗಾರುಗಳಲ್ಲಿ ಶಿವಲಿಂಗವ ಸಿಂಗರಿಸಿ ಪರಿಮಳ ಮ್ಯಾಲೇಳು ಲೋಕ, ಕೀಳೇಳು ಲೋಕಂಗಳಿಗೆ ಪಸರಿಸುವಂತೆ ಮಾಡಿದರು. ನಂದಾದೀಪ ಏರಿಸಿ ಶಿವಲಿಂಗದ ಬಳಿ ಕರಿ ಬಿಳಿ ಸುಣ್ಣ ಬಣ್ಣ ಕುಂಕುಮ ಅರಿಷಿಣಗಳಲ್ಲಿ ಮಂಡಳ ಬರೆದರು. ಮಂಡಳದ ಎಡದಲ್ಲಿ ಸೂರ್ಯ, ಬಲದಲ್ಲಿ ಚಂದ್ರರ ಬರೆದರು. ಅವರ ಮಧ್ಯೆ ಬಾಳೆಯೆಲೆ ಹಾಸಿ, ಅದರ ಮ್ಯಾಲೆ ವೀಳ್ಯದೆಲೆಯಿಟ್ಟು ಒಂದಡಿಕೆಯ ಐದು ಹೋಳು ಮಾಡಿ ಕರವೆತ್ತಿ ಶರಣೆಂದು ಕುಣಿವ ಭೃಂಗೀಶನ ಬಹಿರೂಪ ಬರೆದರು. ಹಸಿರುಗಣ್ಣಿನ ಮೂರು ಕಾಲಿನ ಆ ಮೂಳೆರೂಪವ ನೋಡಿ ಚಂದಮುತ್ತ ಗಾಬರಿಯಾದ. "ಇದ್ಯಾರ ರೂಪ ಗುರುವೇ?" ಎಂದ.

"ಭೃಂಗೇಶ"

ಹಿಂದೆ ತನ್ನ ಗಣೆಗೆ ಕೊಂಬು ದಯಪಾಲಿಸಿದ್ದು ಇದೇ ರೂಪವಲ್ಲವೆ? ಎಂದು ನೆನೆದು ಸಳ ಸಳ ಪುಳಕವೇರಿ, ಬೆವರಿ ಅಂಗಜಲದಲ್ಲಿ ಅದ್ದಿಹೋದ, ತನಗೆ ದರ್ಶನವಾದ ಭೃಂಗೀಶನ ಕಥೆಯ ಗುರುವಿಗೆ ಹೇಳುಬೇಕು; ಇದಲ್ಲ ಕಾಲವೆಂದು ಸುಮ್ಮನಾದ. ಭೃಂಗೀಶನ ನೆತ್ತಿಯ ಮ್ಯಾಲೆ ಮುಗಿದ ಕೈ ಮುಟ್ಟುವಲ್ಲಿ ಧರ್ಮಪತ್ನಿ ಪಾರ್ವತಿದೇವಿ ಸಮೇತ ಸತ್ಯ ಶಿವದೇವರ ಶ್ರೀಪಾದಂಗಳ ಸ್ಥಾಪನೆ ಮಾಡಿದರು. ಯಂತ್ರ ಮಂತ್ರ ತಂತ್ರಗಳಿಂದ ಅಷ್ಟೂ ದೇವದೈವಂಗಳ ಆವಾಹಿಸಿ ಅವರವರ ಸ್ಥಳದಲ್ಲಿ ಬಂಧಿಸಿ ಬಂದೋಬಸ್ತ್ ಮಾಡಿ ಮೈಹಾಸಿ ಅಡ್ಡಬಿದ್ದಲ್ಲಿ ತಯಾರಿಗಳು ಮುಗಿದು ಭೂಮಿತಾಯಿ ತುರುಬು ಬಿಚ್ಚಿ ಬೆನ್ನಮ್ಯಾಲೆ ಕೂದಲು ಚೆಲ್ಲಿಕೊಂಡಂತೆ ರಾತ್ರಿ ಬಂತು.

ಕುಡಿ ಅಲ್ಲಾಡದ ನಂದಾದೀಪ ಉರಿವಷ್ಟು ಜಾಗಬಿಟ್ಟು ಸುತ್ತೂಕಡೆ ಕಗ್ಗತ್ತಲು ಹೆಪ್ಪುಗಟ್ಟಿತ್ತು. ಗುರುವು ಶೃತಿ ಎತ್ತಿದಂತೆ ವಿಕಾರ ರಾಗಂಗಳು ಒಂದೊಂದೇ ಬಂದು ಮೂಲೆ ಮೂಲೆಗಂಟಿ ಆತಂಕದ ಕಣ್ಣುಗಳ ಅಗಲವಾಗಿ ತೆರೆದು ತಮ್ಮ ದೈವದ ಸದ್ಗತಿಗಾಗಿ ಕಾಯುತ್ತ, ಕೃಪೆಗಾಗಿ ಅಂಗಲಾಚುವ ದೃಷ್ಟಿಗಳಿಂದ ಶಿವಲಿಂಗವ ತೀಡುತ್ತ, ತೊಳೆಯುತ್ತ ನಿಂತವು. ಮಂಡಳದ ಮುಂದೆ ಮಹಾನುಭಾವ ಹಾಡುವುದಕ್ಕೆ ಸಿದ್ಧನಾದಾಗ ಚಂದಮುತ್ತ ಕೊಳಲು ತಗೊಂಡು ಸಾಥಿಗೆ ನಿಂತ.

ಶೃತಿಗಳ ಕೂಡಿಸಿ ನಾಭಿಕುಹರದಿಂದ ಹದವಾದ ನಾದಂಗಳ ತೆಗೆದು ಆಲಾಪವ ಮಾಡಿದರು. ಇಡೀ ಶಿವಾಲಯ ಓಂಕಾರದ ಆಧಾರ ಶೃತಿ ಕೊಡುವಂತೆ ಮರುನುಡಿಯಿತು. ರಾಗಂಗಳ ಕರುಳು ಮಿಡಿದು ಬಳುಕಾಡಿದವು. ಈಗ ಗುರುಶಿಷ್ಯರು ಹೊಂದಾಣಿಕೆಯಿಂದ ಒಂದೊಂದೇ ರಾಗ ರಚನೆ ಹುಟ್ಟಿಸಿ, ಕ್ರಮದಲ್ಲಿ ಕಟ್ಟಿ ವಿಸ್ತರಿಸಿ ಕೌಶಲದಿಂದ ವಿವರಗಳ ಬಿಡಿಸಿ, ಕಾಳಜಿಯಿಂದ ಜೀವ ತುಂಬಿ ಆತ್ಮ ಪ್ರತಿಷ್ಠಾಪನೆಗೈದು ವಿಜೃಂಭಿಸಿದರು. ಮೊದಮೊದಲಲ್ಲಿ ಭಾರವಾಗಿದ್ದ ಈ ಕ್ರಿಯೆ ಬರಬರುತ್ತ ಉಸಿರಾಟದಂತೆ ಸಹಜವಾಗಿ, ಸರಳವಾಗಿ, ನಿರರ್ಗಳವಾಗಿ ಸಾಗಿ ಇಬ್ಬರೂ ದಿವ್ಯೋನ್ಮಾದದಲ್ಲಿ ತೇಲುಗಣ್ಣಾದರು. ಹೆಪ್ಪುಗಟ್ಟಿದ್ದ ಕತ್ತಲೆಯ ಗೂಢಗಳು ತಂತಾವೆ ಡೀಕೋಡಿಸಿಕೊಂಡು ಬೆಳಕಿನ ಪುಂಜಗಳಾಗಿ, ಕಿರಣಂಗಳಾಗಿ ಮಾರ್ಪಾಟಾದವು. ವಿಕಾರ ರಾಗಂಗಳಲ್ಲಿ ವಿದ್ಯುತ್ ಸರಬರಾಜಾಗಿ ವಿರೂಪಂಗಳು ಕಳಚಿ ಒಳಗಡೆಯ ಚೇತನಂಗಳು ಸ್ವಸ್ವರೂಪ ಪಡೆಯಲು ಹವಣಿಸಿದವು. ಶಿವಾಲಯದ ಕಂಬಗಳಲ್ಲಿ ಜೀವಸಂಚಾರವಾಗಿ ನಾದವಾದ್ಯಗಳ ಧ್ವನಿ ಮಾಡಿ ನುಡಿಸುತ್ತ ಗುರುಶಿಷ್ಯರ ಸಂಗೀತಕ್ಕೆ ಸ್ವರಮೇಳವೊದಗಿಸಿದವು.

ಈಗ ಮಂಡಳದಲ್ಲಿದ್ದ ಭೃಂಗೀಶನ ಬಹಿರೂಪಕ್ಕೆ ಜೀವತುಂಬಿ ಚಿತ್ರದ ಕಂಗಳಲ್ಲಿ ಬೆಳಕಾಡಿತು. ಅಸ್ಥಿಪಂಜರ ರೂಪದ ಅವನ ಕೈಕಾಲುಗಳಲ್ಲಿ ಚೈತನ್ಯ ಹರಿದು ಥೈ ಥೈ ಕುಣಿಯತೊಡಗಿದವು! ಚಿತ್ರದ ಭೃಂಗೀಶನೇ ಜೀವಗೊಂಡು ಕುಣಿಯಬೇಕಾದರೆ ಶಿವಶಿವಾ - ಶಿವಾಲಯದ ಕಂಬಗಳು ಉನ್ಮಾದಗೊಂಡು ಸ್ವರಮೇಳದ ತಾರಕಕ್ಕೇರಿಸಿ, ಇಡೀ ಶಿವಾಲಯವ ಹೊತ್ತುಕೊಂಡೇ ಕುಣಿಯತೊಡಗಿದವು! ವಿಕಾರ ರಾಗಂಗಳಿಗೆ ಸ್ವಸ್ವರೂಪವೊದಗಿ ಸಡಗರದಲ್ಲಿ ಹುಚ್ಚೆದ್ದು ಕಣಿದವು. ಎಲ್ಲರ ಕಣ್ಣುಗಳಲ್ಲಿ ಶಿವರಾತ್ರಿಯ ನಂದಾ ದೀಪಗಳು ಬೆಳಗಿ ಶಿವಾಲಯದಲ್ಲಿ ದೀಪಾವಳಿ ವಿಜೃಂಭಿಸಿತು. ಮಂಡಳಲದಲ್ಲಿದ್ದ ಲೋಕಂಗಳ ತಂದೆ, ತಾಯಿ ಶಿವಪಾರ್ವತಿಯರ ಕಾಲು ಚಡಪಡಿಸಿದವು. ಭೃಂಗೀಶನ ಭಕ್ತಿಯ ಕುಣಿತ, ಶಿವಾಲಯದ ಕಂಬಗಳ ಹುರುಪೇರಿದ ಕುಣಿತ, ವಿಕಾರ ರಾಗಂಗಳ ಸಡಗರದ ಕುಣಿತ, ಮೌನದ ಗುಂಭಕ್ಕೆ ಬಾಯಿ ಬಂದಂತಿದ್ದ ಸಂಗೀತ - ಇವೆಲ್ಲವುಗಳ ಸಮ್ಮೇಳನದಿಂದ ಲೌಕಿಕದಲ್ಲಿ ಅಲೌಕಿಕದ ಅವತಾರವಾಗಿ ಕೈಲಾಸ ಸಾಕ್ಷಾತ್ಕಾರವಾಗುತ್ತಿರುವಲ್ಲಿ -

ತಾರಕಕ್ಕೇರಿದ ಸಂಗೀತವ ಆಧಾರದ ಷಡ್ಜಕ್ಕಿಳಿಸುತ್ತ ಚಂದಮುತ್ತ ಕಣ್ಣು ತೆರೆದನು. ನಿಜರೂಪವ ಮರೆದು ಮತ್ತೆ ಮಂತ್ರಭಾವಿತ ಬಣ್ಣದ ಚಿತ್ರವಾಗಲು ಭೃಂಗೀಶ ಮಂಡಳಕ್ಕೆ ಸದ್ದಿಲ್ಲದೆ ಸಂಚರಿಸುತ್ತಿರಲು ಅವನ ಎಲುಬಿನ ಕಾಲುಗಳನ್ನ ಥಟ್ಟನೆ ಗಟ್ಟಿಯಾಗಿ ತಬ್ಬಿಕೊಂಡು “ದಯವಾಗು ಶಿವಪಾದವೇ” ಎಂದ. ಒಂದು ಸಾರಿ ಬಾಲಕನ ಇಡಿಯಾಗಿ ನೋಡಿ ಭೃಂಗೀಶನ ಹರುಷ ಉತ್ತೇಜಿತವಾಯಿತು.

“ಹೌದಯ್ಯ ಕಂದಾ, ಚಿತ್ತಸಂಶಯ ಬ್ಯಾಡ, ನಿನ್ನ ಸಂಗೀತ ಮೆಚ್ಚಿದೆ. ಸತ್ಯವ ಬೇಡು, ನಿತ್ಯವ ಬೇಡು, ಬೇಕಾದ್ದನ್ನು ಬೇಡು, ಬೇಡಿದ್ದನ್ನ ಕೊಡುವೆ” - ಎಂದು ಮೆಚ್ಚು ನುಡಿದ.

“ನನ್ನ ಗುರುವಿನ ಭಂಗವ ಹಿಂಗಿಸಿ ಮುಕ್ತಿ ಕೊಡು ಶಿವಪಾದವೇ” ಚಂದಮುತ್ತನ ಗುರುಭಕ್ತಿ ಭೃಂಗೀಶನಿಗೆ ಚನ್ನಂಗೊಪ್ಪಿಗೆಯಾಯಿತು. ಮಹಾನುಭಾವನ ಕಡೆ ನೋಡಿ.

“ಅಯ್ಯಾ ಮಹಾನುಭಾವ ಹಾಡುವಾಗ ಏನೇನು ಕಂಡೆ?” ಎಂದ. ಮಹಾನುಭಾವ ತಕ್ಷಣ ಮೈಚೆಲ್ಲಿ ಸಾಷ್ಟಾಂಗವೆರಗಿ ಹೇಳಿದ:

ಕುಣಿವ ನಿನ್ನ ಶ್ರೀಪಾದಂಗಳ ಕಂಡೆ.
ಶಿವಾಲಯದ ಕಂಬಗಳು ಕುಣಿದುದ ಕಂಡೆ.
ರಾಗಂಗಳ ವಿಕಾರ ಕಳೆದು
ಮೂಲರೂಪದಲ್ಲಿ ಹೊಳೆದುದ ಕಂಡೆ.

“ನಿನಗೆ ಈಗಲೇ ಮುಕ್ತಿ ಸಿಕ್ಕಿತು ಹೋಗು” ಎಂದು ಕರವೆತ್ತಿ ಆಶೀರ್ವದಿಸಿ ಚಂದಮುತ್ತನ ಕಡೆ ಕೃಪಾದೃಷ್ಟಿ ಬೀರಿ, “ಕಂದಾ ತಿಂಗಳುರಾಗವ ನೀನು ನುಡಿಸಲಿಲ್ಲ. ಅದನ್ನು ತಿಳಿದವಳು ಫಲಬಿರಿವ ಹದವಂತಿ, ಮುದಿಜೋಗ್ತಿ, ಅವಳಲ್ಲಿಗೆ ಹೋಗು, ಚಂದ್ರಸಮೇತ ಮಂಗಳಮೂರ್ತಿ ಶಿವದೇವರ ದರ್ಶನವಾದಾಗಲೇ ನಿನಗೆ ಮುಕ್ತಿ” ಎಂದು ಚಂದಮುತ್ತನ ಸಂತವಿಸಿ ಭೃಂಗೀಶ ಮಂಡಳದಲ್ಲಿ ಐಕ್ಯವಾದ.

ಗುರುಶಿಷ್ಯರು ಶಿವರಾತ್ರಿಯ ಸತ್ಫಲದಿಂದ ಸಂತೃಪ್ತರಾಗಿ ಕಡ್ಡಿಕರ್ಪೂರ ಬೆಳಗಿ ಮಂಗಳಾರ್ತಿ ಮಾಡಿದರು. ಸ್ವಸ್ವರೂಪ ಪಡೆದು ಆನಂದನಗೆಯವರಾದ ಸರ್ವರಾಗಂಗಳಿಗೆ ನಮಸ್ಕಾರವ ಮಾಡಿ ಆಶೀರ್ವಾದ ಪಡೆದರು.

## ೧೯. ದೊಡ್ಡಾಲದ ಮರ

ಆಕಾಶದಂಗಳದಲ್ಲಿ ಬೆಳ್ಳಿಮೂಡುವ ಮುನ್ನವೇ ಗುರುಶಿಷ್ಯರಿಬ್ಬರೂ ಎದ್ದರು. ಕಗ್ಗತ್ತಲಿತ್ತು ಸುತ್ತ. ಶಬ್ದಸೂತಕ ಮಾಡದೆ ಶುಚಿಯಾಗಿ ಶಿವಾಲಯಕ್ಕೆ ಹೋದರು. ಮಹಾನುಭಾವ ಮಂತ್ರ ತಂತ್ರಾದಿಗಳಿಂದ ಶಿವಲಿಂಗದ ಅಕ್ಕಪಕ್ಕದ ಭೂತಪಿಶಾಚಿಗಳ ಓಡಿಸಿದ. ಇಬ್ಬರೂ ಶಿವಭಕ್ತಿ ಶಿವಾಚಾರ ಮಾಡಿದ ಮ್ಯಾಲೆ ಮಹಾನುಭಾವ ಸುಮುಹೂರ್ತ ನೋಡಿ ಶಿಷ್ಯನ ನೆತ್ತಿಯ ಜುಟ್ಟು ಹಿಡಿದು ಶಿವಲಿಂಗಕ್ಕೆ ಹಣೆ ತಾಗಿಸಿ ಅವನ ಕಿವಿಯಲ್ಲಿ ಮಂತ್ರೋಪದೇಶವ ಮಾಡಿದ. ರಾಗಮಂಡಳ ಬರೆವ ವಿಧಾನಗಳ ಹೇಳಿಕೊಟ್ಟ. ಮಂಡಳಕ್ಕೆ ಮುದಿಜೋಗ್ತಿಯ ಆವಾಹಿಸುವ, ಅವಾಹಿಸಿ ಬಂಧಿಸುವ ಅವಳ ಹುಸಿಗಳ ಸುಲಿದು ನಿಜದಲ್ಲಿ ಸಾಕ್ಷಾತ್ಕಾರ ಮಾಡಿಕೊಂಬ ರಾಗರಚನೆ ಮಂತ್ರಗಳ ಹೇಳಿ, ‘ಅವಳಿಂದ ತಿಂಗಳ ರಾಗ ಪಡೆವ ಗುಟ್ಟು ಮಾತ್ರ ನೀನೇ ಬಲ್ಲೆ’ ಎಂದು ಶಾಸ್ತ್ರ ಮುಗಿಸಿದ. ಈಗ ಕಾಡುಕೋಳಿ ಕೂಗಿ, ಗಂಡುಹಕ್ಕಿ ಚಿಲಿಪಿಲಿ ಸ್ವರಗೈದು, ಹೆಣ್ಣು ರೆಕ್ಕೆ ಬಡಿದು, ಮೂಡಲು ಹರಿದು ಮುಂಬೆಳಕಾಡುವಲ್ಲಿ,

“ಯೋಗ ಲಕ್ಷಣ ಒದಗಿ ಬಂತು ಇನ್ನು ಹೊರಡು”

- ಎಂದು ಶಿಷ್ಯನಿಗೆ ಹೇಳಿದ, ಚಂದಮುತ್ತ ಗುರುವಿನ ಪಾದಪಡಕೊಂಡು ಹಾಗೇ ಅವನ ಕಾಲು ತಬ್ಬಿಕೊಂಡು ಕುಂತ. ಪಾದಂಗಳ ಮ್ಯಾಲೆ ಕಣ್ಣೀರು ಬಿದ್ದುದನ್ನು ನೋಡಿ ಮಹಾನುಭಾವ ಅವನನ್ನ ಮ್ಯಾಲೆಬ್ಬಿಸಿದ. ಗುರುವಿನ ಕಣ್ಣಲ್ಲೂ ಸಳಸಳ ಜಲಬಿಂದು ಜಗುಳಿದವು; ನಿವಾರಿಸಿಕೊಂಡು,

“ಜಯವುಳ್ಳ ಮುದಿಜೋಗ್ತಿಯ ಕಂಡು ಬಾ. ಶಿವ ನಿನಗೆ ದಯವಾಗ್ಲಿ ಅಂತ ಶಿವಲಿಂಗಕ್ಕೆ ದಿನಾ ಒಂದು ಪತ್ರಿಯೆಲೆ ಹಾಕುತ್ತೇನೆ. ನಿನ್ನ ಕಾಮಿತ ಫಲಿಸಲಿ ನನ್ನಪ್ಪ. ಎಲ್ಲ ಹೇಳಿದ ಮ್ಯಾಲೆ ಇನ್ನೊಂದುಳಿಯಿತು. ಅಗಲುವ ಮುನ್ನ ಅದನ್ನೂ ಹೇಳಿಬಿಡುತ್ತೇನೆ. ಕೊಂಚದವಳಲ್ಲ ಮುದಿಜೋಗ್ತಿ. ಅಂತಿಂಥವರಿಗೆ ದಕ್ಕುವಂಥದಲ್ಲ ಅವಳ ನಿಜ. ಯಾರಿಗಾದರೂ ಒಳಗೊಳಗೇ ಪ್ರೇರಕಳು. ಹೊರಗೆ ತೋರುವುದಿಲ್ಲ ತನ್ನ ನಿಜವ. ಚೆನ್ನಾಗಿ ತಿಳಿದಿರಲಣ್ಣ, ಒತ್ತಾಯವಿಲ್ಲದೆ ಒಲಿಯುವವಳಲ್ಲ ಅವಳು.”

- ಎಂದು ಚಂದಮುತ್ತನ್ನ ತಬ್ಬಿ, ತಲೆ ಸವರಿ ನೆತ್ತಿಯ ಮೂಸಿ ಆಶೀರ್ವಾದ ಮಾಡಿದ. ಮತ್ತೆ ಮತ್ತೆ ಗುರುಪಾದ ಪಡಕೊಂಡು ಹೆತ್ತಯ್ಯ ಮುತ್ತಯ್ಯರ ನೆನೆದು ತಾಯಿಯ ನೆನೆದು ಬೆಟ್ಟದ ಮಾಯಿಯ ನೆನೆದು ಚಂದಮುತ್ತ ಏಕಾಂಗಿ ಹೊರಟ.

ಕಾಡು ಜಂಗಲ್ ತಿರುಗುತ್ತ ಕಷ್ಟವೃತ್ತಿಯನಾಚರಿಸುತ್ತ ಮನದಲ್ಲಿ ದಾಖಲಾಗಿ ಅರಿಯದ ಸೀಮೆಗೆ ಸರಿದವಳ, ಆತ್ಮದ ಮ್ಯಾಲೆ ಅತ್ಯಾಚಾರ ಮಾಡಿದವಳ ಹುಡುಕುತ್ತ ನಡೆದ. ಕಾಡು ನೆಲ ಅನ್ನದೆ, ನೀರು ನಿಡಿ ಅನ್ನದೆ, ಕಲ್ಲುಮುಳ್ಳೆನ್ನದೆ, ಗೊದ್ದು ಗೋಸುಂಬೆ ಅನ್ನದೆ, ಹಾವು ಹುಲಿ ಅಂಬೋದು ಕಾಣದೆ, ಎಲ್ಲಿ ಸಿಕ್ಕಾಳು ಮುದಿಜೋಗ್ತಿ ಎಂದು, ಯಾವಾಗ ಸಿಕ್ಕಾಳು ಮುದಿಜೋಗ್ತಿ ಎಂದು ಕಾತರಿಸಿ ನಡೆದ. ಗುಡ್ಡಬೆಟ್ಟ ಏರಿ ಇಳಿದು ಗಾವುದ ಗಾವುದ ಹದಿಮೂರು ಹಗಲು ಹದಿಮೂರು ರಾತ್ರಿ ನಡೆದ. ಕಾಲುಪ್ಪಳಿಕೆಯಿಂದ ಮುಂದೆ ನಡೆಯಲಾಗದೆ ತುಸುಹೊತ್ತು ಹಾಗೇ ಇದ್ದು ಎತ್ತರೆತ್ತರ ಬೆಟ್ಟದೆತ್ತರ ದೊಡ್ಡಾಲದ ಮರದಡಿ ಕೂತ.

ದಣಿವಾರಿಸಿಕೊಳ್ಳುತ್ತ ಕುಂತಿರಬೇಕಾದರೆ ಮ್ಯಾಲಿಂದ, ಮರದ ತುದಿಯಿಂದ ಮುದಿಜೋಗ್ತಿಯ ಹಾಡು ಕೇಳಿಸಿ ವಿಸ್ಮಯಂಬಟ್ಟ, ಆ ಮುದಿಜೋಗ್ತಿ ಅಲ್ಲಿ ವಾಸವಾಗಿರುವ ಹಾಂಗಿದೆಯಲ್ಲ ಶಿವನೇ! ಆಗಲಾಗಲಿ, ಅಲ್ಲಾದರೂ ಸಿಕ್ಕಾಳೆಂದು ಆಲದ ಮರವ ಹತ್ತಿದ. ಹತ್ತಿದಂತೆ ಮರ ಆಕಾಶಕ್ಕೆ ಬೆಳಯುತ್ತ ಹೋಗಿ ಮುಗಿಲಿಗೆ ಮೂರು ಗೇಣು ಕಮ್ಮಿ ಉಳಿವಂತೆ ಬೆಳೆಯಿತು. ಆರು ಮೂರು ತಾಸು ಮರ ಹತ್ತಿ ಸಂಜೆ ಸಾಯಂಕಾಲ ವಾದೇಟ್ಗೆ ತುದಿ ಸಿಕ್ಕಿತು.

ನೋಡಿದರೆ - ಅರಿಯದ ಸೀಮೆ ಆಕಾಶದಂಗಳದ ಮೋಡಗಳ ರಾಜ್ಯದಲ್ಲಿ ತಾನಿರುವುದಾಗಿ ಅರಿವಿಗೆ ಬಂತು. ಎದ್ದು ನಿಂತ ಬೆಳಕಿನ ಲೋಕ! ಕ್ಷಿತಿಜ ಮತ್ತು ಅದರಾಚೆ ಈಚೆಗಳು ಅಲ್ಲಿ ಇಲ್ಲಿಗಳಿಲ್ಲದ ಅಖಂಡಲೋಕ! ತಾನ್ಯಾರು ಎಂತೆಂಬುದ ಮರೆತು, ಯಾಕಾಗಿ, ಏನು ಗುರಿಯಾಗಿ ಬಂದೆನೆಂಬುದ ಮರೆತು ಗಾಳಿಯಂತೆ ಹಗುರವಾಗಿ ಸಂಚರಿಸಿದ. ನೀಲಿಮ ಆಕಾಶ ಹಿನ್ನೆಲೆಗಿದ್ದು ಮೋಡಗಳಲ್ಲಿ

ಎಷ್ಟೊಂದು ಬಣ್ಣಗಳು
ಅಷ್ಟೊಂದು ಹೂವುಗಳು !
ಎಷ್ಟೊಂದು ಹೂಬಣ್ಣದ ಬೆಳಕುಗಳು
ಅಷ್ಟೊಂದು ಹೂಬಣ್ಣ ಬೆಳಕುಗಳ ಹಾಡುತ್ತ
ತೇಲುವವು ರಾಗದಲಿ ಮುಗಿಲುಗಳು ॥

ಅಷ್ಟರಲ್ಲಿ ಮತ್ತೆ ಮಧುರವಾದ ರಾಗ ರಚನೆ ಕೇಳಿಸಿ ಮುದಿಜೋಗ್ತಿಯ ನೆನಪಾಗಿ “ಎಂಥಾ ಮರವೆ ಶಿವನೇ” ಎಂದು ತಿಳಿವಿಗೆ ಬಂದ. ನಿಂತರೆ ನಾದ, ಕುಂತರೆ ನಾದ, ತಿರುಗಿದರೆ ಮಧುರ ನಾದ, ನಡೆದರೆ ಮಾದಕನ ನಾದ. ಕಿವಿಯ ಬಳಿ ಸುಳಿವ ನಾದ, ಅಂಗಾಂಗಗಳಿಗೆ ಸ್ಪರ್ಶ ಸುಖ ಲೇಪಿಸುವ ನಾದ, - ಆಹಾ ಇದು ಎಲ್ಲ ನಾದಂಗಳು ಇಂಗುವ ಸ್ಥಳ, ಎಲ್ಲ ನಾದಂಗಳ ಹೊರಚೆಲ್ಲುವ, ಎಲ್ಲ ನಾದಂಗಳ ಒಳಗೊಳ್ಳುವ ಸ್ಥಳ - ನಾದಂಗಳ ಈ ನಾದಬ್ರಹ್ಮಲೋಕದಲ್ಲಿ ಮುದಿಜೋಗ್ತಿ ಇರಲೇಬೇಕೆಂದು -

ಮ್ಯಾಲೂ ನೋಡುತ ಕೆಳಗೂ ನೋಡುತ
ಹಿಂದೂ ನೋಡುತ ಮುಂದೂ ನೋಡುತ
ಆಸುಪಾಸು ಅಕ್ಕಪಕ್ಕ ನೋಡುತ್ತ ನಡೆದ.

ಅಲ್ಲೊಂದು ಮುತ್ತಿನರಮನೆ. ಹವಳದ ಚೌಕಟ್ಟಿನಲ್ಲಿ ವಜ್ರದ ಬಾಗಿಲು ಹಾಕಿತ್ತು. ತಳ್ಳಿ ನೋಡಿದ, ತೆರೆಯಲಿಲ್ಲ. ಒತ್ತಿ ಯತ್ನವ ಮಾಡಿದ, ತೆರೆಯಲಿಲ್ಲ. ಹೆತ್ತಯ್ಯ ಮುತ್ತಯ್ಯರ ನೆನೆದು ಇದು ತೆರೆದರೆ ಪಂಜಿನ ಸೇವೆ ನಿಮಗೆಂದು ನೂಕಿದ. ಯಾವ ಹರಕೆಗೂ ವಜ್ರದ ಬಾಗಿಲು ತೆರೆಯಲಿಲ್ಲ. ಆಸುಪಾಸು, ಯಾರಾದರೂ ಸಹಾಯ ಮಾಡುವಂಥವರು ಇದ್ದಾರೆಯೇ ಎಂದು ಕರೆದು ನೋಡಿದ. ಕೂಗು ಹೊಡೆದು ನೋಡಿದ. ಯಾರೂ ಬರಲಿಲ್ಲ. ಕೊನೆಗೆ ತಾಯಿ ಪಾರ್ವತೀ ಸಮೇತ ಸತ್ಯಶಿವನ ಶ್ರೀಪಾದಂಗಳ ನೆನೆದು - “ಶಿವನೇ ನಾನು ಗೊಲ್ಲಮತದ ಗೋಕುಲ ಕುಲದ ತಂದೆ ಮಾಚನಾಯ್ಕನ ವೀರ್ಯಕ್ಕೆ ಸಿರಿಲಕ್ಕವ್ವೆಯ ಗರ್ಭದಲ್ಲಿ ಹುಟ್ಟಿದ್ದೇ ಹೌಂದಾದರೆ ಹೂವು ತೆರೆದಂತೆ ಬಾಗಿಲು ತೆಗಿ, ಇಲ್ಲವಾದಲ್ಲಿ ಪ್ರಾಣ ತೆಗಿ” -ಎಂದು ಹಿಂದೆ ಸರಿದು ಗುಡುಗುಡುನೆ ಓಡೋಡಿ ಬಂದು ಮಸ್ತಕದಿಂದ ವಜ್ರದ ಬಾಗಿಲಿಗೆ ಹಾದ ನೋಡು: ಥಳಾರನೆ ದ್ವಾರಬಾಗಿಲು ತೆರೆಯಿತು ಶಿವನೆ!

ಎದುರಿಗೆ ಕರಿಘನ ಮೋಡದ ಪರದೆ ಕಂಡಿತು. ಒಳಗೆ ಇಣಿಕಿ ನೋಡಿದರೆ ಶಿವ ಶಿವಾ - ಹೂವಿನ ವಿನ್ಯಾಸದ ಚಾಪೆ ಮ್ಯಾಲೆ ಪದ್ಮಾಸನದ ಸಿಂಬೆ ಸುತ್ತಿಕೊಂಡು, ಮ್ಯಾಗಡೆ ಶಿಖರದಲ್ಲಿ ಹೆಡೆಯಂತೆ ಮುಖ ಮಾಡಿಕೊಂಡು, ಕೈಯಲ್ಲಿಯ ಬಿದಿರು ಕೋಲನ್ನೇ ಕೊಳಲು ಮಾಡಿಕೊಂಡು ಕಣ್ಣು ಮುಚ್ಚಿಕೊಂಡು ನುಡಿಸುತ್ತ ಬಹಳ ಹೆಚ್ಚಳದಿಂದ ಕುಂತಿದ್ದಾಳೆ ನೋಡು, ಯಾರು? ಆ ಮುದಿಜೋಗ್ತಿ! ಕೈಕಾಲು ನೋಡಿದರೆ ಒಂದು ಕರಡಿಯ ಅವತಾರ, ಮೂತಿ ನೋಡಿದರೆ ಒಂದು ಕೋತಿಯ ಅವತಾರ, ಕೆದರಿದ ಜಡೆ ನೋಡಿದರೆ - ಶಿವ ಶಿವಾ ಪುಟ್ಟ ಪುಟ್ಟ ಹೆಡೆ ತೆರೆದುಕೊಂಡು ಕುಡಿವರಿದು ಹೆಣೆದಾಡುವ ಮಿಡಿನಾಗರಗಳ ಅವತಾರ, ಇವಳೇನು ಮುದಿಜೋಗ್ತಿಯೋ? ಚಂದ್ರನಿಲ್ಲದ ಹೆಣ್ಣು ಶಿವನೋ ಎನಿಸಿ ಚಂದಮುತ್ತನ ಮೈಮನ ನಡುಗಿದವು.

ಮೈಮ್ಯಾಲಿನ ಚಿಂದಿಬಟ್ಟೆಗಳಲ್ಲಿ ಕಾಮನ ಬಿಲ್ಲು ಸೃಷ್ಟಿಯಾಗಿ ರಂಗುರಂಗಿನ ಬೆಳಕಿನ ತರಂಗಗಳು ಎಳೆ ಎಳೆ ವಲಯಂಗಳಾಗಿ ಸುಳಿಯುತ್ತೈದಾವೆ! ಮಾದಕದ ನಾದಂಗಳು ಬಿದಿರಿನಿಂದ ಹೊರಡುತ್ತಿವೆಯೊ ಕಾಮನಬಿಲ್ಲಿನ ಬೆಳಕಿನಿಂದ ಹೊರಡುತ್ತಿವೆಯೊ? ಬೆಳಕಿನ ತರಂಗಗಳು ನಾದ ತರಂಗಗಳಾಗಿ, ಬೆಳಕು ನಾದ ಎರಡೊಂದಾಗಿ, ಕೇಳ ಕೇಳುತ್ತ ಕೇಳಿಸಿಕೊಂಬಾತ ತಾನಲ್ಲವೆಂದು, ತನ್ನನ್ನು ಯಾರೋ ನುಡಿಸುತ್ತಿರುವರೆಂದು, ಕೇಳುತ್ತಿದ್ದ ನಾದ ತನ್ನಿಂದಲೇ ಹೊರಟಿದೆಯೆನ್ನಿಸಿ ಭಾವಪರವಶ ತರುಣ ತೇಲುಗಣ್ಣಾಗಿ.

"ದಯವಾದಿಯ ಜೋಗ್ತಿ? ಇಂದಿಗೆ, ನನ್ನ ಕರ್ಮ ಹರಿಯಿತು
ನನಗೆ ನಿನ್ನ ಹಾಡಿನ ವಿದ್ಯೆ ಕೊಡು"

- ಎನ್ನುತ್ತ ಕರವೆತ್ತಿ ಕೈಮುಗಿದು ಅವಳ ಪಾದದ ಮ್ಯಾಲೆ ಧೊಪ್ಪನೆ ಮೈಚೆಲ್ಲಿದ. ಹೆಡೆ ಎತ್ತಿದ್ದ ಮುದಿಜೋಗ್ತಿ ಛಳಾರನೆ ಕಣ್ಣು ತೆರೆದು ಕಣ್ಣ ಬೆಳಕಿನ ಕಿರಣ ಶಲಾಕೆಗಳಿಂದ ಚಂದಮುತ್ತನ ಮೈ ಪರಚಿದಳು, ಕ್ಷಣಹೊತ್ತು ಚಂದಮುತ್ತನ್ನ ಹಾಂಗೇ ನೋಡಿ ಚಂಗನೆ ನಗೆದು ನಿಂತು ಕೋಪದಲ್ಲಿ ಕೊತ ಕೊತ ಕುದ್ದು,

"ಯಾರು ನೀನು? ಇಲ್ಲಿಗ್ಯಾಕೆ ಬಂದೆ?"

- ಎಂದು ಕೆರಳಿ ಕೆಂಡವಾಗಿ ಕೋಲಿನಿಂದ ಚಂದಮುತ್ತನ ಮುಸಡಿಗೆ ತಿವಿದು 'ತೊಲಗಿಲ್ಲಿಂದ' ಎಂದು ಸದ್ದು ಗದ್ದಲ ಗೌಜು ಗಡಿಬಿಡಿಯ ಮಾಡುತ್ತ ದೂರ ಸರಿದು ನೆಗೆದಳು.

ನಿಂತ್ಕೊಂಡ ನೆಲೆ ಕುಸಿದಂಗಾಯ್ತು ಚಂದಮುತ್ತನಿಗೆ. ಚೇಷ್ಟೆಯಾಡುವಳೋ ಎಂದು, ಸುಳ್ಳು ಹೇಳಿ ಕಪಟವೊಡ್ಡುವಳೋ ಎಂದು ಹಿಂದೆ ಮುಂದೆ ತಿಳಿಯದೆ -

"ರಾತ್ರಿಗೆ ಚಂದ್ರನ ಪರಿಚಯವಿರುವಂತೆ ನೀನು ನನಗೆ ಪರಿಚಿತಳು. ಗುರುತಿಲ್ಲದ ಹಗರಣ ಮಾಡಬೇಡ ಮುದುಕೀ."

- ಎಂದು ಅವಳ ಮುಂದೆ ಹೋಗಿ ದಾರಿಗಡ್ಡ ನಿಂತ.

"ಎಲ, ಎಲಾ, ಅಮಾವಾಸ್ಯೆಯಲ್ಲಿ ಹುಟ್ಟಿದವನೇ, ಕಣ್ಣು ಕಾಣಿಸೋದಿಲ್ಲವೆ? ಮೈಗೇ ಅಡತರ್ೀಯಲ್ಲೋ ಬಡ್ಡೀ ಮಗನೇ"

- ಎಂದು ನಂಜಿನ ಮಾತು ಸುರಿದು ತಾರುಮಾರು ಹಾರಾಡಿ ಮೀರಿ ಹಾರಿ ಹೊಂಟಳು. ತಕ್ಷಣ ಚಂದಮುತ್ತ ಕೈಮಾರು ಅಡ್ಡಹಾಕಿ ದಾರಿಕಟ್ಟಿ,

"ಎಲಗೇಲಗೇ
ಏನೇನೊ ಒಳಗೊಂಡು ಹೊರಗೇನೋ ತೋರುವ ಜೋಗ್ತೀ,

ನಿನ್ನ ನುಡಿ ಚೋದ್ಯ, ನಡೆ ಚೋದ್ಯ,
ನನ್ನ ತಿಳಿ ಬದುಕನ್ನ ಕದಡಿ ಓಡಿ ಬಂದಿರುವಿ.
ಕೈ ಮುಗಿತೀನಿ ಕೃತಕ ಮಾಡಬ್ಯಾಡ,
ಮುಳ್ಳಿರುವ ಮಾತಾಡಿ ಆನಂದಗೆಡಿಸಬ್ಯಾಡ."

- ಎಂದು ಕೈಮುಗಿದು ಪರಿಪರಿ ಬೇಡಿದ. ಮುದಿಜೋಗ್ತಿಗೆ ಏಳೇಳು ಲೋಕದ ಕೋಪ ನೆತ್ತಿಗಡರಿತು.

"ಎಲವೆಲವೋ ಭ್ರಾಮಕನೇ,
ನೀನ್ಯಾರು? ನಾನ್ಯಾರು?
ಇಬ್ಬರ ಮಧ್ಯದ ಹಾಡಿನ ವಿದ್ಯೆ ಧಾವುದು?
ಆಡಬಾರದ ನುಡಿಯ ಅವಗಡಿಸಿ ನುಡಿವವನೇ,
ಈಗೇನು ಹೋಗುತ್ತಿಯೊ? ಇಲ್ಲಾ
ಹಿಡಿ ಹಿಡಿ ಅಂತ ಹಿಡಿ ಶಾಪ ಹಾಕಲೊ?"

- ಎಂದು ಕೈ ಮೈ ತುಂಬಾ ತಿರುವುತ್ತ ಕೈಸನ್ನೆ, ಬಾಯಿಸನ್ನೆ, ಕಣ್ಸನ್ನೆ ಮಾಡುತ್ತ ಬೀದಿರಂಪ ಮಾಡತೊಡಗಿದಳು. ಯಾರು? ಆ ಮುದೀ ಮುದಿ ಜೋಗ್ತಿ!

ಇವಳನ್ನ ಹ್ಯಾಂಗೆ ಹಾದಿಗೆ ತರಬೇಕೆಂಬುದೇ ಹೊಳೆಯದಾಯಿತು. ಒತ್ತಾಯವಿಲ್ಲದೆ ಒಲಿಯಲಾರಳೆಂಬ ಗುರುವಿನ ನುಡಿ ನೆನಪಾಗಿ ಹಟಹಿಡಿದು ಗಟ್ಟಿಯಾಗಿ ನಿಂತು ಸೊಂಟದ ಕೊಳಲು ಹಿರಿದು ಮುದಿಜೋಗ್ತಿ ಹಿಂದೆ ನುಡಿಸಿದ್ದ ಹಾಡನ್ನ ನುಡಿಸಿದ. ಪರವಶ ಜೋಗ್ತಿ ಬೆದೆಯ ಹಸು ಸಾಧುವಾದಂತೆ ಹೊಯ್ಕಿನಿಂದ ತೆಪ್ಪಗೆ ನಿಂತಳು. ಚಂದಮುತ್ತ ತಕ್ಷಣ ಹವಣರಿತು ಹದವಾದ ನಾದ ಹೊರಡಿಸಿ ರಾಗಮಂಡಳ ಬರೆದು ಮಂಡಳಕ್ಕೆ ಅವಳ ಅವಾಹಿಸುವ ರಾಗರಚನೆ ಮಾಡಿದ. ಜೋಗ್ತಿ ಕಿಟಾರನೆ ಕಿರಿಚಿ ಓಡಬೇಕೆಂಬಲ್ಲಿ ಕೈಮಾರು ಹಾಕಿ ದಾರಿಗಡ್ಡ ಕಟ್ಟಿದ. ಕೈಮೀರಿ ಹಾರಬೇಕೆಂದವಳ ಹಿಡಿಯಲು ಕೈ ಹಾಕಿದರೆ ಉಟ್ಟ ಚೆಂದಿ ಸೀರೆ ಕೈಗೇ ಬಂತು! ಬತ್ತಲಾದರೂ ಇನ್ನೂ ಉನ್ಮಾದದಲ್ಲಿ ಗುದಮುರಿಗೆ ಹಾಕುತ್ತಾಳಲ್ಲಾ ಎಂದು ಜುಟ್ಟು ಹಿಡಿದೆಳೆದರೆ ಜುಟ್ಟು ಕೈಗೇ ಬಂದು ಮುದಿಚರ್ಮ ಮುದುಡಿ ಮುದ್ದೆಯಾದಂತಾಗಿ ಒಳಗಡೆಯಿಂದ ಚೆಲ್ಲನೆ ಮೋಡದ ಒಡಲಲ್ಲಿ ಮಿಂಚು ಮಿಡುಕಿದ ಹಾಗೆ ಬೆಳಕಿನ ಚಿಲುಮೆ ಚಿಮ್ಮಿದವು! ಇದೇನೆಂದು ಹಿಡಿದೆಳೆದರೆ ಶಿವ ಶಿವಾ! ಅವಳುಟ್ಟ ಮುದಿಚರ್ಮ ಕೈಗೇ ಬಂದು ಮುದಿಚರ್ಮದ ಒಳಗೊಬ್ಬ ಜಗಜಗ ಬೆಳಗುವ ದಿವ್ಯ ಸುಂದರಿ, ಮೈತುಂಬ ಪರಿಮಳ ನಾರುವ ದಿಗಂಬರಿ, ಹಸಿರುಗಣ್ಣಿನ ಚಕೋರಿ ಎಂಬ ಯಕ್ಷಿ ನಾಂಚಿ ನಾಣುದಾಣಗಳ ಮುಚ್ಚಿಕೊಂಡು ನಿಂತಿದ್ದಾಳೆ!

ನೋಟ ನೋಟವ ಮೆಚ್ಚಿ ಮೈ ಬೆಚ್ಚಗಾದವು.
ಯಾರ್ಯಾರಿಲ್ಲದ ಸಮಯ ಸಾಧಿಸಿ
ಮಣ್ಣಿನ ಮಾನವ ಹೀಗೆ
ಏಕಾಏಕಿ ಏಕಾಂತಕ್ಕೆ ನುಗ್ಗಿ,
ತೋರಿಕೆಗಳ ಸೆಳೆದು
ಬತ್ತಲೆಗೊಳಿಸಿದರೆ ಏನಾಗಬೇಡ ದೈವದ ಬೆಳಕಿಗೆ?
ಬಿರುಗಾಳಿಗೆ ಹೊಯ್ದಾಡಿತೆ?
ಇಲ್ಲವೆ ಸೋಲಾಯಿತೆ ಅಲೌಕಿಕ ಬಲಕ್ಕೆ?

ಮಣ್ಣಿನ ಕಣ್ಣಾಡಿದಂತೆ
ಬೆಳಕಿನ ಕುಡಿಗೆ
ತನುಮೂಡಿ ತನುವೆಂಜಲಾಗಿ
ಮನ ಮೂಡಿ ಮನವೆಂಜಲಾಗಿ
ಕಾತರಿಸಿ ಮನದಗಲ ತನುವಿನ ಉದ್ದಗಲ
ಥರಥರನೆ ನಡುಗಿದಳು ನೋಡು!

ಅವಳ ಕಂಡನೇ,
ಮೈಯಲ್ಲಿ ಮಿಂಚಿನ ಹೊಳೆ ಹರಿದವು
ಚಂದಮುತ್ತನಿಗೆ.
ಬೆಳಕು ಉರಿದಾಡಿತ್ತು ಕಣ್ಣಿನೊಳಗೆ.
ಧಾರಾವತಿ ಸುರಿದವು ಅಂಗಜಲ ಕೆಳಗೆ.
ನೇತ್ರಸುಖದಲ್ಲಿ ತಬ್ಬಿಬ್ಬಾದ.

ಚಂದಮುತ್ತ ಅವಳನ್ನು ರಾಗಮಂಡಳದೊಳಕ್ಕೆ ಆವಾಹಿಸಿ ಬಂಧಿಸಿ ಒಲಿಸಿಕೊಳ್ಳುವ ರಾಗ ನುಡಿಸುವ ಮೊದಲೇ ತಾನೇ ಮಂಡಳದೊಳಕ್ಕೆ ಒಲಿದು ಬಂದು ಕತ್ತಿನಲ್ಲಿಯ ಅಮೃತವಲ್ಲಿಯ ಸರವ ತೋರಿಸಿದಳು. ಆಘಾತವಾಯ್ತು ಚಂದಮುತ್ತನಿಗೆ. ಶಿವ ಶಿವಾ! ಇದು ತಾನು ಯಕ್ಷಿಯ ಶಿಲಾಪ್ರತಿಮೆಗೆ ಮದುವೆ ಆಟದಲ್ಲಿ ಕಟ್ಟಿದ ತಾಳಿಯಲ್ಲವೆ? ಬಾಡದೆ ಇನ್ನೂ ಹಾಂಗೇ ಇದೆ! ಎಲ್ಲಿದ್ದನೋ ಮಾರಾಯ ಮಾರ, ಸಕ್ಕರೆ ಬಿಲ್ಲಿನ ಹೆದೆಯ ಶಕ್ತಿಂದ ಕರ್ಣಕೆ ತಂದು ಹೂ ಬಾಣ ಬಿಟ್ಟ ನೋಡು:

ಸ್ಮರಗಾಳಿ ಬೀಸ್ಯಾವು ಕರಣ ಕಳವಳಿಸ್ಯಾವು
ಪರಿಮಳದ ಪವನ ಸುಳಿದಾವು
ಸ್ತನ ವದನ ಯೌವನಕೆ ಬಾಯ್ಬಿಡುವ ಹುಡುಗನಿಗೆ
ಅತಿ ಕಾಮವಂತೆ ಒಲಿದಾಳು.

ಮೊದಲಿವಗೆ ಕಲಿಸುವೆನು ಮಾದನ ವಿದ್ಯೆಯನೆಂದು
ಹಾಕಿದಳು ಲೆಕ್ಕ ಒಳಗೊಳಗೆ
ಹುಲ್ಲೆಗಂಗಳ ನೋಟ ಹೃದಯದಲಿ ನೆಟ್ಟಾಳು
ಕನ್ನ ಹಾಕಿದಳವನ ಎದೆಗೆ.

ಬಿಗಿದ ಹೆದೆ ಅವಳ ಎದೆ ಹುರಿಗೊಂಡ ಚೆಲುವಿಕೆ
ಕುಚದಲ್ಲಿ ಎದ್ದಾವು ನವಿರು.
ಬೆದೆಯಿಂದ ಕುದಿವ ಮೈ ರುಚಿಯ ತೋರುವೆನೆಂದು
ಮಾಯಕಾರ್ತಿ ಯಕ್ಷಿ ಅಂದಾಳು.

ಆತುರ ತೀವ್ರ ಕಾಮಾತುರ ತಾಳದೆ
ಚಂದಮುತ್ತನ್ನ ಆಕ್ರಮಿಸಿ

ಬಾಹುಮಂಡಳದಲ್ಲಿ ಕಟ್ಟಿ ಮುದ್ದಾಡಿದಳು
ಕುಂಭ ಕುಚದಿಂದವನ ಗುಮ್ಮಿ.

ಹೆಪ್ಪು ಹಾಕಿದ ಹಾಗೆ ಜನಿಗೀsಯ ಹಾಲಿಗೆ
ಒಪ್ಪುಗೊಂಡರು ಅಪ್ಪುಗೆಯಲಿ
ಜೀವರಸ ಚಿಮ್ಮಿಸುವ ಸೊಗಸುಗಳ ಸುಖಿಸಿದರು
ಗಳರವ ಸಂಗೀತದಲ್ಲಿ.

ಎಳೆತಗಳ ಸೆಳೆತಗಳ ಬಲಗೊಳಿಸಿ ಸುಖಿಸಿದಳು
ಜಘನ ಗದ್ದಿದಿಸ್ಯಾವು ಬೆವರಿ
ಮಾನsವ ಶಕ್ತಿಗಳ ಚಪ್ಪರಿಸಿ ಸವಿದಳು
ತೃಪ್ತಿಯ ನಗಿಗಳ ಸೂಸಿ.

ಇಂತೀಪರಿ ನಿರನುಭವಿ ಗೊಲ್ಲಗೋಕುಲರ ಹೃದನ ಪಳಗಿಸಿ, ಸುಖಿಸಿ ಸುರತದ ಸಿದ್ಧಗಿರಿಶಿಖರದಿಂದ ಜಗುಳಿ ಚಕೋರಿ ಎಂಬ ಯಕ್ಷಿ ಚಂದಮುತ್ತನ ಚಂದಮುಖದ ಮುತ್ತು ಬೆವರೊರಿಸಿ ಚಿಗುರು ಬೆರಳಿಂದವನ ಮುಂಗುರುಳು ನ್ಯಾವರಿಸಿ ಮುದ್ದಾಡಿದಳು. ಆಮೇಲಾಮೇಲೆ ಸದರಿ ಯಕ್ಷಿ ಪರಿ ಪರಿ ರೀತಿಯಲಿ ಹೇಳಿದ ಸಂಗೀತ ವಿದ್ಯವನು ಸರಿ ಸರಿ ಎನ್ನುತ್ತ ಚಂದಮುತ್ತ ಪಡಕೊಂಡನೆಂಬಲ್ಲಿಗೆ ಗಿರಿಜಾರಮಣ ಶಿವಶಿವಾ ಸದರಿ ಸಂಧಿ ಮುಗಿದವು.

## ೧೦. ಕಲಿತ ವಿದ್ಯನ ಮಾಡಿದಳು

ಮಾತೆಲ್ಲ ಸಂಗೀತ, ನಡೆಯೆಲ್ಲ ನರ್ತನವಾದ ಚಕೋರಿ ಎಂಬ ಯಕ್ಷಿ ಕೊಟ್ಟರೆ ಕೊಡಬೇಕು ಇವಗೆ ವಿದ್ಯೆಯನೆಂದು ಚಂದಮುತ್ತನ ದಡ್ಡತನಗಳ ಪಳಗಿಸಿ ಮಹಾನುಭಾವನಿಗಿಂತ ನೂರು ಮಡಿ ನಿಷ್ಠುರವಾಗಿ ಕಠಿಣ ವ್ರತಂಗಳ ಮಾಡಿಸಿ ರಾಗ ರಾಗಿಣಿಯರ ನಿಯಮಂಗಳ ಬೋಧೆ ಮಾಡಿದಳು. ಬೋಧೆ ಮಾಡುವಾಗ ಅವಳೆಂದೂ ತುಟಿ ತೆರೆದಾಡಲಿಲ್ಲ. ಮುಗುಳು ನಗೆಗೂಡಿ ಮೌನದಲ್ಲಿ ಕುಂತರೆ ಸಾಕು, ಆಕಾಶಗುಂಭದ ಒಳಗಿಂದ ಗುಂಗು ಗುಂಗಿನ ನಾದ, ದುಂಬಿಯ ನಾದ, ತಂಬೂರಿ ತಂತಿಯ ಆಧಾರಶೃತಿ ನಾದ ಸುನಾಂದಂಗಳು ಅಲೆ ಅಲೆಯಾಗಿ ಒದಗಿಬರುತ್ತಿರುವಲ್ಲಿ - ಚಕೋರಿ ಎಂಬ ಯಕ್ಷಿ ಮೂರು ಚಂದ್ರರ ಕಾಲ ರಾಗ ರಾಗಿಣಿಯರ ಗುಟ್ಟುಗಳ ಒಳಗಿವಿಗೆ ತಾಗುವಂತೆ ಬೋಧೆ ಮಾಡಿದಳು. ಒಳಗಿವಿಗೆ ತಾಗಿದ್ದು ಹಾಡಾಗಿ, ಹಾಡಿನಲಿ ಹುರಿಗೊಂಡ ನಿಜವಾಗಿ ಹೊರಬರುವಂತೆ ಮಾಡುವ ಹವಣು ಹೇಳಿಕೊಟ್ಟಳು. ಆಮ್ಯಾಲೆ ಮಾರನೆ ಚಂದ್ರನಲ್ಲಿ ಆಕಾಶ ಸೂಕ್ಷ್ಮದಲಿ ಕರಗಿದ್ದ ರಾಗಂಗಳ ಸ್ಥೂಲದಲ್ಲಿ ಕರೆದು ತೋರಿಸಿ, ಅವರ ನಡೆವಳಿಕೆ, ಅಭಿಮಾನ ದೇವತೆಗಳ ಕೊಡುಕೊಳುವ ರೀತಿರಿವಾಜುಗಳ ಬೋಧಿಸಿದಳು. ಕೆಲವು ದೈವಂಗಳು ತಾವಾಗಿ ಮೆಚ್ಚಿಬಂದು ಸ್ವಪ್ನದಲ್ಲಿ ಕಾಣಿಸಿಕೊಂಡು ತಮ್ಮನ್ನು ನುಡಿಸುವ ಗುಟ್ಟುಗಳ ಬಿಟ್ಟುಕೊಂಡವು. ಮಹಾಶಿವರಾತ್ರಿಯಂದು ಮಹಾನುಭಾವನೊಂದಿಗೆ ಕಂಡ ರಾಗಂಗಳು ಇವನು ಕೊಳಲು ತುಟಿಗಿಟ್ಟುದೇ ತಡ ಪ್ರಸನ್ನವಾಗಿ ಆಶೀರ್ವದಿಸಿ ಸುರಿದವು. ಇಂತೀ ಪರಿ ಚಂದಮುತ್ತ ಒಂದರ ಮ್ಯಾಲೊಂದು ಮತ್ತೊಂದು ಮಗದೊಂದು ರಾಗವ ಕಲಿತು ಕಲಿತ ವಿದ್ಯನಾದನು.

ಆಮೇಲಾಮೇಲೆ ಒಂದು ದಿನ ತುಂಬಿದ ಸೋಮವಾರ ಹುಣ್ಣಿವೆ ದಿನ ಸಪ್ಪಟು ಸರಿರಾತ್ರಿ ಒಳ್ಳೆಯ ಗಳಿಗೆ ಮಂಗಳ ಮುಹೂರ್ತವ ನೋಡಿ ತಿಂಗಳ ರಾಗ ರಚನೆಯ ಪೂರ್ವಾಪರ ಹೇಳಿ ಈಗ ನುಡಿಸು ಎಂದಳು. ಚಂದಮುತ್ತ ಕೊಳಲು ನುಡಿಸಿದ. ಸಾಲದೆಂದಳು.

ಮತ್ತೆ ನುಡಿಸಿದ. ಮತ್ತೂ ಸಾಲದೆಂದಳು. ಈ ಹೀಂಗೆ ಎಷ್ಟು ಬಾರಿ ನುಡಿಸಿದರೆ ಅಷ್ಟೂ ಬಾರಿ ಸಾಲದು ಸಾಲದೆಂದಾಗ ಚಂದಮುತ್ತ ಚಿತ್ತ ಸಂಶಯದಿಂದ ಕೇಳಿದ:

"ಒಂದು ರಾಗ ನೀ ತೋರಿದ ಸೀಮೆಗಳ ತುಂಬಿ ಸಂಪೂರ್ಣವಾದುದಕ್ಕೆ ಕುರುಹೇನು ದೇವಿ?"

ರಾಗದ ಅಭಿಮಾನಿದೇವತೆ ಬಹಿರೂಪ ಕಳಚಿ ಶುದ್ಧ ಆನಂದ ರೂಪುವಡೆದು ಆಕಾಶದಂಗಳದಲ್ಲಿ ತೇಲುವುದೆ ಕುರುಹೆಂದಳು. ದೇವತೆ ಒಲಿದರೆ ನನಗೇನು ಲಾಭವೆಂದರೆ ಆ ದೇವತೆ ಬೇರೆ ಯಾರೂ ಅಲ್ಲ, ನಿನ್ನದೆ ಬಿಂಬ, ನಿನ್ನ ನಿಜವ ನೀನೇ ಕಾಂಬ ಆನಂದಿಸುವ ಲಾಭವೆಂದಳು.

**ಚಂದಮುತ್ತ :** ನೀನ್ಯಾಕೆ ನುಡಿಸಿ ತೋರಿಸುವುದಿಲ್ಲ ದೇವೀ?

**ಚಕೋರಿ :** ಗುರುವಲ್ಲ, ನಿನ್ನ ಇಚ್ಛಾಧೀನ
ನಾವು ಹಂಗಿಗರಯ್ಯ ನಿನ್ನ ಕೊಳಲುಲಿಗೆ.
ಬೆಂಕಿ ಪ್ರಕಟವಾಗುವುದಕ್ಕೆ
ಬೇಕು ಮರದ ಆಸರೆ
ಅಂತೆಯೇ ಬೇಕಯ್ಯ ನೀನು ನಮಗೆ.

**ಚಂದಮುತ್ತ :** ಬಹಿರೂಪದಲ್ಲಿ ನನ್ನೆದುರು ಕುಂತಿರುವಿಯಲ್ಲ ದೇವೀ?

**ಚಕೋರಿ :** ನಿನ್ನ ಕಾಮನೆಯಿಂದಾಗಿ
ಸ್ಥೂಲದಲ್ಲಿ ಚಕೋರಿ ಎಂಬ ಯಕ್ಷಿ
ಸೂಕ್ಷ್ಮದಲ್ಲಿ ತಿಂಗಳ ಬೆಳಕುಂಡು
ಬದುಕುವ ಚಕೋರಿ ಪಕ್ಷಿ:
ತಿಂಗಳು ರಾಗದ ಅಭಿಮಾನಿದೇವತೆ
ತಿಂಗಳು ರಾಗ ಕಾರಣವಾಗಿ
ಯಕ್ಷಿಯ ಬಹಿರೂಪ ಕರಗಿ
ಪಕ್ಷಿಯಾಗುವುದು ನಮ್ಮ ಧರ್ಮ
ಕಲಾವಿದನಂತೆ ಕಲೆಯೂ ಹುಡುಕುತ್ತದೆ
ತಕ್ಕವನನ್ನ.
ಹಾಗೆ ಪರಸ್ಪರ ಹುಡುಕಿ ಪಡಕೊಂಡವರು
ನಾವು ನಿನ್ನನ್ನ.
ನೀನು ನಮ್ಮನ್ನ.

ಇಷ್ಟು ಕೇಳಿದ್ದೇ ಚಂದಮುತ್ತ ಥರಾಥರ್ನ ನಡುಗಿ ಹತ್ತೂ ಬೆರಳು ಕೂಡಿಸಿ ಮುಗಿದು;

ಭಯವಾಗುತ್ತದೆ ದೇವೀ,
ಶಕ್ಯವೆ ಒಗೆತನ ನಿಮ್ಮೊಂದಿಗೆ?

ಲೋಕ ಲೌಕಿಕದವನು ನಾನು
ಮುಗಿಲ ತುದಿಗಿರುವವರು ನೀವು.
ನಿಮ್ಮ ಕಟ್ಟಳೆ ರೀತಿ ರಿವಾಜು ನನಗರಿದು.
ನರಲೋಕದ ನಡಾವಳಿ ನಿಮಗರಿದು.
ನಿಮ್ಮೊಂದಿಗೆ ವ್ಯವಹರಿಸಲು
ನನ್ನ ಜಾಣ್ಮೆ ಸಾಲದೇ ಬರಬಹುದು.
ನನ್ನ ದಡ್ಡತನ ಸಮೇತ ಎಲ್ಲ ನಿನ್ನದು ದೇವೀ.

- ಎಂದು ಮೈಹಾಸಿ ಅವಳ ಪಾದದ ಮ್ಯಾಲೆ ಅಡ್ಡಬಿದ್ದ. ಅವನ ಮುಗ್ಧ ನಡೆ ನೋಡಿ ನುಡಿ ಕೇಳಿ ಹವಳದುಟಿ ಯಕ್ಷಿ ಚಂದಮುತ್ತನ್ನ ಹಿರಿದು ಮೆಚ್ಚಿದಳು.

## ೧೧. ಕನ್ನಡಿಯಾದರು ಒಬ್ಬರಿಗೊಬ್ಬರು

ಆಮೇಲಾಮೇಲೆ ಚಕೋರಿ ಎಂಬ ಯಕ್ಷಿ ಚಂದಮುತ್ತನ ದೃಢವ ಪರೀಕ್ಷಿಸಿ, ಇನ್ನಷ್ಟು ಕಠಿಣ ವ್ರತನಿಷ್ಠೆಗಳ ಮಾಡಿಸಿ ತಿಂಗಳು ರಾಗ ಬೋಧಿಸುವ ದೊಡ್ಡಮನಸ್ಸು ಮಾಡಿದಳು. ಒಂದು ದಿನ ತುಂಬಿದ ಸೋಮವಾರ ಅಮಾವಾಸ್ಯೆಯಂದು ಸೋಮವಾರದ ಒಡೆಯ ನಾದಪ್ರಿಯ ಶಿವಲಿಂಗಸ್ವಾಮಿಗೆ ಚಂದಮುತ್ತನಿಂದ ಮುಂಜಾನೆಯ ಹನಿ ಪೂಜೆ, ಮಧ್ಯಾಹ್ನದ ಮಹಾಪೂಜೆ ಮಾಡಿಸಿದಳು. ಸಂಜೆಯ ಶಾಂತಿಪೂಜೆ ಯಾದೇಟ್ಗೆ, ಸಾಲು ಸಾಲು ಸೊಡರುರಿದಂತೆ ತಾರಾನಕ್ಷತ್ರ ಬೆಳಗಿ ರಾತ್ರಿಯಾಯಿತು. ಪಡುವಲ ಮುಖವಾಗಿ ತಿಂಗಳುರಾಗದ ಮಂಡಳ ಬರೆದು, ಮಂಡಳದಲ್ಲಿ ಸತ್ಯಶಿವಲಿಂಗೇಶ್ವರದೇವರ ಸ್ಥಾಪನೆ ಮಾಡಿ ನೆತ್ತಿಯ ಮ್ಯಾಲೆ ಮಿಡಿನಾಗರ ಜಡೆ ಬರೆದಳು. ಜಡೆಯಲ್ಲಿ ಸುಣ್ಣದ ಗೆರೆಯೆಳೆದು ಎಳೆಯ ಚಂದ್ರನ ಬರೆದು ಮಂಡಳದ ಸುತ್ತೂ ಕಡೆ ಮಂತ್ರಭಾವಿತ ರಕ್ಷೆಗಳ ರಚಿಸಿ ರಕ್ಷಿಸೆಂದು ಭೃಂಗೀಶನ ಪ್ರಾರ್ಥಿಸಿಕೊಂಡಳು. ಇಷ್ಟೊತ್ತಿಗೆ ಸಪ್ಪಟು ಸರಿರಾತ್ರಿ ಕಲ್ಲೂ ನೀರೂ ಕರಗುವ ಸಮಯವಾಗಿರಲು ಸಾವಿರ ಶಿವಗಣಂಗಳ ಕರೆದು ಜೀವಬೋಧೆಯ ಮಾಡಿ ಕಾವಲಿರಿಸಿದಳು. ಆಮ್ಯಾಲೆ ಒಳ್ಳೆಯ ನಾದ ಸುನಾದವ ಅನುಗ್ರಹಿಸಿ ಸಾರಾಂಶ ನುಡಿ ಹೇಳಿದಳು:

ಅಯ್ಯಾ ಹೆಚ್ಚಿನವನೇ
ಮೆಚ್ಚಿ ಅರ್ಪಿಸಿಕೊಂಡಿದ್ದೇನೆ
ಹೆಚ್ಚು ಕಡಿಮೆ ನುಡಿಸಬ್ಯಾಡ
ಎಚ್ಚರವಿರಲಿ ರಾಗದ ಮ್ಯಾಲೆ
ನನ್ನ ಜೀವದ ಮ್ಯಾಲೆ
ಕಣ್ಣಿರಲಿ ಮಂಡಳದ ಚಂದ್ರನ ಮ್ಯಾಲೆ
ಇನ್ನು ನುಡಿಸೆಂದಳು.

ಚಂದಮುತ್ತ ಕೊಳಲ ನುಡಿಸಿದ. ಈಗ ಹಬ್ಬಿತು ನೋಡು ರಾಗದ ಮಾಯೆ ಸುತ್ತ ಕ್ಷಿತಿಜದ ತನಕ ಮ್ಯಾಲುರಿವ ಸೊಡರು ನಕ್ಷತ್ರಗಳ ತನಕ ! "ಮಂಡಳದಲ್ಲಿ ಏನು ಕಂಡೆ?" ಎಂದಳು.

"ಸಾವಳಗಿ ಶಿವಲಿಂಗವ ಕಂಡೆ
ಬದಿಯಲ್ಲಿ ಮಡುವ ಕಂಡೆ"

ಸಾಲದು ಸಾಲದೆಂದು ಚಂದಮುತ್ತನ ಎಡಗಾಲ ಹೆಬ್ಬೆರಳ ಮ್ಯಾಲೆ ತನ್ನ ಬಲಗಾಲ ಹೆಬ್ಬೆರಳೂರಿ, ಬಾಹುಸರ್ಪಂಗಳಿಂದವನ ಗಟ್ಟಿಯಾಗಿ ಕಟ್ಟಿ ಮುಖಕ್ಕೆ ಮುಖ ಕೊಟ್ಟು ಕಣ್ಣಲ್ಲಿ ಕಣ್ಣಿಟ್ಟು ಈಗ ನೋಡು ನೋಡೆಂದಳು. ಏಕಾಏಕಿ ನಡೆದ ಈ ಆಕ್ರಮಣವ ಎದುರಿಸಲಾರದೆ ಚಂದಮುತ್ತ ಚಡಪಡಿಸುತ್ತ ಯಕ್ಷಿಯ ಕುರಂಗಾಕ್ಷಿಗಳಲ್ಲಿ ನೋಡಿದ.

**ಚಕೋರಿ :** ಹೇಳು ನನ್ನ ಕಣ್ಣಲ್ಲಿ ಏನೇನ ಕಂಡೆ?
ನನ್ನ ಮುಖದ ಕಾಂತಿಯ ಕಂಡೆಯಾ?
ನಿನ್ನ ಹಾಡಿನ ಬೆಳಕನ್ನ ಕಂಡೆಯಾ?

**ಚಂದಮುತ್ತ :** ಮಂಡಳದ ಶಿವನ ಜಡೆ
ಪಡುವಲ ಗಿರಿಯಾದುದ ಕಂಡೆ,
ಪಡುವಲ ಗಿರಿ ಬಿರಿದು ಗೆರೆಗಾತ್ರದ ಚಂದ್ರ
ಉದಯವಾದುದ ಕಂಡೆ.
ಗೆರೆಗಾತ್ರದ ಚಂದ್ರ ಚೊಗಚೆಯ ಹೂಗಾತ್ರದ
ಚಂದ್ರನಾದ.
ಎಳೆಯ ಚಂದ್ರ ಬೆಳೆದ ಚಂದ್ರನಾದ.
ಚಂದ್ರಾಮಸ್ವಾಮಿಯ ಬೆಳಕು
ಮೋಡ ಮೋಡದ ಮ್ಯಾಲೆ
ಕಾಲೂರಿ ಇಳಿವುದ ಕಂಡೆ.
ಇಳಿದ ಬೆಳಕಿನಲ್ಲಿ
ನೋಡಿದರೆ ಶಿವಶಿವಾ,
ಶಿವಾಪುರದ ಮಾಯದ ಕೆರೆ ಕೆಳಗಿದೆ.
ಬೆಳಕಿನ ಕೆನೆಗಟ್ಟಿದ ಚಂದ್ರ ಮ್ಯಾಲಿದ್ದಾನೆ.
ಚಂದ್ರಾಮನ ಹೃದಯದಲ್ಲಿ ಮೇಯುವ ಜಿಂಕೆ ಮರಿಯಿದೆ.
ಕೆರೆನೀರಿನ ಹೃದಯದಲ್ಲಿ
ಚಂದ್ರಾಮನ ಕನಸು ತೇಲಾಡಿದೆ...

ಆವಾಗ ನೋಡು ಶಿವಾ, ನೋಡನೋಡುತ್ತಿರುವಂತೆ ಏನಾಯಿತೆಂದರೆ,

ಆಕಾಶ ನೀಲಿಮದ ಚಂದ್ರನೊಳಗಿಂದ
ಚಂಗನೆ ಹೊರಕ್ಕೆ ನಗೆಯಿತು ಜಿಂಕೆಮರಿ.
ಎಳೆಯ ಜಿಂಕೆಮರಿ ಹೊಳೆವ ಜಿಂಕೆಮಾರಿಯಾಗಿ
ಕೆಳಕ್ಕಿಳಿದು ನೇರ ಕೆರೆಗೇ ಬಂತು ಬಾಯಾರಿಕೆಗೆ.
ಬಾಯಿ ಹಾಕಿದ್ದೇ
ನೀರಲ್ಲಿ ಕಂಡಿತು ಇನ್ನೊಂದು ಜಿಂಕೆಮರಿ
ಗುರುತಿಲ್ಲದ ಮರಿಯೆಂದು ಸ್ನೇಹದಲ್ಲಿ ಮೂಸಿ
ಮುದ್ದಾಡಿ ಕೊಂಬಿನಲ್ಲಿ ತಿವಿದಾಡಿದಾಗ

ಕದಡಿದ ಕೆರೆನೀರು
ತೆರೆತೆರೆ ಬೆಳಕಿನ ಹೆಡೆಯಾಡಿಸಿತು.
ನೀರು ತಿಳಿಯಾಗಿ ಮತ್ತೆ ಕನ್ನಡಿಯಾಗಿ ನೋಡಿದರೆ
ಎದುರುಬದುರಾಗಿವೆ ರವರುದ್ರಗೋಪದಲ್ಲಿ
ಎರಡೂ ಮರಿ!

ಹಗೆ ಹಗೆ ಹೊಗೆಯಾಡುವ ಉಸಿರು ಬಿಡುತ್ತ
ಉರಿವ ನೋಟಗಳಿಂದ ಪರಸ್ಪರ ಇರಿಯುತ್ತ
ಕೊಂಬಿನ ಹರಿತ ಶಕ್ತಿಗಳ
ಪ್ರಯೋಗಿಸಲು ಹೊಂಚಿ ನಿಂತಿವೆ
ಕಾದುವ ಹಮ್ಮಿನಲ್ಲಿ !
ಒಂದರ ಕಣ್ಣಲ್ಲಿ ಇನ್ನೊಂದು ಬೆಳೆಯುತ್ತಿದೆ
ರಾಕ್ಷಸಾಕಾರ.

ಅನಬಹುದೆ ಶಕ್ತಿಯುಕ್ತಿಗಳಲ್ಲಿ
ಅದು ಹೆಚ್ಚು ಇದು ಕಮ್ಮಿ ಅಂತ? ಮುಖ್ಯ
ಎರಡರ ಪ್ರಳಯವೂ ಸನ್ನಿಹಿತ.
ಎರಡರ ಕಾಮಿತ ಒಂದಾದರೆ
ನಿಭಾಯಿಸಬಹುದು, ಆ ಮಾತು ಬೇರೆ.
ಅದರಲ್ಲಿ
ಒಂದಕ್ಕೆ ನೀರಿನ ಬಾಯಾರಿಕೆ.
ಇನ್ನೊಂದಕ್ಕೆ ಬೆಳಕಿನ ಬಯಕೆ.

ಎರಡರ ಉಸಿರಿನ ಜ್ವಾಲೆ
ಸುಡು ಸುಡು ಸುಡುತ್ತದೆ ಕಾಡನ್ನ, ಕೆರೆಯನ್ನ.

ತಕ್ಷಣ ಚಂದಮುತ್ತ ಮಧ್ಯೆ ಬಂದು,
"ಕೆರೆನೀರಲ್ಲಿ ಕುದಿಯುತ್ತಿರುವ ಚಂದ್ರಾಮ ಸ್ವಾಮಿ
ನೀವಿಬ್ಬರೂ ಬಿಂಬ ಪ್ರತಿಬಿಂಬಗಳೆಂದು
ನೀತಿ ನುಡಿ ಹೇಳಿ
ಬಗೆಹರಿಸಬಾರದೆ ಮರಿಗಳ ಜಗಳ?"

- ಎಂದು ಹೇಳಿದ. ತೀಕ್ಷ್ಣ ಕಣ್ಣಿಂದ ಚಂದಮುತ್ತನ್ನ ನೋಡಿ ಜಗಳ ಮರೆತು ಇವನ ಕಡೆಗೇ ಬಂತು ಜಿಂಕೆಮರಿ.

"ಬೆಳಕಿನ ಸುಗ್ಗಿ ಒಕ್ಕೋಣ ಹತ್ತುಬಾರೊ ಹುಡುಗ" ಎಂದಿತು. ಹತ್ತು ಎಂದು ಜಯವುಳ್ಳ ಯಕ್ಷಿಯ ದನಿ ಕೇಳಿಸಿತು. ಚಂದಮುತ್ತ ಹೋಗಿ ಬೆಳ್ಳಿಯಂತೆ ಮಿರು ಮಿರುಗುವ ಜಿಂಕೆಮರಿಯ ಬೆನ್ನೇರಿ ಗಟ್ಟಿಯಾಗಿ ಕತ್ತು ತಬ್ಬಿಕೊಂಡ. ಹುಯ್ಯಲಿಟ್ಟಂತೆ ಸುಂಟರಗಾಳಿ ಬೀಸಿ ಭೂಮಿ ಗಿರ್ರನೆ ತಿರುಗಿ ನಾಕು ಲೋಕ ಏಕವಾಗುವಂತೆನಿಸಿ ಚಂಗನೆ ನೆಗೆಯಿತು ಜಿಂಕೆ ಮೇಲುಮೇಲಕ್ಕೆ ಮ್ಯಾಲಿನ ಮಿರಿಲೋಕಕ್ಕೆ. ಈಗ

ನೋಡಿದರೆ ಸಾವಳಗಿ ಶಿವ ಶಿವಾ, ಯಕ್ಷಿ ಬೇರೆಯಲ್ಲ, ಜಿಂಕೆ ಬೇರೆಯಲ್ಲ ಯಕ್ಷಿ ಜಿಂಕೆ ಎರಡೊಂದಾಗಿ ತನ್ನಯ ಪ್ರತಿಬಿಂಬವಾಗಿ ಕ್ಷಿತಿಜದಾಚೆಗೆ ಸೇರಿಕೊಂಬ ರಸ್ತೆಯ ರಚಿಸಿ ತೇಲಾಡಿ ದಾಟಿದರು ಸುಲಭದಲ್ಲಿ.

ಒಬ್ಬರಿಗೊಬ್ಬರು ಕನ್ನಡಿಯಾದರು
ಬೇಲಿಯಿಲ್ಲದ ಬಯಲಿನಲ್ಲಿ
ಒಬ್ಬರನ್ನೊಬ್ಬರು ಒಳಗೊಂಡರಿಬ್ಬರು
ಸುರಿವ ಎಳೆಬೆಳುದಿಂಗಳಲ್ಲಿ

ಇಂತೀಪರಿ ಬೆಳ್ಳಿಲೋಕದ ಅಂಚಿನತನಕ ಚಂದಮುತ್ತನ್ನ ಕರೆದೊಯ್ದು ಇನ್ನು ಹಿಂದಿರುಗೆಂದಳು. ಚಂದಮುತ್ತ ತಿರುಗಿ ಬಂದು ಯಕ್ಷಿಯ ನಕ್ಷತ್ರ ಕಣ್ಣಿಂದ ದೃಷ್ಟಿಯ ಕಿತ್ತ.

ನೆಪ್ಪಿರಲಿ ಗೆಳೆಯಾ, ಬೆಳ್ಳಿಲೋಕದಲ್ಲಿ ತೇಲುವಾಗ
ಅಪಸ್ವರವುಂಟಾದರೆ ಇಬ್ಬರಿಗೂ ತಪ್ಪದ ಹಾನಿ.

ಎಂದಳು ಹಸಿರುಗಣ್ಣಿನ ಯಕ್ಷಿ,

ತಿಂಗಳ ಸುಖವಿತ್ತು
ಮುದವಿತ್ತು ಮುಖದಲ್ಲಿ
ಬೆಳ್ದಿಂಗಳು ಸುರಿದಿತ್ತು ಅವಳ ಮೈಯಿಂದ ।
ಬೆವರಜಲ ಸುರಿದಿತ್ತು ಇವನ ಮೈಯಿಂದ ॥

## ೧೧. ಮಗನೇ ನೀ ಬೇಗನೆ ಬಾ

ಮ್ಯಾಲಿನ ಲೋಕದಲ್ಲಿ ಈ ಹಿಂಗೆ ನಡೆಯುತ್ತಿರಬೇಕಾದರೆ ಕೆಳಗಿನ ಲೋಕ ಗೋಳುಬೀಸುವ ಗಿರಣಿ ನಮ್ಮೀ ಧರಣಿಯ ಮ್ಯಾಲೆ ಏನು ನಡೆಯುತ್ತಿದ್ದಿತೆಂದರೆ:

ಹೇಳಿ ಹೋದ ಸೋನೆಮಳೆ ಬರಲಿಲ್ಲವಾಗಿ
ಶಿವಾಪುರದ ಜೀವಜಿಂದಗಾನಿ ಅಸ್ತವ್ಯಸ್ತವಾಗಿವೆ.
ಮ್ಯಾಲಿನ ಲೋಕದ ಮಳೆ ತಪ್ಪಿ
ಕೆಳಗಿನ ಲೋಕದಲ್ಲಿ ಬೆಳೆಯಿಲ್ಲದೆ
ನಾಡು ನರಲೋಕ ನರಕವಾಗಿದೆ.
ಹುಲ್ಲು ಹಸಿರಿಲ್ಲದೆ ಹಟ್ಟಿಯೊಕ್ಕಲು ಮಂದಿ
ಕಟ್ಟಿ ಮೇಯಿಸುವ ದನ, ಬಿಟ್ಟು ಮೇಯಿಸುವ ಕುರಿಗಳ
ಹೊಡೆದುಕೊಂಡು ಮೇವಿರುವ ನಾಡಿಗೆ ಗುಳೆ ಹೋಗಿದ್ದಾರೆ.
ಅಡವಿಯಲ್ಲಿ ಜೇನು ಸಿಗದೆ,
ಕಾಡುಬಾಳೆ ಗಡ್ಡೆಗೆಣಸು ಸಿಗದೆ
ತಿಂದೇನೆಂದರೆ ಸೊಪ್ಪು ಸದೆ ಸಿಕ್ಕದೆ, ಪ್ರಾಯದವರು ಗುಳೆ ಹೋಗಿ

ಉಳಿದವರು ಬಿದಿರಕ್ಕಿ ಬಿದಿರ ಕಳಲೆಯ ತಿಂದು
ಬದುಕಿದ್ದಾರೆ.
ಹದ್ದುಗೈಯಿಟಗೊಂಡು ಮಳೆ ಹಾದಿಯ ನೋಡುತ್ತ,
ಮಳೆ ಕಳಿಸು ಶಿವನೇ ಎಂದು
ಕರುಳು ಬಾಯಿಗೆ ಬರುವಂತೆ ಮೊರೆಯಿಡುತ್ತ.
ನೀಲಿಮ ಆಕಾಶದಲ್ಲಿ
ಉರಿಯುವ ಮೋಡ ಹಾರ್ಯಾಡುತಾವೆ.
ಚಂದ್ರ ಹೊತ್ತಿ ಬೆಳ್ದಿಂಗಳ ಬೂದಿ ಬಿದ್ದು
ನೀರು ನೆರಳಿಲ್ಲದ ಕಾಡು ಉರಿವುಸಿರ ಹಾಕುತ್ತಿದೆ.
ಹಕ್ಕಿಪಕ್ಕಿ ಬೆವತು ಬೆಂಡಾಗಿ ಸೀಮೆದಪ್ಪಿವೆ.

ಮಳೆ ಕಳಿಸು ಶಿವನೇ
ನಮ್ಮ ಕಾಡಿಗೆ ಮತ್ತೆ ಯೌವನ ಬರಲಿ.
ಹಸಿರು ಹಬ್ಬಿ ಹಂದರವಾಗಲಿ.
ಹೂಮುಡಿದು ಶೃಂಗಾರವಾಗಲಿ
ಹಾಡುವ ಹಕ್ಕಿಗಳಿಂದ, ತುಂಟ ಪ್ರಾಣಿಗಳಿಂದ
ಮೆಲುಕಾಡಿಸುವ ನಮ್ಮ ದನಕರು ಕುರಿಗಳಿಂದ
ಕಾಡು ತುಂಬಲಿ.

ಪುಣ್ಯಕೋಟಿ ಹಸು ಲಕ್ಕಬ್ಬೆ ಕಣ್ಣು ಹೊತ್ತಿಸಿಕೊಂಡು ಮಗ ಇಂದು ಬಂದಾನು ಈಗ ಬಂದಾನೆಂದು ಹಾದಿಗುಂಟ ನೆದರು ಹಾಸಿ ಕಾದಳು. ಸುತ್ತಿನ ದೇವದೈವಂಗಳು ಮಗನ ಕಳಿಸಲೆಂದು ಬಿದಿರುಬತ್ತ ಕುಟ್ಟುತ್ತಾ, ರಾಗ ಎಳೆಯುತ್ತಾ, ಪದ ಹಾಡುತ್ತಾ ಬೇಡಿಕೊಂಡಳು. ಬಿಕ್ಕಳಿಕೆ ಜಾಸ್ತಿಯಾದರೆ ಮಗ ನೆನೆದನೆಂದು ಚಿಂತೆ ಮಾಡಿದಳು. ಚಂದಮುತ್ತನ ಚಿಕ್ಕಂದಿನ ಆಟಿಗೆಗಳ; ನಾರಿನ ಹಗ್ಗ, ಹೂವಿನ ಮುಖವಾಡದ ಮಣ್ಣಿನ ಬಸವ, ದುಂಡುಮಲ್ಲಿಗೆ ಹಸು, ಇರಿದಾಡಲು ನಿಂತ ಮರದ ಟಗರು, ಪಿಳ್ಳಂಗೋವಿ, ಕುಣಿಯೋ ನವಿಲು, ಬಂಡಿ ಎಳೆಯುವ ಗಿಣಿ, ಮೇಯುವ ಕುರಿಗಳ ಜೋಪಾನವಾಗಿ ಕೂಡಿಟ್ಟು ಅವುಗಳೊಂದಿಗೆ ಮಗನ ಆಟ ಕಲ್ಪಿಸಿ ಆನಂದಪಡುತ್ತ ಮುದುಕಿ ತಂತಾನೆ ಆಡಿಕೊಂಡಳು.

ಚಿಕ್ಕಂದು ನೀ ಆಡಿದ ಅಟಿಗೆಗಳನ್ನ
ಇಂದಿಗೂ ಕಾದಿಟ್ಟಿದ್ದೇನೆ ಕಂದಾ.

ಹಿತ್ತಲಲ್ಲಿ ನೀ ಮಾಡಿದ ಪುಟ್ಟ ಮಲ್ಲಿಗೆ ತೋಟ,
ಯಾತದ ಬಾವಿ, ಮ್ಯಾಲೊಂದು ಮರ,
ಮರದಲ್ಲೊಂದು ಗಿಣಿಮರಿ
ಬಿದಿರಿನ ಪುಟ್ಟ ಕೊಳಲು, ಕೊಳಲುಲಿಗೆ ಮೈಮರೆತ
ಮಣ್ಣಿನ ಕುರಿ ಮುಂದೆ, ದನಕರು,
ಕರುವಿಗಾಗಿ ಕಾಡಿನಲ್ಲಿ ಕಾದು ನಿಂತ
ಮರದ ಹುಲಿ, ಬೊಗಳುವ ನಾಯಿ...

ನಿನ್ನೆ
ಕಾಲನ ಧೂಳು ಸರಿಸಿ ನೋಡಿದಾಗ
ನಿನ್ನ ತೋಟ ಹಾಗೇ ಇದ್ದುದ ಕಂಡೆ.
ತಪ್ಪಿಸಿಕೊಂಡ ಕರುವೊಂದ ತಂದು
ಹಿಂಡಿನಲ್ಲಿ ಬಿಡಬೇಕೆಂದಾಗ
ಸಾಲುಹುಲ್ಲಿನ ಮರದ ನಾಯಿ ಮೈಮ್ಯಾಲೇರಿ ಬಂದು
ಎದೆ ಕಚ್ಚಿ ಬೊಗಳಿತು ಮಗನೇ.

ನೀ ನೆಟ್ಟ ಮಲ್ಲಿಗೆ ಬಳ್ಳಿ ಮೊಗ್ಗು ಬಿಟ್ಟಿವೆ.
ಹೂವಾಗುವ ಸಮಯ, ಮಳೆಯಿಲ್ಲ; ನೀರುಣಿಸಬೇಕು
ರಾದರೊಬ್ಬರು.

ಮುಖಕ್ಕೆ ಸೀಮೆ ಸುಣ್ಣವ ಬಳಿದು
ಹುಣ್ಣಿಮೆ ಚಂದ್ರಾಮನಾಗಿದ್ದ ಬಾಲಕನೊಬ್ಬ
ಬಳ್ಳಿಯ ಬಳಿ ನಿಂತಿದ್ದ.
ನನ್ನ ಕಂಡೊಡನೆ ಓಡೋಡಿ ಬಂದು
ತೆಕ್ಕೆ ಹಾದು ಕುತ್ತಿಗೆ ನೇತು ಬಿದ್ದ.
ಯಾರೋ ನೀನು? ಅಂದರೆ,
ನಿನ್ನ ಮಗ ಚಂದ್ರಾಮನೆಂದ.

ಅಲ್ಲೇ ಕಂದಿ ಮುಳುಗಲಾರದೆ ನಿಂತಿದ್ದ
ನೀ ಬರೆದ ಸೀಮೆಸುಣ್ಣವ ಚಂದ್ರ,
ದೂರದಲ್ಲಿ ಹೊಂಚಿದ್ದ ಧೂಮಕೇತು.
ಆತನ ಬೆಂಕಿ ಹೂಗಳ ಮ್ಯಾಲೆ ಸುರಿದು
ಗುಡಿ ಗೂಡು ಕೊಳಲು ಬೂದಿಯಾದರೆ
ಜನ ದನ ಶಿವನೇ ಎಂದರೆ
ಸುಟ್ಟುಳಿದ ನಿನ್ನ ಹಾಡಿನ ಇದ್ದಿಲು ಚೆಲ್ಲಾಪಿಲ್ಲಿ ಬಿದ್ದರೆ...

ಇದನ್ನೆಲ್ಲ ಮಕ್ಕಳಾಟ ಎನ್ನಲಾದೀತೆ?
ಹಾಗಾದಲ್ಲಿ ನಾ ನೀನು ತಾಯಿ ಮಗ ಆದದ್ದೂ
ಆಟವಾಗದೆ ಕಂದ?
ಅದಕ್ಕೇ ಹೇಳಿದೆ: ಯಾರಾದರೊಬ್ಬರು
ಕಾಯಬೇಕಿದೆ ನಿನ್ನ ತೋಟವ. ಅದಕ್ಕೇ
ಎಲ್ಲಿದ್ದರೆ ಅಲ್ಲಿಂದ
ಮಗನೇ ನೀ ಬೇಗನೆ ಬಾ -

- ಎಂದು ಹೇಳುತ್ತ ಮಣ್ಣಿನಾಟಿಗೆಯ ಹಿಡಿದುಕೊಂಡು ಗೋಳು ಗೋಳೆಂದತ್ತಳು ಅಬ್ಬೆ. ಕೈಯಲ್ಲಿ ಆಟಿಗೆಯಾಯ್ತು, ದಿನಾ ಕಣ್ಣಲ್ಲಿ ಕಂಬನಿಯಾಯ್ತು.

ಎಷ್ಟು ದಿನ ಕಾದರೂ ಮಗ ಬಾರದೆ, ನೀರು ತುಂಬಿದ ಕಣ್ಣಲ್ಲಿ ಆಟಿಕೆಗಳು ಕಾಣದೆ ನೀರಲ್ಲಿ ತೇಲಿಬಿಟ್ಟ ದೀಪದ ದೊನ್ನೆಯಂಥ ಕಣ್ಣಿಂದ ಮಗನ ದಾರಿ ನೋಡಿದಳು ಅಬ್ಬೆ:

ಬಾಳೋ ಭಕ್ತಳಿಗೊಂದು ವ್ಯಾಳ್ಯಾವು ಬಂದರೆ
ಕಾಯೋರ್ಯಾರೋ ಶಿವನೆ ನಿನ್ನ ಬಿಟ್ಟು?
ಒಳ್ಳೆಯ ಸಂಗತಿಗಳನ್ನ ನೆನಪನಲ್ಲಿಟ್ಟುಕೊಳ್ಳೋನೇ,
ಕೆಟ್ಟ ಸಂಗತಿಗಳನ್ನ ಮರೆಯೋನೇ,
ಹರಕೆಯ ಬೀಸು ಬಲೆಗೆ ಸಿಕ್ಕಲಾರದ ಶಿವನೇ,
ಅಣುಗನ್ನ ಕಳಿಸೊ ಎಂದು -

ಕುಲದೇವರು ನನ್ನ ಪಾಲಿಗಿಲ್ಲದಂಗಾಯ್ತು
ಮನೆದೇವರು ಮರೆತು ಹೋಯ್ತು
ಮನೆ ಜ್ಯೋತಿ ಬೆಳಗಿಸಬೇಕಂಬೋ ಬುದ್ಧಿ
ನಿನಗಾದರೂ ಬ್ಯಾಡ್ವೇನೇ ಬೆಟ್ಟದ ಮಾಯೀ ಎಂದು,

ನರಲೋಕ ಸುರಲೋಕಗಳ
ಜಬರ್ ದಸ್ತ್ ಆಳುವ ಶಿವನೇ,
ಮಗನೆಲ್ಲಿ ಅಂತ ನಿನಗೂ ಗೊತ್ತಿಲ್ಲವೇ?
ಗೊತ್ತಿದ್ದೂ ಪಂತಪರೀಕ್ಷೆ ಮಾಡದೆ
ಮಗನ್ನ ಕಳಿಸೋ ಮಾದೇವಾ ಎಂದು
ದಿನದಿನಕ್ಕೆ ಹೊಸ ಹೊಸ ಕಣ್ಣೀರನತ್ತಳು ಅಬ್ಬೆ.

ಸುತ್ತೂದೈವಂಗಳಿಗೆ ಹರಕೆ ಹೊತ್ತದ್ದು, ಉರುಳು ಸೇವೆ ಪಂಜಿನ ಸೇವೆ ಮಾಡಿದ್ದು, ಬೇಕಾದಷ್ಟು ಧೂಪದೀಪ ಉರಿಸಿದ್ದು ಎಲ್ಲವೂ ವ್ಯರ್ಥವಾಯಿತು. ಹಾದಿ ಸಿಕ್ಕಿದ್ದರೆ ಕೈಲಾಸಕ್ಕೂ ಹೋಗಿ ಶಿವನ ಕೈಕಾಲು ಕಟ್ಟುತ್ತಿದ್ದಳು. ಆಗಲೂ ಮಗ ಬಾರದೆ ಇಂತೆಂಬ ಕಷ್ಟನಿಷ್ಠೂರ ಹೆಂಗ ತಾಳಿಕೊಳ್ಳಲೋ ಶಿವನೇ ಎಂದು ಮಂಡೆಯ ಮ್ಯಾಲೆ ಕೈಹೊತ್ತು ಕುಂತಿರುವಲ್ಲಿ ಹುಸಿಹೋಗದ ಹೊಸ ಮದ್ದೊಂದು ನೆಪ್ಪಾಯಿತು ನೋಡು, ಅವಳೇ ಸೈ ಎಂದು ಮಂಗಳವಾರದ ಅಮಾವಾಸ್ಯೆ ಸಪ್ಪಟ್ಟು ಸರಿರಾತ್ರಿ ಮಾರಿಮಸಣಿ ಭೂತಪಿಶಾಚಿ ಅಡ್ಡಾಡೋ ಹೊತ್ನಲ್ಲಿ ತಣ್ಣೀರು ಮಿಂದು, ತಣ್ಣನೆ ದಟ್ಟಿಉಟ್ಟು, ಬುಟ್ಟಿ ತುಂಬ ಹಸಿರು ಸೆಗಣಿ, ಗಡಿಗೆ ತುಂಬ ಮೆಣಸಿನ ನೀರು ತಗೊಂಡು ಹಟ್ಟಿಯ ಹೊರಗಿನ ಯಕ್ಷಿಯ ಗುಡಿಗೆ ಹೋದಳು ಅಬ್ಬೆ.

ಹೋಗಿ, ಸೆಗಣಿಯಲ್ಲಿ ಮೆಣಸಿನ ನೀರು ಹುಯ್ದು ಗಂಜಳ ಮಾಡಿ ಯಕ್ಷಿಯ ಶಿಲಾಮೂರ್ತಿಯ ಮುಖಕ್ಕೆ ಬಡಿದು ಡಬ್ಬು ಮಲಗಿಸಿ -

ಎಲಗೇಲಗೇ ಸೋಗಲಾಡಿ ದೇವೀ,
ಹಾಡಿಯ ಬಲ್ಲವಳು ಹಟ್ಟಿಯ ಬಲ್ಲವಳು
ಕಾಡು ನೋಡಿಕೊಂಬೋಳು, ಗೂಡು ನೋಡಿಕೊಂಬೋಳು

ಮುಗಿಲಿನ ಆಚೆ ಬಲ್ಲವಳು ಈಚೆ ಬಲ್ಲವಳು
ಮಗ ಎಲ್ಲಿ ಹೋದ ಅಂಬೋದು
ನಿನಗೆ ಗೊತ್ತಿಲ್ಲ ಅಂದಮ್ಯಾಕೆ
ನೀನ್ಯಾಕೆ ವೈನಾಗಿರಬೇಕು?
ಮಗ ನಿನ್ನ ಪೂಜೆ ಮಾಡಲಿಲ್ಲವ?
ಚಾಕರಿ ಮಾಡಲಿಲ್ಲವ?
ತಪ್ಪು ಒಪ್ಪುಗಳ ತೂಕ ಮಾಡೋಳಲ್ಲವ ನೀನು?
ನಿನ್ನ ನಂಬಿದ ನಂಬಿಕೆ ಏನುಳಿಸಿಕೊಂಡೆ?
ನಿನಗ್ಯಾಕೆ ಇನ್ನುಮ್ಯಾಕೆ ಪೂಜೆಪುನಸ್ಕಾರ?
ಇಂದು ಮಂಗಳವಾರದಿಂದ
ಇನ್ನೊಂದು ಮಂಗಳವಾರದವರೆಗೆ - ಮುದ್ದತು ಕೊಟ್ಟೆ, ಅಷ್ಟರೊಳಗೆ,
ದಿಕ್ಕು ದೇಶಾಂತರ ಹೋದ ಮಗ ಬಂದರೆ ಗುಡ್ಡಬಿಡ್ತೀನಿ
ಬರದಿದ್ದರೆ ನಿನಗಿದೇ ಗತಿ.

- ಎಂದು ಉರಿಮಾತುಗಳ ಸುರಿದು ಮುದುಕಿ ಯಕ್ಷಿಯ ಶಿಲಾಮೂರ್ತಿಯ ಬೆನ್ನಿಗೂ ಸೆಗಣಿ ಗಂಜಳ ಸುರಿದು, ಹೊರಬಂದು ಗುಡಿಯ ದ್ವಾರಬಾಗಿಲಿಗೆ ಮುಳ್ಳಿನ ಬೇಲಿಯ ಬಿಗಿದು ಬೆಳ್ಳಿ ಮೂಡಿ ಬೆಳಗಾಗೋ ಹೊತ್ತಿಗೆ ಹಾಡಿಗೆ ಬಂದಳು.

## ೧೨. ಆಕಾಶಕ್ಕೆ ಉರಿ

ಲೋಕ ಲೌಕಿಕದಲ್ಲಿ ಅಬ್ಬೆ ಈ ಪರಿ ಯಕ್ಷಿಗೆ ಶಿಕ್ಷೆ ಮಾಡಿದೇಟ್ಗೆ ಆಕಾಶವೆಂಬ ಬಯಲ ಅರಮನೆಗೆ ಉರಿ ತಾಗಿತು ನೋಡು!

ಮೇಲು ಮಿರಿಲೋಕದ ಏಳುಪ್ಪರಿಗೆ ಮೋಡಗಳ ಮ್ಯಾಲೆ ಕೊಳಲುಲಿಯ ಮತ್ತಿನಲ್ಲಿ ಸೊಗದಿಂದ ಮಲಗಿದ್ದ ನಮ್ಮ ಕಿವಿಯಲ್ಲಿ ಯಾರೋ ಸಿಡಿಲು ಸಿಡಿಸಿದಂತಾಗಿ ಸ್ವಪ್ನಂಗಳಾದ ನಾವೇ ದುಃಸ್ವಪ್ನ ಕಂಡ ಮಕ್ಕಳಂತೆ ಚಂಗನೆ ನೆಗೆದು ನಿಂತವು. ಭೀತ ಬೆರಗಿನಲ್ಲಿ ನೋಡಿದರೆ ಶಿವ ಶಿವಾ -

ಮೆಣಸಿನ ನೀರಿನ ಕಾರದುರಿ
ಸೆಗಣಿಗಂಜಳದ ಅವಮಾನದುರಿಗಳಿಂದ
ಯಕ್ಷಿ ಹೊತ್ತಿಕೊಂಡುರಿಯುತ್ತಿದ್ದಾಳೆ ಪಂಜಿನಂತೆ !

ಉರಿ ಉರಿ ಎಂದು ಕಿರುಚುತ್ತ
ಮೈ ಪರಚಿಕೊಳ್ಳುತ್ತ
ನಿಲ್ಲದೆ ಕೂರದೆ ನೆಗೆದಾಡುತ್ತ
ತಾರಾಮಾರು ಹಾರ್ಯಾಡುತ್ತಿದ್ದಾಳೆ ಯಕ್ಷಿ ಮಿಂಚಿನಂತೆ !

ಬೆಳ್ದಿಂಗಳು ಸೂಸುವ ಅವಳ ಮುಖ ಮೈಗಳಿಗೆ ಸೆಗಣಿ ಗಂಜಳವಂಟಿದೆ ! ಶಿವನೇ ಇದೇನಾಗಿದೆಯೆಂದು ಕಂಗಾಲಾಗಿ ನಿಂತಿದ್ದಾನೆ ಚಂದಮುತ್ತ ! ಶಕ್ತಿಗುಂದಿ ಬಾಯೆಂಜಲೊಣಗಿ, ಮಾತುಬಾರದೆ ಕೈಬಾಯಿ ಸನ್ನೆಯಲಿ ಯಾಕೆಂದು ಏನೆಂದು ಕೇಳಿದ್ದಕ್ಕೆ ಉತ್ತರ

ಕೊಡದೆ ಮೈಯಲ್ಲಿ ಆವೇಶವಾದವರಂತೆ ನೆಗೆದಾಡುತ್ತಿದ್ದವಳ ಸಂತವಿಸಲೆಂದು ಸಮೀಪ ಹೋದರೆ "ಮುಟ್ಟಿದರೆ ಕೆಟ್ಟೀಯಾ" ಎಂದು ಆಕಾಶ ಹರಿವಂತೆ ಕಿಟಾರನೆ ಕಿರಿಚಿ ಎಚ್ಚರಿಸಿದಳು ಯಕ್ಷಿ. ಅವಳ ಮಾತೆಲ್ಲ ಬೆಂಕಿ ಹೊಳೆ, ಕಣ್ಣೆಲ್ಲ ಉರಿಯ ಮಳೆ. ಇಂಪಿರದ ಅವಳ ಮಾತಿಗೆ ಕಂಪಿಸಿತು ಚಂದಮುತ್ತನ ಕಾಯ. ಬೆವರುಜಲದಿಂದ ನೆಲ ತೊಯ್ದವು. ಏನು ಮಾಡಲೂ ತೋಚದೆ ನಮ್ಮಪ್ಪ ಶಿವನೇ ಕಾಪಾಡೆಂದು ಕರುಳು ಕಿತ್ತು ಬಾಯಿಗೆ ಬರುವಂತೆ ಎದೆ ಬಾಯಿ ಬಡಕೊಂಡು ಒದರಿ ಅಳುತ್ತಿದ್ದಾನೆ ಚಂದಮುತ್ತ.

ಆನಂದಗಳನುಂಡು ಬೆಳೆದ ಚಕೋರಿಯ
ಮುಖದರ್ಶನದಿಂದ ಸಂತೋಷವಾಗುತ್ತಿದ್ದ ನಮಗೆ
ಅವಳ ಕರಾಳ ಮುಖ ನೋಡಿ
ಕರುಳು ಹೊಸಕಿದ ಹಂಗಾಯ್ತು.
ಸರ್ವನಾದಂಗಳ ದೇವಿ
ಈ ಪರಿ ಅಪಸ್ವರದಲ್ಲಿ ಕಿರಿಚಿದ್ದನ್ನು ನಾವೆಂದೂ ಕೇಳಿರಲಿಲ್ಲ.
ಕೇಳಿಸಿಕೊಂಡ ಆಲದ ಅರಮನೆ
ಬೇರುಸಮೇತ ಥರಾಥರ್ನೆ ನಡುಗಿದ್ದ ಕಂಡೆವು.

ನೋವು ತಾಳದೆ ಚಕೋರಿ ಎಂಬ ಯಕ್ಷಿ
ವಿಕಾರವಾಗಿ ಒದರಿ
ಧಾರಾವತಿ ಕಣ್ಣೀರು ಜಲವ ಸುರಿಸಿದಳು.
ಹಸ್ತಗಳಿಂದ ಮೈ ಮುಟ್ಟಿಕೊಳ್ಳದೆ, ಸುಮ್ಮನಿರಲೂ ಆಗದೆ
ಏಳೇಳು ಲೋಕದ ಸಂಕಟಪಟ್ಟಳು.

ತುಟಿಕಚ್ಚಿ ಕಣ್ಣುಮುಚ್ಚಿ
ನೋವಿಗೆ ಗುರಿಯಾದ ಮೃದು ಮೈಯನ್ನ
ಕಲ್ಲಾಗಿಸಿ ಕಬ್ಬಿಣವಾಗಿಸಿ
ಕೊನೆಗೆ ವಜ್ರವಾಗಿಸಿ
ನೋವು ತಾಳಿಕೊಳ್ಳಲು ಯತ್ನಿಸಿದಳು.

ಶಿವನ ಜೊತೆ ವಾದ ಮಾಡುತ್ತಿರುವಂತೆ
ತನಗಾದ ದ್ರೋಹದ ಬಗ್ಗೆ
ಸಾರಿ ಸಾರಿ ತಕರಾರು ಹೇಳುತ್ತಿರುವಂತೆ
ಆಕಾಶದ ಕಡೆ ನೋಡಿ ಶಿವದುಃಖ ಮಾಡಿದಳು.

ನಿಜ ಹೇಳಬೇಕೆಂದರೆ
ಹೂವಿನಂಥ ಅವಳ ಮನಸ್ಸಿಗೂ
ಕೋಪದಲ್ಲಿ ಕುದಿಯುತ್ತಿದ್ದ ಅವಳ ಆಲೋಚನೆಗಳಿಗೂ
ಹೊಂದಾಣಿಕೆಯಿರಲಿಲ್ಲ.

ಬೆಳ್ದಿಂಗಳಂಥ ಯಕ್ಷಿ
ಇಂತೀಪರಿ ಕೊತ ಕೊತ ಕುದಿವುದೆಂದರೇನು?
ಕುದಿಯೋ ಬೆಳ್ದಿಂಗಳನ್ನ ಯಾರಾದರೂ ಕಂಡಿದ್ದೀರಾ?
ಅಳ್ಳೆ ಅರಳಿವೆ, ಕೋಪಗೊಂಡ ಗೂಳಿಯ ಕಣ್ಣಿನಂತೆ
ಕೆಂಡ ಕೆಂಡವಾಗಿವೆ ಕಣ್ಣು.
ಚಂದಮುತ್ತ ಆ ಕೆಂಡದಲ್ಲಿ
ಸುಡದ ಹಾಗೆ ನೋಡಿಕೋಬೇಕು.

ನೋಡಿದಿಯಾ ಶಿವನೆ,
ಹ್ಯಾಗೆ ಪರಚಿಕೊಳ್ಳುತ್ತಿದ್ದಾಳೆ ಹೃದಯವ?

ಯಾರನ್ನೋ ಶಪಿಸುವುದಕ್ಕಾಗಿ
ಅಧೋಲೋಕದ ಕರಾಳ ಶಬ್ದಗಳನ್ನ
ಹುಡುಕುತ್ತಿದ್ದಾಳೆ.
ಶಾಪಂಗಳು ಅವಳ ಬಾಯಿಂದ ಸಿಡಿಯುವ ಮುನ್ನ
ಶಾಪದೊಳಗಿಂದ ಹಸಿರಕ್ತ ಮಜ್ಜೆ ಮಾಂಸಗಳು
ಸಿಡಿದು ಹೊರಬರುವ ಮುನ್ನ
ಸತಿಯ ಸಂತವಿಸಿರೇ.

ಇರು ಇರು ದೇವೀ
ಅನುಚಿತವ ನೆನೆಯದಿರು.
ಬುದ್ಧಿತಪ್ಪಿದ ಮೇಲೆ ಪಶ್ಚಾತ್ತಾಪ ಪಡಬೇಡ.
ಈಗಲೇ ಎಚ್ಚರಾಗು.
ಇಲ್ಲಿ ಯಾರದೂ ತಪ್ಪಿಲ್ಲ
ಪುಣ್ಯಕೋಟಿ ಹಸುವೇನು ಮಾಡೀತು
ತಪ್ಪಿಸಿಕೊಂಡ ಕರು ನಿನ್ನ ಬಳಿ ಬಂದರೆ?
ಕರುವೇನು ಮಾಡೀತು
ಹಸುವಿನ ಒಡಲ ಹಂಬಲ ತಿಳಿಯದಿದ್ದರೆ?

ನಾಡು ನರಲೋಕದ ನಡಾವಳಿ ಬಲ್ಲವಳು ನೀನು.
ಮುಂದೆ ನಡೆವ ವಿಚಾರ
ಹಿಂದೆ ನಡೆವ ವಿಚಾರ ತಿಳಿದವಳು ನೀನು,
ನೀನಲ್ಲವೆ ನಿಭಾಯಿಸಬೇಕಾದವಳು?
ಕೋಪವ ಪಳಗಿಸು ದೇವೀ.

ನಮ್ಮ ನುಡಿ ಕೇಳಿ ಸಮಾಧಾನವಾಗಿರಬೇಕು ಇಲ್ಲವೆ ಮೈಯುರಿ ಕಮ್ಮಿಯಾಗಿರಬೇಕು. ಚಕೋರಿ ಎಂಬ ಯಕ್ಷಿ ಒಂದು ಸಲ ನಮ್ಮ ಕಡೆ ದಯಮಾಡಿ ನೋಡಿದಳಷ್ಟೆ. ಇನಿಸಿನಿಸಾಗಿ ಮುನಿಸಿಳಿಯಿತು. ಮುಳ್ಳಿರಲಿಲ್ಲ ನೋಟದಲ್ಲಿ. ಹುಬ್ಬು ಗಂಟಿಕ್ಕಿದುವು. ಮುಖದಲ್ಲಿ

ಬೇರೆ ಬೇರೆ ಹಾವಭಾವ ಮೂಡಿದುವು. ನಮಗೆ ತೋರದೆ ಆ ಕಡೆ ಮುಖ ತಿರುಗಿಸಿದಳು. ಗಾಬರಿಯಾದೆವು ನಾವು. ಈಗ ನಮಗವಳ ಗಾಯಗೊಂಡ ಬೆನ್ನು ಮಾತ್ರ ಕಂಡಿತು. ಹೇಳಿದಳು:

ಇಲ್ಲಿಂದ ಈಗಿಂದೀಗ
ತೊಲಗಲಿ ಇವನು

ಹಿಂದೆ ಮುಂದೆ ಏನೇನೂ ಗೊತ್ತಿಲ್ಲದ ಚಂದಮುತ್ತ ಆ ಕಡೆ, ಈ ಕಡೆ, ಯಕ್ಷಿಯ ಕಡೆ, ನಮ್ಮ ಕಡೆ ಗಲಿಬಿಲಿಯಲ್ಲಿ ನೋಡುತ್ತ ಅಸಹಾಯಕನಾಗಿ ಅಂಗಲಾಚುವ ದೃಷ್ಟಿಗಳಿಂದ ವಿನಂತಿಸುತ್ತ ನಿಂತ. ನುಡಿದಾಡದೆ ಇಲ್ಲಿಂದ ತೊಲಗೆಂದು ನಾವು ಹಸ್ತಾಭಿನಯದಿಂದ ಹೇಳಿ ಸಪ್ಪಳಾಗದ ಹಾಗೆ ಅವನನ್ನ ಗೇಟಿನ ಕಡೆಗೆ ನಡೆಸಿದೆವು.

"ನಿಲ್ಲು"

ಎಂದಳು ಯಕ್ಷಿ ಉರಿನಾಲಿಗೆಯಿಂದ. ಅವಳಾಡುವ ನುಡಿ ಶಾಪವಲ್ಲದೆ ಬೇರೆ ಆಗಿರಲಾರದೆಂದು ಥರಾತರ್ನೆ ನಡುಗಿ ನಾವು ಯಾಕೆಂದು ಕೇಳುವ ಧೈರ್ಯ ಮಾಡಲಿಲ್ಲ. ಅವಳೇ ಹೇಳಿದಳು:

ಇಲ್ಲಿ ನೋಡಿದ್ದು ನೋಡಿದ ಲೆಖ್ಖಕ್ಕಿಲ್ಲ
ಇಲ್ಲಿ ಕೇಳಿದ್ದು ಕೇಳಿದ ಲೆಕ್ಖಕ್ಕಿಲ್ಲ.
ಇಲ್ಲಿ ಕಂಡದ್ದನ್ನು ಕಂಡೆನೆನ್ನಕೂಡದು
ಕೇಳಿದ್ದನ್ನು ಕೇಳಿದೆನೆನ್ನಕೂಡದು
ಇದ ಮೀರಿ ಯಾವನೊಬ್ಬನಿಗೆ ಹೇಳಿದರೆ
ಹೇಳಿದವನು ಕೇಳಿದವನಿಬ್ಬರೂ
ನಾಲಗೆ ಹಿರಿದು ಸಾಯುತ್ತಾರೆಂದು ತಿಳಿದಿರಲಿ.
ಹಿಂದಿರುಗಿ ಮಾತ್ರ ನೋಡದಿರಲಿ.

ಅವಳಾಜ್ಞೆ ಮುಗಿವುದನ್ನೇ ಕಾಯುತ್ತಿದ್ದ ನಾನು ಸಧ್ಯ  ಪಾರಾದೆವೆಂದು ಹಗುರು ಮನಸ್ಸಿನವರಾಗಿ ಚಂದಮುತ್ತನ್ನ ಆಲದ ಮರದಿಂದ ಕೆಳಗಿಳಿಸಿ 'ನೇರ ನಿಮ್ಮ ಹಟ್ಟಿಯ ಯಕ್ಷಿಯ ಗುಡಿಗೆ ಹೋಗೆಂದು' ಕಳಿಸಿದೆವು.

## ೧೪. ಕೊಟ್ಟೆ ಮಗನ; ನಿನ್ನಡಿಗಿಟ್ಟೆ ಸಿಟ್ಟು ಬಿಡು

ಮೂರು ಹಗಲು ಮೂರು ರಾತ್ರಿ ನಡೆದು ಮಂಗಳವಾರ ಮಟ ಮಟಾ ಮಧ್ಯಾಹ್ನ ಚಂದಮುತ್ತ ಸೀದಾ ಯಕ್ಷಿಯ ಗುಡಿಗೆ ಬಂದಾಗ ಅಲ್ಲೇನಿದೆ?

ನರಮಾನವರ ಸುಳಿವಿಲ್ಲ
ಕಾ ಎಂಬ ಕಾಗೆಯಿಲ್ಲ, ಗೂ ಎಂಬ ಗೂಗೆಯಿಲ್ಲ.
ಮಳೆತಪ್ಪಿ ಮೇಲುಲೋಕದ ಮೇಘದಲ್ಲೇ ಇದೆ.
ಬೆಳೆತಪ್ಪಿ ಭೂಲೋಕದ ಮಣ್ಣಿನಲ್ಲೇ ಸುಟ್ಟುಹೋಗಿದೆ.

ಸುತ್ತೂ ಸೀಮೆಯ ಜಲ ಇಂಗಿ ನೆಲ ಬಿರಿದು
ಭಿಕೋ ಅಂತಿದೆ ಕಾಡು ನಾಡು ಒಣಗಿ.
ಯಾರೋ ಬೆಂಕಿ ಹಚ್ಚಿ,
ಈಗಷ್ಟೆ ನಂದಿದ ಹಾಂಗಿದೆ ಬಯಲು
ಓಡ್ಯಾಡುತಾವೆ ಬಿಸಿಲುಗುದರಿ !
ಕೊತಕೊತ ಕುದಿಯುತ್ತಿದೆ ಅಕಾಲದ ಬೇಸಿಗೆ.
ಮೌನದೊಳಗೆ ಹುಗಿದ ಹಾಗಿದೆ ಜಗವು.
ಕಂದಿಬಿಟ್ಟಿದೆ ಬೆಳಕು,
ಸುರಿಯುತ್ತ ಇದೆ ಹಾಳು ಹಾಳು.
ಇರುವೆ ಮೊದಲು ಆನೆ ಕಡೆ ಖಗಮೃಗ ಜಾತಿಯ
ಹೆಣಗಳಲ್ಲಲ್ಲೇ ಬಿದ್ದೈದಾವೆ.
ಹಿಂಗಿರುವಾಗ ಭೂಲೋಕ ಬದುಕೋದು ಹ್ಯಾಂಗೆಂದು
ಹಳೆದೇವರು ಶಕ್ತಿಗುಂದಿದವೇ ಶಿವನೇ ಎಂದು
ಬದುಕುಳಿದಿರುವ ಜೀವಸಂಕುಲ ಚಿಂತೆ ಮಾಡುತ್ತ ಇವೆ.

ಒಳಗೆ ಇಣಕಿ ನೋಡಿದರೆ ಮೈಗೆಲ್ಲ ಸೆಗಣಿ ಗಂಜಳ ಬಡಿದ ಯಕ್ಷಿಯ ಶಿಲಾಮೂರ್ತಿ ಬೆನ್ನುಮೇಲಾಗಿ ಬಿದ್ದುಕೊಂಡಿದೆ! ಚಂದಮುತ್ತನಿಗೆ ಎಲ್ಲವೂ ವೇದ್ಯವಾಯಿತು. ಯಾರೋ ಮಾಡಿದ ತಪ್ಪಿಗೆ ತನಗೆ ನಾಯಿನರಕವಾಯಿತೆಂದು ಖಾತ್ರಿಯಾಗಿ ಕೆನ್ನೆ ಕೆನ್ನೆ ಬಡಿದುಕೊಂಡ. ಕವಿಗೆ ಹರಳು ಹಚ್ಚಿಕೊಂಡ. ಆಮ್ಯಾಲೆ ದ್ವಾರಬಾಗಿಲಿನ ಕೊರೆಬೇಲಿ ತೆಗೆದು ಈಚೆ ಚೆಲ್ಲಬೇಕೆಂಬಲ್ಲಿ ಅಲ್ಲೊಂದು ಮುದಿಕೋತಿ ಕೂತಂಗಿತ್ತು. ವಿಸ್ಮಯಂಬಟ್ಟು ನೋಡಿದರೆ ಓಂ ಸಾವಳಗಿ ಶಿವ ಶಿವಾ - ಒಣಗಿದ ಮಲ್ಲಿಗೆ ಬಳ್ಳಿಯ ಗೂಡಿನಲ್ಲಿ ಸುಟ್ಟ ಕಾಡಿನಂತೆ ಕುಂತಿದ್ದಾಳೆ ಪುಣ್ಯಕೋಟಿ ಲಕ್ಕಬ್ಬೆ! ಅತ್ತು ಅತ್ತು ಕಣ್ಣೀರು ಖಾಲಿಯಾದಂಗಿತ್ತು ಆಕೆಯ ಮೂತಿ. ಚಂದಮುತ್ತನ ಕರುಳು ಕಿತ್ತು ಕಣ್ಣಿಗೆ ಬಂದು ಕಣ್ಣೀರು ಜಲ ಸಣ್ಣ ತೊರೆಯಾಗಿ ಹರಿಯಿತು. 'ಅಬ್ಬೇ' ಎಂದೊದರಿ ಓಡಿಹೋಗಿ ತಬ್ಬಿಕೊಂಡ. ಕೂಗಿಗೆಚ್ಚರವಾದ ಮುದುಕಿ ಕಣ್ಣು ತೆರೆವುದರೊಳಗೆ ಕಂದನ ಅಪ್ಪುಗೆಯಲ್ಲಿದ್ದಳು. ಸ್ಮೃತಿಯಾಯಿತು ನೋಡು, ಕಣ್ಣು ಭಗ್ಗನೆ ಹೊತ್ತಿಕೊಂಡವು. ಮಗನ ಕಂಡಳೇ - ಕೊಚ್ಚಿ ಹೋದವು ಅವಳ ದುಃಖ ದುಗುಡಂಗಳು. "ಬಂದೆಯಾ ಕಂದಾ" ಎಂದು ಚೀರಿ ಮೈಮ್ಯಾಲೆ ಆವೇಶವಡರಿ ಏಳೇಳು ಲೋಕದ ಆನಂದಪಟ್ಟಳು. ಕಣ್ಣಿಂದ ಮಗನ ಹೀರುವಂತೆ ನೋಡಿ ತಬ್ಬಿ ತೂಪಿರಿದು ನೆತ್ತಿಯ ಮೂಸಿ ಆನಂದದ ಆವೇಶ ಹಿಂಗದೆ ಬಂದವನು ಮಗ ಹೌದೊ, ಅಲ್ಲವೋ ಎಂದು ಮತ್ತೆ ಮತ್ತೆ ನೋಡಿ ಹೌದೆಂದು ಖಾತ್ರಿಯಾಗಿ ಮತ್ತೆ ಮತ್ತೆ ತಬ್ಬಿ ಬುದಿಂಗನೆ ಎದ್ದು 'ಬಾ ಹಟ್ಟಿಗೆ' ಎಂದು ಕೈಹಿಡಿದು ನಡೆದಳು. ಅಷ್ಟು ದೂರ ಹೋಗಿದ್ದವಳು ಯಕ್ಷಿಯ ನೆನಪಾಗಿ ದುಡುದುಡನೆ ಓಡೋಡಿ ಹಿಂದುರುಗಿ ಬಂದು ಬಾಗಿಲೆದುರು ಕೈಮುಗಿದು ನಿಂತು 'ನಿನ್ನ ಮರೆತಿದ್ದೆ, ತಪ್ಪಾಯಿತೇ ತಾಯಿ; ಭಕ್ತಿಯ ಮಾಡಲು ಮಡಿಯಾಗಿ ಬರುತ್ತೇನಿರು' ಎಂದು ದಿಂಡುರುಳಿ ಶರಣು ಮಾಡಿ, ಮಗನಿಗೂ ದಿಂಡುರುಳಲು ಹೇಳಿದಳು.

ಲಕ್ಕಬ್ಬೆಯ ಸಂತೋಷವನ್ನಾಚರಿಸಲು ಹಟ್ಟಿಯಲ್ಲಿ ಹೆಚ್ಚು ಮಂದಿಯಿರಲಿಲ್ಲ. ಇದ್ದವರೆಲ್ಲರ ಮನೆಮನೆಗೆ ಹೋಗಿ ಮಗ ಬಂದ ಸುದ್ದಿಯ ಸಾರಿ ಸಾರಿ ಹೇಳಿ ಮಾತು ನಡೆಸಿಕೊಟ್ಟಳೆಂದು ಭಕ್ತಿಯಿಂದ ಯಕ್ಷಿಯ ಹೊಗಳಿ ಯಕ್ಷಿಯ ಮೀಯಿಸಲು ನಾಳೆ ಬರಬೇಕೆಂದು ಆಮಂತ್ರಣ ನೀಡುತ್ತ ಬಂದಳು. ಹಟ್ಟಿಯಾಳ್ತನವ ಮಾಡುವ ಹೆಗಡೇರಿಗೆ ಕೈ ಎತ್ತಿ ನಮಸ್ಕಾರ ಮಾಡಿ ದಯಮಾಡಿಸಬೇಕಪ್ಪ ಎಂದಳು. ಕುಲಗುರುವಿನ ಪಾದ ಮುಟ್ಟಿ ಧರೆಗೆ ದೊಡ್ಡವನು, ಹರಕೆಯ ನಡೆಸಿಕೊಡು ನನ್ನಪ್ಪ ಎಂದು ಬೇಡಿಕೊಂಡಳು. ಶಿಷ್ಯನ ನೋಡಿ ಕುಲಗುರು ಆನಂದದಲ್ಲಿ ಮೈಮರೆತಿದ್ದರೆ 'ಕಂದನ ಹರಸು ತಂದೇ' ಎಂದು ಅವನ ಕೈತಗೊಂಡು ಬಾಗಿದ ಮಗನ ನೆತ್ತಿಯ ಮ್ಯಾಲಿಟ್ಟಳು.

ಮಾರನೆ ದಿನ ಬೆಳ್ಳಿಮೂಡುವ ಮೊದಲೇ ಸಿರಿಲಕ್ಕಬ್ಬೆ ಮತ್ತು ಚಂದಮುತ್ತ ತಣ್ಣೀರು ಮಿಂದು ಮೈಲಿಗೆ ಕಳೆದು ಒದ್ದೆ ಮಡಿಯುಟ್ಟರು. ಹರಕೆಯ ಸಾಮಾನು ಸರಂಜಾಮು ಸಜ್ಜು ಮಾಡುವಲ್ಲಿ ಬೆಳ್ಳಂಬೆಳಕಾಗಿ ಸಕಲಜನ ಕುಲಗುರು ಹೆಗಡೇರ ಸಮೇತ ಯಕ್ಷಿಯ ಗುಡಿಗೆ ಬಂದರು. ಗುಡಿಸಿ ಗುಡಿಯಂಗಳ ಸೆಗಣಿಸಾರಣೆ ಮಾಡಿ ಗಂಧದನೀರು ಸಿಂಪಡಿಸಿ ರಂಗೋಲಿ ಬರೆದರು ತಾಯಿ ಮಗ. "ನಿನ್ನಿಂದಧಿಕ ದೇವರಿಲ್ಲ ಬಿಡು" ಎಂದು ನೂರೆಂಟು ಗುಣಗಳಿಂದ ಯಕ್ಷಿಯ ಹೊಗಳುತ್ತ ಹಸುಗೂಸನ್ನ ಎರೆವಂತೆ ಯಕ್ಷಿಯ ಮೂರ್ತಿಯ ತೊಡೆಯ ಮ್ಯಾಲೆ ಚೆಲ್ಲಿಕೊಂಡು ಸಣ್ಣ ಯಕ್ಷಿಯ ಪಾತಾಳಗಂಗೆಯ ತಣ್ಣೀರಲ್ಲಿ ತೊಳೆದಳು ಅಬ್ಬೆ. ಆಮ್ಯಾಲೆ ಎಣ್ಣೆ, ಬೆಣ್ಣೆ, ತಿಳಿದುಪ್ಪದಲ್ಲಿ ಎರೆದು ನೂರೊಂದು ಚೊಂಬು ಬಿಸಿನೀರಿನಲ್ಲಿ ಸೀಗೆಯಿಂದೊಮ್ಮೆ ಶುದ್ಧ ಮಾಡಿದಳು. ಸಾಬೂನಿನಿಂದೊಮ್ಮೆ ಶುದ್ಧ ಮಾಡಿದಳು. ಬೆನ್ನುಜ್ಜಿ ಮೈಯುಜ್ಜಿ ಕೈ ಕಾಲು ಮುಖ ತಿಕ್ಕಿ ತಿಕ್ಕಿ ತೀಡಿ ಉಜ್ಜಿದಳು. ಕಿವಿ, ಕಣ್ಣು, ಮೂಗುಜ್ಜಿ ಮೂಗುತಿ, ವಾಲೆ, ಕೊರಳಸರ, ನೇವುಳ್ಳ, ಬೆರಳುಂಗುರುಗಳ ತಿಕ್ಕಿ ತಿಕ್ಕಿ ತೊಳೆದಳು. ಸೊಂಟದ ಡಾಬು ಕಾಲಿನ ಕಡಗ ಮುಂಗೈ ಬಳೆಗಳ ತಿಕ್ಕಿ ತೀಡಿ ತೊಳೆದಳು. ಆಮ್ಯಾಲೆ ನೂರೊಂದು ಚೊಂಬು ಬಿಸಿನೀರಿನಲ್ಲಿ ಬಿಸಿಮಾಡಿ ಆಮ್ಯಾಕೆ ಮೈ ಒಣಗಿಸಿ ಬಣ್ಣದಲ್ಲಿ ಮೇಲಾದ ಹಸಿರು ಗಿಣಿ ನೂರು ಬರೆದ ಇಳಕಲ್ ಬಣ್ಣವನುಡಿಸಿ ಗುಳೇದಗುಡ್ಡದ ಬಣ್ಣವ ತೊಡಿಸಿದಳು. ಹೆಗಡೇರು ಕೊಟ್ಟ ಚಿನ್ನದ ಕಣ್ಣು ಬೆಳ್ಳಿಯ ಮೀಸೆಯಿಟ್ಟಳು. ನೊಸಲಲ್ಲಿ ಚಂದ್ರನ ಬೊಟ್ಟಿಟ್ಟು ಕರಗಳ ಮ್ಯಾಲೆ ಗೀರುಗಂಧ ಬರೆದಳು. ತುರುಬಿಗೆ ಮಲ್ಲಿಗೆ ದಂಡೆ ತುರುಕಿದಳು. ಇಂತೀಪುರಿ ಚಿಕ್ಕ ಯಕ್ಷಿಯ ಶೃಂಗಾರ ಮಾಡಿ ತೆಂಗಿನ ಚಿಪ್ಪಿನಲ್ಲಿ ಕಪಿಲೆ ಹಸುವಿನ ತುಪ್ಪದ ಸೊಡರಿಟ್ಟು ಪೂಜೆಯ ಮಾಡಿದಳು. ಜನ ತಾಳ ಕುಟ್ಟಿ, ಜಾಗಟೆ ಬಡಿದು ಶಂಖ ಊದಿದರು. ಆಮ್ಯಾಲೆ ಎಂಟು ಕಾಲಿನ ಕುರಿಯ ಬಲಿ ಕೊಟ್ಟು ಬಾಡಿನ ನೈವೇದ್ಯ, ಕಳ್ಳಿನ ನೊರೆ, ಈಚಲ ರುಚಿಗಳ ಒಪ್ಪಿಸಿಕೊ ಎಂದು ನೀಡಿ ಅಡ್ಡಬಿದ್ದರು.

ಇಂತೀಪರಿ ಪೂಜೆ ಮುಗಿದು ಕಡ್ಡಿ ಕರ್ಪೂರ ಸುಟ್ಟು, ಹಣ್ಣುಕಾಯಿ ಅನ್ನ ಶಾಂತಿ ಪುಣ್ಯ ಫಲಗಳ ಎಲ್ಲರೂ ಹಂಚಿಕೊಂಡು ಊಘೇ ಚಾಂಗುಭಲಾ ಎಂದು ಶಬ್ದ ಸಡಗರದಲ್ಲಿ ಜನ ಎದ್ದೇಳುವ ಪ್ರಸ್ತಾವದಲ್ಲಿ ಯಕ್ಷಿಯ ಗುಡಿಯೇ ಕಿರಿಚಿದ ಹಾಗೆ ಕುಲಗುರು ಕಿಟಾರ್ನೆ ಕಿರಿಚಿದ ಶಿವನೆ! ಭೀತ ಮಂದಿ ಮತ್ತೇನು ಘೋರ ಬಂತೆಂದು ನೋಡಿದರೆ ಕುಲಗುರು ಥರಾಥರ್ನೆ ನಡುಗುತ್ತಿದ್ದ. ಅವನ ಮೈಯಲ್ಲಿ ಯಕ್ಷಿಯ ಆವೇಶವಾದದ್ದು ಜನಕ್ಕೆ ಬಹುಬೇಗ ಅರಿವಿಗೆ ಬಂದು ಹಿಂದಿದ್ದ ಹೆಗಡೆ ಮುಂದೆ ಬಂದು ಕೈಮುಗಿದು ನಿಂತ. ಲಕ್ಕಬ್ಬೆ ಚಂದಮುತ್ತ ಸಮೇತ "ಅಪ್ಪಣೆಯಾಗಲಿ ಘನಪಾದವೇ" ಎಂದು ಮೈಚೆಲ್ಲಿ ಕುಲಗುರುವಿನ ಪಾದ ಹಿಡಕೊಂಡು ಕುಂತರು. ಕುಲಗುರು ಆರ್ಭಟಿಸಿ ನಡುಗುವ ಶಬ್ದಂಗಳ ಗರ್ಜಿಸಿದ:

ನನ್ನ ಮಾತು ನಾನುಳಿಸಿಕೊಂಡೆ.
ಇನ್ನು ಮ್ಯಾಕೆ ಅತ್ತೆಯೆಂಬಾಕೆ
ತನ್ನ ಮಾತು ತಾನುಳಿಸಿಕೊಳ್ಳಲಿ!

ದಿಗಿಲಾಯಿತೆಲ್ಲರಿಗೂ, ಈಗ ಅತ್ತೆಯೆಂಬಾಕೆ ಲಕ್ಕಬ್ಬೆಯಲ್ಲದೆ ಬೇರೆ ಯಾರೂ ಅಲ್ಲ. ಅವಳು ಉಳಿಸಿಕೊಳ್ಳಬೇಕಾದ ಮಾತು ಯಾವುದೆಂದು ಜನ ತಂತಮ್ಮಲ್ಲಿ ಅಂದಾಡಿಕೊಂಡರು. ತಾನು ಕೊಟ್ಟ ಮಾತು ಆತ್ಮಕ್ಕೆ ಅರಿವಾಗಿ ಲಕ್ಕಬ್ಬೆಯ ಬೆವರು ಜಲ ಸಳಸಳ ಭೂಮಿಗಿಳಿದು ಕುಂತ ನೆಲ ಒದ್ದೆಯಾದವು. ಹತಾಶೆಯಿಂದ ಹೃದಯ ಪರಚಿ ಕೊಂಬಂತೆ ಎರಡೂ ಕೈಗಳಿಂದ ಎದೆ ಹಿಡಿದುಕೊಂಡು ನೆಲಮುಗಿಲಿಗೆ ತನ್ನ ದುಃಖವ ನಿವೇದಿಸಿಕೊಳ್ಳುವಂತೆ ಮ್ಯಾಲೆ ಕೆಳಗೆ ನೋಡಿದಳು. ಆಕಾಶ ದೇವರಲ್ಲಿ ಸಿಡಿಲಿಲ್ಲವೆ? ಇದ್ದರ್ಯಾಕೆ ನನ್ನ ಮ್ಯಾಲೆ ಬೀಳಬಾರದು? ಭೂಮಿಯ ದೇವ ದೈವ ಭೂತಂಗಳಲ್ಲಿ ನ್ಯಾಯವಿಲ್ಲವೆ? ಇದ್ದರ್ಯಾಕೆ ನನಗೆ ಸಿಗುತ್ತಿಲ್ಲ? ಎಂದು ಹಣೆ ಹಣೆ ಬಡಿದುಕೊಂಡಳು. ಅಷ್ಟರಲ್ಲಿ

"ನ್ಯಾಯ ನುಡಿ ಹೇಳಕೇಳೋರ್ಯಾರೂ ಇಲ್ಲವೆ ಈ ಹಾಳು
ಹಟ್ಟಿಯಲ್ಲಿ? ಜವಾಬ್ದಾರಿಯಿದ್ದವರು ನುಡಿಯಿರಯ್ಯಾ"

- ಎಂದು ಕುಲಗುರು ಆರ್ಭಟಿಸಿ ಅಳ್ಳೆ ಅರಳಿಸಿಕೊಂಡು, ಹಲ್ಲು ಕಡಿಯುತ್ತ ಅಗಲವಾಗಿ ಕಣ್ಣು ಕಿಸಿದು ಸುತ್ತ ನೋಡಿದ. ಗಾಬರಿಗೊಂಡರು ಮಂದಿ. ಮುಖದಲ್ಲಿ ಸೇಡು ಶಾಪಂಗಳ ಹಾವಭಾವಗಳು ಮೂಡಿ ಮುಳುಗಿದವು. ತಕ್ಷಣ ಹೆಗಡೆ ಲಕ್ಕಬ್ಬೆಗೆ ಗದರಿದ:

ತಾಯಿ ಹೇಳಿದ್ದು ನಿನ್ನ ಮಾತು ನೀನುಳಿಸಿಕೊ ಎಂದು

ಅದೇನೆಂದು ಮೊದಲು ಹೇಳು.

**ಅಬ್ಬೆ :** ಮಗ ಒಂದು ವಾರದ ಮುದ್ದತಿನೊಳಗೆ
ಕ್ಷೇಮದಿಂದ ಗೂಡು ಸೇರಿದರೆ ನಿನಗೇ ಗುಡ್ಡ
ಬಿಡುವುದಾಗಿ ಬೇಡಿಕೊಂಡಿದ್ದೆ.
ದಿನಕ್ಕೊಂದು ಹರಕೆ ಹೊತ್ತು, ಸುತ್ತ ದೇವರಿಗೆ
ದುಬಾರಿ ಬೆಲೆತೆತ್ತು
ಮಗನ ಯೋಗಕ್ಷೇಮ ಆಯುಷ್ಯ ಅಭಿವೃದ್ಧಿಕೊಂಡಿದ್ದೇನೆ,
ಇಂಥಾ ಮಗನ್ನ ಯಕ್ಷಿಗೆ ಹ್ಯಾಗೆ ಗುಡ್ಡ ಬಿಡಲಿ ಶಿವನೆ?

**ಹೆಗಡೆ :** ಹರಕೆ ಹೊತ್ತವಳು ನೀನಲ್ಲವೆ?

**ಅಬ್ಬೆ :** ಹೌದು,

**ಹೆಗಡೆ :** ತೀರಿಸಬೇಕಾದವಳೂ ನೀನೇ ಅಲ್ಲವೆ?

**ಅಬ್ಬೆ :** ಲೋಕ ಲೌಕಿಕಳಯ್ಯ ನಾನು. ನನ್ನ ಮಾತಿಗೆ ಕೂಡ ಉಪ್ಪು, ಹುಳಿ ರುಚಿಯುಂಟು. ಧರ್ಮ, ಕರ್ಮ ಅರಿಯದೆ ಮಾತುಕೊಟ್ಟೆ.

ಇದ್ದೊಬ್ಬ ಮಗನ ದೈವಕ್ಕೆ ಅಡವಿಟ್ಟು
ನಾನು ಬರಿಗೈಯಲ್ಲಿ ಕೂತಿರಲೆ?

ಮಾನವನ ತಪ್ಪು ಲೆಕ್ಕಕ್ಕಿದೆಯೆ? ಇದೆಯೆಂದಾದರೆ -
ತಪ್ಪಿ ನುಡಿವ ಮಾತಿಗೆ ತಪ್ಪು ದಂಡ ಹೇಳು.
ಮಗನನ್ನ ಕೊಡೆಂದರೆ ಹ್ಯಾಗೆ? ಅರಿತವರು ನೀವು ಆಡಿರಯ್ಯಾ

ನುರಿತವರು ನೀವು ನುಡಿಯಿರಯ್ಯಾ.
ದೇವತೆಯೊಂದಿಗೆ ಈ ಪರಿ ಒಗೆತನ ಸಾಧ್ಯವೆ?

**ಹೆಗಡೆ :** (ಕೋಪದಿಂದ) ಹಾಗಂತ ವೈರ ಸಾಧ್ಯವೆ?
ನಮ್ಮ ದೇವಿ ಸೇಡುಮಾರಿ ಯಕ್ಷಿಯಲ್ಲ,
ಆಲ ಅವಳ ಮರ, ಗಿಣಿ ಅವಳ ಹಕ್ಕಿ
ಕಲೆಗೆ ಹ್ಯಾಗೋ ಹಾಗೆ ಒಲವಿಗೂ ದೇವತೆ ಅವಳು.
ಬಲಗೈಯಲ್ಲಿ ವರ ಕೊಡುವವಳು.

ನಮ್ಮ ಅಳತೆಗೆ ಮೀರಿದ ಸತ್ಯಗಳೆಷ್ಟೋ ಇದ್ದಾವೆ,
ದೇವಿ ನೋಡಿಕೊಳ್ಳುತ್ತಾಳೆ ಅವುಗಳನ್ನ.
ಹಟ್ಟಿಗೇನು ಸುಖವಿದೆಯೆ? ನೀನೇ ನೋಡು
ಮೊದಲೇ ಮಳೆ ಕಾಣದ ಬರಗಾಲ,
ಸುತ್ತ ದೇವರ ಕೋಪತಾಪ ಶಾಪಂಗಳೇ
ಸಾಕಷ್ಟಿರುವಾಗ
ಈ ಹೊಸದನ್ನ ಸಹಿಸುವ ಶಕ್ತಿ ಯಾರಿಗಿದೆ?
ಹೇಳಿದ ಹಿತನುಡಿ ಕೇಳು.
ಕೆಟ್ಟದ್ದನ್ನು ಯೋಚಿಸದೆ
ಕೊಟ್ಟ ಮಾತು ಉಳಿಸಿಕೊ - ಎಂದು ಕೋಪದಲ್ಲಿ ಗದರಿದ.

ಅಷ್ಟರಲ್ಲಿ ಕುಲಗುರು -

ಆಹಾಹಾ ಇನ್ನೂ ಒಪ್ಪಿಕೊಳ್ಳಲಿಲ್ಲವೆ ಅವಳು?
ಹಟ್ಟಿಯ ಸುಟ್ಟು ಭಸ್ಮ ಮಾಡುತ್ತೇನೆ....

ಎಂದು ಬಗಲ ಚೀಲಕ್ಕೆ ಕೈಹಾಕಿದ್ದೇ ತಡ ಲಕ್ಕಬ್ಬೆ ತಕ್ಷಣ ನಡುಗುವ ಕೈಗಳಿಂದ ಕುಲಗುರುವಿನ ಪಾದ ಹಿಡಿದು ದಮ್ಮಯ್ಯಾ, ದಕ್ಕಯ್ಯಾ ಎಂದು ನಿಜ ಒಪ್ಪಿ ದೀನಭಾವಗಳಿಂದ ಹೇಳಿದಳು:

ಆಯಿತಾಯಿತೇ ತಾಯಿ. ನನ್ನ ನುಡಿ ತಪ್ಪು
ನುಡಿದ ನಾಲಿಗೆ ತಪ್ಪು, ಸಮಾಧಾನ ಮಾಡಿಕೊ
ಸುಡುಸುಡುವ ಮಾತುಗಳ ಸುರಿಸಬ್ಯಾಡವೆ ತಾಯಿ, ಇಗೊ -
ಕೊಟ್ಟೆ ಮಗನ. ನಿನ್ನಡಿಗಿಟ್ಟೆ, ಸಿಟ್ಟು ಬಿಡು.

ಎಂದು ಹೇಳುವುದು ಹೇಳಿ ಉಳಿದುದ ನುಂಗಿದಳು.

ಈ ಮಾತು ಕೇಳಿದ್ದೇ ಕುಲಗುರು -

ಆಹಾಹಾ ಆನಂದ !
ಪರಮಾನಂದ !
ಶಿವಾನಂದ !

ಎಂದು ತಕ್ಕತೈ ಕುಣಿಯುತ್ತ -

“ಮಗನಿಗೆ ಕೀರ್ತಿ ಶಿಖರವ ಹತ್ತುವ
ಶಿವಯೋಗವಿದೆ. ಇಗೋ ಇಗೋ
ಬಂಡಾರ ತಗೊ ತಗೋ.”

- ಎಂದು ಹೇಳಿ ತಾನು ಮಗನ ಹಣೆಗೆ ಬಗಲ ಚೀಲದ ಬಂಡಾರ ಹಚ್ಚಿ ಕೇಳು ಇನ್ನೇನು ಬೇಕೆಂದ. ತಾಯಿ ಇದ್ಯಾವುದರೆಗ್ಗಿಲ್ಲದೆ ದೋಚಿದ ಮನೆಯಲ್ಲಿದ್ದಂತೆ ಕುಂತಿದ್ದಳು. ಹೆಗಡೆಗೆ ಪ್ರೋತ್ಸಾಹವಾಗಿ ಕುಲಗುರುವಿನ ಪಾದದ ಮ್ಯಾಲೆ ದೊಪ್ಪನೆ ಬಿದ್ದುರುಳಿ:

ಅಂಬಾ ಜಗದಂಬಾ
ನೀ ನಮಗ ತಾಯಿ
ಗತಿ ಯಾರಿಲ್ಲ ನಿನ್ನ ಶಿವಾಯಿ
ಮಳಿ ಕೊಟ್ಟು ನಮ್ಮನ್ನ ಕಾಯಿ

- ಎಂದು ಗಟ್ಟಿಯಾಗಿ ಪಾದ ಹಿಡಿದ. ಕುಲಗುರು ಹೆಗಡೆಯ ಹಣೆಗೆ ಬಂಡಾರ ಹಚ್ಚಿ

ಬರುವ ಹುಣ್ಣಿಮೆಯೆಂದು
ಅತ್ತೆಯ ಮಗ ಮಳೆರಾಗ ನುಡಿಸಿದರೆ
ಆಕಾಶದ ಮಳೆ ಅಬ್ಬರಿಸಿ ಬಿದ್ದಾವು
ಏಳೇಳು ಎದ್ದೇಳೆಂದು

- ಎಬ್ಬಿಸಿ ತಾನೂ ಎದ್ದು ನಿಂತು ಬಗಲ ಚೀಲದ ಬಂಡಾರವ ಚಾಂಗುಭಲಾ ಎಂದು ಆಕಾಶಕ್ಕೆ ಎರಚಿದ. ಎರಚಿದ್ದೇ ಆಯ್ತು ನೋಡು: ಹಾಳು ಬಿಸಿಲು ಹೊಂಬಿಸಿಲಾಗಿ ಅರಿಷಿಣದ ಮಜ್ಜನ ಮಾಡಿಸಿದಂಗಾಯ್ತು ಕಾಡಿಗೆ.

## ೧೫. ಸುಡುವ ಈ ಸುಣ್ಣದಲಿ ಸಣ್ಣಾದನೇ !

ಆಮ್ಯಾಲೆ ಆಳಾಗಲೇ ಇಲ್ಲ ಅಬ್ಬೆ;
ಆರಿಹೋಯ್ತು ಕಣ್ಣಲ್ಲಿಯ ಬೆಳಕು.
ಅನ್ನೋದಕ ಬಿಟ್ಟು
ಬೆನ್ನು ಹಚ್ಚಲೆ ಇಲ್ಲ ಹಾಸಿಗೆಗೆ.
ಕೊಟ್ಟಂತೆ ಮಾಡಿ ಕಸಿದ ಯಕ್ಷಿಯ ರೀತಿ
ಆರುವ ಬೆಂಕಿಯಲ್ಲಿ ಹುಲ್ಲೊಗೆದ ಹಂಗಾಗಿ
ಬೆಂಕಿ ಹತ್ತಿದ ಕಾಡಿನಂತಾದಳು ಮುದುಕಿ.

ಮಕ್ಕಳಾಗಿ, ಗೆಜ್ಜೆ ಕಾಲಿನ ಹಸುಗೂಸುಗಳಾಗಿ
ಗೂಡಿನ ಮೂಲೆ ಮೂಲೆಗಂಟಿದ್ದ ಕನಸುಗಳನ್ನ
ಕೋಲಿನಿಂದ ಹೊರಗಟ್ಟಿ
ದರೋಡೆಯಾದ ಮನೆಯಲ್ಲಿದ್ದಂತೆ
ಚಡಪಡಿಸಿದಳು ಮುದುಕಿ.

ಚಿತ್ತವೈಕಲ್ಯದ ಹುಚ್ಚಿಯ ಹಾಗೆ
ಕ್ಷಣ ನಕ್ಕು ದಿನವೆಲ್ಲ
ಹುಬ್ಬುಗಂಟಾದಳು ಮುದುಕಿ.

ವಂಶದ ಕುಡಿ ತನ್ನಿಂದ ಬೆಂದುಹೋದವೆಂದು
ಪುರಾತನರೆದುರು ಗೋಳು ಗೋಳೆಂದಾಡಿ
ಹಡೆದೊಡಲು ಜೋರಾಗಿ ಹೊಡೆದುಕೊಂಡಳು ತಾಯಿ.
“ನಿನ್ನ ದೃಢವ ಪರೀಕ್ಷೆ ಮಾಡಿದ ಮ್ಯಾಲೂ
ನಿನ್ನ ಹೆಸರುಗೊಳ್ಳುತ್ತೇನೆ ತಾಯೀ ಧೈರ್ಯದಿಂದ.
ನನ್ನ ದುರ್ಗುಣಗಳ ಬೇಕಾದಷ್ಟು ಸಾರಿ ಜಪಿಸು.
ನಮ್ಮ ಮುಕ್ಕೋಟಿ ತಪ್ಪುಗಳ ಮಾಫಿ ಮಾಡೋಳಲ್ಲವೆ ನೀನು?
ಮಗನ ನಿನ್ನಡಿಗಿಟ್ಟು ದುಃಖದ ಹಬ್ಬ ಮಾಡುತ್ತಿದ್ದೇನೆ
ಹುಚ್ಚಲ್ಲವೆ ತಾಯಿ ಇದು?
ಜಗತ್ತಿಗೆ ಬೇಕಾದ ಯಕ್ಷಿ ನೀನು.

ಚಂದಮುತ್ತನಿಗೆ ಮೊದಲು ಹುಟ್ಟಿದ
ಅಕ್ಕ ಅಣ್ಣ ಇಲ್ಲ.
ಮತ್ತೆ ಹುಟ್ಟಿದ ತಮ್ಮ ತಂಗಿಯರಿಲ್ಲ.
ಮಗ್ಗುಲಿಗೆ ಸೊಸೆಯಿಲ್ಲ.
ಮೊಳಕಾಲಿಗಂಟುವ ಮೊಮ್ಮಕ್ಕಳಿಲ್ಲ.

ಮಗನ ನಂತರ ನಂದಾದೀಪವ
ಉರಿಸುವ ಗತಿಗೋತ್ರ ಇಲ್ಲದ ವಂಶ
ಅದ್ಯಾತರದೇ ತಾಯಿ?
ಧಿಕ್ಕರಿಸಬೇಕದನು.
ಸುಡುವ ಈ ಸುಣ್ಣದಲಿ ಸಣ್ಣಾದನೇ !
ಕಣ್ಣಿಗಿಲ್ಲವೆ ನಿದ್ದೆ ನಿನ್ನ ಆಣೆ.
ಅನುಚಿತವಾಡಿದೆನೆನ್ನಬ್ಯಾಡ. ನಿನ್ನ ಹೆಸರಲಿ ವಂಶ ಬೆಳೆಸುತ್ತೇನೆ
ನನ್ನ ಕಂದನ ನನಗೆ ಹಿಂದಿರುಗಿ ಕೊಡೆ ತಾಯಿ”

- ಎಂದು ಸೆರಗೊಡ್ಡಿ ಬೇಡಿದಳು ಅಬ್ಬೆ.

# ೧೯. ಕನಿಕರವಿದ್ದವರು ಕಾಯ್ದುಕೊಳ್ಳಲಿ

ಅಬ್ಬೆಯ ವೇದನೆಯ ಭೇದಿಸಲಾಗಲೇ ಇಲ್ಲ ಚಂದಮುತ್ತನಿಗೆ. ತನ್ನನ್ನ ಗುಡ್ಡ ಬಿಟ್ಟದ್ದು ಅನುಕೂಲವಾಗಿ ಕಂಡರೂ ವ್ಯತ್ಯಾಸ ಕಾಣದೆ ಯಥಾತಥಾ ಇದ್ದ. ಏನಿದ್ದೇನು?

ಯಕ್ಷಿ ವಿರಹಿತ ಲೋಕ
ಸಾವಿಗಿನ್ನೊಂದು ಪರಿ
ಹುಗಿದ ಹಾಗಿದೆ ಜಗವು ಮೌನದೊಳಗೆ.

- ಎಂದು ಯಕ್ಷಿಯ ವಿಗ್ರಹದೆದುರು ಕುಂತು ಸೋತು ಮಾತಾಡಿದ. ಅವಳ ಕಲ್ಲಿನಂಥಾ ಮನಸು ಬೆಣ್ಣೆಸಮವಾಗಲೆಂದು ಬೇಡಿಕೊಂಡು ನಾಲಗೆಯಲ್ಲವಳ ನಾಮಸ್ಮರಣೆ ತೇದು ದೀನಭಾವಂಗಳಿಂದ ಅಂಗಲಾಚಿದ:

ಗಜಗಮನೆಯೇ ನಿನ್ನ ನಿಜವ ತಿಳಿದವರ್ಯಾರು?
ಅಬ್ಬೆಯ ತಪ್ಪಿಗೆ ನನ್ನ ಶಿಕ್ಷಿಸಬ್ಯಾಡ,
ಅಬ್ಬೆಯ ಮ್ಯಾಲೂ ಕೋಪ ಮಾಡಬ್ಯಾಡೆಂದ

ನಿನ್ನ ಬದಿಯಗಲಿ ನಾ ಅರೆಗಳಿಗೆ ಇರಲಾರೆ
ಸಿಡಿದು ಸಿಟ್ಟಲಿ ದೂಡಬ್ಯಾಡ ಹೊರಗೆ.
ಅನುಮಾನವ್ಯಾತಕ್ಕೆ ಮುನಿಸು ಮಾಣೇ ದೇವಿ
ನೆನೆದಂತೆ ಮಾಡುವೆ ಶಿವನ ಆಣೆ.

ರಚನೆಯ ಮಾತಲ್ಲ
ಅಸು ಹೋದರೂ ಹುಸಿಯಾಡುವವನಲ್ಲ
ಖಚಿತವಾದರೆ ನನ್ನ ವಚನವ ನಂಬು ಎಂದ.
ಮಾನಿನಿಯಳೇ
ಮಧುರ ವಾಕ್ಯದವಳೇ
ತಾವರೆಯ ಮುಖದವಳೇ
ತೆಳ್ಳಾನ ಹೊಟ್ಟ್ಯವಳೇ
ಪೂರ್ಣಳೇ, ಪರಿಪೂರ್ಣಳೇ ಎಂದು
ಒಂದು ನೂರಾ ಎಂಟು ಹೆಸರುಗಳಿಂದವಳ ಹೊಗಳಿದ.

ಇದಕೆ ಒಪ್ಪಿಗೆ ಉಂಟೆಂಬ ಇಲ್ಲೆಂಬ ಯಾವ ಸನ್ನೆಯೂ ಸಿಗದೆ ಒಂದೆರಡು ದಿನಗಳಲ್ಲಿ ತನ್ನಿಂದಾದ ತಪ್ಪು ಮನ್ನಿಸಿ ಮತ್ತೆ ಕರೆಕಳಿಸುವಳೆಂದು ಹದ್ದುಗ್ಗೈ ಇಟಗೊಂಡು ಹಾದಿಯ ನೋಡಿದ. ಹುಣ್ಣಿವೆ ಬಂತೆಂದಾಗ ಹತಾಶನಾದ.

ಯಕ್ಷಿಯ ಲೋಕಕ್ಕೆ ಬಾಹಿರನಾದಾಗಿನಿಂದ ಹಾಡು ತನ್ನಿಂದ ಮಾಯವಾಗಿದೆಯೆಂದೇ ಅಂದುಕೊಂಡ. ಹಾಗೆಂದು ಹಾಡದಿರಲೂ ಸಾಧ್ಯವಿಲ್ಲೆಂದ. ಹುಣ್ಣಿವೆದಿನ ಶಿವಪಾರ್ವತಿಯರ ಹೆಸರುಗೊಂಡು ಮಳೆರಾಗ ಹಾಡುವುದೆಂದು ಕೃತನಿಶ್ಚಯವ ಮಾಡಿದ. ಮಾತು

ಕೊಟ್ಟವಳು ಯಕ್ಷಿ. ಗೆಲ್ಲಬೇಕಾದ್ದು ಅವಳ ಸತ್ಯ. ಮಳೆ ಸುರಿಯತೇ ಹಟ್ಟಿಯ ಭಾಗ್ಯ. ಇಲ್ಲವೇ? ಅವಳ ಕೇಡು. ಶಿವಕಾರುಣ್ಯ ತೋರಿದ ಹಾಗೆ ನುಡಿಸುವುದು ನನ್ನ ಧರ್ಮ, ಒಂದಂತು ನಿಜ;

ಹಾಡಿಗೆ ಆಕಾಶದ ಮಳೆ ಸುರಿಯಬೇಕು.
ಆಲದ ಯಕ್ಷಿ ಒಲಿದು ಬರಬೇಕು.
ಬಂದರಿದೇ ಮೊದಲ ಹಾಡು.
ಇಲ್ಲವೇ? ಇದೇ ಕೊನೆಯ ಹಾಡೆಂದು
ಶಿವನ ಹೆಸರಿನಲ್ಲಿ ಆಣೆ ಪಂಥವ ಮಾಡಿದ.
ಕನಿಕರವಿದ್ದವರು ಕಾಯ್ದುಕೊಳ್ಳಲಿ
ಎಂದು ಎದ್ದ.

## ೧೭. ನುಡಿಸಿದನು ನಿವಳಾ ಸುರಿಧಾಂಗ ಹವಳಾ

ಹುಣ್ಣಿವೆಯದಿನ ಕೋಳಿ ಕೂಗಿಗೆದ್ದು ಚಂದಮುತ್ತ ತಣ್ಣೀರು ಮುಳುಗೆದ್ದು ತಾಯಿ ಪಾದವ ಪಡಕೊಂಡ. ಕುಲಗುರುವಿನ ಪಾದದ ಮ್ಯಾಲೆ ಮೈ ಚೆಲ್ಲಿ ಪಾದಧೂಳಿಯ ಹಣೆಗಿಟ್ಟುಕೊಂಡಾಗ ಕುಲಗುರು ಅನುಮಾನದಿಂದ ಮಂಗಳವಾಕ್ಯವ ಅನುಗ್ರಹಿಸಿದ. (ಅನುಮಾನವಾಕ್ಯವೆಂದರೆ ತನಗೇ ಬಾರದ ಮಳೆಯರಾಗವ ತಾನು ಶಿಷ್ಯನಿಗೆ ಕಲಿಸಿಲ್ಲವಾಗಿ ಅವನು ನುಡಿಸುವುದು ಸಾಧ್ಯವೇ - ಎಂದು) ಮಳೆ ಬೀಳುವತನಕ ಗುಡಿಯ ಕಡೆಗ್ಯಾರೂ ಸುಳಿಯಬಾರದೆಂದು ಕೈಮುಗಿದು ಕೇಳಿಕೊಂಡು ಗುಡಿಗೆ ಹೊರಟ.

ಗುಡಿಯ ರಜವ ಗೂಡಿಸಿ ಗಂಧದ ನೀರು ಸಿಂಪಡಿಸಿ ರಂಗೋಲಿ ಹುಯ್ದು ಮಡಿಬಟ್ಟೆಯ ಯಕ್ಷಿಯ ಮುಂದಿಟ್ಟು ಹೊರಬಂದು ನಿಂತುಕೊಂಡ. ಹಿಂದಿನ ವಾಡಿಕೆಯಂತೆ ಯಕ್ಷಿ ಮಡಿ ಉಡಲಿಲ್ಲವಾಗಿ ಮೈಲಿಗೆ ಬಟ್ಟೆ ಹೊರಬೀಳಲಿಲ್ಲ. ಅಮಂಗಳವೆಂದು ಹೃದಯ ನಡುಗಿ ಉಸಿರುಗರೆದ. ಮೂರು ಬಾರಿ ಗುಡಿಯ ಬಲಗೊಂಡು ದಿಂಡುರುಳಿ ಯಕ್ಷಿಯ ವಿಗ್ರಹದೆದುರು ಕುಂತು ಕಣ್ಣೀರ ಧಾರೆಯ ಸುರಿದ. ಹೆತ್ತಯ್ಯ ಮುತ್ತಯ್ಯರ ನೆನೆದು, ತಂದೆ ತಾಯಿಯ ನೆನೆದು, ಕಪಿಲೆಯ ನೆನೆದು, ಸುತ್ತ ದೇವರ ನೆನೆದು ಕೊಳಲು ತುಟಿಗಿಟ್ಟ. ನಡುಗುವ ಬಿಸಿ ಉಸಿರನ್ನ ಒತ್ತಾಯದಿಂದ ಒಳಕ್ಕೆ ತಳ್ಳಿದಾಗ ಕೊಳಲು ಅರಚಿಕೊಂಡಿತು.

ರಾಗ ಸರಾಗವಾಗಿ ಸುರುವಾಗಲಿಲ್ಲ. ಉಸಿರು ಗಂಟಲಲ್ಲೇ ಹುಟ್ಟಿ ಸ್ವರ ತುಂಡು ತುಂಡಾಗಿ ಹೊರಬಂತು. ಕೊಳಲು ಕೆಳಗಿಟ್ಟು ಯಕ್ಷಿಯ ಶಿಲಾವಿಗ್ರವ ನೆತ್ತಿಗೆ ಹೊಡೆದುಕೊಂಡು ಪ್ರಾಣ ಬಿಡಲೇ? ಎಂದುಕೊಂಡ. ಕಲಾವಿದನಾಗಿ ತನ್ನ ಕೊನೆಯುಸಿರು ಕೊಳಲ ಮೂಲಕವೇ ಹೋಗಲೆಂದು ಗುರುಹಿರಿಯರ ಧ್ಯಾನಿಸಿ ಭೃಂಗೀಶನ ನೆನೆದು ಕೊಳಲು ತುಟಿಗಿಟ್ಟುಕೊಂಡ.

ಒಡೆದುಸಿರು ಬಿಗಿಹಿಡಿದು ಅಖಂಡವಾಗಿ, ಬಿರುಸಾದ ಉಸಿರ ನಿಯಂತ್ರಿಸಿ ನುಡಿಸಿದ. ನಾಭಿಯ ಕಮಲ ತೆರಕೊಂಡಂತಾಗಿ ಮರಳಿ ಯತ್ನವ ಮಾಡಿದಾಗ ಹದಗೊಂಡು ಮೂಡಿತು ರಾಗ. ಸರಾಗವಾಗಿ ಆಲಾಪವ ಸುರುಮಾಡಿದ. ಮ್ಯಾಲಿನ ಮಳೆಗಾಗಿ ಭೂಮಿಯ ಬಡ್ಡಿಬೇರಿನ ಆದಿಮ ಹಂಬಲವ ಆಲಾಪವಾಗಿ ನುಡಿಸಿ ಆಕಾಶದಲ್ಲಿ ವಿರಾಜಮಾನರಾಗಿದ್ದ ಮಳೆರಾಯನ ಪರಿವಾರವ ಜಾಗೃತಗೊಳಿಸಿದ. ಖಗಮೃಗಪ್ರಾಣಿ ತಿರ್ಯಕ್ ಜಂತುಜಾಲದ ಹೃದಯಪ್ರಾರ್ಥನೆಯನ್ನು ವಿಸ್ತರಿಸಿ, ಮಳೆರಾಯ ಸಮೇತ ದೇವಗಣ ಕರುಣೆಗೊಳ್ಳುವಂತೆ ಮಾಡಿದ. ಅವರವರ ಚಂದದ ನಡೆನುಡಿಗಳ ಅಲಂಕರಿಸಿ, ಅನುಕರಿಸಿ ಅವರು ಪ್ರಸನ್ನಗೊಳ್ಳುವಂತೆ ಮಾಡಿ, ಅವರೆಲ್ಲ ಮಳೆರಾಯನ ಸಂಕೇತಕ್ಕಾಗಿ ಕಾಯುವಂತೆ ಮಾಡಿದ. ಸಿದ್ಧರಾದ ಅವರೆಲ್ಲರಿಗೆ ನಮಿಸಿ ಮಳೆರಾಯನ ಪ್ರೌಢರಚನೆ ಸುರುಮಾಡಿದ.

ಕೊಳಲಿನ ಮೃದುಕಠಿಣ ಸ್ವಭಾವಂಗಳನರಿಯ ಮಳೆರಾಯನ ನೂರೆಂಟು ಹೆಸರುಗಳಿಂದ ಮಧುರ ನಾದಂಗಳಲ್ಲಿ ಸ್ತುತಿಸಿದ. ಕ್ಷಿತಿಜದಗುಂಟ ರಾಗಮಂಡಳ ಬರೆದು ಗುಡಿಯ ನಡುನೆತ್ತಿಯ ಆಕಾಶದಲ್ಲಿ ಪೀಠವ ರಚಿಸಿ ಅನುಗ್ರಹಿಸು ತಂದೇ ಎಂದು ಪ್ರಾರ್ಥಿಸಿದ್ದೇ ಆಯಿತು ಶಿವಾ,

ಬೀಸಿ ಬೀಸಿ ಬಂದವು ಕಾರ್ಗಾಳಿ
ಹುಯಿಲ್ಗಾಳಿ, ಹಿಂಡುಗಾಳಿಗಳು, ಮುಗಿಲ ತುಂಬ
ಮುಂಗಾರಮೋಡ ಕವಿದು
ಕಡುನೀಲಿ ಆಗಸ ಕಪ್ಪಿಟ್ಟಿತು.

ಯಾರೋ ಬಂಧಂಗಾಯ್ತು,
ನಾತಿದೂರ ನಾತಿಸಮೀಪ
ಸುಳಿದಾಡಿಧಂಗಾಯ್ತು.
ಸುತ್ತಲಿನ ಹವೆ ತಂಪಾಗಿ
ನೀರುಂಡ ನೆಲದ ಪರಿಮಳ ಸುತ್ತ ಪಸರಿಸಿತು.
ತಾನೀವರೆಗೆ ಕಾಣದ ನಾದರೂಪದ
ಭವ್ಯ ಸನ್ನಿಧಿಯಲ್ಲಿ ತಾನಿದ್ದಂತೆನಿಸಿ ರೋಮಾಂಚನಗೊಂಡು
ಕಂಪನಗೊಂಬ ಉಸಿರನ್ನ ಬಿಗಿ ಹಿಡಿದ.
ಭಯಭಕ್ತಿಯಿಂದ ಕುಂಚವನಾಡಿಸುವ ಕಲಾವಿದನಂತೆ
ನಾದವ ಎಳೆ ಎಳೆ ಬಿಡಿಸಿ ನುಡಿಸಿ
ಸುಳಿವ ದೇವತೆಯ ಮೂರ್ತಗೊಳಿಸಿದ.
ಆಕಾಶದ ನಾಲಿಗಿಲ್ಲದ ಗಂಟೆ ಡಣಿಲೆಂದು ಹೊಡೆದಾಡಿ
ಮಳೆರಾಯ ಪ್ರತ್ಯಕ್ಷನಾದ!

ಆನೆಗಾತ್ರ ಮತ್ತು ಬಣ್ಣಗಳಿಂದ ಮತ್ತು ಅಲೌಕಿಕ ಕಾಂತಿಯಿಂದ ಕೂಡಿದ ಅಜಾನುಬಾಹು, ಕಣ್ಣು ಮತ್ತು ನಗೆಗಳಲ್ಲಿ ಮಿಂಚಾಡಿಸುತ್ತ ಪ್ರಸನ್ನವಾಗಿ ಕಾಣಿಸಿಕೊಂಡ. ಕೈಯಲ್ಲಿ ವಜ್ರಾಯುಧ ಥಳ ಥಳ ಹೊಳೆದಾಡಿತು. “ಭಲೇ ಹುಡುಗಾ, ಮೆಚ್ಚಿದೆ ನಿನ್ನ ಕಲೆ ಮತ್ತು ಭಕ್ತಿಯ ಮೆಚ್ಚಿದೆ, ಇಗೋ” ಎಂದು ಡೊಳ್ಳುಬಾರಿಸಿದಂತೆ ಪ್ರಕಟದನಿಯಲ್ಲಿ ನಕ್ಕು ನುಡಿದು ಆಶೀರ್ವದಿಸಿ ಮಾಯವಾದ. ಆಮ್ಯಾಲೆ ಸುರುವಾಯಿತು. ಶಿವಾ, ಮೋಡಗಳ ಕಾಡಾನೆ ಹಿಂಡು ಆಕಾಶದಲ್ಲಿ ಘೀಳಿಟ್ಟವು.

ಗುಡುಗುಡು ಗುಡುಗಿತ್ತು
ಮಿಂಚು ಮಿಡುಕಾಡಿತ್ತು
ಸುರಿಮಳೆ ಸುರಿದಿತ್ತು ಸತ್ತೂ ಕಡೆ.
ಕಾರೆಂಬ ಕಾರ್ಮಳೆ
ಭೋರೆಂಬ ಭೋರ್ಮಳೆ
ಗಿಂಡಿಗಾತ್ರದ ಹನಿಯ ಭಾರೀ ಮಳೆ.
ಆಕಾಶದಣೆಕಟ್ಟು
ಒಡೆಧಾಂಗ ಜಡಿದಾವು

ನೆಲಮುಗಿಲು ಬೆಸೆದಾವು ಸುರಿಮಳೆಗೆ
ಚಂದಮುತ್ತನ ಹಾಡು
ಮುತ್ತಿನ ಮಳೆಯಾಗಿ
ಸುರಿದಾವು ತಂಪಾಗಿ ಭೂಮಿಯ ಧಗೆ.

ಇಂತೀ ರೀತಿ ಹೇಳಿ ಕಳಿಸಿದ ಹಾಗೆ ಮಳೆ ಬಂದು ಧೋ ಧೋ ಸುರಿದರೆ ಕನಸುಗಳಾದ ನಮ್ಮ ಗತಿಯೇನಾಗಬೇಡ ಶಿವಾ.

ಕೊಳಲಿನ ಉಲಿಗಳ ಹೊಳಿಗಳ ಹರಿಸಿದ
ನಾವು ಎಳಿಮೀನಾಗಿ ತೇಲಿ
ಸಿಕ್ಕೇವು ಸೆಳವೀಗೆ ಸುಳಿವೀಗೆ ತಿರುಗಣಿಗೆ
ಸಿಕ್ಕಂವು ನಮಗ್ಯಾವ ದಂಡಿ.

ಆಳ ತಿಳಿಯದು ಕೊಳಲ ಗಾಳ ತಳಿಕ್ಯಾಡುವವು
ಕರಿಯ ಗೂಢಗಳನ್ನ ತಟ್ಟಿ.

ಚಂದಮುತ್ತನ ಹಾಡಿನ್ನೂ ಮುಗಿದಿರಲಿಲ್ಲ. ಈ ತನಕ ಕುಲಗುರುವಿನ ಆದೇಶದಂತೆ ದೂರದಲ್ಲಿ ಕಾಯುತ್ತಿದ್ದ ಜನ ಭರ್ಜರಿ ಮಳೆಯಲ್ಲಿ ನೆಂದು ಈಗ ಆನಂದಗಳ ತಡಕೊಳ್ಳಲಾರದೆ ಇದ್ದಲ್ಲಿಂದ ಓಡಿಬಂದು ನಮ್ಮಪ್ಪಾ ಚಂದಮುತ್ತಾ ಎಂದು ಅವನನ್ನೆತ್ತಿಕೊಂಡು ಕೇಕೆ ಹಾಕಿ ಕುಣಿಯತೊಡಗಿದರು. ಇಡೀ ಹಟ್ಟಿಯ ಜನ, ಮಕ್ಕಳು, ಮುದುಕರು, ಗಂಡು ಹೆಣ್ಣೆನ್ನದೆ ಕುಲಗುರು ಮತ್ತು ಹೆಗಡೆ ಸೈತ ಆನಂದದ ಉನ್ಮಾದವೇರಿ ಚಂದಮುತ್ತನಿಗೆ ಚಾಂಗುಭಲಾ ಹೇಳುತ್ತ ತಕ್ಕತೈ ಕುಣಿದರು.

ಈತನಕ ಹ್ಯಾಗೆ ಹ್ಯಾಗೋ ಇದ್ದ ಲಕ್ಕಬ್ಬೆ ಈಗ ಮಗನ ಪವಾಡಕ್ಕೆ ಆನಂದದ ಬೆರಗೇರಿ ಓಡೋಡಿ ಹೊರಬಂದು ಅಂಗಳದಲ್ಲಿ ಎಡವಿ ಬಿದ್ದು ಕಾಲುಳುಕಿ ಕುಂಟುತ್ತ ಗೂಡು ಸೇರಿ, ಉದ್ರೇಕದಲ್ಲಿ ತಾನೊಬ್ಬಳೇ ಕಿರಿಚಿ ಕಿರಿಚಿ ಮಾತಾಡುತ್ತ ಮಗನ ದಾರಿ ಕಾದಳು.

ಜಡಿಮಳೆಯಲ್ಲಿ ಜನ ಮೂರು ತಾಸು ರಾತ್ರಿಯಾಗುವತನಕ ಕಿರಿಚಿ ಒದರಿ ಕೇಕೆ ಹಾಕಿ ಕುಣಿದು ಕುಪ್ಪಳಿಸಿ ಮಳೆಯ ಅಬ್ಬರ ಕಮ್ಮಿಯಾದ ಮ್ಯಾಲೆ ಸಕಲ ಗೌರವ ಮರ್ಯಾದೆಗಳೊಂದಿಗೆ ಚಂದಮುತ್ತನ್ನ ಅವನ ಗೂಡಿಗಿಳಿಸಿ ಲಕ್ಕಬ್ಬೆಯ ಕಾಲುಮುಟ್ಟಿ ನಮಸ್ಕರಿಸಿ ಹೋದರು. ಅಬ್ಬೆಗೆ ಮಾತೇ ಬರಲೊಲ್ಲದು. ಏನೇನೋ ಅಸಂಗತ ಕಿರಿಚುತ್ತ ಮಗನಿಗೆ ನೂರು ಸಲ ದೃಷ್ಟಿ ತೆಗೆದಳು. ನೂರು ಸಲ ತಬ್ಬಿ ತೂಪಿರಿದು ಮುದ್ದಾಡಿದಳು. ಮಗನ ಮುಖದ ಮ್ಯಾಲೆ ನೂರು ಕಪ್ಪಿನ ಬೊಟ್ಟಿಟ್ಟಳು. ಮಗನ ಕೀರ್ತಿಯ ಸುಖದಲ್ಲಿ ಪರವಶಳಾಗಿ ಹಾಗೇ ಮಲಗಿದಳು.

ಸಪ್ಪಟ ಸರಿರಾತ್ರಿ ಗೂಡೆಲ್ಲ ನೀರು ನೀರಾಡಿ ಅಬ್ಬೆಯನ್ನು ಹೊರಸಿನ ಮ್ಯಾಲೆ ಮಲಗಿಸಿದ ಚಂದಮುತ್ತ. ಯಕ್ಷಿಯ ಕೃಪೆಯಾಗಲಿಲ್ಲೆಂಬರಿವು ಇದ್ದುದರಿಂದ ಜನರ ಹೊಳೆವ ಮಾತುಗಳಿಂದ ಸಮಾಧಾನವಾಗಲಿಲ್ಲ. ಈಗ ಒಬ್ಬಂಟಿ ಆಗಿದ್ದನಲ್ಲಾ ನೆನಪಾಗಿ ಕಣ್ಣೀರು ಮತ್ತು ಜಗುಳಿ,

ಇರಲಾರೆ ಆಕೆಯ ಹೊರತ
ಲೋಕ ಸುಂದರಿಯನ್ನ ಮರೆತಾ.

ಎಂದು ನಿಟ್ಟುಸಿರಿಸಿಟ್ಟ. ಕೊಟ್ಟಿಗೆಯಲ್ಲಿ ಕಪಿಲೆ ಚಡಪಡಿಸಿ ವಿಚಿತ್ರವಾಗಿ ಅರಚಿದ್ದ ಕೇಳಿ ಅವಸರವಸರವಾಗಿ ಹುಲಿ ಬಂದಿರಬೇಕೆಂದು ಹೊರಬಂದ. ಆಕಾಶ ಹಗುರವಾಗಿ ಮೋಡಗಳಲ್ಲಿ ಚಂದ್ರ ಮೂಡಿ ಮಂದ ಬೆಳ್ದಿಂಗಳಿತ್ತು.

ಆಕಾಶಲೋಕದ ಅಸಮಾನ ಹೂವು
ಭೂಮಿಯ ಮ್ಯಾಲರಳಿ
ಅತಿಶಯದ ಕುಸುಮದ ವಾಸನೆ
ಪಸರಿತ್ತು ಇಡೀ ಸೀಮೆ.

ಕೊಟ್ಟಿಗೆಯ ಸೂರಿನಡಿ ಯಾರೋ ನಿಂತಿದ್ದರು ತುಪ್ಪದ ದೀಪದ ಹಾಗೆ. ಎದೆ ಧವ ಧವ ಹೊಡೆದುಕೊಂಡು 'ಎಲ್ಲವೆಲ್ಲವೂ ಹಲುಮನವೆ ಥರಥರಗುಡಬ್ಯಾಡ. ನಡುಗಿ ನಲುಗಲು ಬ್ಯಾಡ' ಎಂದು ತಂತಾನೆ ವಿವೇಕಿಸಿಕೊಂಡು ಒಂದೆರಡು ಹೆಜ್ಜೆ ಮುಂದೆ ಹೋದ. ಬಾಯ ಶಬ್ದ ನಿಶ್ಶಬ್ದವಾಗಿ ಕಣ್ಣು ದೊಡ್ಡದು ಮಾಡಿ ಲಿಖಿತ ಚಿತ್ರದ ಹಾಗೆ ನಿಂತ.

ಮೂಕತನದ ಮುಸುಕಿನಲ್ಲಿ
ನಿಂತುಕೊಂಡಿದ್ದಾಳೆ ಕಾಮನ ಚೂರಿ
ಚಕೋರಿ ಎಂಬ ಯಕ್ಷಿ!
ಸ್ಥಾವರವೆಲ್ಲವೂ ಜಂಗಮವಾದವು
ಯಕ್ಷಿಯ ನೋಟ ಮುಟ್ಟಿದರೆ.
ಮೈಯಂತ ಮೈಯೆಲ್ಲ ಜಗಜಗ ಹೊಳೆದಿದೆ
ಸ್ವಂತ ಬೆಳ್ದಿಂಗಳಿದೆ ಸುತ್ತ.
ಮೈತೊಯ್ದು ಒದ್ದೆ ಮುಖ
ತೊಯ್ದು ಮೈಗಂಟಿದ ದಟ್ಟಿಯಲ್ಲಿ
ಒಡೆದು ಕಂಡವು ಬೆಡಗಿನ ಹೊಂಗೊಡ ಕುಚ.
ತಡಮಾಡದೆ ನೆರಿಗೆಯ ಹಿಂಡಿ ಸರಿಪಡಿಸಿ
ಕಿರಿಗಂಟು ಕಟ್ಟಿ
ಬಡನಡುವ ಸಂವರಿಸಿಕೊಂಡಳು.

ಕಟ್ಟಿದ್ದ ಮುಡಿ ಸಡಲಿ ಬೆನ್ನಿಗಿಳಿದ
ಕಾಳನೀಳ ಕೇಶರಾಶಿಯಿಂದ ಹೂ ಜಗುಳಿ
ಎಳೆಯ ಕುಂತಳದಿಂದ ಮಳೆಯ ಹನಿ ಜಿನುಗಿ
ಕುಡುತೆಗಂಗಳ ದೊಡ್ಡದು ಮಾಡಿ
ಬೆದರಿದೆರಳೆಯ ಪರಿ ನಿಂತಿದ್ದಳು
ಮಾರಿ ಸಣ್ಣದು ಮಾಡಿ.
ಅಂಗನೆಯ ಅಂಗಾಲಿನಲ್ಲಿ ಕುಂಕುಮವಿತ್ತು.
ಮುಖದಲ್ಲಿ ಹಿಂಗದ ಬೆಳುದಿಂಗಳು.
ಪದುಮದ ದಳದಂತೆ ಕೆಂಪಗಿದ್ದವು ಕೆನ್ನೆ

ಅದುರಿದವು ಹವಳದುಟಿ ಚಳಿಗೆ.
ನೆಲವನುಂಗುಟದಿಂದ ಬರೆದಳೊಮ್ಮೆ.

ನಮಗಿಷ್ಟೇ ಬೇಕಿತ್ತು, ಯಾವಾಗ ಇಬ್ಬರೂ ಜಗಳ ಮರೆತು
ಕೂಡಿಯಾರೆಂದು ಕಾತರಿಸುತ್ತಿದ್ದ ನಮಗೆ ಇದಕ್ಕಿಂತ ಆನಂದದ
ಸಂಗತಿ ಏನಿದೆ? ತಕ್ಷಣವೆ ನುಗ್ಗಿ ಇಬ್ಬರ ಮಧ್ಯೆ ಮತ್ತೆ ಜಗಳ
ಬರದಿರಲೆಂದು - ಪೌರೋಹಿತ್ಯ ವಹಿಸಿದೆವು.

ಎದೆಯ ಬಾಗಿಲು ತೆರೆದು ಒಳಗ ಕರಕೊಳ್ಳಿರಿ
ಎಡವುದು ಬ್ಯಾಡ ಹೊಸ್ತಿಲದೊಳಗ.
ಮೆಲ್ಲಗ ಮಾತಾಡಿ ಮೈಮ್ಯಾಲ ಕೈ ಇಡರಿ
ವಿಶ್ವಾಸ ಮೂಡಲಿ ಒಳಗೊಳಗ.

ನಮ್ಮ ಹಿತನುಡಿ ಕೇಳಿ
ಬೆದರಿದ ಕುರಂಗಾಕ್ಷಿ
ಮದನ ಕದನಾಪೇಕ್ಷಿ
ಕಿಡಿ ತಗಲಿದರೆ ಸಿಡಿವ ಮುದ್ದಿನ ಕುಡಿಕೆಯಂಥ ಯಕ್ಷಿ
ಒಮ್ಮೆ ವಾರಿನೋಟ ಬೀರಿದಳು ನೋಡು ಹುಡುಗನ ಕಡೆಗೆ -
ಚಂದಮುತ್ತ ಥರಾಥರನೆ ನಡುಗಿ
ನಿನ್ನ ಕುರಣೆಯ ಹರಣ ದೇವೀ ಎಂದು
ಓಡಿ ಹೋಗಿ ದಿಂಡುರುಳಿ
ಪುಳಕಜಲದಲಿ ಅವಳ ಪಾದ ತೊಳೆದ.

ಎಲ್ಲಿದ್ದನೋ ಮಾರಾಯ ಮಾರ,
ಸಕ್ಕರೆ ಬಿಲ್ಲಿನ ಹೆದೆಯ ಶಕ್ತಿಂದ ಕರ್ಣಕೆ ಸೆಳೆದು
ಪಂಚೈದು ಬಾಣಗಳ ಹೊಂಚಿ ಬಿಟ್ಟ ನೋಡು -
ತಬ್ಬಿಬ್ಬಾದರಿಬ್ಬರೂ.

## ೨೮. ಮನಸಿನ ತುಂಬೆಲ್ಲ ನೆನಪುಗಳ ಗಾಯ

ಮಾರನೆಯ ಬೆಳಿಗ್ಗೆ ಕೂಡ ನಿನ್ನೆಯ ಆನಂದದ ಅಮಲಿನಿಂದ ಹೊರಬರಲಿಲ್ಲ ಅಬ್ಬೆ. ಕಪಿಲೆ ಚಡಪಡಿಸಿತ್ತು ಬೆಳ್ಳಬೆಳಗು. ಯಾರೊ ಸುಳಧಂಗಿತ್ತು ಕೊಟ್ಟಿಗೆಯ ಬಳಿಯಲ್ಲಿ. ಯಾರೆಂದು ತಿಳಿಯದೆ, ಯಾರೂ ಇರಲಿಲ್ಲವೆಂಬ ಭಾವ ಗಟ್ಟಿಯಾಗದೆ, ಇದ್ದರೆಂಬ ನಂಬಿಕೆ ಹೋಗದೆ - ಅಂತೂ ಭ್ರಾಂತುಭಾವದಲ್ಲಿ ಮಗನನ್ನೇ ಕೇಳಬೇಕೆಂದಳು. ಅವನಾಗಲೇ ಹೊರಗೆ ಹೋಗಿದ್ದರಿಂದ ಹ್ವಾರೆಗೆ ತೊಡಗಿದಳು.

ಬೆಳಗುವ ಪ್ರಾಯದ ಮಗನಿಗಿಂತ ಮುಂಚೆ ಅವನ ಪರಿಮಳದ ಗಾಳಿ ಬೀಸಿ ಗೂಡಿನ ತುಂಬ ಪಸರಿಸಿತು. ಲೋಕವ್ಯಾಪಾರ ಮರೆತವರಂತೆ, ಇನ್ಯಾವುದೋ ಲೋಕಾಂತರಕ್ಕೆ ಸಂಯಮಿಸಿ ಹೂವು ಹುಡದಿಯ ಒಳಗೆ ಹುಡದಿಯಾಡಿ ಬಂಧಂಗಿದ್ದ. ಅಬ್ಬೆಯ ನೋಡಿ ಹೆದರಿ ಬೆವರಿಳಿದು ತಬ್ಬಿಬ್ಬಾದ. ಹೌದೆಂಬ ನಡೆನುಡಿಯ ಮಗ ಇಂದ್ಯಾಕೆ ಹೀಗೆಂದು, ಕಣ್ಣಲಿನ್ನೂ ನಿನ್ನೆಯ ದಣಿವಿದೆಯೆಂದು -

'ಮಿಂದೆಯ ಕಂದಾ?'

ಎಂದಳು.

'ಇಗೊ ಮಿಂದು ಬಂದೆ'

ಎಂದು ತಾಮಸದ ನಿವೃತ್ತಿಯ ಮಾಡಿ ಲಂಗೋಟಿಯ ತಗೊಂಡು ದುಡುದುಡುನೆ ಹೊರಗೋಡಿದ. ಹಂಗಿದ್ದರೀವರೆಗೆಲ್ಲಿ ಹೋಗಿದ್ದನೆಂದು ಯೋಚಿಸಿ, ಬಗೆಹರಿಯದೆ ಅಡಿಗೆಗಿಟ್ಟಳು.

ಮಗ ಬಂದು ಭಕ್ತಿಗೆ ವಿಭೂತಿಯ ಹಚ್ಚಿಕೊಂಡು ದೇವರ ಬಿಲದೆದುರು ನಿಂತು ಶಿವಪೂಜೆ ಶಿವಗ್ಯಾನವ ಮಾಡಿ ನೂರೆಂಟು ಸಲ ಶಿವನಾಮವ ಹೊಗಳಿ ಬಂದ. ಲಕ್ಕಬ್ಬೆ ಮಗನ ಚೆಲ್ವಿಕೆಯ ಚೋದ್ಯವ ನೋಡಿ ಅಭಿಮಾನದಲ್ಲಿ ಮೈಮರೆತು ನಿಂತಿದ್ದವಳು ಮಗನನ್ನ ಯಕ್ಷಿಗೆ ಗುಡ್ಡ ಬಿಟ್ಟ ವೃತ್ತಾಂತ ನೆನಪಾಗಿ ನಿಟ್ಟುಸಿರಿಟ್ಟು ಕೈಹಿಡಿದು ಮಗನ ಒಲೆಯ ಬಳಿಗೆ ಕರೆದೊಯ್ದಳು. ಹಾಲು, ಅನ್ನ, ಜೇನು, ಬೆಲ್ಲ, ಪಾಲು ಪಂಚಾಮೃತದ ಅಡಿಗೆಯ ನೀಡಿ ತಾನೇ ತುತ್ತು ಮಾಡಿ ತಿನ್ನಿಸುವಾಗ ನೋಡಿದರೆ - ಮುಖದ ತುಂಬ ಗಾಯಗಳಾಗಿವೆ ಮಗಂಗೆ! ಚಂದ್ರಾಮನಂಥ ತಿಳಿಯಾದ ಮೋರೆಯಲಿ ಕಲೆ ತೋರಿವೆ!

ಕೆನ್ನೆ ಕತ್ತಿನ ಮ್ಯಾಲೆ ಮುದ್ದಿನ ಗಾಯ
ಗಲ್ಲತುಟಿಗಳ ಮ್ಯಾಲೆ ಹಲ್ಲೂರಿದ ಗಾಯ
ಮೈತುಂಬ ಕಂಡಾವು ಚೆಳ್ಳುಗುರು ಗಾಯ
ಮಾದಕದ ನೋಟಗಳು ನೆಟ್ಟ ಎದೆಗಾಯ!

ಅವ್ವಾ ಕಣ್ಣಿನ ತುಂಬ ಕನಸುಗಳ ಗಾಯ
ಕಿವಿಗಳ ತುಂಬ್ಯಾವು ಗಳರವದ ಗಾಯ
ಹೃದಯದ ತುಂಬೆಲ್ಲ ಆನಂದಗಳ ಗಾಯ
ಮನಸಿನ ತುಂಬೆಲ್ಲ ನೆನಪುಗಳ ಗಾಯ !

ಮಗಂಗೆ ಹೆಣ್ಣುಗಾಳಿ ಬೀಸಿರಬಹುದೇ? ಹಾಂಗಿದ್ದರೆ ನನಗೆ ತಿಳಿಸದೆ ನನ್ನ ಉಡಿಯಿಂದ್ಯಾರು ಕದ್ದೊಯ್ದರು ಕಂದನ್ನ?

ಯಕ್ಷಿಯ ನೆನಪಾಗಿ ಸಳಸಳ ಬೆವರು ಜಲವಿಳಿದು ನೆಲ ತೊಯ್ದವು. ಇಲ್ಲಿಲ್ಲ ಹಂಗಾಗಿರಲಾರದೆಂದು, ಆಮ್ಯಾಲೆ ಮಗನ ಕೇಳಿದರಾಯ್ತೆಂದು ತನ್ನ ತಾನು ವಿವೇಕಿಸಿಕೊಂಡು ಸುಮ್ಮನಾದಳು.

## ೧೯. ಜೇನು ತುಂಬಿದ ಹೂಗಳೆಲ್ಲಾ ಕಡೆ

ಬರಬಾರದ ಜಡಿಮಳೆ ಜಡಿದು ಕೊಚ್ಚಿಹೋದವು ನೋಡು ಧರೆಯ ಖಾಯಿಲೆಗಳು ಮತ್ತು ಶಾಪಂಗಳು.

ಹಳ್ಳಾಕೊಳ್ಳಾ ತುಂಬಿ ತುಳುಕಿ
ತೊಳೆದು ಹೋದವು ಎಲ್ಲ ಕಿಲುಬು.
ಕಾಡಿನಂಗಳದಲ್ಲಿ ತಂಗಾಳಿಯಾಡಿ
ಮತ್ತೆ ಅಧಿಕಾರಕ್ಕೆ ಬಂತು ಹಸಿರು.
ಮೇಲು ಮಿರಿಲೋಕದ ಏಳುಪ್ಪರಿಗೆ ಮೋಡಗಳಲಿದ್ದ ನಾವು ಕನಸುಗಳು
ಮುತ್ತಾಗಿ ಸುರಿದು ಹೂವಾಗಿ ಅರಳಿ
ಏರಿದೆವು ಬೆಟ್ಟದ ಮುಡಿಗೆ.

ಕಂಡಲ್ಲಿ ಪಲ್ಲವಿಸಿ ಫಲ ಹೆರುವ ಮರಗಳು
ಜೇನು ತುಂಬಿದ ಹೂಗಳೆಲ್ಲ ಕಡೆ.
ದೀಪಗಳು ಉರಿದಾವು ಸಂಪಿಗೆಯ ಮರದಲ್ಲಿ
ತುಂಬಿಗಳ ತುಟಿಯಲ್ಲಿ ಹಾಡು ಜಿನುಗಿ.

ಕಾಡಿನ ಹೂಗಳಿಗೆ ರೆಕ್ಕೆ ಮೂಡಿದ ಹಾಗೆ ಬಣ್ಣ ಬಣ್ಣದ ಚಿಟ್ಟೆ ಹಾರಾಡಿವೆ.
ಮರವ ಮಾತಾಡಿಸುವ ಸವಿಗೊರಳ ಹಕ್ಕಿಗಳು
ಆನಂದ ಹಾಡುಗಳ ಹಾಡುತ್ತಿವೆ.

## ೨೦. ಹಬ್ಬಿತು ಕೀರ್ತಿ ಪರಿಮಳದ ಪವನದಂತೆ

ಹಟ್ಟಿಯ ಕಾಡಿನಲ್ಲಿ ಇಂತಪ್ಪ ಹಸಿರಿನ ಪವಾಡಂಗಳು ನಡೆವ ಕಾಲದಲ್ಲಿ ತನ್ನ ಕೊಳಲ ಹಾಡಿನಿಂದ ಮಳೆ ಸುರಿಸಿದ ಚಂದಮುತ್ತನ ಕೀರ್ತಿ ಸುತ್ತೂ ಸೀಮೆಗೆ ಹಬ್ಬಿತು ನೋಡು ಹರಿಶ್ಚಂದ್ರನ ಗಾಳಿಯಂತೆ.

ಹಟ್ಟಿಯಲ್ಲಿ, ಹಟ್ಟಿಯವರ ಮನದಲ್ಲಿ
ಇನ್ನಿಲ್ಲ ಇವನ ಸಮನೆಂದು ಪೂರಾ ತುಂಬಿ
ಸಕಲರಿಗೆ ಬೇಕಾದವನಾದ ಚಂದಮುತ್ತ.
ಇಂಥ ಮಗನ ಪಡೆಯಲು ಲಕ್ಕಬ್ಬೆ
ಯಾ ಪುಣ್ಯ ಮಾಡಿದಳೊ ಯಾ ನೋಂಪಿ ನೋಂತಳೊ
ಎಂದು ಹೊಳಪುಳ್ಳ ಶಬ್ದಗಳಲ್ಲಿ ಹೊಗಳಿದರು ಜನ.

ಕೇರಿಗೆ ದೊಡ್ಡವನಾದ ಊರಿಗೆ ದೊಡ್ಡವನಾದ
ದಿಕ್ಕಿಗೆ ದೊಡ್ಡವನಾದ ನಾಡಿಗೆ ದೊಡ್ಡವನಾದ
ನಾಕು ರಾಜ್ಯ ಎಂಟು ದಿಕ್ಕಿನಾಗಿಲ್ಲ ಇವನ ಸಮ

ಎಂದು ಒಂದೆ ನುಡಿ ಸಾಕಿರಲು
ನೂರೊಂದು ಹೊಗಳಿದರು ಜನ.

ಮಳೆರಾಯನ ಪಳಗಿಸಿದನೆಂದು
ಸಿಡಿಲು ಮಿಂಚುಗಳ ಹಾದಿಗೆ ತಂದನೆಂದು
ರಮ್ಯ ವಚನಂಗಳಿಂದ ಹಾಡಿ
ಮಕ್ಕಳಿಗವನ ಹೆಸರಿಟ್ಟರು ಜನ.

## ೨೧. ಸೂರ್ಯಮುತ್ತ ಹೆಗಡೆ ಕನವರಿಸಿದ್ದು

ದಿನಾ ಬೆಳೆಯುವ ಚಂದ್ರನ್ನ
ಹೊಳೆಯುವ ಚಂದ್ರನ್ನ
ಹ್ಯಾಗೆ ಸಹಿಸುತ್ತೀಯೋ ಕಂದಾ?

ಬೆಳ್ದಿಂಗಳು ಹಬ್ಬುವುದನ್ನ
ಲೋಕವ ಬೆಳಗುವುದನ್ನ
ಹ್ಯಾಗೆ ಕಣ್ಣಾರೆ ನೋಡುವಿಯಾ ಕಂದಾ?

ಬೆಂಕಿಯಿಡು ಅವನ ಮಸಡಿಗೆ.
ಅದಿಮದ ಸೇಡು ಮರೆಯಬೇಡವೊ.

## ೨೨. ಹೇಳಿ ಕಳಿಸಿದ ಹಾಗೆ ಇಳಿದು ಬಂದ

ಚಂದಮುತ್ತನ ಕೀರ್ತಿ ಪುರಕ್ಕೆ ತಲುಪಿದೇಟ್ಗೆ
ಭೂಮಂಡಳ ಗಿರ್ರನೆ ತಿರುಗಿ ಸೂರ್ಯ ದೇವರು ಕಳಚಿ ಬಿದ್ದಂಗಾಯ್ತು ಮಹಾನುಭಾವನಿಗೆ.
ಇಂತಿಪ್ಪ ಕಲೆಗಾರ ಕೊಳಲೆಂತು ನುಡಿಸುವನೆಂಬುದ ಅರಿಯಬೇಕೆಂದು ಒಡೆಯನ ವಾಕ್ಯವಾದದ್ದೇ
ಹಾವು ಮೆಟ್ಟಿದ ಹಾಗೆ ನೆಗೆದು ನಿಂತ.
“ಸೈ ಬಿಡು ಒಡೆಯಾ, ಅವ ನನ್ನ ಶಿಷ್ಯ
ಹೇಳಿ ಕಳಿಸಿದರೆ ಓಡೋಡಿ ಬರುವ”
- ಎಂದು ಆಶ್ವಾಸನೆಯ ನೀಡಿ -
ಎಲ ಎಲಾ ಮಳೆತರಿಸುವಂತಾದನೆ ಗೊಲ್ಲರ ಬಾಲಕ!
- ಎಂದು ವಿಸ್ಮಯಂಬಟ್ಟು
ನಿರನುಭವಿ ಹೈದ ಏನೆಲ್ಲ ಆದ ನನ್ನ ದಯದಿಂದ;
ಹಿಂದುರುಗಿ ಬಂದು ಸಿದ್ಧಿ ಸಾಧನೆಗಳ ಸುದ್ದಿಯ
ಹೇಳಬಾರದೆ?

ಮಳೆರಾಗ ನನಗರಿದು, ಹಾಗಿದ್ದರಿವನೆಲ್ಲಿ ಕಲಿತ?
ಮುದಿಜೋಗ್ತಿಯ ದರ್ಶನ ಯೋಗವಾಯಿತೆ?
- ಎಂದು ಅನುಮಾನ ಮೂಡಿ
ಆನಂದಗೆಟ್ಟು ನೆಲದ ಮ್ಯಾಲೆ ನಿಲ್ಲದಾದ.
ಹೇಳಿ ಕಳಿಸಿದರೆ -
ಅರಿತವನು ತಾನೆಂಬ,
ನುರಿತವನು ತಾನೆಂಬ,
ಮಳೆ ತರಿಸಿದವನು ತಾನೆಂಬ ಹಮ್ಮಿನಲಿ
ಬಾರದೆ ಇದ್ದಾನೆಂದು,
ಖುದ್ದಾಗಿ ಹೋಗಿ ಕರೆತರಬೇಕೆಂದು
ಹೇಳಿಕಳಿಸಿದ ಹಾಗೆ
ಚಂದಮುತ್ತನ ಹಟ್ಟಿಗಿಳಿದು ಬಂದ.

## ೩೩. ಮರಿಯಿತಭಿಮಾನ

ನಾವು ಲೋಕದ ಕನಸುಗಳೆಲ್ಲ ಈಗ ಚಂದಮುತ್ತನ ಹಟ್ಟಿಯ ಕಾಡಿನಲ್ಲೇ ಬೀಡು ಬಿಟ್ಟಿದ್ದೆವು. ಎಲ್ಲೆಂದರಲ್ಲಿ ಹಸಿರೆಲೆಗಳಿಗೆ, ಹೂ ಚಿಗುರಿಗೆ, ದುಂಬಿ ಪಾತರಗಿತ್ತಿಗಳಿಗೆ, ಮನು ಮುನಿ ಮಾನವ ಖಗಮೃಗ ಜಾತಿಯ ಮನಸ್ಸುಗಳಿಗೆ ಅಂಟಿಕೊಂಡು ಚಂದಮುತ್ತ ಕೊಳಲು ತುಟಿಗಿಡುವುದನ್ನೇ ಕಾಯುತ್ತಿದ್ದೆವು. ಇಲ್ಲವೆ ಮೋಡಗಳಲ್ಲಿ ನವಿಲಾಟವಾಡುತ್ತ ಕಾಯುತ್ತಿದ್ದೆವು. ಕೊಳಲು ನುಡಿಸಿದನೇ, ಸುಖದ ಅಲೆಗಳಾಗಿ ತೇಲುವುದೊಂದೆ ಕೆಲಸ. ಇಂತಿರುವಲ್ಲಿ ಆ ದಿನ ಸಂಜೆ ಚಂದಮುತ್ತ ಹಿಂಡು ದನ ಮೇಯಿಸ್ಕೊಂಡು ಅಟ್ಟಿಸಿಕೊಂಡು, ಹಟ್ಟಿಗೆ ಬಂದು ಕೋಲುಕುಟ್ಟಿ 'ಚಂದೂ ಚಂದಾಣ್ಣಾ ಚಂದಮುತ್ತಾ' - ಹೆಂಗಿದ್ದರೆ ಹಂಗೇ ಎಲ್ಲಿದ್ದರಲ್ಲಿಂದ ಬರಬೇಕೆಂದು ಹೆಗಡೆ ಹೇಳಿದನಪೋ - ಎಂದು ಒದರಿದ್ದರಿಂದ ತುರ್ತಿನ ಕಾರ್ಯವೆಂದು ಅಬ್ಬೆಗೂ ಹೇಳದೆ ಓಡಿದ.

ಹೋಗಿ ನೋಡಿದರೆ ಹೆಗಡೆ ಮನೆಯ ಚಿತ್ರ ಚಾವಡಿಯಲ್ಲಿ ಮುಕ್ಕಾಲು ಮಂಚದ ಮ್ಯಾಲೆ ನೂರೆಂಟು ಬಿರುದು, ಬೆಳ್ಳಿ ಬೆತ್ತದ ದಂಡಸಮೇತ ಒರಗಿ, ಎಲಡಿಕೆ ಮೆಲ್ಲುತ್ತ ಎಡ ಅಂಗೈಯಲ್ಲಿ ಬಲ ಹೆಬ್ಬೆರಳೂರಿ ಸುಣ್ಣದಲಿ ಸೊಪ್ಪಿನ ತುಂಡು ತೀಡುತ್ತ ಕುಂತಿದ್ದಾನೆ ಮಹಾನುಭಾವ! ನೋಡಿದ್ದೇ ಚಂದಮುತ್ತನ ಹೃದಯ ಹೂವಿನಂತರಳಿ ದಡುಬಡನೋಡಿ ದಿಂಡುರಳಿ ಪಾದ ಪಡಕೊಂಡು "ಯಾವಾಗ ಬಿಜು ಮಾಡಿದೆ ಶಿವನೆ?" ಎಂದು ಗುರುಪಾದವ ಮತ್ತೆ ಮತ್ತೆ ಹಣೆಗೊತ್ತಿಕೊಂಡ. ಮಾರ್ಗಾಯಾಸವೆಂದು ಕಾಲೊತ್ತಿ ಪರಿಪರಿ ರೀತಿಯಲ್ಲಿ ಉಪಚರಿಸಿದ. ಇಷ್ಟಾದರೂ ಮಹಾನುಭಾವ ಏನೊಂದೂ ನುಡಿದಾಡದೆ ಕುಂತ ಹೆಗಡೆಯ ಕಡೆ ಮತ್ತವನ ಮಗನ ಕಡೆ ಕುಲಗುರುವಿನ ಕಡೆ, ನಿಂತ ಮಂದಿಯ ಕಡೆಗೆ ನೋಡುತ್ತ ಚಂದಮುತ್ತನ ಭಕ್ತಿಯ ತೋರಿಸಿ ಬೀಗುತ್ತ ಕುಂತ. ಪುರದಿಂದ, ನೇರ ಒಡೆಯನ ಕಡೆಯಿಂದ ಬಂದವನಾಗಿ ಹೆಗಡೆ ಸೈತ ಎಲ್ಲರನ್ನೂ ಹೆದರಿಸಿದ್ದ. ಈಗ ಈ ಕಾಡಿನ ಹೈದರಿಗೆ ತಾನು ಚಂದಮುತ್ತನ ಗುರುವೆಂಬುದು ತಿಳಿದಿರಲೆಂದು ಪ್ರಕಟದನಿಯಲ್ಲಿ 'ಆಹಾ ಚೆಲುವಾಯ್ತು ನನ್ನಾಸೆ ಗೆಲುವಾಯ್ತೆಂ'ದು ಕಿಲಕಿಲ ನಗುತ "ಭೇಶ್ ಮಗನೆ, ನನ್ನ ಅಭಿಮಾನ ಕಾದ ಶಿಷ್ಯ ನೀನೊಬ್ಬನೇ ನೋಡು" ಎಂದು ಹೇಳಿ ಚಂದಮುತ್ತನ ಭಕ್ತಿಯ ದಯಮಾಡಿ ಸ್ವೀಕರಿಸಿ,

"ಗುರುವಿಗೆ ಸಣ್ಣವನಾಗಿ
ಹಟ್ಟಿಗೆ ದೊಡ್ಡವನಾಗಿ ಬಾಳು"

- ಎಂದು ಆಶೀರ್ವದಿಸಿದ. ಇದನ್ನೇ ಕಾಯುತ್ತಿದ್ದ ಹೆಗಡೆ ಚೆನ್ನಮುತ್ತನನ್ನ ಮಹಾನುಭಾವನ ಪಾದಂಗಳ ಮ್ಯಾಲೆ ಚೆಲ್ಲಿ "ಇದಕ್ಕೂ ಒಂದಿಷ್ಟು ವಿದ್ಯಾಬೋಧೆಯಾದರೆ ಧನ್ಯನಾದೇನು ಶಿವನೆ" ಎಂದು ಕೈಮುಗಿದ. ಮಹಾನುಭಾವ ಸಂತೋಷದಿಂದ

"ಹಂಗೇ ಆಗಲೇಳು"

- ಎಂದು ಕೃಪೆ ಮಾಡಿದ. ಆದರೂ ಬೆಂಕಿಯಂತೆ ಉರಿವ ಕಣ್ಣಿನ ಮಹಾನುಭಾವನ ನೋಡಿ ಹೆಗಡೆ ಮತ್ತು ಚೆನ್ನಮುತ್ತನ ಹೊರತು ಮತ್ತ್ಯಾರಿಗೂ ಸಂತೋಷವಾಗಲಿಲ್ಲ.

ಯಾವ ಕಜ್ಜ ಕಾರ್ಯಕೆ ಬರೋಣವಾದಿರೆಂದು ಚಂದಮುತ್ತ ಕೇಳಿ, ಅವನು ಉತ್ತರವ ಮರೆಮಾಚಿ ಗುರುಶಿಷ್ಯರಿಬ್ಬರೇ ವೇಳೆ ಮೀರುವತನಕ ಏಕಾಂತ ಮಾತಾಡಿಕೊಂಡರು. ಅಕ್ಕಪಕ್ಕದ ಸುದ್ದಿ, ಕಾಡು ನಾಡಿನ ಸುದ್ದಿ, ಮಹಾ ಶಿವರಾತ್ರಿಯ ಸುದ್ದಿಯ ಮಾತಾಡುತ್ತ ಮುದಿಜೋಗ್ತಿಯ ಪ್ರಸ್ತಾಪವಾದ ತಕ್ಷಣ ಮಿರಿಲೋಕದಲ್ಲಿ ಯಕ್ಷಿ ಹಾಕಿದ ಆಣೆ ನೆನಪಾಗಿ ಚಂದಮುತ್ತ -

"ಇಲ್ಲಿಂದ ಮುಂದೆ ಕೇಳಿದರೆ ನಿನಗೂ ಕೇಡು

ಹೇಳಿದರೆ ನನಗೂ ಕೇಡು ಗುರುಪಾದವೇ"

- ಎಂದು ಗಪ್ಪನೆ ಗುರುವಿನ ಕಾಲು ಗಟ್ಟಿಯಾಗಿ ಹಿಡಿದುಕೊಂಡ. ಮಾತಿನಲ್ಲಿ ಹೆಚ್ಚು ಕಡಿಮೆ ಬಂದದ್ದನ್ನು ಗಮನಿಸಿ ಮಹಾನುಭಾವನ ಅಭಿಮಾನ ಮುರಿಯಿತು. ಆಯಿತಾಯಿತು ಎಂದು ಕಾವಿ ಬಣ್ಣದ ಹಲ್ಲು ತೋರಿಸಿ ನಗಾಡಿ ಸುಮ್ಮನಾದ.

ಹರನ ಸಮ ಗುರು ಬಂದನೆಂಬ ವಾರ್ತೆಯ ಕೇಳಿ ಲಕ್ಕಬ್ಬೆ ಕರಿಕಂಬಳಿಯ ಮ್ಯಾಲೆ ಸೇಸಕ್ಕಿ ಹುಯ್ದು ಗದ್ದಿಗೆ ಮಾಡಿ ಆಸರೆಗೆ ಹಣ್ಣು ಹಾಲು ಜೇನುಗಳ ಸಜ್ಜು ಮಾಡಿ ವೀಳ್ಯದೆಲೆಯ ಸುಣ್ಣಬುಟ್ಟು ಇಟ್ಟು ದಾರಿ ಕಾದಳು. ಕಾಲ ತಡವಾಗಿ ಮಗ ಬಂದನೇ ಹೊರತು ಗುರು ಬರಲಿಲ್ಲ.

## ೩೪. ಎದುರುಬದುರಾದರು ಗುರುಶಿಷ್ಯರು

ಮಾರನೆ ದಿನ ಚಂದಮುತ್ತ ಕೋಳಿಯ ಕೂಗಿನಲ್ಲಿ ಮಿಂದು ಮಡಿಯುಟ್ಟು ಯಕ್ಷಿಯ ಗುಡಿಗೈದಿ ದಿನದಂತೆ ನೇವೇದ್ಯ ಬಾಗಿನಗಳ ಅರ್ಪಿತ ಮಾಡಿ ಹೊರಬಂದು ಬಾಗಿಲಿಕ್ಕಿಕೊಂಡು ಕಾದುನಿಂತ. ಗಳಿಗೆ ಎಷ್ಟಾದರೂ ಬಾಗಿಲು ತೆರೆಯಲಿಲ್ಲ. ಕಾದು ಕಂಗಾಲಾಗಿ ಮೆಲ್ಲಗೆ ಕದ ತೆರೆದು ಹಣಿಕಿ ಹಾಕಿದ. ವಿಗ್ರಹದ ಮುಂದಿನ ಮಡಿಬಟ್ಟೆ ಹಾಂಗೇ ಇದ್ದ ಚೋದ್ಯದ ನೋಡಿ ದುಃಖ ಗಾಬರಿಯಾಗಿ ಅಂಗಜಲ, ನೇತ್ರಜಲ, ಜಗುಳಿ, ನೆಲ ಒದ್ದೆಯಾದವು. ನನ್ನ ಭಕ್ತಿ ಭಿನ್ನವಾಯಿತೇ! ಎಂದು ಗಡ ಗಡ ನಡುಗಿ ಯಕ್ಷಿಯ ಪಾದದ ಮ್ಯಾಲೆ ಮೈಚೆಲ್ಲಿ ಅಡ್ಡಬಿದ್ದ.

ಅಡಗಿಸಿಟ್ಟ ಕಪಟ ತಂತಾನೆ ಪ್ರಕಟವಾಗುವ ಹಾಂಗೆ ಯಾರೋ ನಕ್ಕದ್ದು ಕೇಳಿಸಿ ಚಂದಮುತ್ತ ಆಸುಪಾಸು ನೋಡಿದ, ಅಕ್ಕ ಪಕ್ಕ ನೋಡಿದ. ಮ್ಯಾಲೂ, ಕೆಳಗೂ ನೋಡುತ ಪರಿಶೋಧನೆ ಮಾಡಿದ. ವಿಗ್ರಹದ ಹಿಂದೆ ಅಡಗಿ ಕುಂತಿದ್ದ ಮಹಾನುಭಾವ ಫಳಾರನೆ ಮಿಂಚುವ ಹಲ್ಲು ತೋರಿಸಿ ನಂಜಿನ ನಗಾಡುತ್ತ ಈಚೆ ಬಂದ. ಘನಘೋರ ಆಘಾತವಾಯ್ತು ಚಂದಮುತ್ತನಿಗೆ.

**ಚಂದಮುತ್ತ :** ನಾನು ಬಾಗಿನವಿಟ್ಟು ಬಾಗಿಲಿಕ್ಕಿಕೊಂಡಾಗ ನೀನು ಒಳಗೇ ಇದ್ದೆಯಾ ಗುರುಪಾದವೇ?

**ಮಹಾನುಭಾವ :** ಹೌದು.

**ಚಂದಮುತ್ತ :** ಯಾಕಾಗಿ?

**ಮಹಾನುಭಾವ :** ನಿನ್ನ ಸತ್ಯ ಕಾಂಬುದಕ್ಕೆ.

**ಚಂದಮುತ್ತ :** ಕಂಡೆಯಾ?

**ಮಹಾನುಭಾವ :** ಆಹಾ ಕಂಡೆನಯ್ಯಾ ಕಂಡೆನು!
ಗೊಲ್ಲ ಕುಲದ ಸೋಜಿಗವ ಕಂಡೆನು!
ಹಟ್ಟಿಯ ಕೀರ್ತಿಶಿಖರದ ಬೆಳಕ ಕಂಡೆನು!
ಲೀಲೆಗಳ ಮರೆವ ಮಹಾ ಲೀಲೆಗಾರ ನೀನು
ನಿನ್ನ ಭಕ್ತಿಗೆ ಕಪ್ಪು ಬಿಳಿಯಾದದ್ದು,
ಬಿಳಿ ಬೆಳಕಿನಲ್ಲಿ ಕಲ್ಲಿನ ಯಕ್ಷಿ
ಹೆಣ್ಣು ದೇವತೆಯಾಗಿ ನಿನಗೊಲಿದದ್ದು ಕಂಡೆನು!

ಕಂಡೆನಯ್ಯಾ ಕಂಡೆನು
ಯಕ್ಷಿ ದಯಮಾಡಿ ನಕ್ಕದ್ದು
ಮೈಲಿಗೆ ಕಳೆದು ಮಡಿಯುಟ್ಟದ್ದು
ಚಂದ್ರಲೋಕದ ಗಾಳಿ ಬೀಸಿದ್ದು ಕಂಡೆನು!

**ಚಂದಮುತ್ತ :** ವ್ಯಂಗ್ಯದ ನುಡಿ ನಿನಗೆ ಶೋಭಿಸುವುದಿಲ್ಲ ಶಿವನೆ.

**ಮಹಾನುಭಾವ :** ನಿನಗೆ ಸುಳ್ಳು ಕೂಡ.

**ಚಂದಮುತ್ತ :** ನಾನೇನು ಸುಳ್ಳು ಹೇಳಿದೆ?

**ಮಹಾನುಭಾವ :** ಹಾಂಗಿದ್ದರೆ ವಿಗ್ರಹ ತಂತಾನೆ ಕೈಯಾರೆ ಯಾಕೆ ಮಡಿ ಉಡಲಿಲ್ಲ?

**ಚಂದಮುತ್ತ :** ಹಾಗೆಂದು ನಾನು ಕೊಚ್ಚಿಕೊಂಡಿಲ್ಲ.

ಮಹಾನುಭಾವ ಮಾತಿನಲ್ಲಿ ಸಣ್ಣವನಾದ. ವಿಗ್ರಹ ಮಡಿಯುಡುವ ವಿಚಾರ ಹೇಳಿದವನು ಚಿನ್ನಮುತ್ತ. ತನ್ನ ತಪ್ಪಿನ ಅರಿವಾಗಿ ಅದನ್ನು ಬಚ್ಚಿಟ್ಟುಕೊಂಡು ಎಡಗೈ ಕಿರು ಉಗುರು ಕಚ್ಚಿ ಮುಗುಳ್ನಕ್ಕು ಹೇಳಿದ.

**ಮಹಾನುಭಾವ :** ಆಯಿತಯ್ಯ,
ರಚನೆಯ ಮಾತು ಬಿಟ್ಟು
ಮುದಿಜೋಗ್ತಿಯ ವೃತ್ತಾಂತ ಹೇಳಯ್ಯ,

ಅವಳಿಂದ ಹ್ಯಾಗೆ ವಿದ್ಯವ ಪಡೆದೆ?
ಎಂಬಿತ್ಯಾದಿ ಒಂದೂ ಬಿಡದೆ ಹೇಳು.

**ಚಂದಮುತ್ತ :** ಶಿವಪಾದವೇ,
ಬಲಗೈ ಭಾಷೆ, ಎಡಗೈನಂಬಿಕೆ ಕೊಟ್ಟು
ಹೇಳುತ್ತೇನೆ, ನನ್ನ ಮಾತು ನಂಬು.
ಜುಲುಮೆಯ ನಿಲ್ಲಿಸಿದರೆ ಇಲ್ಲಿಗೆ
ಇಬ್ಬರಿಗೂ ಹಿತ.

**ಮಹಾನುಭಾವ :** ಹೆಚ್ಚಳ ಪಡಬೇಡವೋ ಗೊಲ್ಲಕುಲದ ಹೊಸಕುಡಿಯೇ, ಈಗಷ್ಟೇ ಕುಡಿ ಬಿಟ್ಟಿದ್ದೀಯಾ, ನೆತ್ತಿಯ ಸುಳಿ ಬಲಿಯುವ ತನಕ ನಿಧಾನಿಸು. ಗುರುವಿಗೂ ಮಿಗಿಲೇನು ಆ ನಿನ್ನ ಮುದಿ ಜೋಗ್ತಿ? ಗುರುದ್ರೋಹ ದೋಷಕ್ಕೆ ಈಡಾಗಬಾರದೆಂಬಲ್ಲಿ ನುಡಿಗಳಿಗೆ ವೇಷ ತೊಡಿಸದೆ ನಿಜವಾರ್ತೆಯ ಹೇಳು.

**ಚಂದಮುತ್ತ :** ಕಿವಿಯ ಸುಖವ ನಾನು ನುಡಿಯಲಾರೆ ಶಿವನೇ.

**ಮಹಾನುಭಾವ :** ಹಾಂಗಿದ್ದರೆ ನೀನೇ ತೂಕ ಮಾಡಿ ಹೇಳಯ್ಯಾ, ತಂದೆಗಿಂತ ನೂರು ಮಡಿ ಹೆಚ್ಚಿನ ಗುರುವಾಗಿ ಬೋಧನೆ ಮಾಡಿದ ನಾನು ಕಮ್ಮಿ; ಆ ಮುದಿಜೋಗ್ತಿ ಹೆಚ್ಚಲ್ಲವೆ ನಿನಗೆ?

**ಚಂದಮುತ್ತ :** ಪೂರ್ವಾಪರವರಿಯದೆ ಮಾತಾಡುತ್ತಿರುವಿ ಗುರುವೆ. ಈ ಮೂಲಕ ರಿಪೇರಿಯಾಗದ ಅಪಾಯಗಳ ಇಬ್ಬರಿಗೂ ತಂದೊಡ್ಡುವಿ ಅಂತ ಗೊತ್ತೇನು?

**ಮಹಾನುಭಾವ :** (ಪ್ರಾಯ ನೋಡಿ ಪಟ್ಟು ಹಾಕುವಂತೆ) ಆಯಿತಯ್ಯ. ದಕ್ಷಿಣೆ ತೆರಬೇಕಲ್ಲವೆ ಗುರುವಿಗೆ ನೀನು? ಗುರುವಿಗೆ, ಗುರು ಕಲಿಸಿದ ಕಲೆಗೆ, ಕಲೆಯೊಂದಿಗೇ ಬರುವ ಅದರ ಪರಿವಾರಕ್ಕೆ. ಕೃತಜ್ಞತೆ ಅಂಬೋದಿದ್ದಲ್ಲಿ ಮುದಿಜೋಗ್ತಿಯ ವೃತ್ತಾಂತವನ್ನೇ ಕೊಡು.

**ಚಂದಮುತ್ತ :** ಕೇಳಿದ ತಪ್ಪಿಗೆ ದುಬಾರಿ ದಂಡ ತೆರಬೇಕಾಗುತ್ತದೆ ನೀನು.

**ಮಹಾನುಭಾವ :** ಹೇಳಿದಿದ್ದರೆ ನೀನು ಕೂಡ.

**ಚಂದಮುತ್ತ :** (ಭಾವೋದ್ರೇಕದಿಂದ) ಹಾಂಗಿದ್ದರೆ ಕೇಳು,
ಒಡೆಯಬಾರದ ಮಾತು ಒಡೆದಲ್ಲಿ
ಹೇಳಕೇಳುವ ನಾವಿಬ್ಬರೂ
ಪ್ರಾಣ ಬಿಡುವುದು ಖಚಿತ.
ಗುಟ್ಟು ಹೇಳಿದ್ದಕ್ಕೆ ನನ್ನೊಬ್ಬನ ಪ್ರಾಣ ಮಾತ್ರ
ಹೋಗುವಂತಿದ್ದರೆ ಆಗಲೆಂದು ಅರ್ಪಿತ ಮಾಡುತ್ತಿದ್ದೆ.
ಆದರೆ ಕೇಳಿದ ನೀನೂ
ನನ್ನ ಜೊತೆಗೇ ನಾಲಗೆ ಹಿರಿದು

ಪ್ರಾಣ ಬಿಡುತ್ತಿ
ಹೇಳಲೇನು?

**ಮಹಾನುಭಾವ :** ಅದೇನೆಂಬುದು ಕೇಳಿಯೇ ಸಾಯುತ್ತೇನೆ, ಹೇಳಯ್ಯಾ, ಎಂದು ಘಟ ಹೋದರೂ ಹಟ ಬಿಡಬಾರದೆಂದು, ಆದರೂ ಜೀವಭಯದಲ್ಲಿ ಅಳ್ಳೆಯ ಅರಳಿಸಿಕೊಂಡು ಕೆಂಡಗಣ್ಣಾಗಿ ನಿಂತುಕೊಂಡ ಮಹಾನುಭಾವ.

"ಹಾಗಿದ್ದರಿಗೋ ಕೇಳು"

- ಎಂದು ನಿರ್ಧಾರವಾಗಿ ನಿಂತಿದ್ದ ಚಂದಮುತ್ತ ಒಂದು ಕ್ಷಣ ಧ್ಯಾನ ತಪ್ಪಿ ಚಿತ್ತ ಮಿಡಿದು ಸುಮ್ಮನಾದ. ಸುಮ್ಮನಾಗುವ ಅಗತ್ಯವಿತ್ತು ಅವನಿಗೆ. ಸಾವಿನ ಭಯದಿಂದಲ್ಲ. ಹೇಳುವ ಮುನ್ನ ಸಾವಿರಾರು ಕನಸುಗಳನ್ನು ಬಲಿಕೊಡಬೇಕಾಗಿತ್ತು. ಒಂದೊಂದು ಕನಸೂ ಕರುಳಿಗಂಟಿಕೊಂಡು ಬೆಳೆದಿತ್ತು.

ಸಿದ್ಧಿ ಒಂದು ಶಾಪ, ಪ್ರಸಿದ್ಧಿ ಇನ್ನೊಂದು ಶಾಪ. ಪ್ರಸಿದ್ಧಿಯಾಸೆ ಅಸೂಯೆ ಹುಟ್ಟಿಸಿ ಮಹಾನುಭಾವನ ಎದೆಯಲ್ಲಿ ನಾಟಿ ಗಾಯ ಮಾಡಿತ್ತು. ಗುಣ ಹೊಂದುವ ಲಕ್ಷಣಗಳಿರಲಿಲ್ಲ. ಕೀಳುಗೀಳಿಗೆ ಗಂಟುಬಿದ್ದು ಚಂದಮುತ್ತನ್ನ ಗೋಳು ಗೋಳೆಂದು ಕಾಡಿಸಿ ಪೀಡಿಸಿ ಅವನು ತನ್ನ ಸತ್ಯಗಳನ್ನು ವ್ಯರ್ಥ ತೇಯುವ ಹಾಗೆ ಮಾಡಿದ. ಆದರೆ ಕೊನೆಯಲ್ಲಿ ಇಬ್ಬರ ವಾದ ಈ ಘಟ್ಟ ತಲುಪೀತೆಂದು, ಆತ್ಮಹತ್ಯೆಗಿಬ್ಬರೂ ಸಿದ್ಧರಾದರೆಂದು ನಮಗ್ಯಾರಿಗೂ ಅಂದಾಜಾಗಿರಲಿಲ್ಲ.

ಅಷ್ಟೂ ಕನಸುಗಳನ್ನು ಬಲಿಕೊಟ್ಟು ಚಂದಮುತ್ತ ಕಣ್ಣುಮುಚ್ಚಿ ಹೆತ್ತಯ್ಯ ಮುತ್ತಯ್ಯರ ನೆನೆದು, ಲಕ್ಕಬ್ಬೆ, ಕಪಿಲೆ, ಚಕೋರಿ ಎಂಬ ಯಕ್ಷಿಯ ನೆನೆದು, ಹಂಕಾರ ಪಡುವವರ ಬೆಂಕೀಲಿ ಸುಡುವ ಕೆಂಡಗಣ್ಣ ಸ್ವಾಮಿ ಶಿವನ ನೆನೆದು ಹೇಳುವುದಕ್ಕೆ ಬಾಯಿ ತೆಗೆದ ನೋಡು –

ಅಷ್ಟರಲ್ಲಿ ಯಕ್ಷಿ ಗುಡಿಯ ದ್ವಾರಬಾಗಿಲು ಧಡಾರನೆ ಮುಚ್ಚಿಕೊಂಡಿತು. ಇಬ್ಬರೂ ಆ ಕಡೆ ನೋಡಿದರು. ಮಹಾನುಭಾವ ಹೇಳಬೇಡವೆಂದು ಕೈಸನ್ನೆ ಮಾಡಿ ಸೂಚಿಸಿ ಆಗಲೇ ತನ್ನನಗಲಿದ್ದ ಉಸಿರನ್ನ ದೀರ್ಘವಾಗಿ ತಗೊಂಡು ಮೈಯಂತ ಮೈಯೆಲ್ಲ ಜಲಜಲ ಬೆವರಿ ಕುಸಿದ. ಸುಧಾರಿಸಲು ಸಮಯವೇ ಹಿಡಿಯಿತು. ಅಷ್ಟರಲ್ಲಿ ಗುಡಿಯ ದ್ವಾರ ಬಾಗಿಲು ತೆರೆಯಿತು. ಮೈಲಿಗೆ ಬಟ್ಟೆ ಹೊರಕ್ಕೆ ಬಿತ್ತು. ಹೋಗಿ ನೋಡಿದರೆ ಯಕ್ಷಿಯ ಮೈಮ್ಯಾಲೆ ಮಡಿಬಟ್ಟೆಯಿತ್ತು. ಅರ್ಥವಾಗಿ ನಕ್ಕ ಮಹಾನುಭಾವ

"ಇಷ್ಟಾದ ಮ್ಯಾಕೆ ನನ್ನವರ್ಯಾಕೆ ತನ್ನವರ್ಯಾಕೆ?"

ಎಂದುಕೊಳ್ಳುತ್ತ ಹೇಳಕೇಳದೆ ಹಟ್ಟಿಯ ಕಡೆಗೆ ನಡೆದ. ನಾನು ಕಾರಣವಾಗಿ ಮಾನಕ್ಕೆ ಹೀನಾಯವಾದರೂ ಇಂತೆಂಬ ಕಷ್ಟನಿಷ್ಠುರದಿಂದ ಪಾರು ಮಾಡಿದೆಯಲ್ಲ ದೇವೀ ಎಂದು ಚಂದಮುತ್ತ ಯಕ್ಷಿಯ ಪಾದಕ್ಕೆ ಹಣೆ ಗಟ್ಟಿಸುತ್ತಿರಬೇಕಾದರೆ -

## ೩೫. ಏನೆಂದು ಚಿಂತಿಯ ಮಾಡಿದಳು?

ಈ ಕಡೆ ಹಾಡಿಯಲ್ಲಿ ಏನು ಕಥೆ ನಡೆಯಿತೆಂದರೆ, ಪುಣ್ಯಕೋಟಿ ಲಕ್ಕಬ್ಬೆಗೆ ಚಂದಮುತ್ತನ ಚಿತ್ರ ಚರಿತ್ರದ ಬಗ್ಗೆ ಚೋದ್ಯದ ಸುದ್ದಿ ತಲುಪಿ ಆಘಾತವಾಗಿತ್ತು. ಮಗನಿಲ್ಲದಾಗ ಮಗನ ಗುರುದೇವ, ಅದೇ ಆ ಮಹಾನುಭಾವ ಬಂದು "ಯಕ್ಷಿಯ ಸಂಗವಾಗಿದೆ ಮಗಂಗೆ; ಕಾಪಾಡಿಕೊ" ಎಂದು ಅವನು ಹೇಳಿ, ಇವಳು ಕೇಳಿದ್ದೇ ಆಯ್ತು ನೋಡು ಬೋಧೆ ತಪ್ಪಿಬಿದ್ದಳು. ಸ್ಮೃತಿ ಬಂದಾಗ ಮಹಾನುಭಾವ

ಇರಲಿಲ್ಲ. ಕಣ್ಣಿಂದ ಜಲಬಿಂದು ಜಗುಳಿ ಮುದುಕಿಯ ಆನಂದಗಳು ಇದ್ದಿಲಾದವು. ನೆಲಮುಗಿಲುಗಳಿಗೆ ತನ್ನ ದುಃಖವ ತೋಡಿಕೊಂಬಂತೆ ಮ್ಯಾಲೂ, ಕೆಳಗೂ ನೋಡಿ,

ಶಿವನೇ ಸಲವಬೇಕು ನೀ ನಮಗ
ಎತ್ತು ಬಗಲಾಗ

- ಎಂದು ಶಿವದುಃಖ ಮಾಡುತ್ತ,

ಹೂವಿನ ವಿನ್ಯಾಸದ
ಮೂರ್ಕಾಲಿನ ಮಂಚವನೊರಗಿ
ಮುಂಗೈ ಮ್ಯಾಲೆ ಗದ್ದವ ಹೇರಿ ಗುಮಾನಿ ಬಂದು
ಚಿಂತಿಯ ಮಾಡಿದಳು.
ಏನೆಂದು ಚಿಂತಿಯ ಮಾಡಿದಳು?
ಎಲ ಎಲ, ಹೌಂದಲ್ಲ!
ಮಂದಮತಿಗೆ ಹೊಳೆದಿರಲಿಲ್ಲ.

ರಾತ್ರಿಯಿಡೀ ಎಲ್ಲೆಲ್ಲೊ ಅಲೆದಾಡಿ ಬರುವ
ಸುಖ ಸುರತದಲ್ಲಿ ಅದ್ದಿ ಬಂಧಂಗಿರುವ
ಮುರಿದ ಶಬ್ದಗಳಲ್ಲಿ ಏನೇನೊ ಕನವರಿಸುವ
ಆಡುತಾಡುವ ಶಬ್ದಗಳ ಮರೆವ
ನೋಡಿ ನೋಡದ ಹಾಗೆ ನುಡಿಸದೆ ಹೋಗುವ
ಹತ್ತಿರ ಬಂದರು ತಾತ್ಸಾರ ಮಾಡುವ
ಎಲೆ ಮರೆಯ ಪರಾಗಭರಿತ ಹೂವಿಗಾಗಿ
ದುಂಬಿಯಂತೆ ಹಂಬಲಿಸುತ್ತ
ಸದಾ ಪರಾಗ್ಯಾನ ಪರಚಿತದಲ್ಲಿರುವ !

ಇದೆಲ್ಲ ಹೆಣ್ಣಿನ ಸಂಗದೋಷವಲ್ಲವೆ?
ಹೆಣ್ಣೆಂದರೆ ಇವನಿಗೆ ಯಕ್ಷಿಯ ವಿನಾ ಇನ್ಯಾರು?

ಈಗೊ ಇನ್ಯಾವಾಗೊ ಹರಣ ಹಾರ್ಯಾವೆಂದು
ಹಾಗೂ ಹೀಗೂ ಕಾದು ಹ್ಯಾಗೊ ಬದುಕಿದ್ದೇನೆ.
ಹ್ಯಾಗಿರುವಿ ಎಂದೊಮ್ಮೆ ಕೇಳಿದನ?
ಇವನಿಗೆ ಹತ್ತಿದೆ ಅಮರಿದ ವ್ಯಸನ.
ತಂದೆಯಿಲ್ಲದ ಕಂದನೆಂದು ಕೊಂಡಾಟದಲ್ಲಿ ಬೆಳೆಸಿದರೆ
ಬೇಲಿಯಿಲ್ಲದ ಬದುಕಾಯಿತಲ್ಲ ಮಗಂದು!
ಇದನು ಅನ್ಯರಿಗೆ ಹೇಳಲಮ್ಮೆ ಶಿವನೆ ಕೇಳಲಮ್ಮೆ.

ಈಗಿವನಿಗೆ ನೀತಿನುಡಿ ಹೇಳಬಲ್ಲವನು ಕುಲಗುರವೆ ಸೈ ಎಂದು
ಬುದಿಂಗನೆದ್ದು ಕುಲಗುರವಿನಲ್ಲಿಗೆ ಓಡಿದಳು: ನಮಸ್ಕಾರವ
ಮಾಡಿ, ಏನ್ಹೇಳ್ಲಿ ನನ್ನಪ್ಪ ಚಂದಮುತ್ತ.

ಒಂದರಿತು ಇನ್ನೊಂದನರಿಯದ ಕಂದನ
ನಡೆ ಚೋದ್ಯವೋ ಶಿವನೆ ನುಡಿ ಚೋದ್ಯ । ನೀನಾರೆ
ಹೇಳಬಾರದೆ ನೀತಿನುಡಿಯ ॥

ಕ್ಷಣ ನಕ್ಕು ದಿನವೆಲ್ಲ ಹುಬ್ಬುಗಂಟಾಗುವನು
ಹೃದಯಕ್ಕೆ ಬಾಹಿರಳ ಮಾಡಿ । ನೋಡುವನು
ಮುಳ್ಳಿರುವ ನೋಟಗಳ ಬೀರಿ ॥

ಚಂದ್ರನ ಕಲೆಯಂಥ ಕಲೆಗಳು ಮೂಡ್ಯಾವು
ಕಂದನ ಕೆನ್ನೆಯಲಿ ದಿನವು । ಕಣ್ಣಲ್ಲಿ
ದಣಿದ ಸುಖ ಆಕಳಿಸತಾವು ॥

- ಎಂದು ಹಾಡಿಕೊಂಡತ್ತಳು. ಯಕ್ಷಿಯ ಸಂಗವಾಗಿದೆಯಂತೆ ಮಂಗಂಗೆ ಕವಡೆ ಚೆಲ್ಲಿ ಶಾಸ್ತ್ರ ನೋಡು ನನ್ನಪ್ಪಾ ಎಂದು ಜಲಜಲ ಕಣ್ಣೀರು ಸುರಿಸಿದಳು.

ತಾಯಿ ನುಡಿ ಸಾದ್ಯಂತ ಕೇಳಿ ಕಳವಳ ವೇದ್ಯವಾಗಿ ಕುಲಗುರು ಶಿಷ್ಯನ ಬಗ್ಗೆ ಚಿಂತಿಸುತ್ತ ಚೌಕಚಿತ್ತಾರದ ಮಣೆ ಮ್ಯಾಲೆ ಕಂತೆ ಹಾಸಿ ಕವಡೆಗಳ ತಂದು ಬೆಟ್ಟದ ಕಡೆ ಮುಖ ಮಾಡಿ ಸಿರಿಮಾಯಿಯ ಧ್ಯಾನಿಸಿದ. ಆಮ್ಯಾಲೆ ಭಕ್ತಿಯಿಂದ ಕವಡೆ ಚೆಲ್ಲಿ ಬೆರಳೆಣಿಸಿ, ಗಣಿತ ಗುಣಿಸಿ ಲೆಕ್ಕಾಚಾರ ಹಾಕಿ ಗಂಭೀರವಾಗಿ ಹೇಳಿದ.

**ಕುಲಗುರು :** ಹೌದು ಅಬ್ಬೆ.
ಮಗಂಗೆ ಯಕ್ಷಿಯ ಸಂಗವಾಗಿದೆಯೆಂದು
ಶಾಸ್ತ್ರ ಹೇಳುತ್ತದೆ.

**ಲಕ್ಕಬ್ಬೆ :** ಅಯ್ಯೊ ಅಯ್ಯೊ ನಾನು ಕೇಳಿದ್ದು
ನಿಜವಾಗಿದೆಯಲ್ಲಪ್ಪ

**ಕುಲಗುರು :** ಆದರವಳು ನೀನಂದುಕೊಂಡಂತೆ
ಸೇಡುಮಾರಿ ಯಕ್ಷಿಯಲ್ಲ ಅಬ್ಬೆ.

**ಲಕ್ಕಬ್ಬೆ :** ಅವಳು ಆಕಾಶದ ತುದಿಯಲ್ಲಿರುವವಳು
ನಮಗೆ ದೇವರೊಂದಿಗೆ ಒಗೆತನ
ಅಥವಾ ವೈರ ಸಾಧ್ಯವೆ ಶಿವನೆ?

**ಕುಲಗುರು :** ಸಮಾಧಾನ ಮಾಡಿಕೊ ಅಬ್ಬೆ.
ಚಂದಮುತ್ತ ನಿನಗೆ ಮಗನಾದರೆ ನನಗೆ ಶಿಷ್ಯ.
ಶಾಸ್ತ್ರ ರೀತ್ಯಾ ಲಾಭಾಂಶಗಳೇ ಜಾಸ್ತಿಯಿವೆ
ಈ ಒಗೆತನದಲ್ಲಿ.

**ಲಕ್ಕಬ್ಬೆ :** ಅವಳು ಎಷ್ಟೆಂದರೂ ಬ್ಯಾರೆ ಸೀಮೆಯವಳು.
ಹಸಿರು ಕಣ್ಣವಳು, ಕರಾಳ ವಿದ್ಯೆ ಬಲ್ಲವಳು.
ಅವಳ ಕಟ್ಟಳೆ ಹ್ಯಾಗಿದೆಯೊ!
ಅವಳ ಜೊತೆ ವ್ಯವಹರಿಸಲಿಕ್ಕೆ
ನಿನ್ನ ಜಾಣ್ಮೆ ಸಾಲದೇ ಬರಬಹುದು ಅಂತ
ತಿಳಿಹೇಳಿ ಮಗನ ಪಳಗಿಸು ಶಿವನೇ.

**ಕುಲಗುರು :** ನಮ್ಮಳವು ಮೀರಿದ ಸತ್ಯಗಳು ಬೇಕಾದಷ್ಟಿವೆ ಅಬ್ಬೆ;
ಅವುಗಳನ್ನ ಶಿವ ನೋಡಿಕೊಳ್ಳುತ್ತಾನೆ. ಮಗನನ್ನ
ಹ್ಯಾಂಗೊ ಯಕ್ಷಿಗೆ ಗುಡ್ಡ ಬಿಟ್ಟಿರುವಿ. ಇನ್ನವನ
ಆಗುಹೋಗು ಅವಳದಲ್ಲವೆ? ನೀನು ಯಕ್ಷಿಯ
ಮೀಯಿಸಿದ ದಿನ ಕಾರಣಿಕದಲ್ಲಿ ನಿನ್ನನ್ನವಳು ಅತ್ತೆ ಅಂದದ್ದು
ನೆನಪಿದೆಯ ಅಬ್ಬೆ?

**ಲಕ್ಕಬ್ಬೆ :** ಆಹಾ ಹೌದು ಶಿವನೇ!
ಎಂದು ನೆನಪಾಗಿ ತಾಯಿ
ಸಳಸಳ ಪುಳಕ ಜಲದಲ್ಲಿ ಅದ್ದಿಹೋದಳು.

**ಕುಲಗುರು :** ಅಂದಿನಿಂದ ಚಂದಮುತ್ತನ ಕೀರ್ತಿ ಹಬ್ಬಿದೆ.
ನಮ್ಮ ಕಾಡು ಹೆಚ್ಚು ಹಸಿರಾಗಿದೆ.
ಕೊಟ್ಟಿಗೆಯಲ್ಲಿ ದನಕರು, ಕಾಡಿನಲ್ಲಿ ಜೇನು,
ಹಣ್ಣು ಹೆಚ್ಚಿಲ್ಲವೆ?
ನಮ್ಮ ಕೂಸುಗಳು ಹೆಚ್ಚು ಹೆಚ್ಚು ಹಡೆಯುತ್ತಿಲ್ಲವೆ?
ಹೆರಿಗೆಯಾದ ಒಂದು ಮಗುವೂ ಸತ್ತಿಲ್ಲ; ಸಾಕಲ್ಲವೆ?
ಚಂದಮುತ್ತ ಸಣ್ಣ ಹರೆಯದಲ್ಲಿ
ದೊಡ್ಡದನ್ನು ಸಾಧಿಸಲು ತಪಿಸುತ್ತಿದ್ದಾನೆ.
ಯೋಗ ಭಾಗ್ಯ ಹಾಂಗಿದ್ದರೆ ಹಂಗೇ ಆಗಲೇಳು.
ನಿನ್ನ ಗೋಳುಗಳಿಂದವನ ವ್ರತಭಂಗ ಮಾಡಬೇಡ.
ಯಕ್ಷಿಯನ್ನ ಸೊಸೆಯಾಗಿ ಪಡೆದುದಕ್ಕೆ
ಕುಲದೇವರ ಹಬ್ಬ ಮಾಡಬೇಡ ನೀನು
ಹೋಗು ಹೋಗು.

- ಎಂದು ತಿಳಿಹೇಳಿ ಕಳಿಸಿದ. ಮಗನನ್ನ ಇನ್ನೊಮ್ಮೆ ಕಳಕೊಂಡಂತೆ ಗೋಳಾಡಿದಳು ಮುದುಕಿ. ಆಮೇಲಾಮೇಲೆ ತಾಯಿಗೆ ವಿಚಿತ್ರ ಅನುಭವಗಳಾದವು. ಒಮ್ಮೊಮ್ಮೆ ಹೊಸ ಲೋಕದ ಹೆಸರಿಸಲಾಗದ ಸುಖದ ಸನ್ನಿಧಿಯಲ್ಲಿದ್ದಂತೆ ಅಕಾರಣ ಆನಂದಗಳ ಅನುಭವಿಸಿದಳು. ರಾತ್ರಿ ಹೊಳಹುದೋರದ ಶಾಂತ ಬೆಳಕು ಗೂಡಿನ ತುಂಬ ಸುಳಿದಾಡಿದ್ದ ಕಂಡಳು. ಮಗನೊಂದಿಗೆ ತನ್ನ ಗೂಡಿಗೆ ಯಾರೋ ಅತಿಥಿ ಬಂದ ಹಾಗೆ, ಗಾಳಿಯಲ್ಲಿ ಗಾಳಿಯಾಗಿ ಸಂಚರಿಸಿದ ಹಾಗೆ ಅನಿಸಿಕೊಂಡಳು. ದನಕರು ಅನೇಕ ಬಾರಿ ಇದ್ದಕ್ಕಿದ್ದಂತೆ ಕಿವಿ ನಿಮಿರಿ ಕಣ್ಣುಗಳ ಅಗಲವಾಗಿ ತೆರೆದು, ರೆಪ್ಪೆ ತುಳುಕದೆ, ನಿಶ್ಯಬ್ದವಾಗಿ ತನ್ನ ಅಥವಾ ಮಗನ ಹಿಂದೆ ಅಥವಾ ಮುಂದೆ ಅಥವಾ ಅಕ್ಕಪಕ್ಕ ನೋಡುತ್ತ ಮೈಮರೆಯುತ್ತಿದ್ದವು.

ಏನೇ ಆದರೂ ಯಕ್ಷಿ ನೆತ್ತರಲ್ಲಿ ಹುಟ್ಟಿದವಳಲ್ಲ. ನೀರಲ್ಲಿ ಬೆಳೆದವಳಲ್ಲ. ಅವಳೇನು ಉಂಡುಟ್ಟು ಬಾಳುವ ಹೆಣ್ಣೆ? ಇಲ್ಲಿಗೆ ತನ್ನ ಸಂತಾನ ಸಮಾಪ್ತಿಯಾಯಿತೆಂದು ನೆನಪಾದೊಡನೆ ಬೆಲ್ಲದಂಥಾ ಮನಸ್ಸು ಬೇವಾಗಿ ಹಡೆದ ಒಡಲಿಗೆ ಕೆಂಡ ತುಂಬಿದೆಯೇ ಮಾಯಿ - ಎಂದು ಏಳೇಳು ಲೋಕದ ಶಿವದುಃಖ ಮಾಡುತ್ತ ಕೂರುತ್ತಿದ್ದಳು. ಮಗನ ಪಳಗಿಸಲಾರೆನೆಂಬ, ಆಗುವ ಅನಾಹುತವ ತಪ್ಪಿಸಲು ತನ್ನಿಂದಾಗದೆಂಬ ನಿರ್ಧಾರಕ್ಕೆ ಬಂದಂತಿದ್ದಳು ಮುದುಕಿ. ನಾವೇನು ಹೇಳಿದರೂ ಅದಕ್ಕೆ ಕಲ್ಲಿನಂತೆ ಇಲ್ಲವೇ ಕಾಡಿನಂತಿರುತ್ತಿದ್ದಳು. ದಿನಾ ಕ್ಷೀಣಿಸುತ್ತಾ ಯಾವಾಗ ನೋಡಿದರೂ ಗುಟ್ಟಾಗಿ ಅತ್ತ ಹಾಗಿರುತ್ತಿದ್ದಳು. ತನ್ನಷ್ಟಕ್ಕೆ ತಾನು ಮಾತಾಡಿಕೊಳ್ಳುತ್ತಿದ್ದಳು. ನಮಗೆ ಆ ಮಾತು ಕೇಳಿಸುತ್ತಿರಲಿಲ್ಲ, ಕೇಳಿದರೂ ತಿಳಿಯುತ್ತಿರಲಿಲ್ಲ.

## ೩೬. ನಖಶಿಖಾಂತ ಉರಿದೆವು

ನಮ್ಮ ಕಥೆಗೆ ಒಂದಿನಿತೂ ಒದಗದ ಮಹಾನುಭಾವ ಮರೆವಿಗೆ ಸಂದು ಆರೆಂಟು, ಚಂದ್ರರು ಕಳೆದರು. ಈ ಮಧ್ಯೆ ಚಂದಮುತ್ತ ತಿಂಗಳುರಾಗದ ಕಠಿಣ ವ್ರತಾಚರಣೆಯಲ್ಲಿದ್ದಾನಾಗಿ ಘಟಿತಂಗಳೇನೂ ನಡೆಯಲಿಲ್ಲ.

ಅದೇನು ವ್ರತಾಚರಣೆಯೋ, ಚಂದಮುತ್ತ ದಿನಾ ತಾರೆ ಅಡಗಿ ತಾವರೆ ಅರಳುವ ಹೊತ್ತಿಗೆದ್ದು ಜಳಕವ ಮಾಡಿ ಜಡೆಕಟ್ಟಿ ಲಂಗೋಟಿ ಹಾಕಿಕೊಂಡು, ಮುಂಜಾನೆಯ ಹಾಲುಗಂಜಿ ಉಂಡು ಒಡಲ ತಂಪೇರಿಸಿಕೊಂಡು ಕಾಡು ಹೊಕ್ಕನೆಂದರೆ ಹೊರ ಬರುವುದು ಯಾವಾಗಲೊ. ವ್ರತಾಚರಣೆಯ ವಿಧಿಗಳು ಬೋರು ಬೋರೆಂದು ನಾವ್ಯಾರೂ ಆ ಕಡೆ ಸುಳಿಯಲಿಲ್ಲ. ಆ ದಟ್ಟ ಕಾಡಿನಲ್ಲಿ ಗಿಡಬಳ್ಳಿಗಳ ಅಡಿ ಪೊದರು ಕಡಿದು, ಮೇಲು ಪೊದರು ಸವರಿ ದಾರಿಮಾಡಿಕೊಂಡು ಚಂದ್ರಮುತ್ತನಿದ್ದಲ್ಲಿಗೆ ಹೋಗುವಷ್ಟು ಆಸಕ್ತಿ ನಮ್ಮಲ್ಲಿರಲಿಲ್ಲ.

ಚಂದ್ರಮುತ್ತ ಯಕ್ಷಿಯ ಸ್ನೇಹವ
ಚಪ್ಪರಿಸಿ ಸವಿದನೆಂದು
ಪರಾಗಭರಿತ ಹೂವಿನಲ್ಲಿ ದುಂಬಿ
ಹುದುಗಿ ಹೋಯಿತೆಂದು

ಪ್ರಿಯವಾದ ಚಾಡಿಗಳ ಹಾಡುಮಾಡಿ ಚಂಡಿನ ಹಾಗೆ ಅವುಗಳನ್ನು ನಮ್ಮ ಮಧ್ಯೆ ಎಸೆದಾಡುತ್ತ ಪರಸ್ಪರ ಚುಡಾಯಿಸುತ್ತ ಯಕ್ಷಿಯ ಗುಡಿಯ ಮ್ಯಾಲಿನ ಮೋಡಗಳಲ್ಲಿ ನವಿಲಾಟವಾಡುತ್ತ ಕಾಲ ಕಳೆಯುತ್ತಿದ್ದೆವು.

ಆದರೆ ಯಾವಾಗಂದರೆ ಆವಾಗ ಕೊಳಲ ತಾಲೀಮಿನ ದನಿ ಕೇಳಿಸಿ ಕಿವಿ ನಿಮಿರಿ ನಿಲ್ಲುತ್ತಿದ್ದೆವು. ನಾವು ಹಿಂದೆಂದೂ ಕೇಳರಿಯದ ನಾದಂಗಳು, ಹಾಡಿನ ತುಂಡುಗಳು ಪರಿಮಳದಂತೆ ತೇಲಿಬಂದು ಪರವಶಗೊಳಿಸುತ್ತಿದ್ದವು. ಜನ್ಮ ಜನ್ಮಾಂತರದ ಆಳದ ಸುಖ ಅಥವಾ ನೋವಿನ ಮ್ಯಾಲೆ ಯಾರೋ ಬೆರಳಾಡಿಸಿದಂತೆ ತನ್ಮಯರಾಗುತ್ತಿದ್ದೆವು.

ಚಂದಮುತ್ತನ ನಡೆನುಡಿಗಳಿಗೆ ಈಗ ಅಸಾಮಾನ್ಯ ಘನತೆ ಒದಗಿತ್ತು. ಅವನೊಂದು ಹೆಜ್ಜೆಯಿಟ್ಟರೂ ಅದರಲ್ಲಿ ನಿರ್ಧಾರ ಮತ್ತು ಛಲಗಳಿದ್ದುವಾಗಿ ನಡೆಯುವಾಗ ನಾವರಿಯದ ಯಾವುದೋ ಲೋಕದ ಜಬರ್ ದಸ್ತ್ ಸಾಮ್ರಾಟನಂತೆ ಕಾಣುತ್ತಿದ್ದ. ಜೋಡಿ ಚಂದ್ರಾಮರಂಥ ಅವನ ಕಣ್ಣುಗಳಿಗೆ ಕ್ಷಿತಿಜದಾಚೆಗಿನ ದನಕರುಗಳೇನು, ಚಂದ್ರನಲ್ಲಿಯ ಜಿಂಕೆ ಕೂಡ ಕಾಣುತ್ತಿತ್ತು. ಬೀಜ ಬಿರಿಯುವ ಶಬ್ದ, ಚಿಕ್ಕೆ ತಾರೆಯರ ರೆಪ್ಪೆ ದನಿ ಕೂಡ ಕೇಳಿಸುತ್ತಿತ್ತು. ಅವನ ಕಿವಿಗಳಿಗೆ ಅವನ ಮೈಯಂತ ಮೈಯೆಲ್ಲ ಜಗ ಜಗ ಹೊಳೆಯುತ್ತಿತ್ತು. ಕೊಳಲು ನುಡಿಸುತ್ತಿದ್ದ ನೇರ ಶಿವನಿಗೇ ಕೇಳಿಸುವಂತೆ, ಕೇಳಿ ಶಿವ ಕೂತಲ್ಲೆ ಮೈಮರೆಯುವಂತೆ. ಸಣ್ಣವನಾದರೂ ಧರೆಗೆ ದೊಡ್ಡ ಸಾಧನೆಯಲ್ಲಿ ತೊಡಗಿದ್ದಾನೆಂದು ನಮಗೆ ಖಾತ್ರಿಯಾಗಿತ್ತು. ಆ ಸಾಧನೆ ಸೋಮವಾರ ಹುಣ್ಣಿವೆಯೆಂದು ಮಂಗಳವಾಗಲಿದೆಯೆಂದು, ಅವನ ಸಾಧನೆಯ ಸಿದ್ಧಿ ಫಲಂಗಳು ಅಂದೇ ಸಿಕ್ಕಲಿವೆಯೆಂದು ಸುದ್ದಿ ಕೇಳಿದ್ದೇ ನಾವೆಲ್ಲ ಭಾವಪರವಶರಾದೆವು. ಕಲಾವಿದರೆಲ್ಲ ಕನಸುಗಾರರೇ. ಆದರೆ ಚಂದಮುತ್ತನ ಹಾಗೆ ನಮ್ಮನ್ನು ಕರುಳಿಗಂಟಿಸಿಕೊಂಡವರಿಲ್ಲ. ಸುದ್ದಿ ಕೇಳಿ ನಮ್ಮಲ್ಲಿಯ ಕೆಲವರು ಬುಟ್ಟಿ ತುಂಬ ಬಣ್ಣದ ಹೂ ಹರಿದು ಆಕಾಶಕ್ಕೆ ಎರಚಿ ಹೂಮಳೆಯಲ್ಲಿ ನಿಂತು ಆನಂದವ ಆಚರಿಸಿದರು. ಇನ್ನೊಬ್ಬ ನೂರೊಂದು ಕಿರಣಗಳ ಪಂಚೈದು ಬಣ್ಣದ ಹೂವುಗಳಿಂದ ಮಳೆಬಿಲ್ಲು ಮಾಡಿ ಆಕಾಶವ ಸಿಂಗರಿಸಿದ. ಒಬ್ಬ ಯಕ್ಷಿಯ ಬಗ್ಗೆ ರಾಗ ರಚನೆಯ ಕಟ್ಟಿ ಕವಿ ಮಾಡಿ ಹೀಗೆ ಪದ ಹಾಡಿದ:

ತಿಂಗಳ ನಗೆಯವಳೊ
ನಮ್ಮ ಯಕ್ಷಿ । ಚಿಕ್ಕೆಗಳ ಮುಡಿಯುವವಳೊ
ಎದ್ದುನೋಡೊ ಮುದ್ದು ಚಂದ್ರಾಮ । ಕಾಡಿನಲಿ
ಕೈಲಾಸ ತೂಗಿರುವಳೊ ॥

ಗಿಂಡಿಯ ಮೊಲೆಯವಳೊ
ಚಿನ್ನದ ಚೊಂಬಿನ ಮೊಲೆಯವಳೊ
ಚಿನ್ನದ ಚೊಂಬಿನ ಮೊಲೆಯಿಂದ । ಬೆಳಕಿನ
ನೊರೆಹಾಲ ಸುರಿವವಳೊ ॥
ಹಾಡಿಗೆ ಒಲಿಯುವಳೊ
ಹುರಿಗೊಂಡ । ನಾದದಲಿ ಅಡಗಿರುವಳೊ
ಗುಂಗುಗುಂಗಿನ ನಾದ ಗುಂಭದ । ಒಳಗಿಂದ
ಹಾಡಾಗಿ ಹೊಮ್ಮುವವಳೊ ॥

ಚಂದಮುತ್ತನ ವ್ರತಾಚರಣೆಯ ಸಿದ್ಧಿಗೆ ಯಾವ ಕಂಟಕಗಳೂ ಬಾರದಿರಲೆಂದು ಎಳೆಯ ಸರಳನೊಬ್ಬ ಕೆಸರು ಮಣ್ಣಿನಲ್ಲಿ ಕಂಟಕ ನಿವಾರಕ ಬೆನಕನ ಮೂರ್ತಿಯ ಮಾಡಿ ಅಡ್ಡಬಿದ್ದ. ಇಲ್ಲಿಯೇ ಬಿಕ್ಕಟ್ಟಾಯಿತು ನೋಡು. ಇನ್ನೊಬ್ಬ ಮುಂದೆ ಬಂದು ಬೆನಕನಿಗೆ ಮಜ್ಜನ ಮಾಡಿಸೋಣವೆಂದು ಮೂರ್ತಿಯ ಮ್ಯಾಲೆ ನೀರು ಸುರಿದ.

ಅಯ್ಯಯ್ಯೋ ಪಾಪವೇ ! ಅಕಟಕಟಾ ಕರ್ಮವೇ!
ಕೆಸರಿನ ಬೆನಕ ಭಿನ್ನವಾಗಿ
ಕೈಕಾಲೊಂದು ಕಡೆ, ಸೊಂಡಿಲೊಂದು ಕಡೆ ಬಿದ್ದು
ಮೂರ್ತಿಯ ಮಾಡಿದಾತ ದೊಡ್ಡ ದನಿ ತೆಗೆದು
ಬಾಯಿ ಬಡಕೊಂಡತ್ತ.
ಸುರುವಾಯಿತು ವಿರಸ.

ಉರಿದೆವು ನಖಶಿಖಾಂತ.
ಕನಸುಗಳು ಇತ್ತಂಡಗಳಾಗಿ
ಸುಡುಸುಡುವ ಮಾತು ಸುರಿದೆವು
ಪರಸ್ಪರರ ಮ್ಯಾಲೆ.
ರಾತ್ರಿ ಸಮ್ಮನಿರದೆ ಅಬ್ಬೆಯ ನಿದ್ದೆಗೂ ನುಗ್ಗಿ
ಬೆಳ್ಳೆಂಬೆಳಗು ಜಗಳವಾಡಿ
ಹುಡದಿಯಾಡಿದೆವು
ಕಠಿಣೋಕ್ತಿಗಳಿಂದ ಹೀಂಕಾರವಾಗಿ ಜರಿದು
ಪಂಥವ ಮಾಡಿ ಅಗಲಿದೆವು.

ಹಿಂಗಾಗಿ ಹುಣ್ಣಿಮೆ ದಿನದ ಯಕ್ಷಿಯ ಬೆಳಗಿನ ಪೂಜೆಗೆ
ನಾವ್ಯಾರೂ ಸಿದ್ಧರಿರಲಿಲ್ಲ.

ಹಕ್ಕಿಯ ಚಿಲಿಪಿಲಿಗೆ ಎಚ್ಚತ್ತು ನಾವಿನ್ನೂ ಆಕಳಿಸುತ್ತಿರಬೇಕಾದರೆ -

ಯಕ್ಷಿಯ ಗುಡಿಗೆ ಚಂದಮುತ್ತನ ಬದಲು ಲಕ್ಕಬ್ಬೆ ಸಾಮಗ್ರಿ ಸಮೇತ ಬಂದುದ ಕಂಡು ಬೆರಗಾದೆವು. ಅವಳೊಂದಿಗೆ ಕಪಿಲೆಯ ಕರು ನಂದಿನಿ ಬಂದಿತ್ತು. ಇದೇ ಮೊದಲ ಬಾರಿ ಇಷ್ಟು ದೂರ ಬಂದುದರಿಂದ ಗುಡಿ, ಕಾಡು ಘಮಘಮ ಮಾಡಿಸುವ ಮಲ್ಲಿಗೆ ಇವನ್ನೆಲ್ಲ ಕಂಡು ಕರುವಿನ ಕಿವಿಯಲ್ಲಿ ಗಾಳಿ ತುಂಬಿ ವಿನಾಕಾರಣ ಓಡಾಡಿ ಆನಂದವನ್ನಾಚರಿಸಿತು. ನಾವು ಮುದುಕಿಯ ಉತ್ಸಾಹ ಕಂಡು ಆಶ್ಚರ್ಯವ ಆಚರಿಸುತ್ತಿರಬೇಕಾದರೆ ಎಲ್ಲಿಗೋ ಹೋಗಿದ್ದ ಯಕ್ಷಿ ಅವಸರದಲ್ಲಿ ಬಂದು ವಿಗ್ರಹದಲ್ಲಿ ಅಡಕಗೊಂಡಳು. ಅಬ್ಬೆಗಿದು ಕಾಣಲಿಲ್ಲವಾದರೂ ನಂದಿನಿಗೆ ಗೋಚರವಾಗಿ ಮೈ ಅದುರಿ ಹೆದರುತ್ತ ಕಿವಿ ನಿಮಿರಿ ಕಣ್ಣಗಲಿಸಿ ಒಂದೆ ಸಮನೆ ನಿಟ್ಟಿಸಿತು. ಹೊತ್ತು ಬಹಳ ಹೀಗೇ ನಿಂತು ನೋಡಿ ವಿಗ್ರಹದ ಬಳಿ ಬಂದು ಮೈತುಂಬ ಮೂಸಿ ಅಪಾಯವಿಲ್ಲವೆಂದು ಖಾತ್ರಿಯಾದಾಗ ಆಶೀರ್ವದಿಸುವ ಅವಳ ಕೈ ನೆಕ್ಕಿತು.

ಚಂದಮುತ್ತ ಅವಸರದಲ್ಲಿ ಗುಡಿಗೆ ಬಂದಾಗ ಲಕ್ಕಬ್ಬೆ ಆಗಲೇ ಹಸಿರು ಗಂಜಳದಲ್ಲಿ ಗುಡಿ ಸಾರಿಸಿ, ಗಂಧದ ನೀರು ಸಿಂಪಡಿಸಿ, ಹೊರಗಡೆ ಬಣ್ಣದ ರಂಗೋಲಿ ಹುಯ್ಯುತ್ತಿದ್ದಳು. ಮಗನ ನೋಡಿ “ಮಲ್ಲಿಗೆ ಮೊಗ್ಗಿನಿಂದ ದಂಡೆ ಮಾಡು” ಎಂದು ಹೇಳಿ ಒಳಗೆ ಬಂದು ನಂದಾದೀಪ ಏರಿಸಿದಳು. ಯಕ್ಷಿಗೆ ಎಣ್ಣೆತುಪ್ಪದಲ್ಲಿ ಮಜ್ಜನ ಮಾಡಿಸಿದಳು. ಆಮ್ಯಾಲೆ ಸೀಗೆ ಕಾಯಿಂದೊಮ್ಮೆ, ಸಾಬೂನಿನಿಂದೊಮ್ಮೆ ಮೈಯುಜ್ಜಿ ಪಾತಾಳಗಂಗೆಯ ತಿಳಿನೀರೆರೆದು ತಂಪುಮಾಡಿದಳು. ಅಡಿಯಿಂದ ಮುಡಿತನಕ ಸೀರೆ ಸೆರಗಿನಿಂದೊರೆಸಿ ಮೈ ಆರಿಸಿದಳು. ನಮ್ಮಲ್ಲಿಯ ಕೆಲವರಾಗಲೇ ಮೋಜು ಮಜ ಮಾಡುತ್ತ ಮುದುಕಿಯ ಕಣ್ಣಿಗೆ ಮಾಯ ಆಗಿಯೇ ಬಿಟ್ಟರು. ವಿಗ್ರಹದ ಬದಲು ಅಬ್ಬೆಗೆ ತನ್ನ ಸೊಸೆ ಚಕೋರಿ ಎಂಬ ಯಕ್ಷಿಯೆ ಕಾಣತೊಡಗಿದಳು. ಅವಳ ಮೂರು ಮಾರಿನ ಕಾಳನೀಳ ಕೂದಲು ಕೊಡವಿ ಜಾಡಿಸಿ, ಎಳೆಬಿಸಿಲಲ್ಲಿ ಸೊಂಪಾಗಿ ಬೆನ್ನಿಗಿಳಿಸಿ, ಬಂಗಾರ ಬಾಚಣಿಕೆಯಿಂದ ಹಿಕ್ಕಿ, ಹೇನುಗಳ ಹೆಕ್ಕಿ ತೆಗೆದು ಕೊಡದಂಥಾ ತುರುಬು ಕಟ್ಟಿದ ಕನಸು ಕಂಡಳು. ಉಡುಸೀರೆಯಲ್ಲಿ ಮೇಲಾದ, ಸೆರಗಿನಲ್ಲಿ ಹಾರುವ ಗಿಣಿ ನೂರು ಬರೆದ ಇಳಕಲ್ ಸೀರೆಯನುಡಿಸಿ, ಬುಗುರಿ ಕುಚದೆದೆಗೆ ಕುಣಿವ ನವಿಲು ಬರೆದ, ನವಲಗುಂದದ ಕುಬಸ ತೊಡಿಸಿದಳು.

ಲಕ್ಕಬ್ಬೆಗೆ ಹ್ಯಾಗೇನೋ ನಮಗೆ ಮಾತ್ರ ವಿಗ್ರಹದಲ್ಲಿ ಅಡಕಗೊಂಡಿದ್ದ ಯಕ್ಷಿಯೂ ಕಾಣಿಸುತ್ತಿದ್ದಳಾಗಿ ಉತ್ಸಾಹದಲ್ಲಿ ಅಬ್ಬೆ ಸೇವೆ ಮಾಡುವುದು, ಯಕ್ಷಿ ಸಂಕೋಚದಿಂದ ಮುಟ್ಟಿದಲ್ಲಿ ಮುದುಡುವುದು ನೋಡಿ ನಮಗೆ ಬಹಳ ಮೋಜೆನಿಸಿತು. ಅಬ್ಬೆಯ ಅಕ್ಕರೆಗೆ ಚಕೋರಿ ಕರಗಿ ವಿಗ್ರಹದಲ್ಲೂ ಬೆವರಿದ್ದಳು. ಲಕ್ಕಬ್ಬೆ ಯಕ್ಷಿಯ ಸುಳಿಗುರುಳ ನ್ಯಾವರಿಸಿ, ಎಳೆಯ ಕುಂತಳ ತಿದ್ದಿ ಕೆನ್ನೆ ಕದಪುಗಳ ತಿಳಿ ಬೆವರೊರಿಸಿದಳು. ತಿದ್ದಿ ತೀಡಿದಳು ನೀಟಾದ ಬೈತಲೆಯ. ಕಣ್ಣಿಗೆ ಕಾಡಿಗೆ, ನೊಸಲಿಗೆ ಚಂದ್ರನ ತಿಲಕವನಿಟ್ಟಳು. ಸಂಪಿಗೆಯೆಸಳು

ಮೂಗಿನಲ್ಲಿ ತೂಗುವ ಮುತ್ತಿನ ಮೂಗುತಿಯಿಟ್ಟಳು. ಕರಗಳ ಮ್ಯಾಲೆ ಗೀರು ಗಂಧವ ಬರೆದಳು. ಟೊಂಕಕ್ಕೆ ಒಡ್ಯಾಣ ಬಿಗಿದು ಕೊರಳಿಗೆ ಚಂದ್ರಹಾರಗಳನ್ನಿಟ್ಟು ಬಂಗಾರದಲ್ಲಿ ಶೃಂಗಾರ ಮಾಡಿದಳು. ಎಡಬಲ ಹೂ ಹಿಂಗಾರುಗಳನಿಟ್ಟು ಯಕ್ಷಿಯ ದುಂಡುದುರುಬಿನ ತುಂಬ ಹೂದಂಡೆ ಮುಡಿಸಿದಳು. ಎಂತೆಂತು ಸಿಂಗರಿಸಿದರು ಸಾಲದು ಸಾಲದಾಯಿತು ಮುದುಕಿಗೆ. ಸೊಸೆಯ ಕಣ್ಣು ಕೋರೈಸುವ ದಿವ್ಯ ಚೆಲ್ವಿಕೆ ಕಂಡು ಅಬ್ಬೆಯ ಸಂಭ್ರಮ ಅಂಬಾರಕಡರಿತು. ಕಣ್ಣಗಲಿಸಿ ಬೆರಗಿನಲ್ಲಿ ನೋಡುತ್ತ ಮೈಮರೆತು ತಾನೂ ವಿಗ್ರಹವಾಗಿ ನಿಂತುಬಿಟ್ಟಳು. ಹೊತ್ತು ಬಹಳ ಹೀಗೇ ನಿಂತು ಆನಂದಭಾಷ್ಪಗಳ ಒರೆಸಿಕೊಂಡು -

ನನ್ನ ಗಗನಮಲ್ಲಿಗೆ ಹೂವೇ
ಆಕಾಶದ ಹೊಂಬೆಳಕೇ
ತಾವರೆಯ ಮುಖದವಳೇ
ತೊಂಡೆತುಟಿಯವಳೇ
ಮೊಳಕೆ ನಗೆಯವಳೇ
ತೆಳ್ಳಾನ ಹೊಟ್ಟೆಯವಳೇ
ತಂಬೀಗಿಯಂಥ ತುಂಬಿದ ಕುಚದವಳೆ
ಮೈತುಂಬ ಪರಿಮಳವ ನಾರುವವಳೆ
ನಿನಗ್ಯಾರೂ ಸರಿಯಾಗದ ಸೊಸೆಮುದ್ದೇ -
ಬಳಗವೆಲ್ಲವ ತೊರೆದು ಮಗನ ಬಳಿ ಬಂದೆ,
ನರಲೋಕದ ನಡಾವಳಿ ನಿನಗರಿದೆ?
ಮಗ ಬೇಕು, ಮಗನ ತಾಯಿ ಬ್ಯಾಡಂದರೆ ಹ್ಯಾಂಗವ್ವ?
ಅವನ ಜೊತೆ ಮಾತಾಡುತ್ತಿ, ನನ್ನೊಂದಿಗ್ಯಾಕಿಲ್ಲ?
ಅಕ್ಕಪಕ್ಕ ನರಮನುಷ್ಯರಾರಿಲ್ಲ
ಈಗಲೇ ಎರಡು ನುಡಿ ನುಡಿದಾಡು.
ನನಗೊಮ್ಮೆ ಬಾಯ್ತುಂಬ ಅತ್ತೇ ಅನಬಾರದೆ ನನ್ನವ್ವ?
ಗೊಲ್ಲ ಗೋಕುಲರ ನಡತೆ ಸೇರದೆ ನಿನಗೆ?

- ಎಂದು ನಿಟ್ಟುರಿಸಿಟ್ಟಳು ಮುದುಕಿ. ಇಂತೆಂಬ ನುಡಿ ಕೇಳಿ ಚಕೋರಿ ಎಂಬ ಯಕ್ಷಿ ಉಕ್ಕಿಬಂದ ಆನಂದವ ಹತ್ತಿಕ್ಕಲಾರದೆ ಹೊರಗೂ ತುಳುಕಲಾರದೆ ಚಡಪಡಿಸಿ ಥೈ ಥೈ ಕುಣಿಯಲೇಬೇಕೆಂದಳು. ಅತ್ತೇ ಎಂದು ಅಬ್ಬೆಯ ತಬ್ಬಿಕೊಂಡು ಮುದ್ದಿಸೋಣ ಎಂದಳು. ತನ್ನ ಘನಾನಂದವ ತಾನೆ ನಿಯಂತ್ರಿಸಿಕೊಂಡು ಮೆಲ್ಲಗೆ 'ಅತ್ತೇ' ಎಂದು ಹೇಳಿ ಭಕ್ತಿಯಿಂದ ಲಕ್ಕಬ್ಬೆಯ ಕಾಲುಮುಟ್ಟಿ ನಮಸ್ಕಾರ ಮಾಡಿಯೇ ಬಿಟ್ಟಳು. ಕಿವಿಗೆ ಶಬ್ದ ಕೇಳಿಸಿ ಪಾದಗಳಿಗೆ ಕೈ ಸ್ಪರ್ಶವಾಗಿ ಆನಂದದ ಉನ್ಮಾದದಲ್ಲಿ ಮುದುಕಿ ಹುಚ್ಚಡರಿದ ದನದ ಹಾಗೆ ಒದರಿ ಎದ್ದು ಗುಡಿತುಂಬ ಓಡಾಡಿದಳು. ಸಳ ಸಳ ಪುಳಕಂಗಳೆದ್ದು ಬೆವರು ಜಲದಲ್ಲಿ ಒದ್ದೆಯಾದಳು. ಕಣ್ತುಂಬ ನೋಡಿ ದೃಷ್ಟಿಯಾದೀತೆಂದು ವಿಗ್ರಹಕ್ಕೆ ಲಟಿಕೆ ಮುರಿದಳು. ಸೀರೆ ಸೆರಗಿನಿಂದ ಸೊಸೆಯ ತಿಳಿಬೆವರೊರೆಸಿದಳು. ಮತ್ತೆ ಎದ್ದಳು. ಕೂತಳು. ಹೊರಗೋಡಿ ಇನ್ನೆರಡು ಹೂ ತಂದು ಯಕ್ಷಿಯ ಮುಡಿಗಿರಿಸಿದಳು. ನಿಜ ಹೇಳಬೇಕೆಂದರೆ ಮುದುಕಿಯ ಬಗ್ಗೆ ನಾವು ಗಾಬರಿಯಾದೆವು.

# ೩೭. ನೆಲದ ತೇಜೋಮಯವೆ

ಸಂಜೆ ಸಾಯಂಕಾಲವಾಗಿ ಸೂರ್ಯನಾರಾಯಣದೇವರು
ಪಡುವಣದಲ್ಲಿ ಅಸ್ತಂಗತವಾಗಿ
ಮೂಡುಮಲೆ ಬಿರಿದು ಉದಯವಾದರು ಚಂದ್ರಾಮಸ್ವಾಮಿ.
ಶಿವನ ಸೋಮವಾರ, ತುಂಬಿದ ಹುಣ್ಣಿಮೆಯ
ಕಲ್ಯಾಣದ ಬೆಳಕು ಬೆಳ್ದಿಂಗಳು
ಕ್ಷಿತಿಜವ ತುಂಬಿ ತುಳುಕಿತು ಶಿವನೆ.
ನಿಶ್ಚಯಿಸಿದ ಗಳಿಗೆ ಮಹೂರ್ತದಲ್ಲಿ
ಚಂದಮುತ್ತ ಜಳಕವ ಮಾಡಿ
ವಾರೆ ಜಡೆಕಟ್ಟಿ ನವಿಲಗರಿ ಜಡೆಗೇರಿಸಿಕೊಂಡು
ಒದ್ದೆ ಲಂಗೋಟಿಯಲ್ಲಿ, ಹೆಚ್ಚಿನ ಕರಿಕಂಬಳಿಯ
ಹೆಗಲಿಗೇರಿಸಿಕೊಂಡು ಗೂಡಿನ ಬಿಲಕ್ಕೆ ಹೋಗಿ
ಹೆತ್ತಯ್ಯ ಮುತ್ತಯ್ಯರ ನೆನೆದ.
ಸುತ್ತಲಿನ ದೇವರ ನೆನೆದ
ಆದರದಿಂದ ಆದಿಯ ಶಿವನ ನೆನೆದು
ತಾಯಿ ಪಾರ್ವತಿಯ ನೆನೆದು
ದಾಸೋಹರಿ ಭಕ್ತನ ಕಾಪಾಡಬೇಕೆಂದು ಕೈಮುಗಿದು
ಭಕ್ತಿಗೆ ಬೂದಿ ಹಚ್ಚಿಕೊಂಡು
ಗೆಜ್ಜೆ ಕೊಳಲು ಸೊಂಟದಲ್ಲಿ ಸಿಕ್ಕಿಸಿಕೊಂಡು ನಡೆದ.
ಒಂದು ಹೆಜ್ಜೆ ಮುಂದೆ ಹೋಗಿ ಹಿಂದೆ ನೋಡಿದ,
ಎರಡು ಹೆಜ್ಜೆ ಮುಂದೆ ಹೋಗಿ ಹಿಂದೆ ನೋಡಿದ
ಮೂರಡಿ ಮುಂದೆ ಹೋಗಿ ಹಾ ಮರೆತಿದ್ದೆ ಎಂದು
ಹಿಂದುರುಗಿ ಬಂದು,
ಅಬ್ಬೆಯ ಪಾದಮುಟ್ಟಿ ನಮಸ್ಕಾರ ಮಾಡಿ ಜಯ ಒದಗುವಂತೆ
ಶುಭನೀಡಿ ಅಬ್ಬೇ ಅಂದ.

ವ್ರತಾಚರಣೆಯ ವಿಚಾರ ಅಬ್ಬೆಗೆ ಗೊತ್ತಿದ್ದದ್ದು ಅಲ್ವ. ರಾತ್ರಿಯಿಡೀ ಕೆಟ್ಟ ಕನಸಾಗಿತ್ತು. ಬಲಭುಜ ಬಲಗಣ್ಣು ಹಾರಿತ್ತು. ಇದನ್ನು ಒಡೆದಾಡುವ ಮುನ್ನವೇ,

"ನಿನಗೆ ಅಕ್ಷಯವಾಗ್ಲಿ ನನ ಕಂದಾ.
ಜಯವುಳ್ಳವನಾಗಿ ಬಾ"

- ಎಂದು ಬಾಯಿಂದ ಮಾತು ಬಂದೇ ಬಿಟ್ಟಿತು. ಮಗನ ನೆತ್ತಿಯ ಮುಟ್ಟಿ ಮೂಸಿ ಆಶೀರ್ವದಿಸಿ ಮಗ ಹೋಗುವ ಚಂದವ ತಾಯಿ ಕಣ್ತುಂಬ ನೋಡಿದಳು. ಆಮ್ಯಾಲೆ ಕುಲಗುರುವಿನ ಬಳಿ ಬಂದು ಒಡಲು ಹಾಸಿ ಪಾದ ಪಡಕೊಂಡು ಪಾದಧೂಳಿ ಹಣೆಗೊತ್ತಿಕೊಂಡ.

ಕುಲಗುರುವಿಗೆ ವ್ರತಾಚರಣೆಯ ವಿಚಾರ ಸಾದ್ಯಂತ ಗೊತ್ತಿದ್ದುದರಿಂದ "ದೇವಲೋಕದ ಸಿರಿಯ ದೋಚಿಕೊಂಡು ಬಾ ಮಗನೇ" ಎಂದು ಹಣೆತುಂಬ ಬಂಡಾರ ಹಚ್ಚಿ ಕಳಿಸಿದ.

ಯಕ್ಷಿಯ ಗುಡಿಗೆ ಬಂದು ರಾತ್ರಿಯ ಶಾಂತಿಪೂಜೆ ಮಾಡಿ ಮೂರು ಬಾರಿ ಪ್ರದಕ್ಷಿಣೆ ಬಂದು ಚಂದ್ರಜಪ ಮಾಡಲು ಪಡುದಿಕ್ಕಿಗೆ ಮುಖ ಮಾಡಿದ. ನಾವಲ್ಲೇ ಬಾಯಿಮುಚ್ಚಿಕೊಂಡು ಅವನನ್ನೇ ನೋಡುತ್ತಿದ್ದೆವು. ನಮ್ಮ ಕಡೆಗೊಮ್ಮೆ ನೋಡಿದ. ಅವನ ನೋಟಗಳಿಂದಲೇ ನಮಗಲ್ಲಿರಲು ಅವಕಾಶವಿಲ್ಲವೆಂದರಿತು ಹೆಚ್ಚು ಕಡಿಮೆ ಆಡದೆ ಕಣ್ಣಿಗೆ ದೂರ, ಕಿವಿಗೆ ಸಮೀಪವಾಗುವಂತೆ ಹೋಗಿ ಗಿಡಮರ ಅಡರಿ ಕೂತೆವು. ಆಗಲೆ ಬೆಳ್ದಿಂಗಳು ಬಲಿತು ಚದುರಿದ ಮೋಡಗಳಲ್ಲಿ ಮುತ್ತಿನ ಅರಮನೆ, ಬೆಳ್ಳಿಯ ಅರಮನೆ, ಗಾಜು ವಜ್ರಗಳ ಅರಮನೆಗಳು ಮೂಡಿ ಹೊಳೆಯುತ್ತಿದ್ದವು. ತರುಮರಗಳಲ್ಲಿ ಅಲ್ಲಲ್ಲಿ ಕತ್ತಲೆ ಜೋತುಬಿದ್ದಿತು. ದೂರ ಕುಂತಿದ್ದೆವಾಗಿ ಚಂದಮುತ್ತ ಚಕೋರಿಯರ ವ್ರತಾಚರಣೆಯ ವಿವರಗಳು ನಮಗೆ ಕಾಣಲಿಲ್ಲ.

ಮಧ್ಯರಾತ್ರಿಯವರೆಗೆ ನಮಗೇನೂ ಕೇಳಿಸಲಿಲ್ಲ. ಶಿವನ ನಗೆಯಂಥ ಬೆಳ್ದಿಂಗಳು ಮಾತ್ರ ಹುಚ್ಚು ಹತ್ತಿಸುವಷ್ಟು ಮಾದಕವಾಗಿದ್ದುದರಿಂದ ಕೆಲವರಾಗಲೇ ತೂಕಡಿಸುತ್ತಿದ್ದೆವು. ಇಡೀ ಕಾಡು ಶೀತಲ ಶಿವಶಾಂತಿಯಲ್ಲಿ ಅದ್ದಿಬಿಟ್ಟಿತ್ತು. ಆವಾಗ ನೋಡು ಶಿವಾ –

ನಿಗೂಢವಾಗಿ ನಿನದಿಸುವ ಚಂದಮುತ್ತನ ಕೊಳಲ ನಾದ
ಮೆಲ್ಲಮೆಲ್ಲನೆ ಸುರುವಾಯಿತು ನೋಡು
ಕಟ್ಟಿದ ಗೂಡಿಂದ ಜೇನು ತೊಟ್ಟಿಕ್ಕುವ ಹಾಗೆ
ಚಂದಮುತ್ತನ ಕೊಳಲ ದನಿ ಕೇಳಿಸಿತು.
ಹಿಂದೆಷ್ಟೋ ಬಾರಿ ಚಂದಮುತ್ತನ ಕೊಳಲ
ಕೇಳಿಲ್ಲವೆ ನಾವು?
ಅದರಿದೇ ಬೇರೆ ಎನ್ನಿಸಿ ಸೊಲಿಲ್ಲದ ಸೊಮ್ಮಿಲ್ಲದೆ
ಪರವಶರಾದೆವು.
ನಾಮರೂಪಕ್ರೀಗಳೆಲ್ಲ ನಿಷ್ಕ್ರಿಯಗಳಾಗಿ,
ಶಬ್ದಮುಗ್ಧರಾಗಿ, ಕಾಲವಿರಹಿತರಾಗಿ
ಬರೀ ಕಿವಿಗಳಾದೆವು.
ನಮ್ಮೆಲ್ಲರ ಮೂಲಾಧಾರದಿಂದ ಯಾವುದೋ ಆದಿಮ
ನಾದವೊಂದು ಹೊರಟು
ಬಯಲು ತುಂಬಿ ಬಯಲು ನಾದಮಯವಾಗಿ
ಒಳಗೂ ನಾದ ಹೊರಗೂ ನಾದ
ಒಳಹೊರಗೆ ಏಕಾಗಿ

ತಿಳಿವಿಂಗೆ ನಿಲುಕದ ನಿಜವೊಂದು
ನಾದದಲಿ ಹುರಿಗೊಳ್ಳುತ್ತಿರುವಂತೆ
ಅರಿವಿಗೆ ಬಂತು.

ಕೇಳಕೇಳುತ್ತ ಮೈಮರೆತಿದ್ದ ನಮ್ಮಿರವು
ಹಗುರವಾಗಿ ನಿಧಾನವಾಗಿ

ಲೋಕಾಂತರಕೆ ಸಂಯಮಿಸಿದಂತಾಗಿ
ಪರಿಚಯವಿಲ್ಲದ ಹೊಸಲೋಕದ ಹವಾಮಾನದಲ್ಲಿ
ತೇಲುತ್ತಿರುವಂತೆ -

ಹಾಡಿನಿಂದಿಡಿ ಬಯಲು ಭರಿತವಾಗಿ
ಭರಿತವಾದದ್ದು ಬಿರಿತು
ತೂಬುತೆಗೆದ ಕೆರೆಯಂತೆ
ಹಾಡಿನ ಮಹಾಪೂರ ನುಗ್ಗಿತು ನೋಡು
ಆಹಾಹಾ ಮುಳುಗಿದೆವೆಂದು ನೋಡಿದರೆ ತೇಲುತ್ತಿದ್ದೇವೆ! ಅರೆಅರೇ
ತೇಲುವವರು ನಾವಲ್ಲ
ಚಕೋರಿ ಎಂಬ ಯಕ್ಷಿ!
ಬಿಳಿಯ ಮೋಡದ ಹಾಗೆ ಹಗುರವಾಗಿ
ಕಣ್ಣೆದುರೆ ಅವಳು ಬಿಳಿಯ ಪಕ್ಷಿಯಾಗಿ
ತೇಲುತ್ತಿದ್ದಾಳೆ! ಸಾವಳಗಿ ಶಿವ ಶಿವಾ,

ಬೆಳಕಿನ ನಿಲುಮೆಗೆ ಗಾಳಿಯ ಸೆಲೆ ಸೇರಿ
ಶಾಶ್ವತ ಆಕಾಶ ನೀಲಿಮದಲ್ಲಿ
ತೂಗುವ ಚಂದ್ರನ ಕೆಳಗೆ
ನೆಲದ ತೇಜೋಮಯವೆ
ಮ್ಯಾಲೇರಿ ಹೊಳೆಹೊಳೆದು ಸುಳಿದಾಡಿದಂತೆ,
ಹಾಡಿನ ಕಾಮಿತದಿಂದ ಸಂಗೀತವೆ
ಕಾರಣ ಕಾಯವ ಧರಿಸಿ ಕೊಳಲ ಮೂಲಕ
ತಂತಾನು ನುಡಿಸಿಕೊಂಬಂತೆ,
ಸೂತ್ರ ಮಾತ್ರ ನೆಲಕ್ಕಂಟಿ
ಮ್ಯಾಲೆ ತೇಲುವ ಗಾಳಿಪಟದಂತೆ.

ಕಾಲವೆಷ್ಟು ಸಂದಾಯವಾಯಿತೊ ಹೀಗೆ
ಏಕ್ ದಂ ನಮ್ಮ ಕಿವಿಗ್ಯಾರೊ ಸೀಸುಹುಯ್ದರು ಶಿವನೆ, ಕೊಳಲು ಕಿರಿಚಿ
ಫಕ್ಕನೆಚ್ಚರವಾಯ್ತು -

ಕೊರಳು ಕಿರಿಚಿ
ಹೆಪ್ಪೊಡೆದ ಹಾಲು ಬೆಳ್ದಿಂಗಳು
ಮೋಡಗಳಲ್ಲಿ ಕೆಸರಾಗಿ ನಿಂತುಕೊಂಡಿತು
ಮಂತ್ರಭಿನ್ನವಾಗಿ
ಹುರಿಗೊಂಡ ಹಾಡು ತುಂಡು ತುಂಡಾಗಿ
ಹಾರುವ ಹಕ್ಕಿಯ ರೆಕ್ಕೆಗೆ ಶಕ್ತಿ ಸಾಲದೆ
ಮುರಿದ ರೆಕ್ಕೆಗಳ ಎತ್ತಿ ಬೀಸಲಾಗದೆ

ಬಾನಲ್ಲಿ ತೇಲಲಾಗದೆ
ಹಾ ಎಂದು ಕಿರಿಚಿ
ಆಕಾಶದುಲ್ಕೆ ಫಳ್ಳನೆ ಹೊಳೆದು
ಪತನವಾಗತೊಡಗಿತು.

ನಮ್ಮ ಕಣ್ಣಿಗೆ ಬೆಂಕಿ ಎರಚಿದಂತಾಗಿ ಶಿವ ಶವಾ
ಕಿಟಾರನೆ ಕಿರಿಚಿದೆವು
ಇಗೊ ಇಗೋ ನಾವೇ ಬಿದ್ದೆವೆಂದು ಹೆದರಿ
ಬಿಗಿಯಾಗಿ ಎದೆ ಹಿಡಿದು, ಉರುಗಿನಿಂದ
ಹೃದಯ ಪರಚಿಕೊಂಡೆವು.
ಕರುಣಿ ಶಿವನಿಗಾದರು ಕೇಳಿಸಿ ಕಾಪಾಡಲೆಂದು
ಬಾಯಿ ಬಾಯಿ ಬಡಕೊಂಡತ್ತೆವು.
ಹಕ್ಕಿಯ ಹಿಡಿದಿಡಲಾರದ ಆಕಾಶದಂಗಳ ಕಂದಿ ಕರ್‍ರಗಾಯ್ತು.
ಚಂದ್ರ ಇದ್ದಿಲಾದ ಬೆಳ್ದಿಂಗಳು ಬೂದಿಯಾಯ್ತು.
ಹಾಡಿನ ಅಮಲಿನಲ್ಲಿ ತೇಲುತ್ತಿದ್ದ ಕಾಡು
ತಬ್ಬಿಬ್ಬಾಗಿ ಕಿರಿಚಿದ್ದಕ್ಕೆ ಗಾಬರಿಯಾಗಿ
ಗರಹೊಡೆದಂತೆ ಕಣ್‌ಕಣ್ಣಿಟ್ಟಿತು.

ಹಕ್ಕಿಯ ರೆಕ್ಕೆಗಳಿಗ್ಯಾರೊ ಆಯುಧ ಚುಚ್ಚಿದರೆ?
ಹನಿ ರಕ್ತ ಸುರಿವುದ ಕಂಡೆವು.

ಹಕ್ಕಿಯ ಬೀಸುವ ರೆಕ್ಕೆ ಕತ್ತಿನ ಕಳಸ ಮುರಿದು
ಶಿವಶಿವಾ ಚಂದಮುತ್ತನ ಆತ್ಮಪಕ್ಷಿ
ಚಕೋರಿ ಎಂಬ ಯಕ್ಷಿ
ಮುರಿದ ಮಹಿಮಳಾಗಿ ಬೀಳು ಬೀಳುತ್ತಿರುವಂತೆ
ಯಕ್ಷಿಯ ಮೂಲ ರೂಪ ಮೂಡಿ
ಧೊಪ್ಪನೆ ಬಿದ್ದಳು.

## ೩೮. ಬಳ್ಳಿಗೆ ನ್ಯಾಯ ಒದಗಿಸು ಶಿವನೆ

ನೆತ್ತಿಯಲ್ಲಿ ಚಂದ್ರನ ಮಡಗಿಕೊಂಡ
ಪಂಚಮುಖದ ಪರಮಾತ್ಮನ್ನ
ಕಿಂಚಿತ್ ಭಕ್ತಿಯಿಂದ ನೆನೆದು
ಇನ್ನು ಮುಂದಿನ ಕಥೆಯ ಹೇಳಬೇಕೆಂದರೆ:

ಗುಡಿ ಮುಂದೆ ನಳನಳಿಸಿ ಬೆಳೆದ
ಎಳಮಲ್ಲಿಗೆ ಬಳ್ಳಿಯ ಮ್ಯಾಲ್ಯಾರೋ ಅತ್ಯಾಚಾರ ಮಾಡಿ

ಬಾಸುಳ ಮೂಡುವಂತೆ
ಹಿಡಿದು ಎಳೆದಾಡಿದ್ದಾರೆ.
ಹಿಸುಕಿ ಘಾಸಿಮಾಡಿ
ಎಸೆದಿದ್ದಾರೆ ಮೂಲೆಗೆ
ಹ್ಯಾಗೆ ಬಿದ್ದಿದೆ ನೋಡು ಶಿವನೆ,
ಕಣ್ಣುಳ್ಳವರು ಮರುಗುವಂತೆ
ಕರುಳು ಕರಗುವಂತೆ.

ಸಾಕ್ಷಿಗಿದ್ದ ಚಂದ್ರ ಮೋಡಗಳಲ್ಲಿ
ಮುಖ ಮರೆಸಿಕೊಂಡಿದ್ದಾನೆ.
ಬೆದರಿವೆ ಹಕ್ಕಿ ಪಕ್ಕಿ
ಉಸಿರುಗಟ್ಟಿದೆ ಗಾಳಿ.
ಹಗಲು ರಾತ್ರಿ ಏಕಾಏಕಿ ಬದಲಾಗಿ
ಪಲ್ಲಟವಾಗಿದೆ ಬದುಕು.

ದೇವತೆಗಳ್ಯಾರೂ ಒದಗಿಲ್ಲ ಸಹಾಯಕ್ಕೆ
ಕುಲದೇವರು ಕೃಪೆಯಿಂದ ಹೊರಗಿಟ್ಟಿದ್ದಾರೆ.
ಸಾವಳಗಿ ಶಿವನೇ,
ನೀನಾದರೂ ಈಕಡೆ ನೋಡು.
ನಿನ್ನ ಬದಲು ಒಂದು ಗುಂಡಕಲ್ಲು ಬಳ್ಳಿಯ ನೋಡಿದ್ದರೆ
ಅದಾಗಲೇ ಹರಿಯುತ್ತಿತ್ತು ಕರಗಿ ನೀರಾಗಿ,
ನೀನಿನ್ನೂ ಸುಮ್ಮನಿದ್ದೀಯಲ್ಲಾ ಸ್ವಾಮಿ!

ಲೋಕ ಲೌಕಿದಲ್ಲಿ ಮಲ್ಲಿಗೆ ಬಳ್ಳಿಯಾಗಲಿ ಬಾಳು ಎಂದು,
ಅರಳಿದ ಮಲ್ಲಿಗೆ ನೋಡಿ ಚಂದ್ರನ ನೆನಪಾಗಲೆಂದು,
ಚಂದ್ರನ ಹೆಸರಿನಲ್ಲಿ ನಾವು ಮಾಡುವುದಿಷ್ಟೇ ಅಂತ
ಚಂದ್ರನಿಗೆ ತಿಳಿದಿರಲೆಂದು,
ನಾವು ಹಾರೈಸಿದ್ದು ಹುಸಿಯಾಯ್ತೆ ಶಿವನೆ!
ನಿನ್ನ ನೆನಪಿನಲ್ಲಿ ಈ ಬಳ್ಳಿ ದಾಖಲಾಗಿಲ್ಲವೇ?
ದಾಖಲಾದರೂ ಚಿಗುರಿಲ್ಲವೆ?
ಚಿಗುರಿದರು ಹೂವಾಗಿ ಅರಳಿಲ್ಲವೆ?

ಬಳ್ಳಿಗೆ ನ್ಯಾಯ ಒದಗಿಸಿ
ನೀನಿನ್ನೂ ಬದುಕಿದ್ದೀ ಅಂತ
ಪ್ರಮಾಣ ತೋರಿಸು ಶಿವನೇ!

## ೩೯. ನವಿಲೇ ನವಿಲೇ

ಲಕ್ಕಬ್ಬೆಯ ಕನಸಿನಲ್ಲಿ
ನಂದೀ ಕಳಸ ಧಗ ಧಗ ಉರಿದಂತಾಗಿ
ಆ ಉರಿಯ ನವಿಲುಗರಿಯ ಮ್ಯಾಲ್ಯಾರೋ ಸುರಿದು
ತುದಿಯಿಂದ ಬುಡತನಕ ಉರಿಯುತ್ತಿದೆ ಗರಿ.
ಅರೆ ಅರೇ
ಗರಿಯ ಬುಡದಲ್ಲಿ ನವಿಲಿದ್ದುದ
ಯಾರೂ ಅರಿಯರಲ್ಲಾ!
ನವಿಲಿಗೂ ಬೆಂಕಿ ತಗಲಿ
ನವಿಲೇ ನವಿಲೇ ಎಂದು ಒದರುತ್ತ
ಗರ್ಭವ ಗಟ್ಟಿಯಾಗಿ ಹಿಡಿದುಕೊಂಡೇ
ಎದ್ದಳು ಮುದುಕಿ.
ಗಕ್ಕನೆ ನಿಂತು, ದಿಕ್ಕುದಿಕ್ಕೆಲ್ಲ ನೋಡಿದರೆ
ನಖಶಿಖಾಂತ ಉರಿಯುತ್ತಿದೆ ಲೋಕ.
ಎಷ್ಟೊಂದು ಬೆಂಕಿ ಶಿವನೆ !
ಚಿಕ್ಕೆ ತಾರೆಗೆ ಬೆಂಕಿ, ಮುಗಿಲ ನೀಲಿಗೆ ಬೆಂಕಿ,
ಕನಸಿಗೂ ಬೆಂಕಿ !

ತಕ್ಷಣ ಮಗನ ನೆನಪಾಗಿ ಕುಲಗುರುವಿನ ಗೂಡಿಗೋಡಿದಳು ಅಬ್ಬೆ.

## ೪೦. ಅಬ್ಬೆಯ ಸಂತವಿಸಿದ

ಸಪ್ಪಟ ಸರಿರಾತ್ರಿ ಕಲ್ಲೂ ನೀರೂ ಕರಗುವಂಥ ಹೊತ್ತಿನಲ್ಲಿ ಚಂದಮುತ್ತನ ಕೊಳಲು ಅಪಸ್ವರ ಕಿರಿಚಿ ಸುಮ್ಮನಾದುದ ಕೇಳಿ ಕುಲಗುರು ವಿಸ್ಮಯಂಬಟ್ಟ. ಆಮೇಲಾ ಮೇಲೆ ಏನೋ ಅನಾಹುತ ಆಗಿರಬೇಕೆಂದು ಚಿತ್ತಸಂಶಯ ತಾಳಿ ನಾಲ್ಕಾರು ಬಾಲಕರ ಕರಕೊಂಡು ಆತಂಕದಿಂದ ಮಾತು ಮಾತಿಗೆ ಮಾದೇವನ ನೆನೆಯುತ್ತ ಯಕ್ಷಿಯ ಗುಡಿಗೋಡಿ ಹೋಗಿ ನೋಡಿದರೆ, ಚಂದಮುತ್ತ ಮೂರ್ಛಾಗತನಾಗಿ ಬಿದ್ದೈದಾನೆ ! ಅವನನ್ನೆತ್ತಿಕೊಂಬಂದು ಗೂಡಿನಲ್ಲಿ ಮಲಗಿಸಿ ಮದ್ದರೆದು ಕುಡಿಸುವಲ್ಲಿ ನವಿಲೇ ನವಿಲೇ ಎಂದಳುತ್ತ ಬೀಳುತ್ತೇಳುತ್ತ ಬಂದ ಲಕ್ಕಬ್ಬೆಯ ಸಂತವಿಸಿದ.

## ೪೧. ಭಕ್ತಿ ಮಾಡಿದ್ದಕ್ಕೆ ನೀ ಕೊಟ್ಟ ಬದುಕು

ಆರು ಮೂರೊಂಬತ್ತು ದಿನ ಬಾಯಿ ಬರಲೇ ಇಲ್ಲ ಚಂದಮುತ್ತನಿಗೆ. ಕಣ್ಣು ಪಿಳುಕಿಸದೆ ಶೂನ್ಯ ಹೃದಯನಾಗಿ ಬಿದ್ದಿರುತ್ತಿದ್ದ. ತಾಯಿ ಬಂದು ಪಕ್ಕದಲ್ಲಿ ಕುಂತರೂ ಗಮನಿಸುತ್ತಿರಲಿಲ್ಲ. ಪೆಟ್ಟು ಮಗನಿಗಾದರೆ ನೋವು ತಾಯಿಗಲ್ಲವೆ? ಏನಾಗಿದೆ ಮಗಂಗೆ? ದಿನಾ ಬೆಳೆಯುತ್ತಿದೆ ಗಂಟಲ ಹುಣ್ಣು. ಕತ್ತು ಕೆಂಪಗಿದೆ. ರಾಕ್ಷಸರ್ಯಾರಾದರು ಬಂದು ಹಿಸುಕಿದರೆ? ಮಗ ಮಾತನಾಡಲಾರ. ಕುಲಗುರು ಹೇಳಲಾರ. ಮಗನಿಗೆ ಕೇಡು ಮಾಡಿದವರು ನಾಲಗೆ ಹಿರಿದು ಸಾಯಲೆಂದು ಶಪಿಸಿ, ಸತ್ಯ ಶಿವದೇವರ ನೆನೆದು -

ನನ್ನ ದೀವಟಿಗೆಗೆ
ಎಣ್ಣೆ ಎರೆಯೋ ಶಿವನೇ

- ಎಂದು ಬೇಡಿಕೊಂಡತ್ತಳು ಅಬ್ಬೆ.

ಕುಲಗುರು ದಿನಾ ಮದ್ದರೆದು ಕುಡಿಸುತ್ತಿದ್ದ. ಆದರೆ ಕತ್ತಿನ ಹುಣ್ಣು ಯಾಕಾಯಿತೆಂದು, ಹೆಂಗಾಯಿತೆಂದು, ಆ ದಿನ ಕಾಡಿನಲ್ಲಿ ನಡೆದದ್ದೇನೆಂದು ಯಾರಿಗೂ ತಿಳಿಯಲಿಲ್ಲ.

ಶಿವ ಶಿವಾ, ಇಂತೀ ಪ್ರಕಾರವಾಗಿ ಚಂದಮುತ್ತನಂಥ ಸಂಪನ್ನನ ಕಥೆಯ ನಾವು ಹೇಳುವಂಥ ಪ್ರಸ್ತಾವದಲ್ಲಿ ಆ ದಿನ ತುಂಬಿದ ಸೋಮವಾರ ತುಂಬಿದ ಹುಣ್ಣಿವೆ ನಟ್ಟಿರಳು ನಡುರಾತ್ರಿ ಕಾಡಿನಲ್ಲಿ ಏನು ನಡೆಯಿತೆಂದು ನಾವಾದರೂ ಹ್ಯಾಂಗೆ ಹೇಳೋಣ? ನಿಮಗೂ ತಿಳಿದಿರುವಂತೆ ಯಕ್ಷಿಯ ಗುಡಿಯಾಚೆ ದೂರದ ಮರಗಳ ಅಡರಿ ಕುಂತಿದ್ದೆವಾಗಿ ನಮಗೂ ತಿಳಿಯದು. ಆದರೆ ಶಿವನ ಜಡೆಯಂಥ ಶಿವರಾತ್ರಿಯಲ್ಲಿ ನಾವಿನ್ನೂ ಸಾವಿರ ವರ್ಷ ಚಂದಮುತ್ತನ ಕಥೆಯ ಹೇಳಬೇಕೆಂದಿರುವುದರಿಂದ ಈ ಕಥಾಕೊಂಡಿಯ ಪತ್ತೆ ಹಚ್ಚಲೇಬೇಕಲ್ಲವೆ? ಇಂತಪ್ಪ ಕಷ್ಟ ನಿಷ್ಠೂರದಲ್ಲಿ ಸಿಕ್ಕಿಕೊಂಡು ನಾವು ಸಾವಳಗಿ ಶಿವ ಶಿವಾ ಎಂದು ಕೈಹೊತ್ತು ಕುಂತಿರಬೇಕಾದರೆ - ಸುಳಿವು ಸಿಕ್ಕಿತು ಶಿವನೆ !

ಒಂಬತ್ತು ಹಗಲು ಒಂಬತ್ತನೇ ರಾತ್ರಿ ಕಳೆದ ಮ್ಯಾಕೆ ಚಂದಮುತ್ತ ಬೋಧೆಗೊಂಡು ಕೂಸಿನ ಕನವರಿಕೆಯಂತೆ ಮಾತಾಡಿದ. ರಾತ್ರಿಯೆಲ್ಲ ಎವೆ ಮುಚ್ಚದೆ ಅಡ್ಡಗೋಡೆಯ ನೆಮ್ಮಿ ಮಗನ ಕಾಯುತ್ತಿದ್ದ ಲಕ್ಕಬ್ಬೆಯ ಕಣ್ಣಲ್ಲಿ ಬೆಳಕಾಡಿತು. ಆದರೆ ಆ ಬೆಳಕು ಬಹಳ ಹೊತ್ತು ಉಳಿಯಲಿಲ್ಲ. ಯಾಕೆಂದರೆ ಚಂದಮುತ್ತಿನಿಗೆ ಬಾಯಿ ಬಂತು, ಗ್ಯಾನ ಬರಲಿಲ್ಲ. ಏನೊ ಧ್ಯಾನಿಸಿದ. ದೂರದಿಂದಲಿ ಯಾರೊ ಕೂಗಿ ಕರೆಧಂಗೆ ಓಃ ಎಂದು ಎದ್ದ. ಯಾರೊಂದಿಗೋ ಮಾತಾಡಿದ. ನಾಯಿ ಬೊಗಳಿದರೆ ಹೆದರಿ ಥರಾಥರನೆ ನಡುಗಿದ. ಅಬ್ಬೆ ಹೇಳಿದಳು:

ಎಲೆ ಮಗಾ,
ಎದುರಿಗಿರೋಳು ನಿನ್ನ ಅಬ್ಬೆ.
ಇನ್ನಾರದೋ ಎದುರಿಗಿದ್ದಂತೆ ನುಡಿದಾಡುವಿಯಲ್ಲಪ್ಪ
ಗಾಳಿಯಲ್ಲಿ ಯಾರೋ ಕದ್ದು ನಿಂತವರಂತೆ
ಆ ಕಡೆ ನೋಡುವಿಯಲ್ಲ.
ಯಾರಿದ್ದಾರೆ ಅಲ್ಲಿ?
ಗಾಬರಿಯೆ?
ನಿನ್ನ ಹೆದರಿಸುವಂಥವರು ಯಾರಿದ್ದಾರೆ ಅಲ್ಲಿ?

ನಾನಿಲ್ಲವೆ ನಿನ್ನ ಜೊತೆಗೆ?
ನಾಯಿ ಬೊಗಳಿದರ್ಯಾಕೆ ಬೆಚ್ಚಿ ಬೀಳುವಿಯಪ್ಪ?
ಅದು ನಿನ್ನದೆ ಅಲ್ಲವೆ ನಾಯಿ?
ನಾನಾಡಿದ್ದು ಕೇಳಿಸೋದಿಲ್ಲವೆ?
ಯಾಕೆ ಮಾತಾಡುವುದಿಲ್ಲ? ಗುರುತಿಲ್ಲದವರ
ಹಾಂಗೆ ನನ್ನ ಕಡೆ ನೋಡಿದರೆ ನನಗೆ
ಹೆದರಿಕೆಯಾಗೋದಿಲ್ಲವೆ?
ಇಲ್ಲಿದ್ದೂ ಇನ್ನಾವ ಲೋಕದಲ್ಲಿರುವೆ?
ಯಾವ ಲೋಕದ ಮಾತು ಹೇಳುತ್ತಿರುವೆ ಕಂದಾ?

ಅಬ್ಬೆಯ ನೋಡುತ್ತ ಬಹಳ ಹೊತ್ತು ಕಣ್ಣೀರು ಸುರಿಸಿದ ಚಂದಮುತ್ತ. ಮಗನ ಕಂಡಷ್ಟೂ ಅಬ್ಬೆಯ ಕಡುದುಃಖ ಹೆಚ್ಚಾದವು. ಕಣ್ಣೀರು ಒರೆಸಿ, ಮಡಿಲಿನಲ್ಲಿ ಮಲಗಿಸಿಕೊಂಡಳು. ಮಗನ ಕಾದ ಸ್ಪರ್ಶವಾದದ್ದೇ ಹಡೆದೊಡಲಿಗೆ ಕೆಂಡ ಸುರಿದಂತಾಗಿ ಗರ್ಭವ ಹಿಡಿದುಕೊಂಡಳು ತಾಯಿ; ಶಿವನಿಗೆ ಹೇಳಿದಳು:

ಭಕ್ತಿ ಮಾಡಿದ್ದಕ್ಕೆ ನೀ ಕೊಟ್ಟ ಫಲ ಈ ಬದುಕು,
ಅದು ಕಣ್ಣೀರಲ್ಲಿ ಕರಗುತ್ತಿದೆ.
ಭೋಂ ಬೋಳೇಶಂಕರಾ
ತನ್ನೊಳಗೆ ತಾನೇ ಹರಾ - ಅಂತ
ಮಸಣದಲ್ಲಿ ಮೈಮರೆತು ಕುಂತರಾಯ್ತೆ ಶಿವನೆ?
ಹದಿನಾಕು ಲೋಕ ಎದೆಗವಚಿಕೊಂಡವನಿಗೆ
ನನ್ನ ಮಗನೊಂದು ಭಾರವೆ?
ಭಕ್ತರ ಜೀವಕ್ಕೆ ನೀನಲ್ಲವೆ ಜಾಮೀನು?
ನಿನ್ನ ಹೆಸರುಗೊಂಡ ಮ್ಯಾಕೆ
ಇನ್ನ್ಯಾರು ಸಲಿವ್ಯಾರು ಬಂದು?
ಹೋಗಲಿ, ಸಾಯುವ ಕಂದನ ನೋಡಿ ತೃಪ್ತಿಯಾಯಿತೆ ನಿನಗೆ?
ಅದನಾದರು ಹೇಳು ಹೇಳೆನುತ,

ಕಣ್ಣುಮುಚ್ಚಿ ಅರೆನಿದ್ರೆಗೆ ಸಂದಳು ಅಬ್ಬೆ. ಇಂತಪ್ಪ ವ್ಯಾಳ್ಯಾದಲ್ಲಿ ಮಂಚದ ಕಾಲಿನ ಗೊಂಬೆಗಳೆರಡು ಮುಂದೆ ಬಂದು
ಮಾತಾಡಿಕೊಂಡವು ಶಿವಾ;

**ಗೊಂಬೆ ೧ :** ಹಿಂಗಾದರೆ ಹೆಂಗಕ್ಕೆ?
ಹಗಲೊಂಬತ್ತು ಇರುಳೊಂಬತ್ತಾದರೂ
ಚಂದಮುತ್ತನ ಗಂಟಲಗಾಯ ಮಾಯಲಿಲ್ಲ.
ದಮ್ಮಯ್ಯಾ ದಕ್ಕಯ್ಯಾ ಎಂದು
ದಿನಾ ಹೊಸ ಹೊಸ ಕಣ್ಣೀರನಳುತ್ತಿದ್ದಾಳೆ ತಾಯಿ.
ಹಾಲು ಹೂವಿನಂಥ ಹುಡುಗನ್ನ ಕಂಡು

ನಮಗೇ ಹಿಂಗಾದರೆ
ಹೆತ್ತ ಕರುಳಿಗೆ ಹೆಂಗಾಗಬೇಡ !
ಚಂದಮುತ್ತನ್ನ ಗುಣಪಡಿಸಲು
ಉಪಾಯವೇನೂ ಇಲ್ಲೇನಕ್ಕಾ?

**ಗೊಂಬೆ ೨ :** ಇದೆ ತಂಗೀ ಯಕ್ಷೀಗುಡಿಯ ಎಡಗಡೆ
ನಾತಿದೂರ ನಾತಿ ಸಮೀಪ ನೇರಳೆ ಮರದಡಿ
ಗೇಣುದ್ದದ ಗೊಂಬೆ ಬಿದ್ದಿದೆ.
ಕರಿಕೂದಲು ಪೋಣಿಸಿದ ಸೂಜಿಯಿದೆ.
ಅದನ್ನ ಕಿತ್ತಸೆದರೆ
ಚಂದಮುತ್ತನ ಗಾಯ ಮಾಯುತ್ತದೆ.

**ಗೊಂಬೆ ೧ :** ಗೊಂಬೆಗೂ ಚಂದಮುತ್ತನಿಗೂ ಏನಕ್ಕ ಸಂಬಂಧ?

**ಗೊಂಬೆ ೨ :** ಅಗೊ ಅಗೊ ಲಕ್ಕಬ್ಬೆಗೆ ಎಚ್ಚರವಾಯ್ತು !

ಎನ್ನುತ್ತ ಗೊಂಬೆಗಳೆರಡೂ ಹಿಂದೆ ಸರಿದವು. ಲಕ್ಕಬ್ಬೆ ಕನಸಿನಲ್ಲೆಂಬಂತೆ ಗೊಂಬೆಗಳ ಮಾತು ಕೇಳಿಸಿಕೊಂಡಿದ್ದವಳು ಅವಸರದಿಂದ ಎಚ್ಚತ್ತಳು. ಬೆಳ್ಳಿ ಮೂಡಿದ್ದೇ ತಡ ಯಕ್ಷಿಯ ಗುಡಿಗೊಡಿ ನೇರಳೆ ಮರದಡಿ ಹುಡುಕಿದಳು. ಗೊಂಬೆ ಸಿಕ್ಕಿತು! ನೋಡಿದರೆ ಗೊಂಬೆಯ ಕೈಯಲ್ಲಿ ಕೊಳಲಿದೆ ! ತಲೆಯಲ್ಲಿ ನವಿಲುಗರಿಯಿದೆ ! ಗೊಂಡೆಯ ಲಂಗೋಟಿ, ಹೆಗಲಿಗೆ ಕಂಬಳಿಯಿದೆ. ಕರುವಿಗಿರುವಂಥ ತೆರೆದ ಕಣ್ಣಲ್ಲಿ ನಿಚ್ಚಳ ಬೆಳಕಿದೆ ! ಕರಿಕೂದಲು ಪೋಣಿಸಿದ ಸೂಜಿಯನ್ನ ಕತ್ತಿನಲ್ಲಿ ಚುಚ್ಚಿದ್ದಿದೆ !

ಶಿವ ಶಿವಾ ಎಂದು ವಿಸ್ಮಯಂಬಡುವಲ್ಲಿ ಅಬ್ಬೆಗೆ ನಿಚ್ಚಳವಾಗಿ ಏನಪ್ಪ ಗೊತ್ತಾಯಿತು ಅಂದರೆ: ಇದ್ಯಾರೋ ನವತಂತ್ರಿ ನರಸಯ್ಯ ಮಾಡಿದ ಚಂದಮುತ್ತನ ಗೊಂಬೆ. ಮದ್ದು ಮಾಟ ಮಾಡಿದ್ದಾನೆ ಮಗಂಗೆ !

- ಎಂದು ಕೊತ ಕೊತ ಕುದಿವ ಕೋಪದಿಂದ ಗೊಂಬೆಯ ಕತ್ತಿನಲ್ಲಿ ನೆಟ್ಟ ಸೂಜಿಯ ಕಿತ್ತು ಥೂ ಎಂದುಗಿದು ದೂರಕ್ಕೆಸೆದರೆ ಅಲ್ಲಿ -

## ೪೨. ಹಾಗಿದ್ದರಿದು ಹಂಗಲ್ಲ ನಿಲ್ಲು

- ಇಲ್ಲಿ ಗೂಡಿನಲ್ಲಿ ಮಲಗಿದ್ದ ಚಂದಮುತ್ತನ ಕತ್ತಿನ ನೋವು ಹಗುರವಾಗಿ ಬಿಗಿಯಾದ ಗಾಯ ಸಡಿಲಗೊಂಡವು.

ಆಮೇಲಾಮೇಲೆ ಚಂದಮುತ್ತನಿಗೆ ಗುಣವಾಯಿತು ಶಿವನೇ!

ಒಂದು ದಿನ ಅಬ್ಬೆ ಕಾಡಿನ ಕಡೆಗೆ ಹೋಗಿದ್ದಾಗ ಕುಲಗುರು ಒಬ್ಬನೇ ಚಂದಮುತ್ತನ ನಾಡಿ ನುಡಿತವ ಅಲಿಸುತ್ತಿದ್ದಾಗ ಶಿಷ್ಯ ಹೇಳಿದ:

“ನಿನ್ನೊಂದಿಗೆ ಏಕಾಂತವ ನುಡಿದಾಡುವುದಿದೆ ಶಿವನೇ”

“ಹೇಳು ಮಗನೆ. ಈಗ ಯಾರು ಇಲ್ಲವಲ್ಲ”

“ಹುಣ್ಣಿವೆ ದಿನ ನನ್ನ ಕೊಳಲು ಆಲಿಸಿದೆಯ ತಂದೆ?”

“ಆಲಿಸಿದೆನಪ್ಪ, ಅಮೋಘವಾಗಿತ್ತು. ಇಂತಿಪ್ಪ ಸಂಗೀತವ ನಾನು ಜನ್ಮಾಪಿ ಕೇಳಿರಲಿಲ್ಲ.”

ಚಂದಮುತ್ತ ತಕ್ಷಣ ಗುರುವಿನ ಕಾಲುಮುಟ್ಟಿ,

“ಅದೆಲ್ಲ ನಿನ್ನ ದಯೆ ಶಿವಪಾದವೇ”

ಎಂದು ನಮಸ್ಕರಿಸಿದ.

“ನನ್ನ ದಯೆ ಹೌದೋ ಅಲ್ಲವೋ ನಿನ್ನ ಭಕ್ತಿಯಿಂದ ಸಂತೋಷವಂತೂ ಆಯಿತಪ್ಪ, ಅದು ಯಾವ ರಾಗ ಮಗನೇ”

“ಅದು ತಿಂಗಳ ರಾಗ ಶಿವನೇ! ವ್ರತಾಚರಣೆ ಮಾಡಿ ಕಲಿತೆ”

“ನಿನ್ನ ವ್ರತಾಚರಣೆಗೆ ಭಂಗವಾಗಿದ್ದರೆ ಹೇಳು: ಆ ರಾಗದ ಅಂತಿಮದಲ್ಲಿ ನಿಂತಿರುವ ಸಿದ್ಧಿ ಯಾವುದು ಕಂದ?”

“ಶಿವ ಪಾದವೇ, ತಿಂಗಳು ರಾಗವ ಭಕ್ತಿಯಿಂದ ನುಡಿಸುತ್ತಿದ್ದರೆ ಯಕ್ಷಿಗೆ ರೆಕ್ಕೆ ಮೂಡಿ ಪಕ್ಷಿಯಾಗಿ ಆಕಾಶದಲ್ಲಿ ಹಾರಾಡುತ್ತಾಳೆ. ಅದೇ ಸಿದ್ಧಿ ಶಿವನೇ”

“ಇದಿಷ್ಟೇ ಆದಲ್ಲಿ ಅದೊಂದು ಕ್ಷುದ್ರ ಕೀರ್ತಿಯ ವ್ಯಸನವಲ್ಲವೆ ಕಂದಾ?”

“ಅದು ಆಕಾಶದಂತುಪಾರವನರಿವ ಹವಣಿಕೆ ತಂದೆ! ಬೆಳ್ದಿಂಗಳಲ್ಲಿ ಈಜುತ್ತ ಚಂದ್ರನೆಂಬ ಕನ್ನಡಿಯ ಮೂಲಕ ಶಿವನ ನೋಡುವುದೇ ಅಂತಿಮ ಗುರಿ - ಗುರುಪಾದವೇ”

ಕುಲಗುರುವಿನ ಹೃದಯ ಆನಂದದಿಂದ ಭಗ್ಗನೆ ಹೊತ್ತಿಕೊಂಡಿತು. ತಕ್ಷಣ ಅಭಿಮಾನದಿಂದ ಚಂದಮುತ್ತನ್ನ ಬಾಚಿ ತಬ್ಬಿಕೊಂಡು “ಭೇಶ್ ಭೇಶ್! ನಿನಗೆ ಅಕ್ಷಯವಾಗ್ಲಿ ನನ್ನಪ್ಪ. ಅಂಥ ಅನುಭವದ ಹೊಸ್ತಿಲಲ್ಲಿ ನಿಂತ ಹಂಗಾಯ್ತು ಆ ದಿನ ನನಗೆ. ಆದರೆ ಹಾಡಿನಲ್ಲಿ ಏನೋ ಕೊರತೆ ಕಂಡು ಬಂತಲ್ಲವೆ?”

“ಹೌದು ಶಿವನೆ, ಸಕಾಲದಲ್ಲಿ ಓಂಕಾರದ ಅಂಕುರವಾಗಬೇಕಿತ್ತು. ಅದು ನನ್ನ ಮೊದಲ ಯತ್ನವಾದ್ದರಿಂದ ಹಂತ ಹಂತವಾಗಿ ನುಡಿಸುತ್ತ ಮತ್ತು ಅರಿಯುತ್ತ ಇರುವಾಗ ಯಾರೋ ನನ್ನ ಕುತ್ತಿಗೆ ಸೂಜಿ ಚುಚ್ಚಿ ಸೊಲ್ಲಡಗಿಸಿದರು ಶಿವನೆ….”

“ಯಾರು?”

“ಚುಚ್ಚುವ ಹಸ್ತ ಮತ್ತು ವ್ಯಕ್ತಿ ಎರಡೂ ಅದೃಶ್ಯವಾಗಿದ್ದವು ತಂದೇ”

“ಅಧೆಂಗಾದೀತು ಮಗ? ವ್ರತಾಚರಣೆಗೆ ಕೂತಾಗ ನಿನ್ನ ಸುತ್ತ ರಾಗದಿಂದ ಮಂತ್ರಮಂಡಳ ಕೊರೆಯಲಿಲ್ಲವೆ?”

“ಕೊರೆದೆ ಶಿವನೆ!”

“ಕಾಯುವ ದೇವರನ್ನ ಅವರವರ ದಿಕ್ಕಿನಲ್ಲಿ ಪ್ರತಿಷ್ಠಾಪಿಸಿ ಬಂದೋಬಸ್ತ್ ಮಾಡಲಿಲ್ಲವೆ?”

“ಮಾಡಿದ್ದೆ ಶಿವನೆ, ಅಲ್ಲೇ ಏನೋ ಊನವಾದ ನೆನಪು”

“ಹ್ಯಾಂಗೇ ಸೈ. ಯಕ್ಷಿಯ ಪಕ್ಷಿಯ ಮಾಡಿ ಹಾರಿಸುವ ತಿಂಗಳು ರಾಗದ ತಂತ್ರ ಇನ್ಯಾರಿಗೋ ಬೇಕಾಗಿದೆ. ಅದಕ್ಕೇ ಅವರು ನೀ ಮಾಡಿದ ತಪ್ಪಿನೊಳಗೆ ತೂರಿ, ಮಂತ್ರ ತಂತ್ರ ಯಂತ್ರದ ಗೊಂಬೆಯ ಮಾಡಿ, ನಿನ್ನ ಹಾಡು ನಿಲ್ಲಿಸಿ, ಹಾರುವ ಯಕ್ಷಿಯ ಕೆಳಕ್ಕೆ ಬೀಳಿಸಿ ವಶವರ್ತಿ ಮಾಡಿಕೊಂಡು ಹೋಗಿದ್ದಾರೆ. ಇಗೋ ಇಲ್ಲಿದೆ ನಿನ್ನ ಗೊಂಬೆ.”

- ಎಂದು ಅಬ್ಬೆ ಕೊಟ್ಟ ಗೊಂಬೆಯ ತೋರಿಸಿದ. ಚಂದಮುತ್ತನಿಗೆ ನಿಚ್ಚಳವಾಗಿ ಕಾರ್ಯಕಾರಣ ಹೊಳೆದವು ಆದರೆ ಇಂತಪ್ಪ ಗೊಂಬೆಯನ್ಯಾರು ಮಾಡಿರಬಹುದೆಂದು ಇಬ್ಬರಿಗೂ ಬಗೆಹರಿಯಲಿಲ್ಲ.

## ೪೩. ದಾರಿಯಿದೆ ಶಿವನೆ

ಚಂದಮುತ್ತನ ಕತ್ತಿನ ನೋವು ಕಮ್ಮಿಯಾಗಿ
ಅಧಿಕವಾದವು ಯಕ್ಷಿಯ ವಿರಹದ ನೋವು.
ಅವಳ ಗ್ಯಾನದಲ್ಲಿ ನೂರೊಂದು ನೆನೆದ,
ನೂರೊಂದು ಪರಿತಪಸಿದ.
ಯಕ್ಷಿ ವಿರಹಿತ ಲೋಕ ನಾಯಿ ನರಕವೆಂದು
ಕಣ್ಣೀರುಗರೆದ
ಹಾಳು ಸುರಿವ ಯಕ್ಷಿಯ ಗುಡಿಯ ನೋಡಿ
‘ನನ್ನ ಯಕ್ಷಿಗೇನಾಯಿತು ಶಿವನೆ?’ ಎಂದು ಯಾರಿಲ್ಲದಾಗ
ಕರಳು ಬಾಯಿಗೆ ಬರುವಂತೆ
ಬಾಯಿ ಬಡಕೊಂಡತ್ತ, ತಲೆ ಹೊಡೆಕೊಂಡತ್ತ.
ಕಾಡು ನೆನಪಿನ ಸ್ಮಶಾನವಾಗಿ, ಬೆಳ್ದಿಂಗಳು ಬೂದಿಯಾಗಿ
ತೇಲುವ ಹೆಣ ಚಂದ್ರನ ಕಂಡು ಕರುಳು ಹಿಂಡಿಕೊಂಡತ್ತ.
ನಿದ್ದೆ ನೀರಡಿಕೆ ಇಲ್ಲದೆ
ಹಾರಿತೆಲ್ಲಿಗೆ ನನ್ನ ಬೆಳ್ಳಾನ ಬಿಳಿ ಹಕ್ಕಿ ಎಂದು
ಹಾಕಿಕೊಂಡತ್ತ.
ಕೊನೆಗೆ ಅವಳಿಲ್ಲದೆ ಈ ನಾಯಿಜಲ್ಮ ಯಾಕಿರಬೇಕೆಂದು
ದುಃಖಶೋಕವ ಮಾಡುತ್ತ
ಅಬ್ಬೆಗೂ ಕುಲಗುರುವಿಗೂ ಹೇಳದೆ ಕೇಳದೆ
ಹಟ್ಟಿಯ ಬಿಟ್ಟು ಏಕಾಂಗಿ ಹೊರಟ.

ಅಡವೀಲಿ ನಡೆದು ಬಂಡೆ ಹತ್ತಿಳಿದು
ಕಲ್ಲುನೆಲ ತುಳಿದ.
ಹಗಲು ರಾತ್ರಿ ಅನ್ನದೆ, ಹಾವು ಹುಲಿ ಮೃಗ ಜಾತಿ ಅನ್ನದೆ

ಕಾಲಿಗೆ ಮುಳ್ಳು ಚುಚ್ಚಿ ರಕ್ತ ಸುರಿಸುತ್ತಾ
ಕಾಲೆಳೆಯುತ್ತಾ, ಕೈ ಊರುತ್ತಾ
ಬೀಳುತ್ತಾ, ಏಳುತ್ತಾ ನೀರು ನೆರಳೂ ಇಲ್ಲದಲ್ಲಿ ನಡೆದ.
ಇದ್ದಲ್ಲಿ ನಡೆದ.
ಹಕ್ಕಿ ಪಕ್ಷಿ ಇಲ್ಲದಲ್ಲಿ ನಡೆದ, ಇದ್ದಲ್ಲಿ ನಡೆದ.

ಯಕ್ಷಿಯ ಕೂಗಿ ಹುಡುಕಿದ. ಕಾಕು ಹೊಡೆದು ಹುಡುಕಿದ.
ಮ್ಯಾಲೂ ನೋಡಿದ ಕೆಳಗೂ ನೋಡಿದ,
ಅಕ್ಕಪಕ್ಕ ಆಸುಪಾಸು ನೋಡುತ
ಯಕ್ಷಿ ಯಕ್ಷೀ ಎಂದು
ಬಿದ್ದೂ ಕೆಡೆದೂ ಒದ್ದಾಡಿಕೊಂಡು ನಡೆದ.

ದಾರಿಯಲ್ಲಿ ಹಿರಿಯ ಜಾಲಿ, ಕಿರಿಯ ಜಾಲಿ
ಮರಕ್ಕೆ ಮರ ಕೂಡಿಕೊಂಡು ಚಂದಮುತ್ತನ
ಜಡೆ ಗಡ್ಡ ಕಿತ್ತವು. ಆ ಮರಕ್ಕೂ ತಾಗಿ
ಈ ಮರಕ್ಕೂ ತಾಗಿ ಮೂರ್ಛೆ ಬಿದ್ದಿರುವಲ್ಲಿ –
ಮರದಲ್ಲಿದ್ದ ಮರಿ ಹಕ್ಕಿ ತಾಯಿಗೆ ಹೇಳಿತು:

ಯಾರವ್ವ ಇವನು?
ಇವನ ಕಂಡರೆ ಮರಮರ ಮರುಗುತ್ತಾವೆ ತರುಮರ
ಎಲೆಗಳ ಉದುರಿಸುತಾವೆ,
ಹೂ ಹೂ ಬಾಡಿ ಕತ್ತು ಚೆಲ್ಲುತ್ತಾವೆ.
ಹರಿವ ತೊರೆ ಗೋಗರೆಯುತಾವೆ.

ಕೊಳಲು ನುಡಿಸಿ ಮಳೆ ತರಿಸಿದ ಮಹಾರಾಯ ಇವನಲ್ಲವೆ?
ಎಷ್ಟೊಂದು ಹಾಡು ಕಲಿತೆವು ಇವನಿಂದ.
ಇವನಿಲ್ಲದ ಹಾಡುಂಟೆ?

ನಾವೆಷ್ಟು ಹಾಡಬೇಕೆಂದರೂ ಅತ್ತಹಾಗಿದೆಯಲ್ಲ ಇವತ್ತು!
ನೀನ್ಯಾಕೆ ಅಳುತಿರುವೆ ತಾಯಿ?

ಬಹಳ ಹೊತ್ತಾಗಿ ತಂಗಾಳಿಗೆಚ್ಚತ್ತು ಕಿರಿಗಣ್ ತೆರೆದಾಗ ಎದುರಿಗೆ ಬ್ರಹ್ಮರಾಕ್ಷಸ ಕಳಚಿಬೀಳುವಂತೆ ಕಣ್ ತೆರೆದುಕೊಂಡು, ಅಡಿಯಿಂದ ಮುಡಿತನಕ ಇಡಿಯಾಗಿ ನುಂಗುವಂತೆ ನೋಡುತ್ತ ಕುಂತಿತ್ತು! 'ಸತ್ತನೋ ಶಿವನೇ' ಎಂದು ಗಾಬರಿಯಿಂದೇಳಬೇಕೆಂಬಲ್ಲಿ ಗಪ್ಪನೆ ಅವನ ಕಾಲು ಬಿಗಿಯಾಗಿ ಹಿಡಿದು "ಗುರುತಾಗಲಿಲ್ಲೇನೋ ನನ್ನಪ್ಪಾ?" ಎಂದಿತು. ಹೊಯ್ಕಿನಿಂದರ್ಧಾ ಸಂಶಯದಿಂದರ್ಧಾ ನೋಡಿದ. ಮೈಮುಖದ ತುಂಬ ಹೆಂಗೆಂದರೆ ಹಂಗೆ ಹುಲುಸು ಬೆಳದ ಕೂದಲು ಜಡೆಗಟ್ಟಿ ಅಂಗಾಂಗ ಸಾಂಗೋಪಾಂಗ ಯಾವುದೆಂದು ತಿಳಿಯದಂತಿತ್ತು. ಕಳಚಿಬೀಳುವಂತಿದ್ದವು ಕೆಂಡಗಣ್ಣು. ಕೋರೆಹಲ್ಲಿಳಿದು ತುಟಿಯ ಹೊರಗೆ ಕಾಣಿಸುತ್ತಿದ್ದವಾಗಿ ಸದಾ ಕೋಪಗೊಂಡ ರಾಕ್ಷಸನ ಹಾಗೆ ಕಾಣುತ್ತಿದ್ದ. ಸೊಂಟದಲ್ಲಿ ಮನುಷ್ಯರು ನೇಯ್ದ ಬಟ್ಟೆಯಿದ್ದುದರಿಂದ ಧೈರ್ಯ ಬಂತು. ಅಷ್ಟರಲ್ಲಿ ಮತ್ತದೇ ಹೇಳಿತು;

“ನಿನ್ನ ಪಾಪಿ ಗುರು ಮಹಾನುಭಾವನ ಮರೆತೆಯೇನಪ್ಪ?” ಗುರುತಾಯಿತು. ಆದರೆ ನನ್ನ ಗುರುಪಾದವೆಲ್ಲಿ? ಈ ವಿಕಾರವೆಲ್ಲಿ? ಎಂದು ಆಶ್ಚರ್ಯದಿಂದ ನೋಡುತ್ತಿರುವಂತೆ ಮಹಾನುಭಾವ “ಕಾಪಾಡೊ ನನ್ನಪ್ಪಾ” ಎಂದು ಚಂದಮುತ್ತನ ಪಾದಂಗಳ ಹಣೆಗೆ ಗಿಟ್ಟಿಸಿಕೊಂಡು ಬಿಕ್ಕಿಬಿಕ್ಕಿ ಅಳತೊಡಗಿದ. “ಅಯ್ಯಯ್ಯೋ ಶಿವಪಾದವೇ” - ಎನ್ನುತ್ತ ಕಾಲು ಬಿಡಿಸಿಕೊಂಡು ಚಂದಮುತ್ತ ಗುರುವಿನ ಪಾದ ಹಿಡಿಯಲು ಹೋದಾಗ ಅವನೊಪ್ಪದೆ ಇಬ್ಬರೂ ಪರಸ್ಪರ ಕೈಹಿಡಿದುಕೊಂಡರು. “ಇದೇನು ಗುರುಪಾದವೇ?” ಅಂದ ಚಂದಮುತ್ತ. ಮಹಾನುಭಾವ ಪಶ್ಚಾತ್ತಾಪದಲ್ಲಿ ಬೆದ ಬೆದ ಬೆಂದು ಹೋಗಿದ್ದ;

“ನಿನ್ನ ಘಾತಿಸಿದ ಕಥೆ ಹ್ಯಾಗೆ ಹೇಳಲಿ? ಆದರೂ ನೀನು ಈ ಕಪಟವಿದ್ಯನ ತೆಪ್ಪು ಹೊಟ್ಟೆಗೆ ಹಾಕಿಕೊಳ್ಳತ್ತೀ ಅಂತಾದರೆ ಮಾತ್ರ ಹೇಳುತ್ತೇನಪ್ಪ”

“ನಾತಿ ವಿಸ್ತಾರ ನಾತಿ ಹ್ರಸ್ವ ಅದೇನು ಹೇಳು ಶಿವಪಾದವೇ”

ಆಮೇಲೆ ದಮ್ಮಯ್ಯಾ ದಕ್ಕಯ್ಯ ಎಂದು ಸತ್ಯ ಸಂಗತಿಯನ್ನೊಪ್ಪಿಕೊಳ್ಳುತ್ತಾ ಮಹಾನುಭಾವ ಹೀಗಂದ:

ನೀನು ಕೊಳಲು ನುಡಿಸಿ ಮಳೆ ತರಿಸಿದ್ದೇ ಆಯಿತು ನೋಡು
ಸಮೂಹ ಸನ್ನಿಯಂತೆ ನಿನ್ನ ಕೀರ್ತಿ
ನಾಕು ರಾಜ್ಯ ಎಂಟು ದಿಕ್ಕಿಗೆ ಹಬ್ಬುವುದ ನೋಡಿ ಕೇಳಿ
ಅಸೂಯೆ ಅಧಿಕವಾಗಿ
ಹೊಟ್ಟೆಯ ಕಿಚ್ಚು ತಳಮಳಿಸಿತು.
ಮಳೆರಾಯನ ಪಳಗಿಸಿದೆಯೆಂದು, ಶಿವನ ಒಲಿಸಿದೆಯೆಂದು
ದಿನಾ ಬಂದ ಥರಾವರಿ ಕತೆ ಪುರಾಣ ಕೇಳಿ ಕೇಳಿ
ತಾಮಸಕ್ಕೊಳಗಾದೆ.
ನಿಜ ಹೇಳುತ್ತೇನೆ ಮಾರಾಯ: ಆಮೇಲಾಮೇಲೆ
ಲೋಕ ಲೌಕಿಕದಲ್ಲಿ ನಾನು ಬದುಕಲೇ ಇಲ್ಲ.
ನೋವನ್ನ ಹ್ಯಾಗೆ ಸಹಿಸಿದೆನೆಂದು ಕೇಳಬೇಡ -
ಇದ್ದಲ್ಲಿ ಇರಲಾಗದೆ, ಬಿದ್ದಲ್ಲಿ ಬಿದ್ದಿರಲಾಗದೆ
ಕೊನೆಗೆ ನಿನ್ನ ಹಟ್ಟಿಗೆ ಬಂದೆ, ನಿನ್ನ ನೋಡುವುದಕ್ಕೆ.
ಸೇಡಿನ ಸೆರೆಮನೆಯಲ್ಲಿ ಸಿಕ್ಕ ಹಂಗಾಯ್ತು.
ಕೆಟ್ಟ ಪಿಶಾಚಿ ಚೆನ್ನಮುತ್ತ ಬಂದ ನನ್ನ ಸಹಾಯಕ್ಕೆ,
ಅಥವಾ ನಾನು ಅವನ ಸಹಾಯಕ್ಕೆ.
ಅವನ ದೇಹಂತ ದೇಹ ಸೇಡಿನಿಂದ ಕೊಳೆಯುತ್ತಿತ್ತು.
ನಿನ್ನ ದುರ್ಗುಣಗಳು ಸಾವಿರ ಬಾರಿ ಜಪಿಸಿದ
ನಿನ್ನ ಗುಣಗಳ ನೇತಿಗೆಳೆದು ಮಾತಾಡಿದ
ಸುಳ್ಳು ಹೇಳಿ ಕಪಟವೊಡ್ಡಿದ.
ಶಿಷ್ಯನಾಗುವೆನೆಂದ. ತನ್ನ ಗುರುಭಕ್ತಿಗೆ
ಶಿವನೇ ಜಾಮೀನು ಎಂದ.
ಸುಖ ಸವಲತ್ತುಗಳ ಆಮಿಷ ತೋರಿದ.

ಕಾಲಾನುಕಾಲದಲಿ ಇದಕೂ ಬೆಲೆ ತೆರಬೇಕೆಂದು
ತಿಳಿದಿದ್ದರೂ ನಾನ್ಯಾಕೆ ಅವನ ಮೋಡಿಗೆ ಸೋತೆನೋ,
ಶಿವನನ್ನ ಕಡೆಗಣಿಸಿ ಒಪ್ಪಿಕೊಂಡೆ.

ನಿನ್ನ ದನಗಳಿಗೆ ಹಸಿರು ವಿದ್ಯೆ ಗಿಡಮೂಲಿಕೆ ಮಾಡಿದೆವು.
ತೊಣಚಿರೋಗ ತಂದಿಕ್ಕಿದೆವು
ನಿನ್ನ ಹಟ್ಟಿ ಹಾಳಾಗುವಂತೆ
ಕೊಟ್ಟಿಗೆ ಬಯಲಾಗುವಂತೆ ಮಾಟ ಮಾಡಿದೆವು;
ನಮ್ಮ ಆಟ ನಡೆಯಲಿಲ್ಲ.
ಆಮೇಲೆ ತಿಳಿಯಿತು; ಯಕ್ಷಿಯ ರಕ್ಷೆಯಿದೆಯೆಂದು.
ನಿನ್ನ ಹಾಡು ಕದಿಯುವುದು ಸಾಧ್ಯವಿರಲಿಲ್ಲ.
ಯಕ್ಷಿಯ ಕದ್ದು ವಶವರ್ತಿ ಮಾಡಿಕೊ ಶಿವನೇ,
ಹಂಗಾದಲ್ಲಿ ಚಂದಮುತ್ತನ ಕೀರ್ತಿ ಕುಂದಿ
ನಿನ್ನ ಕೀರ್ತಿ ಹಬ್ಬುವುದೆಂದು ಪ್ರಚೋದನೆ ಕೊಟ್ಟ.
ಅಂದೇ ನವತಂತ್ರಿ ನರಸಯ್ಯನ ಮೊರೆಹೊಕ್ಕೆವು.

ಯಂತ್ರ ತಂತ್ರ ಮಂತ್ರಾದಿಗಳ ಕರಿವಿದ್ಯೆ ಮಾಡಿ
ಹಸುವಿನ ಕರುವಿನ ಬಲಿಕೊಟ್ಟೆವು
ಬಲಿ ಕೊಟ್ಟ ಕರು
ಮನುಷ್ಯರ ಥರ ಒದರಿ ಸತ್ತಿತಪ್ಪ!
ಭೈರವನೆದುರಿಟ್ಟ ನಮ್ಮ ನೈವೇದ್ಯ
ಕಪ್ಪೇರಿ ನೋಡ ನೋಡುವುದರೊಳಗೆ
ನರಿ ನಾಯಿಗಳ ಪಾಲಾಯಿತು.
ಆದರೂ ನಾವು ಹಿಂದಿರುಗುವ ಸ್ಥಿತಿಯಲ್ಲಿರಲಿಲ್ಲ,
ಆಗಲೇ ಕತ್ತಿನ ತನಕ ಮುಳುಗಿದ್ದೆವು.

ನವತಂತ್ರಿ ನರಸಯ್ಯನಿಂದ ಕರಿವಿದ್ಯೆಯಲ್ಲಿ
ನಿನ್ನ ಗೊಂಬೆಯ ಮಾಡಿಸಿ
ಗೊಂಬೆಗೆ ಮಲೆಯಾಳ ಮಾಟವ ಮಾಡಿಸಿ ತಂದೆ.

ಆ ದಿನ ನಿನ್ನ ಹಾಡಿಗೆ ಒಲಿದು ಹಾರಾಡುವ ಯಕ್ಷಿಯ ಕಂಡು
ಚಿತ್ತ ವಿಭ್ರಮವಾಯಿತಯ್ಯಾ -
ಮಾಡಬಾರದನ್ನು ಮಾಡಿಬಿಟ್ಟೆ.

ನಿನ್ನ ಹಾಡು ನಿಂತಿತು ನೋಡು: ಸುಖನಿದ್ದೆಯಲ್ಲಿ ಯಾ
ಕನಸಿನಲ್ಲಿ ಚಿಲಿಪಿಲಿ ಜಗತ್ತು
ಒಮ್ಮಿಗಿಲೆ ಎಚ್ಚತ್ತು, ಕಿಟಾರನೆ ಕಿರಿಚಿ

ಸದ್ದುಗದ್ದಲ ಮಾಡಿದವು ಬಹಳ.
ಆಕಾಶದಿಂದ ಕಳಚಿ ಬೀಳುವ ಮುನ್ನ
ಯಕ್ಷಿಯ ಹೊತ್ತುಕೊಂಡೋಡಿ ಬಂದೆ.
ಆಗ ಮೂರ್ಛೆ ಹೋದವಳಿಗೆ ಇನ್ನೂ ಗ್ಯಾನ ಬಂದಿಲ್ಲ.

ಇಂತೆಂಬ ನುಡಿಕೇಳಿ ಏಳೇಳು ಲೋಕದ ರವರುದ್ರಗೋಪ ತಾಳಿದ ಚಂದಮುತ್ತ ತಂತಾನೇ ವಿವೇಕಿಸಿಕೊಂಡು ಹೀಗೆಂದು ಕೇಳಿದ:

"ನಿನ್ನಂಥವರು ಇತಂತಪ್ಪ ಕಾರ್ಯವೆನೆಸಗಬಹುದೇ?"

"ನೀನೇನು ಶಿಕ್ಷೆ ಕೊಟ್ಟರೂ ಅನುಭವಿಸುತ್ತೇನೆ, ದಯವಾಗು ನನ್ನಪ್ಪಾ. ಅಸಹಾಯಕ ಯಕ್ಷಿಯ ದಿನಾ ನೋಡಿಕೊಂಡು ಬಿದ್ದಿರೋದೇ ಘನವಾದ ಶಿಕ್ಷೆ. ಉಪಚರಿಸೋಣವೆಂದರೆ ಆಕೆಯ ಸಮೀಪ ಸುಳಿಯುವುದಕ್ಕೆ ಖಗಮೃಗಜಾತಿ ಬಿಡುವುದಿಲ್ಲ. ಬಿಗಿದ ಮುಷ್ಟಿಯ ದೈವಂಗಳೆಷ್ಟೋ ನನ್ನ ಕತ್ತಿನ ಕಡೆಗೆ ಕ್ರೂರ ದೃಷ್ಟಿ ಬೀರುತ್ತಿದ್ದಾವೆ. ಮನುಷ್ಯರಿಗೆ ಬರುವ ಭಯಂಕರ ರೋಗಗಳು ನನ್ನನ್ನಾಗಲೇ ಆಕ್ರಮಿಸಿಕೊಂಡಿವೆ. ಕಣ್ಣುಮುಚ್ಚಿದರೆ ಒಳಗೆ ಹಿಂಸೆ, ತೆರೆದರೆ ಹೊರಗೆ ಹಿಂಸೆ, ಬ್ರಹ್ಮರಾಕ್ಷಸನೆಂದು ನನ್ನ ಬಳಿಗ್ಯಾರೂ ಸುಳಿಯುತ್ತಿಲ್ಲ. ಬದುಕಿದ್ದಾಗಲೇ ಬ್ರಹ್ಮರಾಕ್ಷಸನಾಗೋದೆಂದರೆ ಅದೊಂದು ಸಿದ್ಧಿಯೇ ನನ್ನಪ್ಪ?

ಪಾಪಿ ಎನ್ನು, ನೀಚ ಎನ್ನು, ಗಂಜಳ ತಿಂದು ಬದುಕುವವ ಅನ್ನು. ನಿರ್ಲಜ್ಜನೆನ್ನು, ಅಧಮನೆನ್ನು, ಮನಸಾರೆ ಬೈದು ನನ್ನ ಅತ್ಮಕ್ಕೆ ತುಸು ಶಾಂತಿ ಕೊಡಪ್ಪಾ.

- ಎಂದು ಸೋತು ಮಾತಾಡಿದ.

"ಈಗ ಆ ಯಕ್ಷಿ ದೇವತೆ ಎಲ್ಲಿದ್ದಾಳೆ ಗುರುಪಾದವೆ?"

* * *

ಗಂಟೆ ಮತ್ತು ಅದರ ನಾಲಗೆಯಲ್ಲಿ ಅಡಗಿ ಕುಂತ ನಾದದ ಹಾಂಗಿರುವ ಶಿವನ ನೆನೆದು ಚಕೋರಿ ಎಂಬ ನಮ್ಮ ಕಥಾನಾಯಕಿಯ ಧರ್ಮಸೆರೆ ಬಿಡಿಸುತ್ತೇವೆ ಮಲಗಿರುವವರು ಎಚ್ಚರವಾಗಿರಯ್ಯಾ,

ಇದು ಜಗದ ಖಾಲಿಗಳನ್ನು ಹಾಡುಗಳಿಂದ
ತುಂಬಿದವನ ಕಥೆ,
ಸ್ಮಶಾನದಲ್ಲಿ ಮೈಮರೆತು ಕುಂತಿದ್ದ ಶಿವ -
ಮರೆತ ಹೆಜ್ಜೆಯ ಹಾಕಿ ಮತ್ತೆ ಕುಣಿಯುವಂತೆ
ಮಾಡಿದವನ ಕಥೆ,
ಕಿವಿಗಳ ಕಿಲುಬು ತೊಳೆದು
ಹೃದಯದ ಕೊಳೆ ಕಳೆದು
ಕಥೆಯ ಕೇಳುವುದಕ್ಕೆ ಸಿದ್ಧವಾಗಿರಯ್ಯಾ,
ಹೃದಯದ ಯಾವುದಾದರೂ ಮೂಲೆಯಲ್ಲಿ
ಒಂದೆರಡು ಕನಸು ಮಲಗಿದ್ದರೆ ಎಚ್ಚರಿಸಿರಯ್ಯಾ

ನಮ್ಮ ಹಾಡು ಕೇಳುವುದಕ್ಕೆ.
ಸ್ವಯಂ ಸಾವಳಗಿ ಶಿವಲಿಂಗ ಸ್ವಾಮಿ
ಪ್ರತ್ಯಕ್ಷ ಕಿವಿ ತೆರೆದುಕೊಂಡು ಕುಂತಿದ್ದಾರೆ,
ಶರಣೆಂದು ಬಾಗಿ ಮುಂದಿನ ಕಥಾ ಸಾರಾಂಶವ
ಹೇಳಬೇಕೆಂದರೆ -

ನೆರಳಿನ ಜೊತೆ ಎಂದಾದರೂ ಗುದ್ದಡಿದ್ದೀರಾ ಶಿವ?
ಬಲು ಬಲು ಸುಲಭ.
ಬೆಳಕಿನ ಬಳಿ ನೀವು ನಿಂತುಕೊಂಡು
ಗೋಡೆಯ ಕಡೆಗೊಮ್ಮೆ ನೋಡಿರಿ
ನೋಡಿದಿರಾ; ಅಕೋ ಮೂಡಿದ್ದಾನೆ ನಿಮ್ಮ ಶ್ರೀ ನೆರಳು!
ಎರಡೂ ಹಸ್ತಗಳನ್ನು ಕಿವಿಮ್ಯಾಲಿಟಗೊಂಡು ಬಾಯಿ ತೆರೆಯಿರಿ.
ತೆರೆದಿರಾ? : ಅಗೋ ಕೊಂಬು ಕೋರೆಹಲ್ಲಿನ ಬ್ರಹ್ಮರಾಕ್ಷಸ!
ನೀವು ಗುದ್ದಿದರೆ ತಿರುಗಾ ಗುದ್ದಿ
ನೆಗೆದರೆ ನೆಗೆದು
ಕುಣಿದರೆ ಕುಣಿದಾಡಿ ಕುಪ್ಪಳಿಸುವವನಲ್ಲವೆ?

ಅನುಮಾನ ಬಂತ?
ನಿಮ್ಮಿಬ್ಬರಲ್ಲಿ ಯಾರು ನಿಜ ಅಂತ?
ಅದೇನೇ ಇರಲಿ ಶಿವನೆ,
ಗೋಡೆಯ ಮ್ಯಾಲೆ ಮೂಡಿದಷ್ಟು ಕತ್ತಲೆಗೆ
ಯಜಮಾನರು ನೀವೆ!
ಇಷ್ಟಕ್ಕೆಲ್ಲ ಬೆರಗಾಗಬೇಡಿರಯ್ಯಾ
ಅಮವಾಸ್ಯೆಯ ಅಂಧಂತಮಸ್ಸಿಗೆ ಶಿವನು ಯಜಮಾನನಾದಂತೆ
ಈ ಸಣ್ಣ ಕತ್ತಲೆಗೆ ನಾವು ನೀವು!

ನೋಡಿದಿರಲ್ಲ ಮಹಾನುಭಾವನ?
ಕನ್ನಡಿಯಲ್ಲಿ ಮೂಡಿದ ಅವನ ಬ್ರಹ್ಮರಾಕ್ಷಸನ?
ಇನ್ನು ಮ್ಯಾಕೆ ನಮ್ಮ ಕಥಾನಾಯಕ ಚಂದಮುತ್ತ
ಚಂದ್ರನೆಂಬ ಕನ್ನಡಿಯಲ್ಲಿ ನೋಡಿಕೊಂಡಾಗ
ಏನು ಕಂಡಿತೆಂದು ಕೇಳಿರಯ್ಯಾ -

* * *

ಶಿವಾಶಿವಾ, ಈ ಪ್ರಕಾರವಾಗಿ ಚಂದಮುತ್ತ ತನ್ನ ವಿದ್ಯಾಗುರುವಾದಂಥಾ ಮಹಾನುಭಾವನ ಶ್ರೀಪಾದಂಗಳ ಹಿಡಿದು,

"ಈಗ ಯಕ್ಷಿದೇವತೆ ಎಲ್ಲಿರುವಳು ಗುರುಪಾದವೆ?"

- ಎಂದು ಕೇಳುವ ಪ್ರಸ್ತಾವದಲ್ಲಿ ಮಹಾನುಭಾವ 'ಬಾ' ಎಂದು ಚಂದಮುತ್ತನ್ನ ಕಾಡುಜಂಗಲ್‌ದಲ್ಲಿದಂಥಾ ಒಂದು ಹಾಳು ಗುಡಿಗೆ ಕರೆದು ತಂದ. ಗರ್ಭಗುಡಿ ವಿನಾ ಹೊರಗೆಲ್ಲ ಹಾಳು ಬಿದ್ದಿತು. ಒಳಗೆಲ್ಲ ಅಂಧಂತಮಸ್ಸು ಕಗ್ಗತ್ತಲಿತ್ತು. ತೋರಿಸಿದನೇ ವಿನಾ ಮಹಾನುಭಾವ ಒಳಕ್ಕೆ ಬರಲಿಲ್ಲ. ಚಂದಮುತ್ತ ಕಾಲಿನೆಕ್ಕಡ ಕಳಚಿ ಕಗ್ಗತ್ತಲಲ್ಲಿ ಕಾಲಾಡಿಸುತ್ತು ಒಳಕ್ಕೆ ನಡೆದ. ತುಸು ಹೊತ್ತಿನಲ್ಲಿ ತಡಕಾಡುವ ಕಾಲಿಗೆ ಯಕ್ಷಿಯ ಕಾಲುತಾಗಿ 'ದೇವೀ' ಅಂದ. ಮಲಗಿದ್ದ ಚಕೋರಿ ಎಂಬ ಯಕ್ಷಿಗೆ ಮೆಲ್ಲಗೆ ಕಣ್ಣು ತೆರೆದಳು. ಎಳೆ ಹಸಿರು ಬಣ್ಣದ ಜ್ಯೋತಿಗಳೆರಡು ಸಣ್ಣಗೆ ಹೊತ್ತಿಕೊಂಡವು. ಕಣ್ಣಿಗೆ ಪ್ರಿಯವೂ ಹಿತಕರವೂ ಆಗಿತ್ತು ಬೆಳಕು. ಆ ಬೆಳಕಿನಲ್ಲಿ ನೋಡಿದಾಗ ಕರುಳು ಕಿತ್ತು ಕಣ್ಣಿಗೆ ಬಂತು. ದೇವಿಯ ಕಣ್ಣು ವಿನಾ ಉಳಿದೆಲ್ಲ ದೇಹ ಸೆಟೆದುಕೊಂಡಿತ್ತು. ಧೂಳು ಕೆಸರಂಟಿ ಕೊಳೆಯಾಗಿದ್ದವು ಬಿಳಿರೆಕ್ಕೆ, ಅಲುಗಾಡುತ್ತಿರಲಿಲ್ಲ ಕೈಕಾಲು. ಇವನ ನೋಡಿ ಮೂಗಿನ ಪವನ ಬಿರುಸಾದವು. ನಿಟ್ಟುಸಿರ ಹೊಯ್ಲಿನಿಂದ ತುಟಿ ಒಣಗಿದ್ದವು. ಮಾತಾಡಲು ಯತ್ನಿಸಿದಳು. ಬಾಯಿ ಬರಲಿಲ್ಲ. ಪಣತಿಯ ಕೊನೆಯಿಂದ ತೈಲ ಸೋರುವ ಹಾಗೆ ಧಾರಾವತಿ ಕಣ್ಣೀರು ಜಲ ತುಳುಕಿದಳು ಯಕ್ಷಿ. ನೋಡಲಾರದೆ "ಗೋಣು ಕುಯ್ದೆಯೋ ಶಿವನೇ" ಎಂದು ತನ್ನಿಂದಾಗಿ ಈ ಅವಸ್ಥೆಗೆ ಬಂದ ಯಕ್ಷಿ ಸಾಯುವ ಮುನ್ನ ತಾನು ಸಾಯುವುದೆ ಮೇಲೆಂದು ಕುಂತಿರಲಾರದೆ ಎದ್ದು ಹೊರಬಂದ.

ಗುಡಿಯ ಹೊರಗೆ ತಪ್ಪಿತಸ್ಥ ಮಹಾನುಭಾವ ನಿಂತಿದ್ದ. ಇವನ ಕಂಡು ಇನ್ನೇನೊ ಅನಾಹುತವಾಯಿತೆಂದು ಹೌಹಾರಿದ. ಚಂದಮುತ್ತ ನೇರ ಇವನ ಬಳಿ ಹೋಗಿ

"ದೇವಿಯ ಉಳಿಸುವ ಉಪಾಯ ಯಾವುದೂ ಇಲ್ಲವೆ ಗುರುಪಾದವೇ?" ಅಂದ.

"ಇದೆ. ಆದರೆ ಹೇಳಲಾರೆನಪ್ಪ, ಪಾಪಿ ನಾನು, ಈ ಬಗ್ಗೆ ಒತ್ತಾಯ ಮಾಡಬೇಡ" ಎಂದು ಅಳುತ್ತ.

"ಅದೇನಿದ್ದರೂ ಹೇಳು ಗುರುಪಾದವೇ"

- ಎಂದು ಕಾಲು ಹಿಡಿದು ಕೇಳಿದ ಚಂದಮುತ್ತ

"ಹ್ಯಾಗೆ ಹೇಳಲಿ ನನ್ನಪ್ಪಾ; ತಪ್ಪು ಮಾಡಿದವ ನಾನು. ಜೀವಾ ಕೊಟ್ಟರೂ ಕಡಿಮೆ. ಆದರೆ ನನ್ನ ಜೀವದಿಂದ ಅವಳು ಉಳಿಯಲಾರಳು. ನನ್ನ ತಪ್ಪಿಗಾಗಿ ಇನ್ನೊಬ್ಬರ ಬಲಿ ಹ್ಯಾಗೆ ಕೊಡಲಿ?"

"ಅದೇನಿದ್ದರೂ ಹೇಳು ಗುರುಪಾದವೇ."

"ಕರ್ತವ್ಯವೆಂದು ಹೇಳುತ್ತೇನೆ ಕೇಳು. ಶಿವರಾತ್ರಿಯ ದಿನ ಮಹಾನ್ ಕಲಾವಿದನೊಬ್ಬ ತಿಂಗಳುರಾಗ ಹಾಡಬೇಕು ಇಲ್ಲವೆ ನುಡಿಸಬೇಕು. ತಿಂಗಳು ರಾಗಕ್ಕೆ ಶಿವ ಒಲಿಯಬೇಕು. ಶಿವ ಒಲಿದದ್ದರ ಗುರುತೆಂದರೆ ಅಮವಾಸ್ಯೆಯ ದಿನ ಚಂದ್ರ ಕಾಣಿಸಬೇಕು. ಆವಾಗ ಇವಳಿಗೆ ಮೂಲ ದೈವತ್ವ ಒದಗಿ ಬಂದು ಹಾರುತ್ತಾಳೆ. ಆದರೆ ತಿಂಗಳುರಾಗ ಬಲ್ಲವರು ಯಾರಿದ್ದಾರೆ, ಎಲ್ಲಿದ್ದಾರೆ?"

"ನಾನಿದ್ದೇನೆ, ಹೇಳು ಗುರುಪಾದವೇ"

"ಹಾಗಿದ್ದರೆ ಮುಂದಿನ ಮಾತು ಹೇಳಲಾರೆ"

- ಎಂದು ಹೇಳಿ ಮಹಾನುಭಾವ ಸಾವನ್ನ ಕಂಡವರಂತೆ ಓಡತೊಡಗಿದ. ತಕ್ಷಣ ಚಂದಮುತ್ತನೂ ಬೆಂಬತ್ತಿ ಓಡಿ ಹೋಗಿ ಮತ್ತೆ ಕಾಲು ಹಿಡಿದು, "ಹೇಳದಿದ್ದರೆ ಶಿವನಾಣೆ ನಿನಗೆ" ಎಂದ.

ಮಹಾನುಭಾವ ಹತಾಶನಾಗಿ ಕುಸಿದು –

“ಎಷ್ಟಂತ ಪಾಪ ಮಾಡಲಿ? ಈಗ ಮಾಡಿದ್ದು ಸಾಲದೆ ನನ್ನಪ್ಪ?”

“ಹೇಳುವುದನ್ನು ಪೂರ್ತಿಮಾಡು ಶಿವನೇ.”

“ತಿಂಗಳುರಾಗ ಹಾಡಿದವನು ಅವಳಿಗೆ ದೈವತ್ವ ಒದಗಿ ಹಾರಿದೊಡನೆ ಶಿಲೆಯಾಗುತ್ತಾನೆ ನನ್ನಪ್ಪ”

ಆನಂದದಿಂದ ಚಂದಮುತ್ತನ ಕಣ್ಣು ಭಗ್ಗನೆ ಹೊತ್ತಿಕೊಂಡವು.

“ಇದು ನಿಜವೆ ಶಿವಪಾದವೆ? ನಿನಗಿದನ್ನು ಯಾರು ಹೇಳಿದರು?”

“ಮಾತು ತಪ್ಪಿದರೆ ನನ್ನ ಕಿವಿ ಹರಿದು ಕಿರಿಬೆರಳಿಗೆ ಉಂಗುರ ಮಾಡಿಕೊ ನನ್ನಪ್ಪ, ಇಂಥಾ ಪ್ರಸ್ತಾಪದಲ್ಲಿ ಶ್ರೋತೃಸುಖ ನುಡಿಯಲಾರೆ, ಇದು ನಿಜ.”

ಅವಳ ಸಖಿಯರಿಬ್ಬರು ಮಾತಾಡಿಕೊಂಡದ್ದನ್ನ ನಾನು ಕದ್ದು ಕೇಳಿಸಿಕೊಂಡೆ. ಇಲ್ಲಿಯವರೆಗೆ ಸತ್ತಿದ್ದೇನೆ ಅಂತ ಭಾವಿಸಿದ್ದೆ. ಈಗ ಬದುಕೋ ಸಮಯ ಬಂದಿದೆ ಅಂದ್ಕೊತೇನೆ. ದಯಮಾಡಿ ಕ್ಷಮಿಸು ನನ್ನಪ್ಪ.

– ಎಂದ ಮಹಾನುಭಾವ.

“ಉಪಕಾರವಾಯ್ತು ಶಿವನೆ, ಯಕ್ಷಿಯ ಬಿಡುಗಡೆ ಮಾಡದಿದ್ದರೆ ನಾನು ಚಂದಮುತ್ತನೆಂಬೋ ಛಲ ನನಗ್ಯಾಕೆ?”

– ಎಂದು ಮಹಾನುಭಾವನ ಕಾಲುಮುಟ್ಟಿ ನಮಸ್ಕರಿಸಿ ಮತ್ತೆ ಗುಡಿಯೊಳಗೋಡಿದ ಚಂದಮುತ್ತ. ಹೆಗಲ ಕಂಬಳಿ ಹಾಸಿ ಅದರಲ್ಲಿ ಯಕ್ಷಿಯ ಮಲಗಿಸಿ ಕೂಸಿನ ಹಾಗೆ ಸುತ್ತಿ ಘಾಸಿ ಮಾಡದ ಹಾಗೆ ಎತ್ತಿಕೊಂಡು ತನ್ನ ಹಟ್ಟಿಗೆ ನಡೆದ.

ಭಾರ ಇಳಿವಿದ ಹಾಗೆ ಹಗುರವಾದ ಮಹಾನುಭಾವ.
ಯಕ್ಷಿಯ ಪಾದ ಬಿದ್ದಲ್ಲಿಯ ಧೂಳನ್ನು
ತಲೆಗೆ ಹಚ್ಚಿಕೊಳ್ಳಬೇಕೆಂದು
ಹಾಳು ಗುಡಿಯೊಳಕ್ಕೆ ಹೋದ.

## ೪೪. ಬಿಸಿಲಗುದುರೆಯನೇರಿ ಹೋದಾ

ಇದ್ದಕ್ಕಿದ್ದಂತೆ ಹೇಳಕೇಳದೆ ದಿಕ್ಕು ದೇಶಾಂತರ ಹೋದ ಮಗನ ಬೇಲಿಯಿಲ್ಲದ ಬದುಕಿನ ಬಗ್ಗೆ ಶಿವನಲ್ಲಿ ಬೇಕಾದಷ್ಟು ತಕರಾರೆತ್ತಿದ್ದಳು ಅಬ್ಬೆ.

ಪಳಗಿಸಲಾರೆ ಮಗನ್ನ,
ಅವನಿಗಮರಿಯ ವ್ಯಸನ

ಮ್ಯಾಲೆ ಚಂದ್ರನ ಗ್ಯಾನ.
ನೀವಾದರು ಹಿಂದಿರುಗಿ ಕಳಿಸಿರೇ ಮಗನ್ನ

ಎಂದು ಅಬ್ಬೆ ಸುತ್ತಿದ ದೇವರಿಗೆ ಸೆರಗೊಡ್ಡಿ ಹಾಡಿ ಬೇಡಿಕೊಂಡಳು:

ಬಿಸಿಲಗುದುರೆಯನೇರಿ ಹೋದಾ
ಕೈಮೀರಿದ ಚಂದಿರನ ಬೇಟೆಗೆ ಹೋದಾ ||ಪ||

ಬೆಳ್ಳಿಯ ಮೀನಾಗಿ
ಬೆಳದಿಂಗಳಲೀಜುವ
ಚಂದ್ರನ ಹಿಡಿಯುವೆನೆಂದಾ |ಅಪ|

ಹಾರುವ ಧ್ವಜದಂಥ ಪೊಗರಿನ ಬಾಲಕ
ಮುಗಿಲಿಗೆ ಎಗರುವೆನೆಂದಾ|
ಆಕಾಶದಂಗಳಕೆ ನುಗ್ಗಿ ಲಗ್ಗೆಯ ಹಾಕಿ
ಸೂರೆ ಮಾಡುವೆ ಸಿರಿಯನೆಂದಾ|
ಕಣ್ಣಿಗೆ ಬಣ್ಣಗಳ ಮೆತ್ತುವ ಕನಸಿನಲಿ
ನಿಮ್ಮ ಮುಳುಗಿಸುತ್ತೇನೆ ಅಂದ ||ಹೋದಾ||

ಅಂಬಾರದಾಚೆಯ ರಂಭೇರ ನಾಡಿಂದ
ಬಾಡದ ನಗೆ ತರುವೆನೆಂದ|
ಚಕ್ಕಂದವಾಡುವ ಚಿಕ್ಕೆ ತಾರೆಗಳನ್ನ
ಉಡಿತುಂಬ ತರುತೇನ ಅಂದ|
ಸೊಕ್ಕಿದ ಚಂದ್ರನ ಸಭ್ಯನ ಮಾಡುವೆ
ಪಳಗಿಸುವೆ ದೇವರನೆಂದಾ ||ಹೋದಾ||

ಹೋದವ ಬಾರದೆ ಕಾತರ ತಾಳದೆ
ಕಣ್ಣ ಹಡದಿಯ ಹಾಸಿ ಕಾದೆ |
ಬಂದೇ ಬರುತಾನಂತ ಆಕಾಶದಂಗಳದ
ಒಂದಾರೆ ಹೂ ತರುತಾನಂತ | ಭ್ರಾಂತ
ಯಾವೇರುಪೇರಿನಲಿ ದಾರಿ ತಪ್ಪಿದನೇನೊ
ಕಂಡರೆ ಕಳಿಸಿರೆ ತಿರುಗಿ | ಆ ಬಾಲನ||

ಹಾಡುತ್ತಾ ಹಾಡುತ್ತಾ ದನದ ಶಕುನವ ಕೇಳಬೇಕೆನಿಸಿತು ಅಬ್ಬೆಗೆ. ಅವಸರದಿಂದ ಕೊಟ್ಟಿಗೆಗೆ ಹೋಗಿ ಕಪಿಲೆಯ ಮುಂದೆ ಕುಂತಳು.

“ದಿಕ್ಕು ದೇಶಾಂತರ ಹೋದ ಮಗ ಮತ್ತೆ ಬರುತಾನಂದರೆ ಬಲಗಾಲೆತ್ತು, ಇಲ್ಲದಿದ್ದಲ್ಲಿ ಎಡಗಾಲೆತ್ತು” - ಎಂದಳು.

ಕಪಿಲೆ ಬಲಗಾಲೆತ್ತಿತು. ಅಬ್ಬೆಯ ಪ್ರೋತ್ಸಾಹ ಉಕ್ಕಿ ಬಂತು.

“ಈವಾರ ಬರುತಾನಂದರೆ ಬಲಗಾಲೆತ್ತು, ಇಲ್ಲದಿದ್ದಲ್ಲಿ ಎಡಗಾಲೆತ್ತು” ಎಂದಳು. ಕಪಿಲೆ ಬಲಗಾಲೆತ್ತಿತು. ಆನಂದದ ಅಮಲೇರಿತು ಮುದುಕಿಗೆ.

“ಇವತ್ತೇ ಬರುತಾನೆಂದರೆ ಬಲಗಾಲೆತ್ತು: ಇಲ್ಲದಿದ್ದಲ್ಲಿ ಎಡಗಾಲೆತ್ತು” - ಎಂದಳು.

ಕಪಿಲೆ ಈಗಲೂ ಬಲಗಾಲೆತ್ತಿದ್ದೇ - ಅಬ್ಬೆಗೆ ಮುದದ ಹುಚ್ಚಡರಿ ಮಕ್ಕಳ ಹಾಗೆ ನಲಿದಾಡಿದಳು. ಕೊಟ್ಟಿಗೆಯಲ್ಲಿ ಕಾಲೂರಲ್ಲೊಲ್ಲಳು. ಕುರುಮರಿಗಳಿಗೆ ಕಲ್ಗಚ್ಚು ಬೆರಸಿ ನೀರು ಕುಡಿಸಿ ದನ ಹಿಂಡಿಕೊಂಡಳು. ಗೂಡಿನ ಮೂಲೆ ಮೂಲೆ ಗುಡಿಸಿ ಸೆಗಣಿ ಸಾರಣೆ ಮಾಡಿ ಅಂಗಳದಲ್ಲಿ ಬಣ್ಣದ ರಂಗೋಲಿ ಹುಯ್ದಳು. ಮೊಸರು ಕಡೆದು ಬೆಣ್ಣೆ ಮಾಡಿ ದೈವದ ಮುಂದೆ ತುಪ್ಪದಲ್ಲಿ ಜಗಜಗ ಬೆಳಕಿಟ್ಟಳು. ಪರಿಮಳ ನಾರುವ ಬಗೆಬಗೆ ಭಕ್ಷ್ಯಗಳ ಮಾಡಿ ಹೊಟ್ಟೆಗೆ ಬೊಗಸೆ ನೀರು ಕೂಡ ಕುಡಿಯದೆ ಮುಖದ ಮುತ್ತು ಬೆವರೊರಿಸಿಕೊಂಡು ಮಗನ ದಾರಿ ಕಾಯುತ್ತ ಕುಂತಳು.  ಸೂರ್ಯನಾರಾಯಣ ದೇವರು ಅಸ್ತಂಗತನಾಗಿ ಕತ್ತಲಾದರೂ ಮಗ ಬರಲಿಲ್ಲ. ಬರುವನೆಂಬ ನಂಬಿಗೆ ಕಂದಲಿಲ್ಲ. ಕಾಯುತ್ತ ಕುಂತಳು ಹಾಗೇ ಸಪನಿದ್ದೆಗೆ ಸಂದಳು. ಸ್ವಪ್ನದಲ್ಲಿ -

ಯಾರೋ ಗೂಡಿನ ಮುಂದೆ ಓಡಿ ಬಂಧಂಗಾಯ್ತು.
ಕದ ಬ್ಯಾಗ ತಗೀರೆಂದು ಕೂಗಿಧಂಗಾಯ್ತು
ಅಬ್ಬೆ ಕದ ತೆರೆದರೆ
ಕದ ತಳ್ಳಿ ಒಳನುಗ್ಗಿ
ಬೆನ್ನಹಿಂದೆಲೆ ಕದಮುಚ್ಚಿ ನಿಟ್ಟುಸಿರಿಟ್ಟ,
ಗುರುತಿಲ್ಲದ ಯಾರೊ ಪರ ಊರಿನವ.

ಬೆಂದ ಹೂವಿನ ಹಾಗೆ ಎಳೆಯ ಮುಖ ಬಾಡಿತ್ತು
ಮೈಮುಖ ಧೂಳಿನಲಿ ಉರುಳಾಡಿಧಂಗಿತ್ತು
ಓರೆಗೂದಲು ಕಟ್ಟಿ ನವಿಲುಗರಿ ಸಿಗಿಸಿದ್ದ.
ಮುರಿದ ಕೈದುಗಳ ಕೈಯಲ್ಲಿ ಹಿಡಿದಿದ್ದ.
ಮೊನಚಾದ ನಕ್ಷತ್ರ ಎದೆಯೊಳಗೆ ನಾಟಿತ್ತು
ಹನಿ ಹನಿ ನೆತ್ತರು ನೆಲಕೆ ಸೋರಿತ್ತು.
ಬೇಟೆಯಲಿ ನೊಂದ ಮಿಗ ನರಳಿಧಂಗಿತ್ತು.
ಹಿಂದಿನಿಂದ್ಯಾರೋ ಬಂದಾರೆಂಬ ಭಯವಿತ್ತು.
ಕದಕೆ ಅಗಳಿಯ ಹಾಕಿ
ಹಡದವ್ವಾ ರಕ್ಷಿಸೆಂದ
ಒಳಗಿದ್ದ ಕತ್ತಲ ಕಂಡು ಬದುಕಿದೆನೆಂದ.
ಅಂಬೆಗಾಲಿಡುತ ಅಬ್ಬೆಯ ಬಳಿ ಬಂದ.

ಬೆಂಬತ್ತಿ ಬರುವವರು ಯಾರು ಕಂದಾ?
ಎಂದಳು ಅಬ್ಬೆ, ಅವನಂದ:
ಚಂದ್ರ ಬರುತ್ತಿದ್ದಾನೆ ಹಿಂದಿನಿಂದ!

ಯಾ ರೂಪದಿಂದಲೋ ಯಾ ಮಾಯೆಯಿಂದಲೋ
ಬೇಟೆಯಾಡುತ ಚಂದ್ರ ಬಂದೆ ಬರುವ,
ಈ ನಿನ್ನ ಕಂದನ್ನ ಕಾಪಾಡೆ ಎವ್ವ.

ಅವ್ವಾ ಅಂದನೆ ಕಂದ, ಅಬ್ಬೆ ಮೂಲೆ ತುಂಬಿ
ಚೆಲ್ಲಂತ ಚಿಮ್ಮಿದವು ಹಾಲು.
ಹಾಲು ಕಂಡದ್ದೇ ಹೋ ಹಾಲು ಬೆಳ್ದಿಂಗಳೆಂದು,
ಚಂದ್ರ ಬಂದನು ಎಂದು ಸೆಟೆದು ಬಿದ್ದ!

ಫಕ್ಕನೆಚ್ಚರವಾಯ್ತು ಲಕ್ಕಬ್ಬೆಗೆ. ಜಲ ಜಲ ಬೆವರಿ ಕುಂತ ನೆಲ ಒದ್ದೆಯಾದವು. ಅಷ್ಟರಲ್ಲಿ ಕದ ಬಡಿದ ಸದ್ದು ಕೇಳಿಸಿ, ಮೈ ಕೊಡಹಿ ಎದ್ದು ಬೀಳುತ್ತೇಳುತ ಪಣತಿ ಸಮೇತ ಬಂದು ಕದ ತೆಗೆದು - ಹೊರಗೆಣಿಕಿದರೆ ನಿಂತಿದ್ದಾನೆ ಮಗರಾಯ! ಯಕ್ಷಿಯ ಹೊತ್ತುಕೊಂಬಂದ ಚಂದಮುತ್ತ ಅಬ್ಬೆಯ ಕಿವಿಯಲ್ಲಿ 'ಯಕ್ಷಿ' ಎಂದುಸುರಿದ. ಮಗನಿಗಿಂತ ಮುಂಚೆ ಮಂಚದ ಬಳಿಗೋಡಿ ಕಂಬಳಿ ಹಾಸಿ, ದಿಂಬಿಟ್ಟು ಅದರ ಮ್ಯಾಲೆ ಯಕ್ಷಿಯ ಮಲಗಿಸಲು ನೆರವಾದಳು. ಇವಳೂ ನವತಂತ್ರಿ ನರಸಯ್ಯನ ಮಾಟಕ್ಕೆ ಬಲಿಯಾದಳೆಂಬುದು ಕೂಡಲೇ ಹೊಳೆದುಬಿಟ್ಟಿತು ಅಬ್ಬೆಗೆ. ಮೆಲ್ಲಗೆ ಕಂಬಳಿ ಓಸರಿಸಿ ನೋಡಿದಳು: ಸವೆದ ಶಕ್ತಿಯ ಸೀದ ಚೆಲುವಿನ ಆಕಾಶ ದೇವತೆಯ ಅಸಹಾಯಕ ಸ್ಥಿತಿಗೆ ಆಘಾತವಾಯಿತು. ನರಮಾನವರಿಗೆ ವರ ಕೊಡುವ ಖೇಚರಿ ಈಗ ಭೂಚರರ ಕರುಣೆಯ ಕೈಗೂಸಾಗಿ ಬಿದ್ದುಕೊಂಡಿದ್ದಾಳೆ! ನೋಡಿದ್ದೇ ಮೊಟ್ಟೆಯಂತೆ ಅಖಂಡವಾಗಿದ್ದ ಅಬ್ಬೆಯ ಬ್ರಹ್ಮಾಂಡದಲ್ಲಿ ಬಿರುಕುಂಟಾಯಿತು. ದೇವರು ಜಗತ್ತು ಮತ್ತು ನರಮಾನವರ ಸಂಬಂಧದ ಸಮತೋಲ ತಪ್ಪಿ ಏನೇನೋ ಧ್ಯಾನಿಸಿದಳು.

## ೪೬. ಇಷ್ಟೇ ತಾಯಿ ನನ್ನ ಭಕ್ತಿ

ರಾತ್ರಿ ಆಕಾಶ ಮಂಡಳದ ಉಲ್ಕೆಯೊಂದು ಉರಿದುರಿದು ಯಕ್ಷಿಯ ಗುಡಿಯ ಮ್ಯಾಲೆ ಉದುರಿದ ಹಾಗೆ ಕನಸಾಗಿತ್ತು. ಭೀತನಾಗಿದ್ದ ಕುಲಗುರು ಕರಿಕಂಬಳಿಯ ಗದ್ದಿಗೆಯ ಮ್ಯಾಲೆ ಕುಂತು ಕವಡೆ ಶಾಸ್ತ್ರ ಗುಣಿಸುತ್ತಿರಬೇಕಾದರೆ ಮುಗಿದ ಕೈ ಹೊತ್ತು ದಯವಾಗು ಶಿವನೇ ಎಂದು ಚಂದಮುತ್ತ ಬಂದು ಮೈ ಹಾಸಿ ಅಡ್ಡಬಿದ್ದ. ಕುಲಗುರು ಬಗಲ ಚೀಲದಿಂದ ಬಂಡಾರವ ತೆಗೆದು ಹಣೆತುಂಬ ಹಚ್ಚಿ ಜಯದಿಂದ ಬದುಕು ನನ್ನಪ್ಪಾ ಎಂದು ಬಾಗಿದ ಚಂದಮುತ್ತನ ನೆತ್ತಿಯ ಮ್ಯಾಲೆ ಎರಡೂ ಕೈಯಿಟ್ಟು ಆಶೀರ್ವದಿಸಿದ. ಚಂದಮುತ್ತ ಮಹಾನುಭಾವನ ಭೇಟಿಯಿಂದ ಹಿಡಿದು ಮುರಿದ ಮಹಿಮೆಯ ಯಕ್ಷಿ ಪುನಃ ತನಗೆ ದೊರೆತವರೆಗಿನ ಕಥಾಂತರವ ನಿರೂಪಿಸಿ, ಅವಳ ಧರ್ಮಸೆರೆ ಬಿಡಿಸಿ ಪುನಃ ಹಾರಾಡುವಂತೆ ಮಾಡಬೇಕಾದರೆ ಯಾವ್ಯಾವ ವ್ರತ ನಿಯಮ ಉಪಾಯಂಗಳ ಪಾಲಿಸಬೇಕೆಂದು ತಿಳಿಸಿ, ತಾನು ಶಿಲೆಯಾಗಲಿರುವ ಅನಿವಾರ್ಯವ ಹೇಳಿ, ಅಬ್ಬೆಯ ಕಾಪಾಡಿ ನನ್ನ ಸತ್ಯಕ್ಕೆ ಒದಗು ಶಿವಪಾದವೇ ಎಂದು ಕಾಲು ಹಿಡಿದ. ಕುಲಗುರುವಿಗೆ ತನ್ನ ಕನಸಿನ ಸತ್ಯ ನಿಚ್ಚಳವಾಗಿ ಹೊಳೆದು ಅಯ್ಯೋ ನನ್ನಪ್ಪ ಎಂದು ಗಾಬರಿಯಾಗಿ ಗಪ್ಪನೆ ಶಿಷ್ಯನ ತಲೆ ತಬ್ಬಿಕೊಂಡ. ಮಳೆಗಾಲದ ಗುಡುಗಿನಂತೆ ಬಂಡಕೊಂಬ ಎದೆಯ ಗಟ್ಟಿಯಾಗಿ ಶಿಷ್ಯನ ತಲೆಗೊತ್ತಿ ಹಿಡಿದವನು ಗಳಿಗೆ ಹೊತ್ತಾದರೂ ಬಿಡಲಿಲ್ಲ. ಹೊತ್ತು ಬಹಳ ಹಿಂಗೇ ಕುಂತಿರುವಲ್ಲಿ ತನ್ನ ಮೈಮ್ಯಾಲೆ ಗುರುವಿನ ಕೆಂಡದಂಥ ಕಣ್ಣೀರು ಬಿದ್ದ ಅರಿವಾಗಿ ತಲೆ ಬಿಡಿಸಿಕೊಂಡು ಚಂದಮುತ್ತ ಮ್ಯಾಲೆ ನೋಡಿದ.

ಕುಲಗುರು ಕಣ್ಣೀರು ಜಲವ ಸುರಿಸುತ್ತ ಕೇಳಿದ, -

"ಯಕ್ಷಿಯ ಧರ್ಮಸೆರೆ ಬಿಡಿಸೋದಕ್ಕೆ ಬೇರೆ ದಾರಿ ಇಲ್ಲವೇ ನನ್ನಪ್ಪ?"

“ಇಲ್ಲ ಶಿವನೆ”

ಯಕ್ಷಿಯ ಬಿಡುಗಡೆ ಇಲ್ಲವೆಂದಾದರೆ ಲೋಕಕ್ಕೆ ಸಂಗೀತವಿಲ್ಲ. ಬಿಡುಗಡೆ ಇದೆಯೆಂದಾದರೆ ಅಬ್ಬೆಗೆ ಮಗನಿಲ್ಲ, ನನಗೆ ಶಿಷ್ಯನಿಲ್ಲ, ಹಟ್ಟಿಗೆ ಚಂದಮುತ್ತನಿಲ್ಲ. ಅಯ್ಯೋ ನರಮಾನವನ ನಶೀಬವೇ ಎಂದು ಮಂಡೆಯ ಮ್ಯಾಲೆ ಕೈ ಹೊತ್ತು ಕುಂತ.

- ಅದನ್ನು ನೋಡಲಾರದೆ ಚಂದಮುತ್ತ ಯಾವಾಗಲೋ ಹೋಗಿ ಬಿಟ್ಟಿದ್ದ. ಗುರುಪಾದಕ್ಕೆ ಅರಿಕೆ ಮಾಡದೆ. ಚಂದಮುತ್ತ ಹೋದ ಕಡೆಗೆ ಎರಡೂ ಕೈ ಎತ್ತಿ ಕುಲಗುರು ಹೇಳಿದ:

ನಮ್ಮ ಕುಲದೈವಂಗಳು, ನಮ್ಮ ಸುತ್ತಿನ ದೇವತೆಗಳೆಲ್ಲ
ನಿನ್ನ ಬೆಂಗಾವಲಿಗಿರಲಿ
ದುಷ್ಟರ ಕೆಟ್ಟಕಣ್ಣು ಮತ್ತು ಕೈ
ನಿನ್ನ ಮುಟ್ಟದಿರಲಿ
ಜಡೆಯಲ್ಲಿ ಪರಂಜ್ಯೋತಿ ಚಂದ್ರಾಮನ ಇಟ್ಟಕೊಂಡ ಶಿವ
ನಿನ್ನ ಮರೆಯದಿರಲಿ ನನ್ನಪ್ಪಾ.

ಚಂದಮುತ್ತ ಹೋದದ್ದೇ ಆಯ್ತು ಆ ಗಳಿಗೆಯೇ ಮುದುಕನ ಎದೆ ಆರಿತು. ಕನಸುಗಳಾದ ನಮಗೆ ಮುದುಕರನ್ನ ಕಂಡರಾಗುವುದಿಲ್ಲ. ಆದರೆ ಈ ದಿನ ಕುಲಗುರುವಿನ ನೋಡಿ ಹಳಹಳಿಯಾಯಿತು ಬಹಳ. ಅಂದೇ ಇಳಿಹೊತ್ತಿನಲ್ಲಿ ಅಬ್ಬೆಯ ಗೂಡಿಗೆ ಹೊರಟ. ಶಕ್ತಿಯಿರಲಿಲ್ಲ ಕಾಲಲ್ಲಿ. ಕೋಲೂರುತ್ತ ಮೆಲ್ಲಗೆ ನಡೆದ.

ಎಂದಿನಂತೆ ಲಕ್ಕಬ್ಬೆ ಧೂಳಿಗೆ ನೀರು ಕೊಡಲಿಲ್ಲ. ಬಾಯಾಸರೆಗೆ ಜೇನು ಹಾಲು ಕೊಡಲಿಲ್ಲ. ಅವಳಿಗಾಗಲೇ ತಿಳಿದು ಹೋಗಿದೆಯಾ? ತಿಳಿದರೆ ಒಳ್ಳೆಯದೇ ಆಯಿತು. ಬಾಯಿ ಬಿಟ್ಟು ಹೇಳುವ ಸೂತಕ ತಪ್ಪಿತು - ಎಂದು ನೇರ ಮಂಚದ ಬಳಿಗೆ ಹೋದ. ಅಸಹಾಯಕ ಯಕ್ಷಿ ಯಃಕಶ್ಚಿತ್ ನರಮಾನವರ ಹಾಗೆ ಮಲಗಿದ್ದುದ ನೋಡಿ, ತೊಡೆಯ ಶಕ್ತಿ ಉಡುಗಿ ಶಿವನೇ ಎಂದು ಕುಸಿದ. ನೆರವಿಗೆ ಬಂದಾಳೆಂದು ಲಕ್ಕಬ್ಬೆಯ ನೋಡಿದ. ಅವಳು ಬಾರದೆ ನೆಲಕ್ಕೆ ಕುಕ್ಕರಿಸಿದ. ಯಕ್ಷಿಯ ಕರುಣಾಜನಕ ಚಿತ್ರ ಕಣ್ಣಿಗೆ ಭಾರವಾಗುವಂತೆ ಅಚ್ಚೊತ್ತಿಬಿಟ್ಟಿತ್ತು.

ಯಕ್ಷಿ ವಿಕಾರವಾಗಿ ನರಳಿದಳು. ಭಯದಿಂದ ಮುದುಕ ಅಯ್ಯೋ ಶಿವನೇ ಎಂದು ಕೋಲೂರಿ ಎದ್ದ. ಸಂಗೀತ ದೇವತೆ ಅಪಸ್ವರದಲ್ಲಿ ನರಳಬೇಕಾದರೆ ಎಷ್ಟೊಂದು ಕಷ್ಟವಾಗಿರಬೇಕು ಶಿವನೆ ಎಂದು ಮರ ಮರ ಮರುಗಿದ. ತನ್ನಿಂದೇನೂ ಆಗದೆಂದು ಪರಿತಪಿಸಿ, ಮಾನವ ಜಲ್ಮವ ಶಪಿಸಿ, ಬೆಟ್ಟದ ಮಾಯಿಯ ನೆನೆದು ಬಗಲ ಚೀಲದ ಬಂಡಾರ ತೆಗೆದು ನಡುಗುವ ಕೈಗಳಿಂದ ಯಕ್ಷಿಯ ಪಾದಕ್ಕಂಟಿಸಿ “ಇಷ್ಟೇ ತಾಯಿ ನನ್ನ ಭಕ್ತಿ” ಎಂದು ಕೈಮುಗಿದು ಅಲ್ಲಿ ನಿಲ್ಲದೆ ಹೊರಟ.

## ೪೭. ಮಹಾ ಶಿವರಾತ್ರಿ

ಬೆಳ್ಳಿ ಮೂಡಿ ನಾವೆದ್ದು ಒಡಮುರಿದೇಳುವಷ್ಟರಲ್ಲಿ
ಮುಂಗೋಳಿ ಕೂಗಿ ಮೂಡು ಕೆಂಪಾಗಿ
ತುಂಬಿದ ಸೋಮವಾರ ಮಹಾಶಿವರಾತ್ರಿಯ
ಹಗಲು ಸೂರ್ಯ ಉದಯವಾದರು.
ಲಕ್ಕಬ್ಬೆ ಶಿವನೇ ಎಂದು ಎದ್ದು

ಮಲೆಯ ಮ್ಯಾಲಿರೋ ಕೈಲಾಸದ ಕಡೆ ಮುಖ ಮಾಡಿ
ಕೈ ಮುಗಿದು ಗಲ್ಲ ಗಲ್ಲ ಬಡಿದುಕೊಂಡಳು.
ಅಷ್ಟರಲ್ಲಿ, ಮರೆವಿನ ತೆರೆ ಹರಿದು
ಎದುರೆದುರೆ ಬಂದುಬಿಟ್ಟ
ಎದೆಯಲ್ಲಿ ನಕ್ಷತ್ರ ನೆಟ್ಟ ಬಾಲಕ.
ಅವನ ಮರೆಯುವುದಕ್ಕಾಗಿ
ನೆಲ ಒಲೆ ಸಾರಿಸಿ ರಂಗೋಲಿ ಹುಯ್ದು
ಮಡುವಿನಲ್ಲಿ ಮಿಂದು ಬಂದಳು.
ಶಿವನಾಮವ ನಾಲಗೆಯ ಮ್ಯಾಲೆ ತೇಯುತ್ತ
ಬುಟ್ಟಿತುಂಬ ದವನದ ಹೂ ಮಲ್ಲಿಗೆ ಮರುಗ
ಬಿಲ್ವಪತ್ರಿಯ ತಂದು
ಬಿಲದಲ್ಲಿಯ ದೇವರ ಮ್ಯಾಲೆ ಸುರಿದಳು.

ಯಾರೂ ಸಾರದಿದ್ದರೂ ಈ ದಿನ ಆಕಾಶದಲ್ಲಿ ಯಕ್ಷಿಯ ಸಂಚರಣೆಯಿದೆಯೆಂದು, ಚಂದಮುತ್ತನ ಕೊಳಲ ಸಂಗೀತವಿದೆಯೆಂದು ಪಶುಪಕ್ಷಿ ತರುಮರಾದಿ ಜೀವರಾಶಿಗೆ ತಿಳಿದುಬಿಟ್ಟಿತ್ತು.

ಅವೆಲ್ಲ ತನ್ನನ್ನು ಕದ್ದು ನೋಡುತ್ತಿವೆಯೆನ್ನಿಸಿ ಅಬ್ಬೆಯ ಅಂತರಂಗಕ್ಕೆ ಜ್ವರ ಬಂದವು. ಮುರಿದ ಮಾತುಗಳಲ್ಲಿ ಏನೇನೋ ಕನವರಿಸಿ ಕೊನೆಗೆ ತನ್ನ ಕಂಕುಳದ ಕೂಸನ್ನು ಶಿವ ಕಸಿದನೆಂದು ಶಪಿಸಿ ಜಲ ಜಲ ಕಣ್ಣೀರು ಸುರಿಸಿ ಕಣ್ಣೀರಲ್ಲಿ ತೆಪ್ಪದ ಹಾಗೆ ತೇಲಿದಳು ತಾಯಿ.

ಅದಕ್ಕೆ ಅಬ್ಬೆಗೆ ವಿಸ್ಮೃತಿ ಮಾಡುವುದೆಂದು ನಾವು ಆಲೋಚಿಸಿದೆವು. ಯಾಕಂತೀರೋ? ಒದಗಲಿರುವ ಘೋರದ ಅರಿವಾಗಿ ಚಂದಮುತ್ತನ್ನ ಹೊರಗೆ ಹೋಗಗೊಟ್ಟಾಳೆಂಬ ಬಗ್ಗೆಯೇ ನಮಗೆ ಅನುಮಾನವಿತ್ತು. ಎದೆಯಲ್ಲಿ ನಕ್ಷತ್ರ ನೆಟ್ಟ ಬಾಲಕನ ಕನಸು ಮರೆಯಲೆಂದು ರಾತ್ರಿಯಿಡೀ ಅಬ್ಬೆಯ ಕಣ್ಣಿಗೆ ಹಿತಕರವಾದ ಹಳವಂಡಗಳ ತೋರಿದೆವು.

ಯಕ್ಷಿಯ ಗುಡಿಮ್ಯಾಲೆ ಚಂದಮುತ್ತ
ಚಂದ್ರಮಂಡಳದಷ್ಟು ಎತ್ತರವಾದ ಧ್ವಜ ಹಾರಿಸಿದಂತೆ,
ಕಲ್ಲಿನ ರಥವೇರಿ
ಕೈಲಾಸಕ್ಕೆ ಲಗ್ಗೆಯಿಟ್ಟಂತೆ,
ಚಂದ್ರನೊಳಗಿನ ಜಿಂಕೆಯ ಬೆನ್ನೇರಿ
ಬೆಳಕಿನ ಮಿರಿಲೋಕದಲ್ಲಿ ತೇಲಾಡಿದಂತೆ…

ಹೀಗೆ ಒಂದಾದ ಮ್ಯಾಲೊಂದು ಅರೆಬೆಂದ ಹಳವಂಡಗಳ ತೋರಿದರೂ ಅಬ್ಬೆಯ ಹೃದಯ ತಂಪಾಗಲಿಲ್ಲ. ನೆನಪಿನ ಕುಣಿಕೆ ಮತ್ತೆ ಬಿಗಿದು ಎದೆಯಲ್ಲಿ ಮೂಡಿದ ಕನಸಿನ ಬಾಲಕನ ಚಿತ್ರವ ಮರೆಯಲಾಗಲೇ ಇಲ್ಲ.

ಬೆಳಗಾನೆದ್ದು ಅಬ್ಬೆ ಬಂದು ಮಗನನ್ನು ಎಬ್ಬಿಸುವುದು ರೂಢಿ. ಆಕೆ ಬರಲಿಲ್ಲವಾಗಿ ಚಂದಮುತ್ತನೇ ಎದ್ದು ಮಡುವಿನಲ್ಲಿ ಮಿಂದೇಳಬೇಕೆಂಬಲ್ಲಿ ಕಾಡುಮರ ನಡೆದು ಬಂದ ಹಾಗೆ ಅಲ್ಲಿಗೇ ಬಂದಳು ಅಬ್ಬೆ. ಮಾತಿಲ್ಲದೆ ದಂಡೆಯ ಕೊಂಬುಗಲ್ಲಿನ ಮ್ಯಾಲೆ ಮಗನ ಕೂರಿಸಿ ಹಿಡಿ ಕಲ್ಲು ತಗೊಂಡು ಚೆನ್ನಾಗಿ ಬೆನ್ನುಜ್ಜಿದಳು. ಅನ್ಯೋನ್ಯ ಮಾತಾಡಿ ಅಬ್ಬೆಯ ಸಂತಸವಿಸಬೇಕೆಂಬಲ್ಲಿ ಬೆನ್ನಿನ

ಮ್ಯಾಲೆ ಬಿಸಿಹನಿ ಬಿದ್ದ ಅರಿವಾಗಿ “ಯಾಕಬ್ಬೆ?” ಎಂದು ಮ್ಯಾಲೆ ನೋಡಿದ. ಒಡಲೊಳಗಿನ ನುಡಿಯ ಹೊರಕ್ಕೆ ಹಾಕುವುದಕ್ಕೆ ಹೊತ್ತು ಹಿಡಿಯಿತು ಬಹಳ –

“ಎಷ್ಟು ಅತ್ತರೂ ನನ್ನ ಕಣ್ಣೀರು ಕೈಲಾಸಕ್ಕೆ
ಅರಿವಾಗಲಿಲ್ಲ ಬಿಡಪ್ಪ”

– ಎಂದುಸುರಿ ಯಕ್ಷಿಯ ಬಳಿಗೆ ಹೋದಳು.

ಆಮೇಲೆ ಚಂದಮುತ್ತ ಶಿವಪೂಜೆ ಶಿವಗ್ಯಾನವ ಮಾಡಿ ಕೊಟ್ಟಿಗೆಗೆ ಹೋಗಿ ಕರುಗಳ ಬಿಟ್ಟ. ಒಂದು ಕರುವೂ ತಾಯ ಮೊಲೆಗಂಟಲಿಲ್ಲ. ದನಕರುಗಳೆಲ್ಲ ಚಂದಮುತ್ತನ ಸುತ್ತಾಮುತ್ತಾ. ಗೇರಾಯಿಸ್ಕೊಂಡು ಮೌನವಾಗಿ ಅವನನ್ನೇ ನೋಡುತ್ತಾ ನಿಂತವು. ಕಪಿಲೆ ಕಡೆಗಣ್ಣಲ್ಲಿ ಕಣ್ಣೀರು ಕೆಡಿಕ್ಕಂಡು ಚಂದಮುತ್ತನ ಭುಜದ ಮ್ಯಾಲೆ ಗದ್ದ ಊರಿ ನಿಂತಿತು.

ಈ ಕಡೆ ಅಬ್ಬೆ ಚಿತ್ರಚರಿತ್ರಳಾದ ಯಕ್ಷಿಯ ಬಾಡಿದ ಲಲಿತವದನ ನೋಡಿದ್ದೇ ಕರುಳು ಹಿಂಡಿ ಬಂತು. ಉಟ್ಟ ದಟ್ಟಿಯ ಸೆರಗು ಒದ್ದೆ ಮಾಡಿಕೊಂಡುಬಂದು ಕೊಳೆಯಾಗಿದ್ದ ಯಕ್ಷಿಯ ಮುಖ ಒರೆಸಿ, ಮೈಯಂತ ಮೈಯಲ್ಲ ಉಜ್ಜಿ ತೊಳೆದಳು. ಜಡೆಗಟ್ಟಿದ ಇರುಳಿನ ಹಾಗಿದ್ದ ಕಾಳನೀಳವಾದ ಸುರುಳಿಗೂದಲನ್ನ ಕಾಳಜಿಯಿಂದ ಒರೆಸಿ ತೊಳೆದು ಮೆಲ್ಲಗೆ ಬಾಚಿ ಹೆರಳು ಹಣೆದಳು. ಒಂದೆರಡು ಮಲ್ಲಿಗೆ ತಂದು ತುರುಬಿ, ಹಣೆಗೆ ಕುಂಕುಮವಿಟ್ಟು, ದಟ್ಟಿಯ ಸರಿಪಡಿಸಿ ಗಾಳಿ ಬೀಸಿದಳು. ಯಕ್ಷಿಯ ಅಂತಃಕರಣ ಕರಗಿ ಕಣ್ಣೀರು ಜಲವುಕ್ಕಿ ನೀರಲ್ಲಿ ತೇಲಿಬಿಟ್ಟ ದೀಪದ ದೊನ್ನೆಯಂಥ ಕಣ್ಣಿಂದ ಅಬ್ಬೆಯ ನೋಡಿದಳು. ಅಬ್ಬೆಯೂ ಅತ್ತಳು.

ಈ ಮಧ್ಯೆ ಹಟ್ಟಿಗೊಂದು ಭಯಾನಕ ಸುದ್ದಿ ಬಂತು. ಯಕ್ಷಿಯ ಹುಡುಕಿಕೊಂಡು ಹೋದ ಚೆನ್ನಮುತ್ತ, ಮಹಾನುಭಾವನ ಕಂಡದ್ದೇ ಯಕ್ಷಿಯೆಲ್ಲಿ ಎಂದು ಪೀಡಿಸಿದನಂತೆ. ಎಷ್ಟು ಒತ್ತಾಯ ಮಾಡಿದರೂ ಇವನು ಹೇಳಲಿಲ್ಲವಾಗಿ, ಹೆದರಿಸಲು ಕಕ್ಕೆ ದೊಣ್ಣೆಯಿಂದ ಒಂದೇಟು ಹಾಕಿದರೆ ಅಷ್ಟಕ್ಕೇ ಮಹಾನುಭಾವನ ಒಂದು ಕಣ್ಣುದುರಿ ನೆಲಕ್ಕೆ ಬಿದ್ದಾಗ ಅದನ್ನು ನೋಡಲಾಗದೆ ಕಾಡಿನಲ್ಲಿ ಓಡಿದ ಚೆನ್ನಮುತ್ತ ಕಮರಿಗೆ ಬಿದ್ದು ಸತ್ತನೆಂದು ತಿಳಿಯಿತು. ಪಾಪ, ಒಬ್ಬನೇ ಮಗನ ವಿಯೋಗ ಸಹಿಸದೆ ಸೂರ್ಯಮುತ್ತನೆಂಬ ದೊಡ್ಡ ಹೆಗಡೆ ನಿನ್ನೆಯಷ್ಟೇ ಬೆಳ್ಳಿಬೆತ್ತವ ಸಿರಿಲಕ್ಕಿಗೆ ಕೊಡಲು ಹೇಳಿ ಕಾಡಿನಲ್ಲಿ ಕಣ್ಮರೆಯಾದನಂತೆ. ಈ ಘಟನೆಗಳು ಹಟ್ಟಿಯ ಮೇಲೆ ಪರಿಣಾಮ ಬೀರಿದವು. ಜನ ಹೆಗಡೆ ಮನೆಯಲ್ಲಿ ಗುಂಪುಗೂಡಿದ್ದರಿಂದ ಈ ಕಡೆ ಬರಲಿಲ್ಲ. ಚಂದಮುತ್ತ ಅಬ್ಬೆಯರಿಗೆ ಈ ಸುದ್ದಿಯ ನಾವು ಹೇಳಲೂ ಇಲ್ಲ. ಕುಲಗುರು ಹೇಳುತ್ತಿದ್ದನೇನೋ. ಯಕ್ಷಿಯ ಸ್ಥಿತಿ ನೋಡಿ, ಇದಲ್ಲ ಸಂದರ್ಭವೆಂದು ಬಾಯಿ ಬಿಡಲಿಲ್ಲ.

## ೪೮. ನಿನಗೆ ಜಯವಾಗ್ಲಿ ನನ್ನಪ್ಪ

ಮಗ ಯಕ್ಷಿಯ ಬೆನ್ನು ಬಿದ್ದಾಗಿಂದ ಶಿವಗೋಳು ತಪ್ಪಿರಲಿಲ್ಲ ಲಕ್ಕಬ್ಬೆಗೆ. ಆಗಲೇ ಅವಳಿಗೆ ಕೈಖಾಲಿ, ಉಡಿ ಖಾಲಿ, ಗರ್ಭ ಖಾಲಿಯಾದಂತೆನಿಸಿತ್ತು. ಆಮೇಲಾಮೇಲಿನ ಮಗನ ನಡುವಳಿಯಿಂದ ಆಶೆಯ ಬೇರು ಕಿತ್ತು ಹೋಗಿ,

ಮಗನ ಹಾಡು ಹೂವಾಗಿ ಅರಳಲೆಂದು
ಅರಳಿ ಪರಿಮಳವಾಗಿ ಹರಡಲೆಂದು
ಮಲ್ಲಿಗೆ ಬಳ್ಳಿಯ ನೆಟ್ಟು ಕಾದೆನೊ ಶಿವನೆ.
ಸುಳಿದು ಬರಲೇ ಇಲ್ಲ ನಿನ್ನ ಗಾಳಿ
ಎಲೆ ಉದುರಿ ನಿಂತಾವು ಬರಲುಬಳ್ಳಿ.

- ಎಂದು ಅವಳೇ ರಾಗಿ ಬೀಸುತ್ತಾ ಕಾಳು ಕುಟ್ಟುತ್ತಾ ಹಾಡಿಕೊಂಡತ್ತಿದ್ದಳು. ಈಚೀಚೆಗಂತೂ,

ನಾವಿಕನಿಲ್ಲದೆ ಗಾಳಿ ಒಯ್ದತ್ತ ಹೋಗುವ
ಹರಿಗೋಲು ನನ್ನ ಬಾಳು, ಸೋರುತ್ತಿದೆ.
ಮುಳುಗುವುದಿನ್ನು ಹೆಚ್ಚು ವ್ಯಾಳ್ಯ
ತಕ್ಕೊಳಲಾರದು ಶಿವನೇ -

ಎಂದು ಶಿವದುಃಖ ಮಾಡುತ್ತಿದ್ದಳು. ಎದೆಯಲ್ಲಿ ನಕ್ಷತ್ರ ನೆಟ್ಟ ಬಾಲಕನ ಕನಸು ಕಂಡಾಗಿಂದ ಹೊತ್ತಿಕೊಂಡುರಿದಳು ತಾಯಿ ಪಂಜಿನಂತೆ. ಕಥೆಗೆ ಹ್ಯಾಗೋ ಹಾಗೆ ಅವಳ ಆರೋಗ್ಯಕ್ಕೂ ಅಗತ್ಯವೆನ್ನಿಸಿ ಎದೆಯಲ್ಲಿ ನಕ್ಷತ್ರ ನೆಟ್ಟ ಬಾಲಕನ ಬದಲು ಚಂದಮುತ್ತನ್ನ ತೋರಿಸಿದೆವು. ಅಬ್ಬೆ ಅರಗಳಿಗೆಯಲ್ಲಿ - ನೀರು ತುಂಬಿದ ಕಣ್ಣಿಗೆ ತಾನಿದ್ದ ಗೂಡು ಸರಿಯಾಗಿ ಕಾಣದೆ ವಿಸ್ಮೃತಿಗೆ ಸಂದಳು. ಏನೇನೋ ಆಡಿಕೊಂಡಳು. ಯಾರೊಂದಿಗೋ ವಾದಿಸಿದಳು. ತಂತಾನೇ ಸಮಾಧಾನ ಮಾಡಿಕೊಂಡುದನ್ನು ನೋಡಿ ನಮಗೆ ನೆಮ್ಮದಿಯಾಗಿ ಮುಂದಿನ ಕಥೆ ಸುರು ಮಾಡಿದೆವು.

ವಿಸ್ಮೃತಿಯ ಪರಿಣಾಮ ನಮಗೆ ಆಗಲೇ ಗೋಚರಿಸಿಬಿಟ್ಟಿತು. ದುಃಖದ ದುಗುಡಂಗಳ ಮರೆತು ಹೊರಗೆ ಬಂದು ಪುನಃ ನೆಲ ಸಾರಿಸಿದಳು. ಅಂಗಳ ಗುಡಿಸಿ ಸೆಗಣಿ ಸಾರಣೆ ಮಾಡಿದಳು. ಇವತ್ತು ಶಿವರಾತ್ರಿ ಅಮಾವಾಸ್ಯೆಯಂದು ಗೊತ್ತಿದ್ದರೂ ತಿಂಗಳಮಾವನ ಪೂಜೆಯಲ್ಲಿ ಮಾಡುವಂತೆ ಸೀಮೆಸುಣ್ಣದಲ್ಲಿ ಅಂಗಳದ ತುಂಬ ಚಂದಪ್ಪನ ಹುಯ್ದಳು. ಅವನ ಸುತ್ತ ಚಿಕ್ಕೆಯ ಬಳಗವ ಹುಯ್ದು ಚಂದವಾಯಿತೇ ಎಂದು ನಿಂತು ನೋಡಿ ತೃಪ್ತಿಯಾದ ಮ್ಯಾಲೆ ಒಳಕ್ಕೆ ಹೋದಳು. ಒಲೆ ಸಾರಿಸಿ ರಂಗೋಲಿ ಹುಯ್ದಳು. ಮನೆದೇವರು ಚಂದಪ್ಪನ ಬಿಲದ ಸುತ್ತ ಸುಣ್ಣದಲ್ಲಿ ಬಳ್ಳಿ ಎಲೆ ಹೂ ಬರೆದಳು. ಆಮ್ಯಾಲೆ ರಾಗಿಹಿಟ್ಟಿನ ಆಧಾರದಲ್ಲಿ ಕಪಿಲೆಯ ಹಾಲು ಸೇರಿಸಿ ಮನೆದೇವರ ಬಿಲದ ಮ್ಯಾಲೆ ಚಂದ್ರನ ಆಕಾರದ ಬೆರಣಿಯ ತಟ್ಟಿದಳು. ಅದರ ಮುಂದೆ ಕೋಲದೀಪ ಇಟ್ಟು ಪೂಜೆ ಮಾಡಿ ಮೈ ಹಾಸಿ ನಮಸ್ಕಾರ ಮಾಡಿದಳು.

ಸಂಜೆ ಸಾಯಂಕಾಲವಾದೇಟಿಗೆ ಚಂದಮುತ್ತ ಓರೆಯಾಗಿ ಜುಟ್ಟು ಕಟ್ಟಿಕೊಂಡು ನವಿಲುಗರಿ ಸಿಕ್ಕಿಸಿಕೊಂಡು ಸೊಂಟದ ಲಂಗೋಟಿಯಲ್ಲಿ ಗೆಜ್ಜೆಕೊಳಲು ಸಿಕ್ಕಿಸಿಕೊಂಡು ಹೆಗಲ ಮ್ಯಾಲೆ ಕರಿಕಂಬಳಿ ಹಾಕಿಕೊಂಡು ಎದ್ದ. ಹೆತ್ತಯ್ಯ ಮುತ್ತಯ್ಯರ ನೆನೆದು ಕುಲದೇವರು ಮನೆದೇವರ ನೆನೆದು ಸತ್ಯದ ಸಾವಳಗಿ ಶಿವನ ನೆನೆದು ಆಶೀರ್ವಾದ ಪಡೆಯಲು ಅಬ್ಬೆಯ ಬಳಿಗೆ ಬಂದಾಗ, ಅಬ್ಬೆ ವಿಸ್ಮೃತಿಗೆ ಸಂದಿದ್ದಳಾಗಿ ತೊಂದರೆ ಎಂಬುದಾಗಲಿಲ್ಲ. ಮಗ ಕಾಲಿಗೆ ಹಣೆ ತಾಗಿಸಿದಾಗ ತಲೆ ಹಿಡಿದೆತ್ತಿ ನೆತ್ತಿಯ ಮೂಸಿ ಕರುವನಪ್ಪಿಕೊಳ್ಳುವಂತೆ ಹಿಡಿದುಕೊಂಡು ಹೇಳಿದಳು:

ನಿಜವಾದ ಗೊಲ್ಲ ನೀನು
ಕೊಳಲಿನಿಂದ ಗೆದ್ದಿರುವೆ ದನಕರು ಮಾನವರ ಹೃದಯ,
ಬೆಟ್ಟದ ಮಾಯಿಯ ಹಸಿರು ಸೀಮೆಯ
ಈ ಕಾಡಿನ ಚರಾಚರಕೆ
ನಿನ್ನ ಹಾಡಿನ ನೆಪ್ಪಿದೆಯಣ್ಣ
ಈಗ ಸೀಮೋಲ್ಲಂಘಿಸಿ
ಬೆಲೆ ಬಾಳುವ ಬೆಳ್ದಿಂಗಳ ಸೀಮೆಗಳಲ್ಲಿ
ಹಾಡುಗಳ ಬಿತ್ತುವುದಕ್ಕೆ
ನೀಲಿಮದ ಚಂದ್ರನ್ನ ಕೇಳುತ್ತಿ ನೀನು.
ಚಂದ್ರನ ಹಿಡಿದುಕೋ ಎಂದು

ನಿನ್ನನ್ನ ಆಕಾಶಕ್ಕೆ ಹಾರಿಸಿ ತೋಳು ತೆರೆದು ಕಾಯುವುದು
ನೀ ಬಂದು ನನ್ನ ಮಡಿಲಿಗೆ ಬೀಳುವುದು
ಮತ್ತೆ ಹಾರಿಸುವುದು ಮತ್ತೆ ಬೀಳುವುದು
ಎಷ್ಟೆಷ್ಟು ಎತ್ತರ ಹಾರಿದರೆ ಅಷ್ಟಷ್ಟು ಭಾರ
ಬಂದು ಬೀಳುತ್ತಿ ಮಡಿಲಿಗೆ, ನನ್ನ ಒಡಲಿಗೆ.
ಈಗ ಸಿದ್ಧಳಾಗಿದ್ದೇನೆ
ಆಕಾಶಕ್ಕೆ ನಿನ್ನ ತೂರುವುದಕ್ಕೆ.

ನೆಪ್ಪಿರಲಿ ಕಂದಾ,
ನೀನು ಬಿತ್ತಲಿರುವ ಹಾಡುಗಳಿಗಾಗಿ
ಕಾದವಳು ನಾನು ಹಾರೈಸಿದವಳು
ಹಿಂಗ್ಯಾಕೆಂದರೆ ಉತ್ತರ ಗೊತ್ತಿರದವಳು
ಮತ್ತು ಈಗಲೂ ನಿನ್ನ ತಾಯಾದವಳು.

ತಗೋ ನನ್ನ ಹರಕೆಯ, ಶಿವಕೃಪೆಯ,
ನಿನಗೆ ಜಯವಾಗ್ಲಿ ನನ್ನಪ್ಪ, ಶುಭಮಕ್ಕೆ ಶುಭವಾಗಲೆಂದಳು.

ಅಬ್ಬೆಯ ಅನುಗ್ರಹದ ಶುಭ ವಾಕ್ಯ ಹೇಳಿ ಆಘಾತವಾಯಿತು ಮಗನಿಗೆ! ತಲೆಯೆತ್ತಿ ನೋಡಿದ, ಅವಳ ನೀಲಾಂಜನದಂಥ ಕಣ್ಣಲ್ಲಿ ಅಪರಿಚಿತವಾದ ಅದಿಮೆ ಬೆಳಕಿದ್ದುದ ನೋಡಿ ಚಕಿತನಾದ. ತಾಯಿಗೆ ಇನ್ನೊಮ್ಮೆ ನಮಿಸಿ ಹೊರಟ.

ಪೂಜೆಯ ಸಾಮಾನು ತಗೊಂಡು ಜೋಕೆಯಿಂದ ಯಕ್ಷಿಯ ಎತ್ತಿಕೊಂಡು ಸುತ್ತಿನ ದೇವರಿಗೆ ನಮಿಸಿ ಕೊಟ್ಟಿಗೆಗೆ ಹೋದರೆ ಇಡೀ ದಿನ ಒಂದು ದನಕರುವೂ ನೀರು ಕುಡಿದಿರಲಿಲ್ಲ. ಮೇವು ಮುಟ್ಟಿರಲಿಲ್ಲ. ಇವನ ಕಂಡದ್ದೇ ನಂದಿನಿ ಓಡಿ ಬಂದು ಚಂದಮುತ್ತನ ತೆಕ್ಕೆಯಲ್ಲಿ ಮುಖ ಹುಗಿದು ನಿಂತುಕೊಂಡಿತು. ಕಣ್ಣು ಕೆಂಪಾಗಿ ಗುಟ್ಟಾಗಿ ಅತ್ತಹಾಂಗಿತ್ತು. ತಿಂಗಳು ಮಡುಗಟ್ಟಿದ ಹಾಗೆ ಕಣ್ಣು ತುಂಬಿ ಕಣ್ಣೀರು ತುಳುಕಿತು. ಗಂಗೆ ಗೌರಿಗೆ ಚಂಡುಹೂ ದುಂಡುಮಲ್ಲಿಗೆಗೆ ಅಬ್ಬೆಯ ನೋಡಿಕೊಳ್ಳಿರೆಂದು ಹೇಳಿ ಹೊರಡುತ್ತಲೂ ಒಂದೊಂದೇ ಕರು ಬಂದು ಚಂದಮುತ್ತನ ಸುತ್ತ ಫೇರಾಯಿಸ್ಕೊಂಡು ತುಂತುರು ಹನಿಯುವ ಕಣ್ಣುಗಳಿಂದ ನೋಡುತ್ತಾ ಹೋಗಬ್ಯಾಡಯ್ಯಾ ಎಂದು ಮೂಕವಾಗಿ ಮೊರೆಯಿಡುತ್ತಾ ನಿಂತವು. ಲಂಗೋಟಿಯ ತುದಿಯಿಂದ ಅವುಗಳ ಕಣ್ಣೀರೊರೆಸಿ ಹೊರಡುವುದಕ್ಕೆ ಸಾಕುಬೇಕಾಯಿತು. ಕೊಟ್ಟಿಗೆಯ ಕಪಿಲೆಗೆ ಅಬ್ಬೆಯ ನೋಡಿಕೋ ಎಂದು ಹೇಳಿ ಹೊರಟ. ಕಂಬದ ಗೌಳಿ ಬೆಸ ನುಡಿದವು. ಕಳ್ನಾಯಿ ಬೆಳ್ನಾಯಿ ಪಟ ಪಟ ಕಿವಿ ಬಡಿದು ಬೆಂಬತ್ತಿದವು. ಚಿತ್ತ ಮಿಡಿದು ಕಣ್ಣೀರು ಬಂತು. ತೆಕ್ಕೆಯಲ್ಲಿಯ ಯಕ್ಷಿಯ ನೆನಪಾಗಿ ನಿರ್ಧಾರದಿಂದ ನಡೆದ.

ಮುಂದೆ ನಡೆದಾಗ ದಾರಿಯ ಅಕ್ಕಪಕ್ಕ ಇಬ್ಬರು ಸೇಡುಮಾರಿ ಬುಡ್ಡಿಯರು ನಿಂತುಕೊಂಡಿದ್ದಾರೆ ಶಿವನೆ! ಮುಖದ ತುಂಬ ಅಂಗೈಗಾತ್ರದ ಕೊಳೆ ಮೆತ್ತಿಕೊಂಡಿದೆ. ಮೂಗಿನ ತುಂಬ ಮುಸುರೆ, ಕಣ್ಣುಗಳು ಇಂಗಿ ಹೋಗಿ ಮೈಯಂತ ಮೈಯೆಲ್ಲ ಕಜ್ಜಿ ಹುರುಕಾಗಿ ಗೊಮ್ಮಂತ ಗಬ್ಬ ನಾತ ಹೊಡೆವುತ್ತಿದೆ ಇಬ್ಬರಿಗೂ. ಇಬ್ಬರೂ ಮಾತಾಡಿಕೊಳ್ಳುತ್ತಿದ್ದಾರೆ, ಏನಂತ?

**ಸೇಡುಮಾರಿ ೧ :** ಅಕಾ ಬಂದ ನೋಡು

**ಸೇಡುಮಾರಿ ೨ :** ಹಾಂಗೆಲ್ಲ ಹೆದರಿಸಬೇಡ, ಬಾಯಿ ಮುಚ್ಚಿಕೊ.

**ಸೇಡುಮಾರಿ ೧ :** ಅವನಾಗಲೇ ಹೆದರಿದ್ದಾನೆ. ಆಗಲೇ ಕಣೆಗಣ್ಣಲ್ಲಿ ಕಣ್ಣೀರುದುರಿಸಿದ. ನೋಡಲಿಲ್ಲವೆ? ತೆಕ್ಕೆಯಲ್ಲಿ ಯಕ್ಷಿ ಇಲ್ಲದಿದ್ದಲ್ಲಿ ಓಡಿ ಹೋಗುತ್ತಿದ್ದ.

ತನ್ನ ಒಡಲೊಳಗಿನ ನುಡಿಯಾಡುವ ಇವರ್ಯಾರೆಂದು ದಿಗಿಲಾಯಿತು; ಚಂದ ಮುತ್ತನಿಗೆ.

"ಯಾರು ನೀವು?" ಅಂದ.

**ಇಬ್ಬರೂ :** ಸೇಡುಮಾರಿಯರು.

**ಚಂದಮುತ್ತ :** ಇಲ್ಲಿ ಯಾಕೆ ನಿಂತಿದ್ದೀರಿ?

**ಇಬ್ಬರೂ :** ಸೂರ್ಯಮುಳುಗಲಿ ಅಂತ.

**ಚಂದಮುತ್ತ :** ಯಾಕೆ?

**ಇಬ್ಬರೂ :** ಸೂರ್ಯ ಮುಳುಗಿದ ಮ್ಯಾಲೆ ಪಡುಬೆಟ್ಟದಲ್ಲಿ ಚಂದ್ರ ಮೂಡುತ್ತಾನಲ್ಲ, ಅವನೊಳಗಿನ ಜಿಂಕೆಯ ತಿನ್ನೋಣ ಅಂತ.

**ಚಂದಮುತ್ತ :** ಇವತ್ತು ಮಹಾಶಿವರಾತ್ರಿ ಅಮವಾಸ್ಯೆ. ಚಂದ್ರ ಮೂಡುವುದಿಲ್ಲ ಅಂತ ಗೊತ್ತಿಲ್ಲವೆ?

**ಸೇಡುಮಾರಿ ೧ :** ನಿನಗೂ ಗೊತ್ತಿಲ್ಲವೆ? ಯಾವ ಧೈರ್ಯದ ಮ್ಯಾಲೆ ಯಕ್ಷಿಗೆ ದೈವತ್ವ ಕೊಡ್ತೀಯಪ್ಪ, ಚಂದ್ರನೇ ಮೂಡದಿದ್ದರೆ?

**ಸೇಡುಮಾರಿ ೨ :** ಇರು ಇರು. ನೀನು ಕೊಳಲು ನುಡಿಸುವಾಗ ಚಂದ್ರ ಮೂಡುವವನಿದ್ದಾನೆ. ನಿನ್ನ ಅಬ್ಬೆಯಾಗಲೇ ಚಂದ್ರನ ಹೆರಲು ಬೇನೆ ತಿನ್ನುತ್ತಿದ್ದಾಳೆ! ಹೋ ಹೋ...

- ಎಂದು ಕೈ ತಟ್ಟಿ ನಗಾಡುತ್ತ ಓಡಿ ಹೋದವು.

## ೪೯. ಶಿವರಾತ್ರಿಯ ಶಿವಾನಂದ

ಇತ್ತ ಚಂದಮುತ್ತ ಗುಡಿಯಲ್ಲಿ ಯಕ್ಷಿಯ ಜೋಪಾನ ಮಲಗಿಸಿ ಗುಡಿ ಮುಂದಿನ ಅಂಗಳ ಸಾರಿಸಿ, ಸಾರಣೆ ಮಾಡಿ, ರಂಗೋಲಿ ಎಳೆದು ಮರುಗ ಮಲ್ಲಿಗೆ ಪತ್ರಿಯೆಲೆ ತಂದು ಸಂಜೆಯ ಶಾಂತಿಪೂಜೆ ಮಾಡಿದೇಟ್ಗೆ ಹಗಲ ಬೆಳಕಾರಿ ಕತ್ತಲಾದವು. ಪಂಜು ಹೊತ್ತಿಸಿ ಕರಿ ಬಿಳಿ ಸುಣ್ಣ ಬಣ್ಣ ಅರಿಷಿಣ ಕುಂಕುಮಗಳಲ್ಲಿ ಮಂಡಳ ಬರೆದು ಮಂಡಳದ ಎಡಬದಿಯಲ್ಲಿ ಮೂರು ಕಾಲಿನ ಮೂಳೆರೂಪದ ಭೃಂಗೀಶನ ವಿರಚಿಸಿದ. ಅವನ ಮುಗಿದ ಕೈ ತಲುಪುವಲ್ಲಿ ಸತ್ಯಶಿವನ ಶ್ರೀಪಾದಂಗಳ ಸ್ಥಾಪನೆ ಮಾಡಿ ಮಂಡಳ ಮಧ್ಯೆ ಬೂದಿಬಡಕ ಶಿವನ ಮತ್ತವನ ತಲೆಯಲ್ಲಿ ಮಿಡಿನಾಗರ ಜಡೆಯ ಬರೆದು ಜಡೆಯಲ್ಲಿ ಚಂದ್ರನ ಬರೆವುದನ್ನ ಮರೆತ. ಯಂತ್ರ ಮಂತ್ರ ತಂತ್ರಂಗಳ ಸುತ್ತೂ ಬರೆದು ಮಂತ್ರಭಾವಿತ ರಚನೆಗಳೊಂದಿಗೆ ಸಾವಿರದೊಂದು ಗಣಂಗಳ ಆವಾಹಿಸಿ ರಕ್ಷಣೆಗಿಟ್ಟ ಮಂಡಳದ ಕೆಳಭಾಗದ ಆಯಕಟ್ಟಿನ ಸ್ಥಳದಲ್ಲಿ ಇನ್ನೊಂದು ಮಂಡಳ ಬರೆದು ಗುಡಿಯಲ್ಲಿಯ ಯಕ್ಷಿಯ ಅದರೊಳಗಿಟ್ಟು ಸುತ್ತ ರಕ್ಷೆಯ ರಚಿಸಿ ದೈವಂಗಳ ಆವಾಹಿಸಿ ಕಾವಲಿಗಿಟ್ಟು ಬಂದೋಬಸ್ತ್ ಮಾಡಿದ. ಇಷ್ಟೆಲ್ಲಾ ಆಗಿ ಏನೊಂದು ಊನವಾಗಿಲ್ಲವೆಂದು ಭಾವಿಸಿ ತುಟಿಗಿಡುವಲ್ಲಿ ನಟ್ಟಿರುಳು ನಡುರಾತ್ರಿಯಾಗಿ ಸರ್ವರೂ;

ಸುವ್ವಿ ಸಾವಿರ ಬಾರಿ, ಸುವ್ವಾಲಿ ಸಾವಿರ ಬಾರಿ
ಪಾರ್ವತೀಸಮೇತ ಪರಮೇಶ್ವರನಿಗೆ ಸಾವಿರದೆಂಟು ಬಾರಿ ಶರಣೆಂದೆವು.

ನಾವಿಂದು ಸಾಂಬಶಿವನ ನೆನೆಯುತ್ತಿರಬೇಕಾದರೆ ಚಂದಮುತ್ತ ನಾಭಿಕುಹರದ ಉಸಿರಿನಿಂದ ಹದವಾದ ನಾದಂಗಳ ತೆಗೆದು ಆಲಾಪವ ಸುರು ಮಾಡಿದ. ಸುತ್ತಲಿನ ಸಚರಾಚರದಲ್ಲಿ ಜೀವಸಂಚಾರವಾಗಿ ಮಹಾಶಿವರಾತ್ರಿಯ ಮಹಾಪೂಜೆಯಲ್ಲಿ ಭಾಗಿಯಾಗಲು ಚಡಪಡಿಸಿದವು. ಮಧುರಾಲಾಪನ ಮಾಡಿ ಮಂಡಳದ ಸುತ್ತಲಿನ ಮಲ್ಲಿಗೆ ಬಳ್ಳಿ ಅರಳಿ ನಲುಗುವ ಹಾಗೆ ಮಾಡಿದ. ಆನಂದ ನಾದವ ಹೊರಡಿಸಿ ಗಾಳಿ ಪರಿಮಳವಾಗಿ ಸುಳಿದು ಮಂಡಳದ ಒಳಹೊರಗಿನ ದೇವತೆಗಳೆಲ್ಲ ಪ್ರಸನ್ನರಾಗುವಂತೆ ನುಡಿಸಿದ. ಸುತ್ತಲಿನ ಚರಾಚರವು ಮಹಾಶಿವರಾತ್ರಿಯ ಶಿವಾನಂದ ಸವಿವ ಕಿವಿಯಾಗುವಂತೆ ನುಡಿಸಿದ.

ಇದಾದ ಮ್ಯಾಲೆ ಭೃಂಗೀಶನ ಶ್ರೀಪಾದಂಗಳ ನುತಿಸುವ ರಾಗ ರಚನೆಯ ಪದಕಟ್ಟಿ ಅಮೋಘವಾಗಿ ನುಡಿಸಿ ಸೂಕ್ಷ್ಮ ಲೋಕದ ದೇವರು ಸ್ಥೂಲಕ್ಕೆ ಬರಬೇಕೆಂದು ಭಕ್ತಿಯಿಂದ ಪ್ರಾರ್ಥಿಸಿದ. ಮಂಡಳದ ಆಸುಪಾಸು ಸಾವಿರದೆಂಟು ಜಂಗುಜಂಗಿನ ಅನಾಹತನಾದ ವಿಜೃಂಭಿಸಿ ಭೃಂಗೀಶನ ಅವತಾರದ ಮುನ್ಸೂಚನೆಯಾಯಿತು. ಅವನ ಕರೆತಂದು ಸೂಕ್ಷ್ಮ ಮತ್ತು ಸ್ಥೂಲಗಳ ನಡುವಿನ ಹೊಸ್ತಿಲ್ಲಿ ನಿಲ್ಲಿಸಿ ಶಿವಗಣದ ರೀತಿರಿವಾಜಿನಲ್ಲಿ ಶಿವಾಚಾರ ಶಿವಭಕ್ತಿಯ ಅರ್ಪಿತ ಮಾಡಿ, ತೃಪ್ತಿಗೊಳಿಸಿ ತಿಂಗಳುರಾಗವ ಸುರುಮಾಡಿದ ಚಂದಮುತ್ತ.

ಕನಸುಗಳಾದ ನಮಗಿನ್ನೂ ಏಕಾಗ್ರತೆ ಒದಗಿರಲಿಲ್ಲ. ಅದು ಇದು ನುಡಿದಾಡುತ್ತಿದ್ದಾಗ ಚಂದಮುತ್ತ ಹೊತ್ತಿಸಿದ ಇದ್ದೊಂದು ಪಂಜು ಆರಿ ಕಗ್ಗತ್ತಲಾವರಿಸಿತು. ಇದ್ದಕ್ಕಿದ್ದಂತೆ ಹಾಳುಗುಡಿಯ ಕರೀ ಶಿವಲಿಂಗ ಎದ್ದುಬಂದು ನಮ್ಮನ್ನು ಗದರಿದಂತಾಯ್ತು. ಏನೆಂದು ನೋಡಿದರೆ ಶಿವಾ ಶಿವಾ! -

ಚಂದಮುತ್ತನ ತಿಂಗಳು ರಾಗದ ಮಾಯೆ ಹಬ್ಬಿಬಿಟ್ಟಿದೆ!
ಮಹಾಶಿವರಾತ್ರಿಯ ಕಗ್ಗತ್ತಲೆಯ ಆವರಿಸಿಬಿಟ್ಟಿದೆ ಅಂಧಂತಮಸ್ಸನ್ನ
ಮೀರಿ ಬೆಳೆಯುತ್ತಿದೆ
ಮ್ಯಾಲಿನ ಮಿರಿಲೋಕದ ತಾರಾಲೋಕದವರೆಗೆ
ನ್ಯಾವ್ಯಾರೆಂದು, ಎಲ್ಲಿದ್ದೇವೆಂದು,
ಏನಾಯಿತೆಂದು, ಯಾಕಾಯಿತೆಂದು ತಿಳಿಯದೆ
ನಮ್ಮ ನಾಮರೂಪ ಕ್ರೀಗಳೆಲ್ಲ ಕರಗಿ,
ಸುತ್ತಲಿನ ಸಚರಾಚರದ ಎಲ್ಲ ಎಲ್ಲವುಗಳಲ್ಲಿ
ಶಿವವು ಎಚ್ಚರವಾಗಿ
ತನ್ನ ತಾನು ಕಂಡುಕೊಂಬ ಸಡಗರದಲ್ಲಿದೆ
ನಮ್ಮ ದೇಹಂತ ದೇಹ ಪುಳಕಗೊಂಡು ವಿವಶರಾಗಿ
ಹೊತ್ತು ಬಹಳ ಹಾಗೇ ಇದ್ದೆವು.

ಇಂತೀಪರಿ ಚಂದಮುತ್ತನ ಕೊಳಲ ಸಂಗೀತ ನಡೆದಿರಲಾಗಿ ಎಲ್ಲೋ ಏನೋ ಸೂತ್ರ ತಪ್ಪಿದೆಯೆನಿಸಿ ನೋಡಿದರೆ -

ಹೆಂಗಿತ್ತೊ ಹಂಗೆ ಇದೆ ಸರ್ವಲೋಕ!
ಕರ್ಮಂಗಳು ನಡೆಯದೆ
ಘಟಿತಂಗಳು ಘಟಿಸದೆ

ಎಲ್ಲೆಂದರಲ್ಲಿ ಹೆಂಗೆಂದರೆ ಹಂಗೆ
ಕಿಂಚಿತ್ತೂ ವ್ಯಾತ್ಯಾಸವಾಗದೆ
ನಮ್ಮಕಥೆ ಇದ್ದಲ್ಲೇ ಇದೆ.
ಏನೋ ಆಗಬಾರದ ಅನಾಹುತ
ಆಗಿ ಹೋಗಿದೆಯೆನಿಸಿ ಮುಂದೆ
ಹ್ಯಾಂಗ ಮಾಡುವುದೆಂಬ ಮಾತಿಗೆ ಈ ಹೀಂಗೆ ಹೊಳೆಯಿತು:

ಚಂದಮುತ್ತ ನುಡಿಸುತ್ತಿರುವುದು ತಿಂಗಳರಾಗ. ಹುಣ್ಣಿವೆಯ ರಾತ್ರಿ ಅದನ್ನು ನುಡಿಸಬೇಕಾದ್ದು ನಿಯಮ. ಆದರೆ ಶಿವರಾತ್ರಿಯ ಅಮವಾಸ್ಯೆ ಚಂದ್ರಮಸ್ವಾಮಿ ಮೂಡುವುದಿಲ್ಲವೆಂಬುದು ನಮಗೆ ಅರಿದಲ್ಲ. ಆದರೆ ಚಂದಮುತ್ತನ ತಿಂಗಳ ರಾಗ ಕಾರಣವಾಗಿ ಪವಾಡ ಜರುಗಿ ಚಂದ್ರಾಮನ ಅವತಾರವಾಗಿ ಬೆಳುದಿಂಗಳು ಸುರಿಯಬಹುದೆಂದು; ಆ ಬೆಳಕಿನಲ್ಲಿ ಸತ್ಯಶಿವದೇವರು ಭೃಂಗೀಶನೇ ಮುಂತಾದ ಗಣಂಗಳ ಸಮೇತದರ್ಶನಕೊಟ್ಟು, ಯಕ್ಷಿಗೆ ದೈವತ್ವದ ಅನುಗ್ರಹಿಸಿ, ಚಂದಮುತ್ತನ ಉದ್ಧರಿಸುವರೆಂದು ನಮ್ಮ ನಂಬಿಕೆಯಾಗಿತ್ತು. ಆದರೆ ಅದ್ಯಾವುದೂ ನಡೆಯದೆ ಚಂದಮುತ್ತನ ಕೊಳಲು ಮತ್ತು ನಮ್ಮ ಕಥೆ ಎಡವಿದಲ್ಲೇ ಎಡವುತ್ತ ನಿಂತವು. ಮುಂದೇನು ಮಾಡುವುದೆಂಬ ಗೊಂದಲದಲ್ಲಿ ನಾವೆಲ್ಲ ಮುಳುಗಿರುವ ಪ್ರಸ್ತಾವದಲ್ಲಿ ಚಂದಮುತ್ತನೇನು ಮಾಡಿದ?

ಅವನಿಗೂ ಏನೂ ಹೊಳೆಯದೆ ಗಾಬರಿಯಾಗಿ, ಆದರೂ ಧೈರ್ಯ ಕಳಕೊಳ್ಳದೆ ರಾಗರಚನೆಯಲ್ಲಿ ಓಂಕಾರವಂಕುರಿಸುವಂತೆ ಮಾಡಿ ಈಗ ಕಾಪಾಡಿದರೆ ಅವನೇ ಸೈ ಎಂದು ತಾರಕದಲ್ಲಿ ಭೃಂಗೀಶನ ಪ್ರಾರ್ಥನೆಯ ನುಡಿಸುತ್ತ - ಪ್ರಸನ್ನವಾಗು ಶಿವಪಾದವೇ ಎಂದು ಹಾರೈಸುತ್ತಿದ್ದರೆ ಇಲ್ಲಿ -

ಅಲ್ಲಿ ಆ ಕಡೆ ಶಿವಾಪುರವೆಂಬ ಘನವಾದ ಹಟ್ಟಿಯ ಲಕ್ಕಬ್ಬೆಯ ಗೂಡಿನಲ್ಲಿ ಏನು ನಡೆಯಿತೆಂದರೆ:

ಭೃಂಗೀಶನಿಗೆ ಚಂದಮುತ್ತ ಮರವೆಯಿಂದ ಮಂಡಳದ ಶಿವನ ಜಡೆಯಲ್ಲಿ ಚಂದ್ರನ ಬರೆದಿಲ್ಲವೆಂಬ ಸಂಕಟದ ಅರಿವಾಗಿ, ಬಾಲಕನ ಕಾಪಾಡಲೇಬೇಕೆಂಬ ನಿಶ್ಚಯ ಮಾಡಿ, ಸ್ಥೂಲದ ಹೊಸ್ತಿಲಲ್ಲಿ ನಿಂತಿದ್ದ ಭೃಂಗೀಶ ದೇವರ ಠಳಾರನೆ ಸ್ಥೂಲದ ಬಾಗಿಲನ್ನೊದ್ದು ಬೆಳಕಿನ ರೇಖೆಯಾಗಿ, ಮುಂಗಾರಿನ ಮುಕ್ಕೋಟಿ ಮಿರಿಮಿಂಚು ಮಿಂಚಿಧಂಗೆ ಲಕ್ಕಬ್ಬೆಯ ಗೂಡಿನಲ್ಲಿ ಪ್ರತ್ಯಕ್ಷರಾದರು!

ಇದೇನು ಹೊಯ್ಕೆಂದು, ಇದೆಲ್ಲಿಯ ಜಂಗಿನ ಗೌಜು ಗದ್ದಲವೆಂದು, ಗೂಡಿನ ದನಕರು, ಲಕ್ಕಬ್ಬೆ ದೇಹಂತ ದೇಹವೆಲ್ಲ ಗಾಬರಿ ಪುಳಕಂಗಳಲ್ಲಿ ನೋಡುತ್ತಿರಲು ಮಿಂಚಿನ ಮೂಳೆರೂಪದ ಭೃಂಗೀಶ ದೇವರು ಮೂರು ಕಾಲಿನ ಆರುಮೂರೊಂಬತ್ತು ಪೆಟ್ಟಿನ ಬೆಸಸಂಖ್ಯೆಯ ತಾಳಲಯದಲ್ಲಿ ಗಲಿರು ಗಲಿರು ಅಂತ ಜಂಗು ನುಡಿಸುತ್ತ ಕುಣಿಯುತ್ತೈದಾರೆ! ಮುಂದಲ ಕಾಲಿಗೆ ಮುನ್ನೂರು ಜಂಗ, ಹಿಂದಲ ಕಾಲಿಗೆ ಆರನೂರು ಜಂಗ, ಮೂರನೆ ಕಾಲಿಗೆ ನೂರೆಂಟು ಜಂಗುಗಳ ಪುಟ್ಟ ಪುಟ್ಟ ಪಾದಂಗಳ ಜಂಗೀನ ಶಬುದಕ್ಕೆ ಕಗ್ಗತ್ತಲ ರಾತ್ರಿ ಮಾತಾಡುವಂತೆ ಹೆಜ್ಜೆಯ ಹಾಕಿ ನಾಂಟ್ಯವಾಡುತ್ತೈದಾರೆ! ಆವಾಗ ನೋಡು ಶಿವಾ, ಎಲ್ಲಿಲ್ಲಿದ್ದರೋ ಹಿಂಡು ಹಿಂಡು ಶಿವಗಣಂಗಳು ಹುಡುಹುಡು ಎಂದು ಗುಡುಗುಡುನೋಡಿ ಬಂದು ಗೂಡಿನ ಮೂಲೆ ಮೂಲೆಯಲ್ಲಿ ಪ್ರತ್ಯಕ್ಷರಾಗಿ, ಕೆಲವರು ತಲೆಮ್ಯಾಲೆ ಮುಗಿದ ಕೈ ಹೊತ್ತುಕೊಂಡು ಬಗೆಬಗೆಯ ನಾದಶಬ್ದಂಗಳ ಮಾಡುತ್ತ, ಕೆಲವರು ಕೇಕೆಗಳ ಹಾಕುತ್ತ ಭಕ್ತಿಯ ಆವೇಶವಡರಿ ಶಿವಧೋ ಎಂದು ಕಾಲಕೆಳಗಿನ ನೆಲ ಧೂಳು ಧೂಳಾಗುವಂತೆ ಹುಡಿ ಹುಡಿಯಾಗುವಂತೆ ಹುಡದಿಯಾಡುತ್ತ, ಇನ್ನು ಕೆಲವರು ತಾವು ಕಲ್ಪಿಸಿದ ಹುಯಿಲ್ಗೊಂಬು, ಹುಯಿಲ್‌ತಮ್ಮೆ, ಹುಯಿಲ್ತಾಳ ವಾದ್ಯಂಗಳ ಮಂತ್ರ ಭಾವಿತದಿಂದ ಸೃಷ್ಟಿಸಿಕೊಂಡು ಬಾರಿಸುತ್ತ, ಶಿವಾನಂದದ ಆವೇಶವಡರಿ ಕಣ್ಣರಳಿ, ಮುಖ ಹಿಗ್ಗಿ, ಕಿವಿಗಳತನಕ ನಗುತ್ತ ಮೈಮರೆತು ಕುಣಿಯತೊಡಗಿದರು! ಇಂತೀರೀತಿ ಹೆಜ್ಜೆ ಹೆಜ್ಜೆಯ ಜಂಗಿನ ಶಬ್ದ ಗೂಡು ತುಂಬಿರಲು, ದನಕರು ಕಣ್ಣಗಲ ತೆರೆದು ಬರೆದ ಚಿತ್ರವಾಗಿರಲು ನೋಡು ನೋಡುತ್ತಿರುವಂತೆ ಬೆಳಗಿನ ಸಮಯ ಲಕ್ಕಬ್ಬೆ ರಾಗಿಹಿಟ್ಟಿನಲ್ಲಿ ಮಾಡಿ ಬೆರಣಿತಟ್ಟಿದ್ದ ಮನೆದೇವರು ಚಂದಪ್ಪನಲ್ಲಿ ಸಾಕ್ಷಾತ್ ಚಂದ್ರಾಮಸ್ವಾಮಿ ಅವತಾರ ಆವೇಶವಾಗಿ ಹುಣ್ಣಿವೆ ಚಂದ್ರನಂತೆ ಥಳಥಳ ಹೊಳೆಯತೊಡಗಿತು! ತಡಮಾಡದೆ ಭೃಂಗೀಶದೇವರು ದೂರದಿಂದಲೆ ಲಕ್ಕಬ್ಬೆಗೆ ನಮಸ್ಕರಿಸಿ

ಸತ್ಯದೇವರಿದ್ದಲಿಗೆ ಸಾಗಲಿ ಮೆರವಣಿಗೆಯೆಂದು ಮುಂದೆ ಮುಂದೆ ನಡೆದರೆ ಬೆರಣಿಯ ಚಂದ್ರಾಮಸ್ವಾಮಿ ಹಿಂಡು ಹಿಂಡು ಶಿವಗಣಂಗಳೊಡನೆ ಹಿಂದೆ ಹಿಂದೆ ತೇಲುತ್ತ ನಡೆದರು. ಭೃಂಗೀಶನ ಜಂಗಿನ ಗಲಿರು ನಾದ, ತಮ್ಮಟೆ ವಾದ್ಯಗಳ ಒರಟು ನಾದಗಳಲ್ಲಿ ಕಂಚು ಕಹಳೆಗಳ ಮೊಳಗಿನಲ್ಲಿ ಕಗ್ಗತ್ತಲ ಕಾಡು ಗೀಳಿಟ್ಟು, ಪ್ರತಿಧ್ವನಿಸಿ ನಿನದಿಸಿತು. ಇಂತೀಪರಿ ಹೊಸ ಬೆರಣಿಯ ಚಂದ್ರನ ಉದಯವಾಗಿ ಭಯಂಕರ ಸದ್ದು ಸಡಗರದಲ್ಲಿ ನಡೆದ ಮೆರವಣಿಗೆಯ ಕಂಡು ಮ್ಯಾಲಿನ ಚಿಕ್ಕ ಬಳಗ ಗಾಬರಿಯಾಗಿ ಕಣ್ಣು ಪಿಳುಕಿಸಿದೆ ನಿಂತಲ್ಲಿ ನಿಂತುಕೊಂಡರೆ ಗಲಾಟೆಗೆ ಹಟ್ಟಿಯ ಜನ ಎಚ್ಚರಾದರೂ ಅಮವಾಸ್ಯೆಯ ದಿನ ಹುಣ್ಣಿವೆ ಬೆಳಕು ಮೂಡಿದಕ್ಕೆ ಬೆದರಿ ಗಾಬರಿಯಾಗಿ ಬಾಗಿಲು ಭದ್ರಮಾಡಿಕೊಂಡು ನಡುಗುತ್ತ ಒಳಗೇ ಕುಂತರು. ಮೆರವಣಿಗೆ ಯಕ್ಷಿ ಗುಡಿಗೆ ಬಂದು ಮಂಡಳದ ಶಿವನ ನೋಡಿದ್ದೇ ತೇಲುತ್ತ ಹೋಗಿ ಶಿವನ ಜಡೆಯಲ್ಲಿ ಬೆರಣಿಯ ಚಂದಪ್ಪಸ್ವಾಮಿ ಸ್ಥಾಪನೆಗೊಂಡರು.

ಬೆರಣಿ ಚಂದ್ರನ ಎಳೆಯ ಬೆಳ್ದಿಂಗಳು
ಅರಳಿ ಅರಳಿ ಸುರಿಯಿತು!
ಉಕ್ಕುವ ನೊರೆ ಹಾಲಿನಂತೆ
ತುಂಬಿ ಸುರಿವ ತಿಂಗಳು!
ತುಂಬಿ ಬಂದ ಚಂದ್ರನ ಕೊಡ
ತುಳುಕಿತು ಬೆಳ್ದಿಂಗಳು

ಬೆರಣಿ ಚಂದ್ರನ ಎಳೆಯ ಬೆಳ್ದಿಂಗಳಿಗೆ ಬಲಿತ ಕತ್ತಲ ರಾಜ್ಯ ಕರಗಿ ಹೋಯಿತೆಂಬಲ್ಲಿ ಲೋಕದ ಮೈಲಿಗೆ ತೊಳೆದು ಬೆಳಕು ಮೂಡಿಸಿದ ಚಂದ್ರಶೇಖರ ಸ್ವಾಮಿಯ ನೆನೆನೆನೆದು ಮುಂದಿನ ಪದ ನುಡಿಯುತ್ತೇವೆ ಕೇಳುವಂಥವರಾಗಬೇಕು.

ಭೃಂಗೀಶದೇವರ ಆವೇಶದ ನರ್ತನ ನೋಡಿ ಪ್ರೋತ್ಸಾಹವುಂಟಾಗಿ ಆರೂಮೂರು ಪೆಟ್ಟಿನ ಹೆಜ್ಜೆಯ ಹಾಕಲಾರದೆ ಕರುಬಿ ಸುಮ್ಮನೆ ನಿಂತ ಚಂದ್ರಶೇಖರ ಸ್ವಾಮಿಯ ಶ್ರೀಪಾದಂಗಳಿಗೆ ಚಂದಮುತ್ತನ ಹಂಬಲದ ಅರಿವಾಗಿ ಅನುಗ್ರಹದ ಕೈ ಮಿಡುಕಿತು. ಹಾಗಂದೇಟ್ಗೆ ಯಕ್ಷಿಗೆ ದೈವತ್ವದ ಆವೇಶವಾಗತೊಡಗಿತು ನೋಡು, -

ಮುಖವು ಕಳೆಕಳೆಯಾಗಿ
ನೀಲಾಂಜನದಂತೆ ಹೊತ್ತಿಕೊಂಡವು ಕಣ್ಣು,
ಹೊರಡುವ ಸಮಯದ ಅರಿವಾಗಿ
ಬಟ್ಟೆಯ ಸರಿಪಡಿಸಿಕೊಂಡಳು.

ಮನಸ್ಸು ಹಗುರವಾಯಿತು. ಅದಕ್ಕೂ ಮುನ್ನ ದೇಹವು ಕೂಡ. ಮೆಲ್ಲಗೆ ಎದ್ದು ಕುಂತು ಅಂಗೈಯ ಕನ್ನಡಿ ಮಾಡಿ ನೋಡುತ್ತಾ ಕರುಳು ಸರಿಸಿ ಕುಂಕುಮದ ಬೊಟ್ಟು ತಿದ್ದಿಕೊಂಡಳು.

ಆಮ್ಯಾಲೆ ಮೆಲ್ಲಗೆ ಎದ್ದು
ಶಕ್ತಿ ಸಾಲದೆ ಎರಡೂ ಕಡೆಗೊಲಿದು
ಸಮತೋಲ ಸರಿಪಡಿಸಿಕೊಂಡು
ಬೀಳದಿರುವಂತೆ ಕೈ ಚಾಚಿದಾಗ
ಚಂದಮುತ್ತನ ಹಾಡಿಗೇ ರೆಕ್ಕೆ ಮೂಡಿದಂತೆ
ಕೈಗಳು ರೆಕ್ಕೆಗಳಾಗಿ
ಮೆಲ್ಲಮೆಲ್ಲಗೆ ಗಾಳಿಪಟದಂತೆ ತೇಲಿ ನಲಿದಳು.

ತಿಂಗಳುರಾಗದ ಮಹಾಪೂರ ಬಂದು ಬಯಲು ತುಂಬಿತು ನೋಡು;
ರಾಗದ ಲಹರಿ ಲಹರಿಗಳಲ್ಲಿ ಈಜುತ್ತ

ಕಣ್ಣುಗಳಲ್ಲಿ ಚಂದ್ರನ ಸೆರೆಹಿಡಿದುಕೊಂಡಳು.
ತನ್ನ ತೇಜಸ್ಸನ್ನ ತಾನೆ ಹೊರಚೆಲ್ಲುತ್ತ
ಚಿಮ್ಮುವ ಬೆಳಗಿನ ಸೆಲೆಯಂತೆ ಕಂಡಳು. ಚಕೋರಿ ಎಂಬ ಯಕ್ಷಿ.
ರಾಗಕ್ಕೆ ಕಾವೇರಿದಂತೆ
ಆಕಾಶಕ್ಕೆ ಬೆಳೆವ ಶಿವನಿಗೆ ಶಿರಬಾಗಿ
ಭೃಂಗೀಶನ ಜಂಗು ಜಂಗಿನ ಮೂಳೆ ಪಾದಂಗಳಿಗೆ ವಂದಿಸಿ
ಗಣಂಗಳ ನೆನೆದು
ಪ್ರೀತಿ ಮತ್ತು ಅಭಿಮಾನದ ಕಡೆಗಣ್ಣು ಕುಡಿನೋಟದಲ್ಲಿ
ಚಂದಮುತ್ತನ ನೋಡಿ,

ಮೋಹದಲಿ ಅವನ ಹಾಡಿಗೆ ತಾಳ ಬಾರಿಸಿದಂತೆ
ರೆಕ್ಕೆ ಬಡಿಯುತ್ತ
ಎಳೆಯ ಬೆಳ್ದಿಂಗಳಲ್ಲಿ ಮೇಲುಮೇಲಕ್ಕೆ ಈಜುತ್ತ
ಹಾರಿದಳು.

ಕೊಳಲು ನುಡಿಸುತ್ತ ಚಂದಮುತ್ತ ದಿವ್ಯೋನ್ಮಾದದಲ್ಲಿ - ಚಂದ್ರಶೇಖರಸ್ವಾಮಿಯ ಶ್ರೀಪಾದಂಗಳ ಕಡೆ ನೋಡಿದ:

ಶಿವಪಾದದಲ್ಲೊಂದು ಕೆರೆಯ ಕಂಡ
ಕೆರೆಯಲ್ಲಿ ಮೂರೆಸಳಿನ ತಾವರೆ ಕುಸುಮವ ಕಂಡ!
ಕುಸುಮದಲ್ಲಿ ಧಗಧಗನೆ ಉರಿವ
ಉರಿಯ ಗದ್ದುಗೆ ಮ್ಯಾಲೆ ನಿಂತ್ಕೊಂಡು
ಧ್ಯಾನವ ಮಾಡುವ ಶಿವದೇವರ ಕಂಡ!
ಸ್ವಾಮಿ ರೂಪಾಂತರಚರಿಸಿ ಲೋಕಾಂತರ ಬೆಳೆದುದ ಕಂಡ!
ನಿಂತ ಹೆಜ್ಜೆ ಭೂಲೋಕದ ಸೀಮೆ ತುಂಬಿದವು
ಬೆರಣಿ ಚಂದ್ರನ್ನ ಜಡೆಯಲ್ಲಿ ಧರಿಸಿದ ಮುಖವು -
ಆಹಾ ತೇಜೋಮಯವು
ಮ್ಯಾಲೆ ಮಿರಿಲೋಕದೀಚೆಯ
ಅವಕಾಶ ತುಂಬಿದುದ ಕಂಡ!
ಈ ನಡುವೆ ದೇವದೈವ ಭೂತ ಪಿಶಾಚಿ
ರಾಹು ರಾಕ್ಷಸ ಇರಿವೆಂಬತ್ತು ಕೋಟಿ ಜೀವರಾಶಿ
ಸ್ವಾಮಿಯಲ್ಲಿ ಅಡಕಗೊಂಡುದ ಕಂಡ!
ಘನವೇ ಶರಣು
ಗಂಭೀರವೇ ಶರಣು

ಸಾವಳಗಿ ಶಿವಲಿಂಗವೇ ಶರಣು ಶರಣು
ತಂದೇ ಧನ್ಯನಾದೆನೆಂದು.

ಅಂದುಕೊಳ್ಳುತ್ತಿರುವಂತೆ ಕಾಲುಗಳಿಗೆ ಛಳಿತಾಗಿ ನೋಡಿಕೊಂಡಾಗ ನಾನು ಶಿಲೆಯಾಗುತ್ತಿರುವ ತಿಳುವಳಿಕೆ ಬಂತು. ಕಷ್ಟಪಟ್ಟು ರಾಗಕ್ಕೆ ಮುಕ್ತಾಯ ಕೊಡಲು ಪ್ರಯತ್ನಿಸತೊಡಗಿದ. ತಕ್ಷಣ ಇದು ಹಾರುತ್ತಿರುವ ಯಕ್ಷಿಗೆ ತಿಳಿದು ಎದೆ ಧಸ್ಸೆಂದಿತು. "ಅಯ್ಯೋ ನನ್ನ ಚಂದಮುತ್ತ" ಎಂದು ಕುಸಿದು ಮತ್ತೆ ಎಚ್ಚರವಾಗಿ ಸಾವರಿಸಿಕೊಂಡಳು. ಕಳೆಕಳೆಯಾಗಿದ್ದ ಮುಖ ಕತ್ತಲಂತೆ ಕಪ್ಪಿಟ್ಟಿತು. ಭಯ ಮತ್ತು ಅಂಗಲಾಚುವ ಆರ್ದ್ರ ನೋಟಗಳಿಂದ ಶಿವನ ಕಡೆ ನೋಡಿದಳು. ತನ್ನ ಪ್ರಾಣ ತಗೊಂಡಾದರೂ ತನ್ನ ಚಂದಮುತ್ತನ ಜೀವ ಉಳಿಸೆಂಬ ಭಾವದಲ್ಲಿ ಶಿವನ ಶ್ರೀಪಾದಂಗಳ ಕಣ್ಣಿಂದ ತೊಳೆದಳು. ಹತಾಶಳಾಗಿ ದುರ್ಬಲ ದೃಷ್ಟಿಗಳಿಂದ ಹೃದಯ ಪರಚಿಕೊಂಡಳು. ಚಂದಮುತ್ತನಿಗಾಗಿ ಶಿವನಲ್ಲಿ ಮೊರೆಯಿಟ್ಟಳು.

ಶಿವ ಶಿವಾ,
ನಂಬಿ ಕರೆದರೆ ಓ ಎಂಬ ಶಿವನೇ
ಮೃತ್ಯುಂಜಯನೆ,
ಮಾರ್ಕಂಡೇಯನ ಪೊರೆದವನೇ,
ಕಿಡಿಗಣ್ಣ ಬೀರು ತಂದೇ,
ಚಂದಮುತ್ತನ ನುಂಗುವ ಶಿಲೆಯ ಮ್ಯಾಲೆ.

ಒದಗಿ ಬಾ ಶಿವನೇ
ನಮ್ಮ ಸತ್ಯಕ್ಕೆ ನಮ್ಮ ಪ್ರೀತಿಗೆ
ನಮ್ಮ ಭಕ್ತಿಗೆ.

ಕರುಣಾಳು ಭೃಂಗೀಶ ದೇವರೇ,
ಶಿಲೆಯಿಂದ ರಕ್ಷಿಸಿರಯ್ಯಾ ಚಂದಮುತ್ತನ್ನ.
ನನಗಾಗಿ, ಲೋಕಕ್ಕಾಗಿ,
ಜೀವತ್ಯಾಗ ಮಾಡುವವನ
ನನ್ನ ಚಂದಮುತ್ತನ್ನ ಕಾಪಾಡಿ ಕಾಪಾಡಿರಯ್ಯಾ
ಆಕಾಶದೇವರಲ್ಲಿ ಸಿಡಿಲಿಲ್ಲವೆ?
ಸುತ್ತಲಿನ ದೇವರಲ್ಲಿ ನ್ಯಾಯವಿಲ್ಲವೇ?
ಶಿವನೆ, ನನ್ನನ್ನೂ ಅವನೊಂದಿಗೆ ಶಿಲೆಯಾಗಿಸು ತಂದೇ,

- ಎಂದು ಅಂಗಲಾಚುತ್ತ ನೀವಾದರೂ ಸ್ವಾಮಿಗೆ ಹೇಳಿರಯ್ಯಾ ಎಂದು ನಮಗೆ ಮೊರೆಯಿಟ್ಟಳು. ನನ್ನ ಚಂದಮುತ್ತನ್ನ ಕಾಪಾಡಿ ಕಾಪಾಡಿರಯ್ಯ ಎಂದು ಅಂಗಲಾಚುತ್ತ ಮೈಮರೆಸಿ ತನ್ನ ಜೀವವ ಅಪಹರಿಸುತ್ತಿದ್ದೀರಿ - ಎಂದು ಎಲ್ಲರ ನೋಡಿದಳು. ಇವಳ ಕಣ್ಣೀರ ಪ್ರವಾಹದಲ್ಲಿ ಎದುರೀಜುವುದು ಯಾರಿಗೂ ಸಾಧ್ಯವಾಗದೆ ಕಲ್ಲಿನಂತೆ ಸುಮ್ಮನೆ ನಿಂತಿರಲು ಕೆಳಗಿಳಿದು ಬಂದಳು. ಚಂದಮುತ್ತನ ಮುಖ ವಿನಾ ಉಳಿದೆಲ್ಲ ದೇಹ ಆಗಲೇ ಶಿಲೆಯಾಗಿತ್ತು.

ಕಣ್ಣಲ್ಲಿ ಕಣ್ಣಿಟ್ಟು ನೋಡಿದರೆ ಏನಿತ್ತು?
ಕಣ್ಣು ಕನ್ನಡಿಯ ಹಾಂಗಿತ್ತು

ಆಕಾಶವೆಂಬ ಕನ್ನಡಿಯಲ್ಲಿ ತನ್ನ ತಾ
ನೋಡಿಕೊಂಬ ಬಯಲು ಮೂಡಿತ್ತು.

ನಾವೆಲ್ಲ ದುಃಖ ಭಾವೈಕ್ಯರಾಗಿ ನಿಂತಿರಬೇಕಾದರೆ ಯಕ್ಷಿ ಕೃತಜ್ಞತೆಯಿಂದ ಅಥವಾ ಕೊನೆಯ ಬಾರಿ ಎಂಬಂತೆ ಚಂದಮುತ್ತನ ತುಟಿಳ ಮ್ಯಾಲೆ ತುಟಿ ಊರಿ ಬಹಳ ಹೊತ್ತಿನತನಕ ಮುದ್ದಿಸಿದಳು. ನಿಜ ಹೇಳಬೇಕೆಂದರೆ ಸ್ಮಶಾನವಾಸಿ ಶಿವನಂಥ ಶಿವನ ಕಣ್ಣಲ್ಲೂ ಕಣ್ಣೀರುಕ್ಕಿತು. ಅವರೂ ಕೈಕೈ ಹಿಸುಕಿಕೊಂಡು ಸುಮ್ಮನಿದ್ದರು. ಚಂದಮುತ್ತನ ತುಟಿ ಶಿಲೆಯಾದುದು ಅವಳ ತುಟಿಗರಿವಾಗಿ ಒತ್ತಾಯದಿಂದ ಬಿಟ್ಟಳು. ಈಗ ಅವನಾತ್ಮವ ಪೂರ್ತಿ ಹೀರಿಕೊಂಡ ತೃಪ್ತಿ ಅವಳ ಮುಖದಲ್ಲಿತ್ತು. ಮಂದಹಾಸದಿಂದ ಆಕಾಶವ ಕುರಿತು ಮ್ಯಾಲೆ ಹಾರತೊಡಗಿದಳು. ಹಾರ ಹಾರುತ್ತ ಆ ಯಕ್ಷಿ ಚಕೋರ ಪಕ್ಷಿಯಾಗಿ ಆನಂದಗಳು ಬೆಳೆವ ಸೀಮೆ ಶಿವನ ಜಡೆಯ ಚಂದ್ರನ ಗುರಿಯಾಗಿ ಹರಿದಳು. ಈಗ ಚಕೋರಿಯ ಮ್ಯಾಲೆ ಚಂದ್ರ ಮಾತ್ರ ಹೊಳೆಯುತ್ತಿದ್ದ.

ಚಂದ್ರನ ಸಮೀಪಿಸಿ ಕನ್ನಡಿಯಂತೆ ಅವನ ನೋಡಿದಾಗ
ಚಂದ್ರನೇ ಹಾರುತ್ತಿದ್ದ
ತನ್ನ ಬೆಳ್ದಿಂಗಳಲ್ಲಿ ತಾನೇ ಈಜುತ್ತಿದ್ದ.
ಚಕೋರಿ ಚಂದ್ರನ ನುಂಗಿ
ಚಂದ್ರಚಕೋರಿ ಎರಡೂ ಬಯಲು ನಿರ್ವಯಲಾಗಿ
ಬೆಳಗಾಯಿತು.

ತಿಂಗಳು ರಾಗದಿಂದ ಚಂದಮುತ್ತ ಕಟ್ಟಿದ್ದ ಶಿವಲೋಕ ಮಂಡಳದಲ್ಲಿ ಮಾಯವಾಯಿತು. ಬೆರಣಿ ಚಂದ್ರ ಭಸ್ಮವಾಗಿದ್ದ.

ಎಲ್ಲ ಮುಗಿಯಿತೆಂದಾಗ ಮಲ್ಲಿಗೆ ಬಳ್ಳಿಯ ಬುಡದಲ್ಲಿ ತೂಕಡಿಸುವ ಕರಡಿ ಕಂಡಿತು. ತಲೆಯಲ್ಲಿ ಬೆಳ್ಳಿ ಕೂದಲು ಬೋಳು ಬಾಯಿ, ಕೋಲು ಕೈಕಾಲು, ಕಣ್ಣುಗುಳಿ ಸೇರಿ ಚರ್ಮ ಜೋತಾಡಿ, ಹೊಳೆಯ ಮಹಾಪೂರ ಹಾದು ವಾಲಿದ ಮರದಂತೆ ಮ್ಯಾಲೆ ಮುಖಮಾಡಿ ಕುಂತಿದ್ದಳು. ಅದ್ಯಾರಪ್ಪ ಅಂದರೆ ಲಕ್ಕಬ್ಬೆ! ಅಬ್ಬೆ ಇನ್ನೂ ವಿಸ್ಮೃತಿಯಲ್ಲಿದ್ದಾಳೆ. ಹಾಗೇ ಇರಲೆಂದು, ಮಗ ಶಿಲೆಯಾದ ವಿಚಾರ ಅವಳಿಗೆ ತಿಳಿಯದಿರಲೆಂದು ನಾವು ಮಂಗಳ ಹಾಡುವ ಅವಸರದಲ್ಲಿದ್ದಾಗ ನಮ್ಮಲ್ಲೊಬ್ಬ ಕೇಳಿಯೇ ಬಿಟ್ಟ.

ಅಬ್ಬೆ ಅಬ್ಬೆ,
ಮಡಿಲೊಳಗೆ ಬಚ್ಚಿಟ್ಟುಕೊಂಡಿದ್ದಿಯಲ್ಲ
ನಿನ್ನ ಹಕ್ಕಿಯ,

ಪುಟ್ಟ ಕಾಲು ಇಷ್ಟೆ ಕೊಕ್ಕು
ಬಣ್ಣ ಎಲ್ಲ ಚೆನ್ನು.
ಸವಿಗೊರಳಿನ ಬಿಳಿ ಹಕ್ಕಿಯ
ದನಿಯೆಂದರೆ ಜೇನು.
ಅದೆಲ್ಲಿದೆ ಈಗ?

ಮುಂಗೈ ಮ್ಯಾಲೆ ಕುಣಿಕುಣಿದಾಡಿ
ನೆರಳಿಲ್ಲದೆ ಬೆಳಕಿನ ಲೋಕದ ಕತೆಯ

ಹೇಳುವ ಮೂಜಗದ ಸೋಜಿಗದ ಹಕ್ಕಿ
ಅದರ ಹಾಡೆಲ್ಲಿಗೆ ಈಗ?

- ಇದಕ್ಕೆ ಅಬ್ಬೆ ಹೀಗೆಂದಳು

ಹೌಂದು ನನ್ನಪ್ಪ
ನನ್ನ ಒಡಲಿಗೆ
ನನ್ನ ಮಡಿಲಿಗೆ
ಅದನ್ನು ಹೊಂದುವ ಭಾಗ್ಯವಿರಲಿಲ್ಲ.

ಈ ದಿನ
ಹಸಿವೆಗೆ ಹಾಲೂಡೆಂದು ಹಟ ಮಾಡಿತು
ಜೋತ ಮೊಲೆಯಲ್ಲೇನು ಹಾಲೊಡೆದೀತು ಕಂದಾ? - ಎಂದೆ.

ಚಂದ್ರಾಮನೆಂಬೂವ ಬೆಳ್ಳಿಗಿಂಡಿಯೊಳಗೆ
ಹೆಪ್ಪು ಹಾಕಿದ ಅಮೃತ ಕುಡಿವೆನೆಂದು
ಆಕಾಶವೆಂಬೂವ ಅರಿಯಬಾರದ ಬಯಲು
ಅದರಂತುಪಾರವನು ಅರಿವೆನೆಂದು
ಭರ್ರನೆ ಹಾರಿ ಹೋಯಿತು ಹಕ್ಕಿ
ನನ್ನ ಮತ್ತು ಕಾಲನ ಮೈ ಪರಚಿ

ಹಕ್ಕಿಯ ಭಾರವಿನ್ನೂ ಹಂಗೇ ಇದೆ
ಒಡಲಿನ ಮ್ಯಾಲೆ.
ಇನ್ನೇನು ಜೋಗುಳ ಹಾಡುತ್ತದೆ
ನನ್ನ ಮಲಗಿಸಲಿಕ್ಕೆ.

ಮಗುವೇ ಜೋಗುಳ ಪಾಡಿ
ತಾಯಿಯ ಮಲಗಿಸಿದ್ದನ್ನ
ಎಲ್ಲಾದರು ಕೇಳಿದ್ದಿರೇನ್ರಪ್ಪ?
ಜೋ ಜೋ ಎನ್ನ
ಬೆಳ್ಳಾನ ಹಕ್ಕಿ ಜೋ ಜೋ....

ಚಂದ್ರಾಮನಂಬೂವ ಕನ್ನಡಿ ಮಾಡಿ
ನನ್ನ ಕನ್ನಡಿ ಮಾಡಿ ಅದರ ಎದುರಿಟ್ಟೆ
ಪ್ರತಿಬಿಂಬ ನೆರೆದಾವು ಬಿಂಬದ ಜೋಡಿ ‖ ಬಯಲು ‖

ಬಯಲಾಗ ಸೇರ್ಯಾವು ನಿರ್ವಯಲಾಗಿ
ಜೋ ಜೋ ಎನ್ನ ಜ್ಯೋತಿಯ ಕಂದಾ ಜೋ ಜೋ ||

- ಎಂದು ಹೇಳಿ ಕಣ್ಣೀರಲ್ಲಿ ತೆಪ್ಪದ ಹಾಗೆ ತೇಲುವ ತಾಯಿಯ ಕಂಡು ನಮ್ಮ ಕುರುಳು ಕಿತ್ತು ಕಣ್ಣಿಗೆ ಬಂದಂತಾಗಿ ಅತ್ತೆವು. ಅವಳು ವಿಸ್ಮೃತಿಯಲ್ಲಿದ್ದರೇ ಒಳ್ಳೆಯದೆಂದು ಮಂಗಳ ಹಾಡಲು ಸಿದ್ಧರಾದೆವು.

ಚಂದಮುತ್ತನ ದೇಹ ಈಗ ಪೂರಾ ಶಿಲೆಯಾಗಿ
ಕಲ್ಲುಗಳಲ್ಲಿ ಕಲ್ಲಾಗಿ ಬಿದ್ದಿದೆ.
ಕಣ್ಣು ಮಾತ್ರ ಗಾಜಿನ ಕಣ್ಣಿನಂತೆ ಕಾಣುತ್ತಿದ್ದವು.
ಕಣ್ಣಗಳಲ್ಲಿ ಹೆಪ್ಪುಗಟ್ಟಿದ ಚಂದ್ರನಿದ್ದ.
ಎರಡೂ ಕಣ್ಣಲ್ಲಿ ಸೋರಿದ್ದ ಕಣ್ಣೀರು ಮಾತ್ರ
ಹಾಗೇ ನೀರುನೀರಾಗೆ ಇತ್ತು.

ಬೆಳಕಿನ ಅವಧೂತ, ಚಂದಮುತ್ತ
ಸತ್ತನೆನಬ್ಯಾಡಿರಯ್ಯಾ
ಅವನ ತುಟಿಯ ಮ್ಯಾಲಿನ ಹಾಡನ್ನ
ಹಕ್ಕಿಗಳಿಗೆ ಕೊಡಿರಯ್ಯಾ
ಕಣ್ಣಂಚಿನಲ್ಲಿರೋ ಕಣ್ಣೀರನ್ನ
ತರುಮರಗಳ ಬೇರಿಗೆ ಹನಿಸಿರಯ್ಯಾ

ಆತ್ಮದ ತುಂಬ ಚಂದಮುತ್ತನ ಬೆಳ್ದಿಂಗಳ
ತುಂಬಿಕೊಂಡು ಹೋಗಿರಯ್ಯಾ

ಬೆಚ್ಚಗಿನ ಬೆಳಕಿನ ಭರವಸೆ ಕೊಡುತ್ತ
ಮುಂಗೋಳಿ ಕೂಗಿದೆ
ಮಂಡಳದಲ್ಲಿ ಬೆರಣಿ ಚಂದ್ರನ ಬೂದಿ ಬಿದ್ದಿದೆ
ಭಕ್ತಿಗೆ ಭಸ್ಮ ಧರಿಸಿಕೊಂಡು ಹೋಗಿರಯ್ಯಾ.

ಇಲ್ಲೀಗಿ ಹರಹರ
ಇಲ್ಲೀಗಿ ಶಿವ ಶಿವ
ಇಲ್ಲೀಗಿ ನಮ ಹಾಡು ಮಂಗಳವಯ್ಯಾ ||